ಆ ಗಣರಾಜ್ಯ - ಈ ಕರ್ನಾಟಕ

ಡಿ.ಎಸ್. ನಾಗಭೂಷಣ



ಆ ಗಣರಾಜ್ಯ – ಈ ಕರ್ನಾಟಕ

ಡಿ.ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ

ಆ ಗಣರಾಜ್ಯ – ಈ ಕರ್ನಾಟಕ

(ಸುವರ್ಣ ಕರ್ನಾಟಕದ ಸುವರ್ಣ ಪುಟಗಳು)

ಸಂಪಾದಕ

ಡಿ.ಎಸ್. ನಾಗಭೂಷಣ

ಲೋಹಿಯಾ ಪ್ರಕಾಶನ

ಬಳ್ಳಾರಿ

AA GANARARAJYA- EE KARNATAKA (That Republic-this Karnataka)
A collection of articles reviewing achievements of the language and culture of Karnataka on the occasion of its Golden jubilee celebrations. Edited by

D.S. Nagabhushana
HIG-5, 'Nudi', KHB Colony, Kallahally Extn.
Shimoga - 577204 (Karnataka)
Ph : 08182-248574, Mobile : 94492 42284

Published by
LOHIYA PRAKASHANA
'Kshitija', Kappagallu Road
Gandhi Nagar, Bellary - 583 103
Tel : 08392-257412

ISBN : 81-87731-92-3

First Impression - 2008

Cover Page : M.S. MURTHY

Pages : viii + 124

Paper used : 70 GSM N.S. Maplitho

Price : **Rs. 60**

Printed at :
VISHWAS PRINTS
Bangalore-18

ಆ ಕರ್ನಾಟಕ–ಈ ಗಣರಾಜ್ಯ
(ಸುವರ್ಣ ಕರ್ನಾಟಕದ ಸುವರ್ಣ ಪುಟಗಳು)
ಸಂಪಾದಕರು : ಡಿ.ಎಸ್.ನಾಗಭೂಷಣ

ಪ್ರಕಾಶಕರು: ಲೋಹಿಯಾ ಪ್ರಕಾಶನ, ಬಳ್ಳಾರಿ

ಮುಖಪುಟ ಕಲೆ: ಎಂ.ಎಸ್.ಮೂರ್ತಿ

ಬಳಸಿರುವ ಕಾಗದ : ೭೦ ಜಿಎಸ್ಎಂ. ಎನ್.ಎಸ್. ಮ್ಯಾಪ್‌ಲಿಥೋ

ಪುಟಗಳು : viii + ೧೨೪

ಬೆಲೆ: ರೂ. ೬೦

ಮುದ್ರಕರು :
ವಿಶ್ವಾಸ್ ಪ್ರಿಂಟ್ಸ್
VISHWAS PRINTS
೨೩, ೩ನೇ ಅಡ್ಡರಸ್ತೆ, ನುಜಾಂಬ ಅಗ್ರಹಾರ
ಚಾಮರಾಜಪೇಟೆ, ಬೆಂಗಳೂರು - ೧೮
ದೂರವಾಣಿ : ೨೬೬೦೪೪೮೩೫

ಸಂಪಾದಕನ ಮಾತುಗಳು

'ಸುವರ್ಣ ಕರ್ನಾಟಕ'ದ ಸಂದರ್ಭ (೨೦೦೬-೦೭) ಅಂದಿನ ರಾಜಕೀಯ ಏಳು ಬೀಳುಗಳಿಂದಾಗಿ ಅರ್ಥಪೂರ್ಣ ಆಚರಣೆಗೆ ದಕ್ಕದೇ ಹೋದ ವಿಷಾದಕರ ಹಿನ್ನೆಲೆಯಲ್ಲಿ, ಅದೇ ಸಂಬಂಧವಾಗಿ 'ವಿಕ್ರಾಂತ ಕರ್ನಾಟಕ' ವಾರಪತ್ರಿಕೆಗಾಗಿ ನಾನು ಆಯೋಜಿಸಿದ ವಿಶೇಷ ಲೇಖನ ಮಾಲೆಯನ್ನು ಇಲ್ಲಿ ಒಂದು ಸಂಗ್ರಹ ರೂಪದಲ್ಲಿ ಪ್ರಸ್ತುತ ಪಡಿಸುತ್ತಿದ್ದೇನೆ. ಕನ್ನಡಿಗರ ಬಹುದಿನಗಳ ಕನಸಾಗಿದ್ದ ಮತ್ತು ಹೋರಾಟದ ಫಲವಾಗಿದ್ದ ಕರ್ನಾಟಕ ರಾಜ್ಯೋದಯ, ಐವತ್ತು ವರ್ಷಗಳ ಸಂಭ್ರಮಕ್ಕೆ ಹೇಗೋ ಹಾಗೆಯೇ ಆತ್ಮಾವಲೋಕನಕ್ಕೂ ಒಂದು ಉಚಿತ ಸಂದರ್ಭವಾಗಬೇಕಿತ್ತು. ಕರ್ನಾಟಕ ರಾಜ್ಯೋದಯದ ಕನಸಿನ ಹಿಂದಿದ್ದ ಮತ್ತು ಅದಕ್ಕಾಗಿ ನಡೆಸಿದ ಹೋರಾಟದಲ್ಲಿ ಹಾಸುಹೊಕ್ಕಾಗಿದ್ದ ಗುರಿ-ಆಶಯಗಳು ಎಷ್ಟರ ಮಟ್ಟಿಗೆ ಈಡೇರಿವೆ, ಭವಿಷ್ಯದ ಹಾದಿ ಏನು ಎತ್ತ ಎಂಬ ವಿಷಯದ ಬಗ್ಗೆ ವ್ಯಾಪಕ ಚರ್ಚೆಗೆ ಇದು ಸಕಾಲವಾಗಿತ್ತು. ಆದರೆ ಒಂದಷ್ಟು ಅಧಿಕೃತ ಭಾಷಣಗಳ ಮತ್ತು ಪುಸ್ತಕ ಪ್ರಕಟಣೆಯ ನಿರ್ಧಾರಗಳ ಹಾಗೂ ಒಂದಷ್ಟು ಹಾಡು-ಕುಣಿತಗಳ ಬಹಿರಂಗ ಕಾರ್ಯಕ್ರಮಗಳ ಹೊರತಾಗಿ, ಮುಂದಿನ ದಾರಿಯನ್ನು ನಿರ್ಧರಿಸಿಕೊಳ್ಳಲು ಒಮ್ಮೆ ಹಿನ್ನೋಡುವ ಅಂತರಂಗದ ಪ್ರಯತ್ನಗಳೇ ನಡೆಯಲಿಲ್ಲ.

ಹೀಗಾಗಿ ನನ್ನ ವೈಯುಕ್ತಿಕ ಇತಿ ಮಿತಿಗಳ ನಡುವೆಯೇ 'ವಿಕ್ರಾಂತ ಕರ್ನಾಟಕ'ದ ಗೆಳೆಯರ ಸಹಕಾರದಿಂದ ೨೦೦೭ರ ಅದರ ದೀಪಾವಳಿ ಸಂಚಿಕೆಯನ್ನು 'ಸುವರ್ಣ ಕರ್ನಾಟಕ' ಸಂಚಿಕೆಯನ್ನಾಗಿಯೂ ರೂಪಿಸುವ ಅವಕಾಶ ನನಗೊದಗಿತು. ಅದಕ್ಕೆ ಪೂರ್ವಭಾವಿಯಾಗಿ, ಈ ಐವತ್ತು ವರ್ಷಗಳಲ್ಲಿ ಭಾರತವೆಂಬ ಗಣರಾಜ್ಯದಲ್ಲಿ ಕರ್ನಾಟಕವೆಂಬ ರಾಜ್ಯ ಮೂಡಿದ ಸಾಂಸ್ಕೃತಿಕ ಹಾಗೂ ರಾಜಕೀಯ ಹಿನ್ನೆಲೆ ಹಾಗೂ ಹಾಗೆ ಮೂಡಿದ ನಂತರ ಅದರ ಬೆಳವಣಿಗೆಗಳನ್ನು ಸ್ಥೂಲವಾಗಿ ಗುರುತಿಸುವ 'ಆ ಗಣರಾಜ್ಯ-ಈ ಕರ್ನಾಟಕ' ಎಂಬ ವಿವರವಾದ ಲೇಖನ ಬರೆದೆ. ಅದರ ಮುಖ್ಯ ಉದ್ದೇಶ ನಮ್ಮ ಇತಿಹಾಸದಲ್ಲಿ 'ಕರ್ನಾಟಕತ್ವ'ವೆಂಬುದೇನಾದರೂ ನಿಜವಾಗಿ ರೂಪುಗೊಂಡಿದೆಯೇ, ರೂಪುಗೊಂಡಿದ್ದರೆ ಅದರ ಸ್ವರೂಪವಾದರೂ ಏನು ಹಾಗೂ ಇಂದಿನ ಸಂದರ್ಭದಲ್ಲಿ ಅದನ್ನು ಹೇಗೆ ವಿಕಾಸಗೊಳಿಸಬಹುದು ಎಂಬುದೇ ಆಗಿತ್ತು. ನಂತರ ಕನ್ನಡ-ಕರ್ನಾಟಕವು ಈ ಐವತ್ತು ವರ್ಷಗಳಲ್ಲಿ ತನ್ನ ಸಾಂಸ್ಕೃತಿಕ ಆಯಾಮಗಳಲ್ಲಿ ಮಾಡಿರಬಹುದಾದ ಸಾಧನೆಗಳನ್ನು ಪರಾಮರ್ಶಿಸುವ 'ಸುವರ್ಣ ಕರ್ನಾಟಕದ ಸುವರ್ಣ ಪುಟಗಳು' ಎಂಬ ಲೇಖನ ಮಾಲೆಯನ್ನು ಆಯೋಜಿಸಿದೆ. ಇದು ದೀಪಾವಳಿ ಸಂದರ್ಭದ 'ಸುವರ್ಣ ಕರ್ನಾಟಕ' ವಿಶೇಷ ಸಂಚಿಕೆಯ ವಿಶೇಷ ಲೇಖನಗಳೊಂದಿಗೆ ಮುಕ್ತಾಯವಾಯಿತು. ಈ ಲೇಖನ ಮಾಲೆಯಲ್ಲಿ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳಲ್ಲದೆ, ರಾಜಕಾರಣ ಮತ್ತು ಕ್ರೀಡಾ ಕ್ಷೇತ್ರಗಳಲ್ಲಿನ ಹತ್ತು ಅತ್ಯುತ್ತಮ ಸಾಧನೆಗಳನ್ನು ಗುರುತಿಸುವ ಪ್ರಯತ್ನ ಮಾಡಲಾಗಿದೆ.

ನನ್ನ ಈ ಪ್ರಯತ್ನದಲ್ಲಿ ಆಯಾ ಕ್ಷೇತ್ರಗಳಲ್ಲಿ ಪರಿಣತರಾದ ನನ್ನ ಹತ್ತು ಮಂದಿ ಗೆಳೆಯ-ಗೆಳತಿಯರು ಸಹಕರಿಸಿದ್ದಾರೆ. ಇವರೆಲ್ಲರಿಗೂ ಈ ಸಂದರ್ಭದಲ್ಲಿ ನನ್ನ ನೆನೆಕಗಳು ಸಲ್ಲತ್ತವೆ. ಈ ಲೇಖನ ಮಾಲೆಯ ಒಂದು ಮುನ್ನೋಟ ಹಾಗೂ ಹಿನ್ನೋಟದ ಲೇಖನಗಳನ್ನು ನಾನು ಈ ಲೇಖನ ಮಾಲೆಯ ಸಂಪಾದಕನಾಗಿ ಬರೆದಿರುವೆ. ಇವುಗಳ ಜೊತೆಗೆ, ಈ ಐವ್ವತ್ತು ವರ್ಷಗಳ ಅವಧಿಯಲ್ಲಿ ಆಧುನಿಕವೆಂದು ಕರೆಯಬಹುದಾದ ಕರ್ನಾಟಕವನ್ನು ಕಟ್ಟಿದ ಐವ್ವತ್ತು ಮಂದಿ ಪ್ರತಿಭಾವಂತರನ್ನು ಆಯ್ದು ಪರಿಚಯಿಸುವ ಪ್ರಯತ್ನವೊಂದನ್ನೂ ನಾನು ಸಂಚಿಕೆಯಲ್ಲಿ ಮಾಡಿದೆ. ಈ ಎಲ್ಲ ಆಯ್ಕೆ ಮತ್ತು ಅಭಿಪ್ರಾಯಗಳು ವೈಯುಕ್ತಿಕ ಪರಿಮಿತಿಗಳಲ್ಲೇ ನಡೆದಿರುವುವಾದರೂ, ಯಾವುದೇ ತೆರೆನ ಪೂರ್ವಾಗ್ರಹಗಳಿಲ್ಲದೆ ಆದಷ್ಟೂ ವಸ್ತುನಿಷ್ಠವಾಗಿ ನಡೆದಿವೆ ಎಂದು ನಾನು ನನ್ನ ಗೆಳೆಯ-ಗೆಳತಿಯರ ಪರವಾಗಿ ಧೈರ್ಯವಾಗಿ ಹೇಳಬಲ್ಲೆ. ಇಂತಹುದೊಂದು ಪ್ರಯತ್ನ ದಾಖಲೆಯಾಗಿ ಉಳಿಯಲಿ ಮತ್ತು ಇನ್ನಷ್ಟು ಆಸಕ್ತರ ಕುತೂಹಲ ಹಾಗೂ ಅಧ್ಯಯನಗಳಿಗೆ ಸಿಗುವಂತಾಗಲಿ ಎಂಬ ಉದ್ದೇಶದಿಂದ ಇದನ್ನು ಪುಸ್ತಕ ರೂಪದಲ್ಲಿ ಪ್ರಕಟಿಸಲಾಗುತ್ತಿದೆ.

ನನ್ನ ಈ ಪ್ರಯತ್ನದಲ್ಲಿ ನನ್ನೊಂದಿಗೆ ಸಹಕರಿಸಿದ 'ವಿಕ್ರಾಂತ ಕರ್ನಾಟಕ'ದ ಬಳಗಕ್ಕೆ ಮತ್ತು ಈ ಪುಸ್ತಕವನ್ನು ಕನ್ನಡ-ಕನಾಟಕದ ಮೇಲಿನ ಪ್ರೀತಿಯಿಂದ ಪ್ರಕಟಿಸುತ್ತಿರುವ ಲೋಹಿಯಾ ಪ್ರಕಾಶನದ ಸಿ.ಚೆನ್ನಬಸವಣ್ಣ ಅವರಿಗೆ ನನ್ನ ಕೃತಜ್ಞತೆಗಳು ಸಲ್ಲುತ್ತವೆ. ಹಾಗೇ ಈ ಪುಸ್ತಕದ ಮುಖಪುಟ ವಿನ್ಯಾಸ ಮಾಡಿದ ಖ್ಯಾತ ಕಲಾವಿದ ಎಂ.ಎಸ್. ಮೂರ್ತಿ ಹಾಗೂ ಈ ಪುಸ್ತಕವನ್ನು ಅಂದವಾಗಿ ಮುದ್ರಿಸಿರುವ ವಿಶ್ವಾಸ್ ಪ್ರಿಂಟ್ಸ್‌ನ ಮಾಲೀಕ ಮತ್ತು ಸಿಬ್ಬಂದಿ ವರ್ಗದವರಿಗೂ ನನ್ನ ವಂದನೆಗಳು ಸಲ್ಲುತ್ತವೆ.

ಶಿವಮೊಗ್ಗ

ಡಿ.ಎಸ್.ನಾಗಭೂಷಣ

ಪರಿವಿಡಿ

ಆ ಗಣರಾಜ್ಯ - ಈ ಕರ್ನಾಟಕ

– ಡಿ.ಎಸ್.ನಾಗಭೂಷಣ

ಕರ್ನಾಟಕ ರಾಜ್ಯವು ತನ್ನ ಉದಯದ ಸುವರ್ಣೋತ್ಸವವನ್ನು ಆಚರಿಸಿಕೊಳ್ಳುತ್ತಿರುವಾಗಲೇ, ಯಾವ ಆಶೋತ್ತರಗಳೊಂದಿಗೆ ಈ ರಾಜ್ಯೋದಯವಾಯಿತೋ ಆ ಆಶೋತ್ತರಗಳೇ ಪರಿಹಾಸ್ಯಕ್ಕೊಳಗಾಗುವಂತಹ ವಿದ್ಯಮಾನಗಳು ನಡೆದುಹೋಗುತ್ತಿವೆ. ಆದರೂ ರಾಜ್ಯದ ಜನ–ಅದು ಕನ್ನಡದ ಜನವೂ ಹೌದು–ಏನೂ ಆಗದಂತೆ, ಈ ಉತ್ಸವ–ಸಮ್ಮೇಳನ–ಜಾತ್ರೆ–ಹಬ್ಬಗಳ ಸಂಭ್ರಮದಲ್ಲಿ ಮುಳುಗಿದ್ದಾರೆ. ಪ್ರತಿಭಟನೆಯನ್ನೇ ವೃತ್ತಿಮಾಡಿಕೊಂಡು ಅದನ್ನು ಒಂದು ಅತಿಲಾಭ ತರುವಂತಹ ಉದ್ಯಮವನ್ನಾಗಿ ಪರಿವರ್ತಿಸಿಕೊಂಡಿರುವ ಒಂದೆರಡು ಸಣ್ಣ ಗುಂಪುಗಳು ಹಾಗೂ ಹಳೆಯ ಕಾಲದ ನೆನಪುಗಳ ಭಾರಹೊತ್ತ ನಾಲ್ಕಾರು ವಯೋವೃದ್ಧರ ಹೊರತಾಗಿ, ಮಿಕ್ಕವರಾರೂ ಈ ವಿದ್ಯಮಾನಗಳ ಬಗ್ಗೆ ತಲೆ ಕೆಡಿಸಿಕೊಂಡಂತೆ ಕಾಣುತ್ತಿಲ್ಲ. ಕಳೆದ ಐವತ್ತು ವರ್ಷಗಳಿಂದ ಭಾರತ ಜನನಿಯ ತನುಜಾತೆಯಾದ ಕರ್ನಾಟಕ ಮಾತೆಗೆ 'ಜಯಹೇ' ಹೇಳುತ್ತಿರುವ ಸಮಯದಲ್ಲೇ, ಈ ಭಾರತವೆಂಬುದು ಒಂದು ಗಣರಾಜ್ಯವಾಗಿ ವಿಕಾಸಗೊಳ್ಳುತ್ತಿರುವ ರೀತಿ ನೀತಿ ಮತ್ತು ಅದರಿಂದಾಗಿ ಅದರ ತನುಜಾತೆಯಾದ ಕರ್ನಾಟಕಕ್ಕೆ 'ಜಯಹೇ' ಹೇಳುವುದರ ಅರ್ಥವಂತಿಕೆ ಕಡಿಮೆಯಾಗುತ್ತಾ, ಕ್ರಮೇಣ ಯಾಂತ್ರಿಕವಾಗುತ್ತಿರುವುದನ್ನು; ಈ ಕೋಟ್ಯಾಂತರ ರೂಪಾಯಿಗಳ ವೆಚ್ಚದ ಸುವರ್ಣ ಕರ್ನಾಟಕದ ಉತ್ಸವಗಳ ಸಂಭ್ರಮ ಸಡಗರಗಳಲ್ಲಿ ಗಮನಿಸುವ ವ್ಯವಧಾನವೂ ಕನ್ನಡಿಗರಾದ ನಮಗಿಲ್ಲದಾಗಿದೆ.

ಇತ್ತೀಚೆಗಷ್ಟೇ ಶಿವಮೊಗ್ಗದಲ್ಲಿ 'ಯಶಸ್ವಿ'ಯಾಗಿ ನಡೆದ (ಅಂದರೆ ಊಟ ಮತ್ತು ವಸತಿ ವ್ಯವಸ್ಥೆ ಚೆನ್ನಾಗಿತ್ತು ಎಂದಷ್ಟೇ ಅರ್ಥ.) ಸಾಹಿತ್ಯ ಸಮ್ಮೇಳನದ ಸಂದರ್ಭದಲ್ಲಿ ನಾಡಗೀತೆಯನ್ನು ಪ್ರಸ್ತುತಪಡಿಸಿದ ರೀತಿ ಕರ್ನಾಟಕಕ್ಕೆ ಏನಾಗುತ್ತಿದೆ ಎಂಬುದನ್ನು ಸಾಂಕೇತಿಕವಾಗಿ ಸೂಚಿಸುವಂತಿತ್ತು. ಗಾಯನ ಪ್ರತಿಭೆಯ ಹೊರತಾಗಿ ಮಿಕ್ಕೆಲ್ಲ ಪ್ರತಿಭೆಗಳನ್ನೂ ಪರಿಗಣಿಸಿ ಆಯ್ಕೆ ಮಾಡಿದಂತಿದ್ದ ಆ ತಂಡ ನಾಡಗೀತೆಯನ್ನು ಎಷ್ಟು ಶೃತಿಗೆಟ್ಟು, ಸ್ವರಗೆಟ್ಟು ಅಸಮಂಜಸವಾಗಿ ಹಾಡಿತೆಂದರೆ, ಇಂದು ಕರ್ನಾಟಕದ ಆತ್ಮಕ್ಕೆ ಏನಾಗಿದೆ ಮತ್ತು ಅದಕ್ಕೆ ಹತ್ತಿರುವ ಸೋಂಕುಗಳು ಯಾವುವು ಎಂಬುದನ್ನು ಅದು ಪರೋಕ್ಷವಾಗಿ ಪರಿಚಯ ಮಾಡಿಕೊಳ್ಳುವ ಪ್ರಯತ್ನದಂತಿತ್ತು. ಯಾವ ಘನೋದ್ದೇಶಗಳನ್ನು ಇಟ್ಟುಕೊಂಡು ನಮ್ಮ ಹಿರಿಯರು ಕನ್ನಡ ಭಾಷೆಯನ್ನಾಡುವ ಜನರನ್ನು ಭೌಗೋಳಿಕವಾಗಿ ಒಂದುಗೂಡಿಸಿ ಭಾರತದ ಒಂದು ಸಂವಿಧಾನಾತ್ಮಕ ಘಟಕವನ್ನಾಗಿ ರೂಪಿಸಿದರೋ, ಆ ಘನೋದ್ದೇಶಗಳೆಲ್ಲ ಇಂದು ಅಪ್ರಸ್ತುತವಾಗಿ ಕಾಣುವಷ್ಟು ಕನ್ನಡಿಗರು ತಮ್ಮ ನೆಲ, ಭಾಷೆ, ಸಂಸ್ಕೃತಿಗಳನ್ನು ಕುರಿತಂತೆ ಮೈಮರೆವಿಗೆ ಒಳಗಾಗಿದ್ದಾರೆ; ತಮ್ಮ ಬದುಕಿನ ಗುರಿ ಹಾಗೂ ಮಾಧ್ಯಮಗಳನ್ನು ಬದಲಿಸಿಕೊಂಡಿದ್ದಾರೆ.

ಇವರಲ್ಲಿ ಕೆಲವರು ಜಾತಿ-ವರ್ಗ, ಧರ್ಮ-ಹಣದ ರಾಜಕಾರಣಗಳ ಹುದಲಲ್ಲಿ ಸಿಕ್ಕಿಹಾಕಿಕೊಂಡು, ತಮಗೆ ಕನ್ನಡ ಮೂಲವಾದ ಒಂದು ಸಾಮಾನ್ಯ ಅಸ್ಮಿತೆಯಿದೆ; ಅದರ ಆಧಾರದ ಮೇಲೆ ರಾಜಕಾರಣ ಮಾಡಿದರೆ ಮಾತ್ರ ನಾಡಿಗೂ ತಮಗೂ ಒಳ್ಳೆಯದಾಗಬಲ್ಲದು ಎಂಬ ವಾರಸುದಾರಿಕೆಯನ್ನೇ ಮರೆತಿದ್ದಾರೆ. ಇನ್ನು ಕೆಲವರು ಜಾಗತೀಕರಣದ ಈ ದಿನಗಳಲ್ಲಿ ಎಲ್ಲ ಪ್ರತ್ಯೇಕತೆಗಳ ಗೋಡೆಗಳೂ ಬಿದ್ದು ಹೋಗುತ್ತಾ ಜಗತ್ತೇ ಒಂದಾಗುತ್ತಿರುವಾಗ, ಕನ್ನಡ-ಕರ್ನಾಟಕ ಎಂದು ಮಾತಾಡುವುದೇ ಅಸಂಗತವೆಂದು ತಮ್ಮ 'ಜಾಗತಿಕ ಪ್ರಜ್ಞೆ'ಯನ್ನು ಮರೆಯುತ್ತಾ 'ಪ್ರಜ್ಞಾವಲಸೆ'ಗೆ ಸಿಕ್ಕಿ ಕೊಚ್ಚಿ ಹೋಗುತ್ತಿದ್ದಾರೆ. ಆದರೆ ಇವರಿಗೆ ಹಳೆಯ ಗೋಡೆಗಳು ಬೀಳುತ್ತಿದ್ದಂತೆ ಹೊಸ ಗೋಡೆಗಳು ಏಳುತ್ತಿವೆ ಹಾಗೂ ಈ ಹೊಸ ಗೋಡೆಗಳು ಆ ಹಳೆಯ ಗೋಡೆಗಳಂತೆ ನಮ್ಮ ಅಳತೆಗಳ ಪ್ರಕಾರ ಏಳುತ್ತಿಲ್ಲ; ಬದಲಾಗಿ ಇನ್ನಾರದೋ ಲೆಕ್ಕಾಚಾರದ ಪ್ರಕಾರ ಸದಾ ಅಳತೆಗಳನ್ನು ಬದಲಿಸಿಕೊಳ್ಳುವ ಗೋಡೆಗಳಾಗಿ ನಮ್ಮನ್ನು 'ಮಾಯಾ ಪ್ರಪಂಚ'ವೊಂದರ ಪ್ರಜೆಗಳನ್ನಾಗಿ ಮಾಡುತ್ತಿವೆ ಎಂಬುದರ ಪರಿವೆ ಇದ್ದಂತಿಲ್ಲ.

ಸದ್ಯದ ಇಂತಹ ಮೈಮರೆವಿನಲ್ಲಿ, ಕಳೆದ ಐವತ್ತು ವರ್ಷಗಳಲ್ಲಿ ಭಾರತದ ಗಣರಾಜ್ಯ ಕ್ರಮೇಣ ತನ್ನ ಒಕ್ಕೂಟ ಸ್ವರೂಪವನ್ನು ಕಳೆದುಕೊಳ್ಳುತ್ತಾ ಏಕಘಟಕ ರಾಷ್ಟ್ರದಂತೆ ಒಡಮೂಡಿ, ಇಂದು ಕರ್ನಾಟಕವೆಂಬುದನ್ನು ಕೇವಲ ತನ್ನ ಒಂದು ಉಪ ಆಡಳಿತ ಘಟಕದ ಮಟ್ಟಕ್ಕೆ ಇಳಿಸುತ್ತಿರುವುದನ್ನು ಯಾರೂ ಗಮನಿಸದೇ ಹೋಗಿರುವುದು ಕನ್ನಡಿಗರ ನಿಜವಾದ ದುರಂತವಾಗಿದೆ. ಹಾಗಾಗಿಯೇ ೫೦ ವರ್ಷಗಳ ಸಂಭ್ರಮಾಚರಣೆಯಲ್ಲಿರುವ ಕರ್ನಾಟಕದ ಜನತೆ, ಈ ಆಚರಣೆಗೆ ನಿಜವಾದ ಕಾರಣಗಳಿವೆಯೇ ಎಂಬುದನ್ನು ಪರಿಶೀಲಿಸಿಕೊಳ್ಳುವ ವಿವೇಚನಾ ಶಕ್ತಿಯನ್ನೇ ಕಳೆದುಕೊಂಡಂತಿದೆ: ಈ ಸಂಭ್ರಮಾಚರಣೆಗಾಗಿ ಎಗ್ಗಿಲ್ಲದೇ ಹರಿದುಬರುತ್ತಿರುವ ಹಣದ ಹೊಳೆಯಲ್ಲಿ ಕುಣಿದು ಕುಪ್ಪಳಿಸುವ, ಹಾಡಿ ನಲಿಯುವ, ತಿಂದು ತೇಗುವ ಹಾಗೂ ಪರಸ್ಪರ ಹಾಡಿ ಹೊಗಳಿಕೊಳ್ಳುವ ಒಂದು ಉದ್ಯಮವೇ ಸೃಷ್ಟಿಯಾಗಿ, ಈ ರಾಜಕೀಯ ದೊಂಬರಾಟವನ್ನು ಅಮಾಯಕ ಜನಸ್ತೋಮ ಸುಮ್ಮನೆ ನಿಂತುನೋಡುತ್ತಿದೆ. ವಿಶ್ವ ಕನ್ನಡ ಸಮ್ಮೇಳನಕ್ಕೆ ೧೫ ಕೋಟಿ ರೂಪಾಯಿಗಳ ವೆಚ್ಚವಂತೆ. ಇತ್ತ ಕನ್ನಡಕ್ಕೆ, ಕರ್ನಾಟಕವೆಂಬ ಕನ್ನಡ ರಾಜ್ಯದ ಸಾಂವಿಧಾನಿಕ ಅಧಿಪತಿಯೆನಿಸಿರುವ ರಾಜ್ಯಪಾಲರ ಕಾರ್ಯಾಲಯದಲ್ಲೇ ಅರ್ಧಚಂದ್ರವಾಗುತ್ತಿದೆ. ದೆಹಲಿಯಲ್ಲಿ ಕೂತ ಅನಾಮಿಕ ಅಧಿಕಾರಿಯೊಬ್ಬ ಕರ್ನಾಟಕದಲ್ಲಿ ಓಡಾಡುವ ರೈಲುಗಳಲ್ಲಿನ ಕನ್ನಡದ ಸ್ಥಾನಮಾನವನ್ನು ನಿರ್ಧರಿಸಿ ಫರ್ಮಾನು ಹೊರಡಿಸುತ್ತಾನೆ. ನಮ್ಮದೇ ರಾಜಕೀಯ ಪಕ್ಷಗಳು ಅನ್ಯ ರಾಜ್ಯಗಳ ಹಾಗು ಅನ್ಯಭಾಷಿಕ ಉದ್ಯಮಿಗಳನ್ನು ನಮ್ಮ ರಾಜ್ಯದ ಹಿತ ಕಾಯಲು ರಾಜ್ಯಸಭೆಗೆ ಕಳಿಸಿಕೊಡುತ್ತವೆ.

ಕರ್ನಾಟಕದಲ್ಲೇ ಕನ್ನಡದಿಂದ ಅನ್ನ ಹುಟ್ಟುವುದಿಲ್ಲ ಎಂಬ ವಾತಾವರಣ ನಿರ್ಮಿಸಲು ಅವಕಾಶ ಮಾಡಿಕೊಡುವ ನಮ್ಮದೇ ಸರ್ಕಾರ, 'ವ್ಯಾವಹಾರಿಕ ನೀತಿ'ಯಾಗಿ ಕನ್ನಡವನ್ನು ಎರಡನೇ ದರ್ಜೆಯ ಭಾಷೆಯಾಗಿ ಪರಿವರ್ತಿಸಲು ನಿರ್ಧರಿಸುತ್ತಿದೆ. ಕರ್ನಾಟಕದಲ್ಲಿನ ಉದ್ಯಮಗಳಲ್ಲಿ ಕರ್ನಾಟಕದವರಿಗೆ ಉದ್ಯೋಗದಲ್ಲಿ ಆದ್ಯತೆ ಒದಗಿಸುವ ಪ್ರಯತ್ನವಾಗಿರುವ ಸರೋಜಿನಿ ಮಹಿಷಿ ವರದಿ ಜಾರಿಗೆ ಇವೆಯೆಂದು ಹೇಳಲಾದ ಕಾನೂನು ತೊಡಕುಗಳನ್ನು ಪರಿಹರಿಸಿಕೊಳ್ಳಲು ಹತ್ತಾರು ವರ್ಷಗಳಾದರೂ ಕರ್ನಾಟಕ ಸರ್ಕಾರಕ್ಕೆ ಸಾಧ್ಯವಾಗುವುದಿಲ್ಲ. ಹಾಗೇ ಪ್ರಾಥಮಿಕ ಶಿಕ್ಷಣ ಮಾತೃಭಾಷೆಯಲ್ಲಿ ಎಂಬ ಸರ್ವೋಚ್ಚ ನ್ಯಾಯಾಲಯದ ತೀರ್ಪಿಗೆ

ಖಾಸಗಿ ಶಿಕ್ಷಣ ಸಂಸ್ಥೆಗಳವರು ೧೩ ವರ್ಷಗಳಿಂದ ರಾಜ್ಯ ಉಚ್ಚ ನ್ಯಾಯಾಲಯದಿಂದ ಪಡೆದ ತಡೆಯಾಜ್ಞೆಯನ್ನು (ಇದು ಕರ್ನಾಟಕದಲ್ಲಿ ಮಾತ್ರ ಸಾಧ್ಯವೇನೋ) ತೆರವುಗೊಳಿಸುವ ತುರ್ತು ಇತ್ತೀಚಿನವರೆಗೆ–ಒಂದನೇ ತರಗತಿಯಿಂದಲೇ ಶಾಲೆಗಳಲ್ಲಿ ಇಂಗ್ಲಿಷ್ ಕಲಿಸುವ ತನ್ನ ಆಜ್ಞೆಗೆ ವಿರೋಧ ವ್ಯಕ್ತವಾಗುವವರೆಗೆ–ಕನ್ನಡಿಗರ ಸರ್ಕಾರಕ್ಕೆ ಉಂಟಾಗಲಿಲ್ಲ! ಆದರೇನು, ಒಂದಷ್ಟು ಬಾಡಿಗೆ ಬಂಟರೂ, ವಯೋವೃದ್ಧರೂ ಕೂಗಾಡುವುದನ್ನು ಬಿಟ್ಟರೆ, ಕನ್ನಡದ ಜನ ಏನೂ ಆಗದಂತೆ ಭಾರತಾಂಬೆಯ ಮಡಿಲ ಮುಗ್ಧ ಮಕ್ಕಳಂತೆ ನಿರಾಳವಾಗಿಯೇ ಇರಬಲ್ಲವರಾಗಿದ್ದಾರೆ!

ಹಾಗೆ ನೋಡಿದರೆ ಕನ್ನಡಿಗರೇನೂ ಉದಾಸಿಗಳಲ್ಲ. ನೀರಿಗೆ ಸಂಬಂಧಿಸಿದಂತೆಯೋ, ಗಡಿಗೆ ಸಂಬಂಧಿಸಿದಂತೆಯೋ, ಉದ್ಯೋಗಕ್ಕೆ ಸಂಬಂಧಿಸಿದಂತೆಯೋ ಅನ್ಯಾಯವಾಗುತ್ತಿದೆ ಎಂದು ರಾಜಕೀಯ ಮಾಡಲು ಸದಾ ವಿಷಯ ಹುಡುಕುತ್ತಿರುವ ಪುಢಾರಿಗಳೋ ಅಥವಾ ಈಚಿನ ದಿನಗಳಲ್ಲಿ ವರದಿ ಮಾಡುವುದಕ್ಕಿಂತ ಸುದ್ದಿ ನಿರ್ಮಿಸುವುದರಲ್ಲೇ ನಿರತರಾಗಿರುವ ಮಾಧ್ಯಮಗಳೋ ಹುಯಿಲೆಬ್ಬಿಸಿದಾಗ, ಕನ್ನಡದ ಜನ ವೀರಾವೇಶದಿಂದ ಎದ್ದೇಳುತ್ತಾರೆ; ಬೀದಿಗಿಳಿಯುತ್ತಾರೆ, ಘೋಷಣೆ ಕೂಗುತ್ತಾರೆ. ಕೇಂದ್ರದ ಮಲತಾಯಿ ಧೋರಣೆಯನ್ನು ಖಂಡಿಸಿ ಮೆರವಣಿಗೆ ನಡೆಸಿ, ಮನವಿ ಕೊಟ್ಟು ನಾಯಕಮಣಿಗಳಿಂದ ಸಂತೈಸಿಕೊಂಡು ಮತ್ತೆ ಭಾರತಾಂಬೆಯ ಮಡಿಲು ಸೇರುತ್ತಾರೆ! ಹೀಗಾಗಿಯೇ ಇಂದು ದೆಹಲಿಯಲ್ಲಿ ಕರ್ನಾಟಕವು ಅಭಿವೃದ್ಧಿ ಹಾಗೂ ಭ್ರಷ್ಟಾಚಾರಗಳ ವಿಷಯದಲ್ಲಿ ದಕ್ಷಿಣದ ಬಿಹಾರವೆಂದೂ, ಕನ್ನಡಿಗರನ್ನು 'ತಲೆಹೋಕ ಜಗಳಗಂಟ'ರೆಂದೂ ಗುರುತಿಸಲಾಗುತ್ತಿದ್ದರೆ, ಅದಕ್ಕೆ ಕರ್ನಾಟಕದ ರಾಜಕಾರಣಿಗಳೇ, ಕರ್ನಾಟಕದ ಜನರೇ ಕಾರಣರಾಗಿದ್ದಾರೆ. ಇದಕ್ಕೆ ಮತ್ತೆ ಮುಖ್ಯ ಕಾರಣವೆಂದರೆ ರಾಜಕಾರಣಿಗಳೂ ಸೇರಿದಂತೆ ಕನ್ನಡದ ಜನ, ಕನ್ನಡತ್ವ – ಕರ್ನಾಟಕತ್ವಗಳ ಮೂಲಸೆಲೆಗಳನ್ನೇ ಮರೆತು ಬದುಕು ನಡೆಸುತ್ತಿರುವುದೇ ಆಗಿದೆ. ಇದರಿಂದಾಗಿಯೇ ನೆರೆಹೊರೆಯ ದ್ರಾವಿಡ ರಾಜ್ಯಗಳ ರಾಜಕಾರಣಕ್ಕೆ ಹೋಲಿಸಿದರೆ, ಕರ್ನಾಟಕದ ಜನರ ರಾಜಕಾರಣ ಕರ್ನಾಟಕದ ರಾಜಕಾರಣವಾಗಿರದೇ; ಭಾರತದ ರಾಜಕಾರಣದ ಮತ್ತು ಅದರಿಂದಾಗಿ ಈಗ ಜಾಗತಿಕ ರಾಜಕಾರಣದ ವಿಧೇಯ ರಾಜಕಾರಣವಾಗಿ ಅವನತಿಗೊಂಡಿದೆ. ಇದರಿಂದಾಗಿ ಕನ್ನಡನಾಡು–ನುಡಿ–ಸಂಸ್ಕೃತಿಗಳ ಮತ್ತು ಆ ಮೂಲಕ ಒಟ್ಟಾರೆ ಕರ್ನಾಟಕದ ಜನತೆಯ ಲೌಕಿಕಾಭ್ಯುದಯದ ಅವನತಿಯ ಹೆಬ್ಬಾಗಿಲು ತೆರೆದಂತಾಗಿದೆ.

ತಮಿಳರಿಗೆ, ತಮ್ಮ ಸಂಸ್ಕೃತಿಯನ್ನು ಕಾದಿಟ್ಟುಕೊಳ್ಳಲು ಕೈಗೊಂಡ ಯಾವ ಕ್ರಮವೂ ಸಂಕುಚಿತತೆ ಎನ್ನಿಸಲಿಲ್ಲ. ಬದಲಿಗೆ ತನ್ನ ಕುಲದ ಬೇರನ್ನು ಭದ್ರಮಾಡಿಕೊಂಡು ಬೆಳೆಯಲು ಅವಕಾಶ ಕಲ್ಪಿಸಿಕೊಳ್ಳುವುದನ್ನು, ಅದು ಬುಡಕಟ್ಟಿನ ವಿವೇಕವಾಗಿ ರೂಢಿಸಿಕೊಂಡಿತು. ಆ ವಿವೇಕವೇ ಇಂದಿಗೂ ತಮಿಳು ಭಾಷಾ ಸಮುದಾಯವನ್ನು–ಆಧುನಿಕತೆಯ ಪ್ರಭಾವದಿಂದಾಗಿ ಅದು ಎಷ್ಟೇ ಸಾಮಾಜಿಕ ಬಿರುಕುಗಳನ್ನು ಕಂಡಿದ್ದರೂ– ಅಖಿಲ ಭಾರತ ರಾಷ್ಟ್ರೀಯತೆಯಲ್ಲಿ ಲೀನಗೊಳಿಸದೆ ಒಂದು ಪುರಾತನ ರಾಷ್ಟ್ರೀಯತೆಯ ಪ್ರತಿನಿಧಿಯಾಗಿ ತನ್ನ ಅಸ್ಮಿತೆಯನ್ನು ಉಳಿಸಿಕೊಳ್ಳಲು ಕಾರಣವಾಗಿರುವುದು. ಹಾಗಾಗಿಯೇ ರೈಲ್ವೇ ಇಲಾಖೆ ತಮಿಳರ ಕೈಯಲ್ಲಿಲ್ಲದಿದ್ದರೂ, ಅದರ ಅಧಿಕಾರಿಗೆ ಹಿಂದಿ–ಇಂಗ್ಲಿಷ್ ಹೊರತಾಗಿ ಇನ್ನೆಲ್ಲ ಭಾರತೀಯ ಭಾಷೆಗಳನ್ನು ಅಖಿಲಭಾರತ ಮಟ್ಟದಲ್ಲಿ ತನ್ನ ಇಲಾಖೆಯಲ್ಲಿ ಒರೆಸಿ ಹಾಕುವ ಆಜ್ಞೆ ಹೊರಡಿಸುವ

ಸಮಯದಲ್ಲಿ ತಮಿಳಿಗೆ ಮಾತ್ರ ವಿನಾಯ್ತಿ ಕೊಡಬೇಕಾದ ಎಚ್ಚರ ಮೂಡಿತು! ಇಂತಹ ಎಚ್ಚರವನ್ನು ಅಖಿಲಭಾರತ ಮಟ್ಟದಲ್ಲಿ ಮೂಡಿಸಲಾಗದ ಕನ್ನಡ ರಾಷ್ಟ್ರೀಯತೆ ತನ್ನ ಅಸ್ಮಿತೆಯನ್ನು ಪೂರಾ ಭಾರತದ ರಾಷ್ಟ್ರೀಯತೆಯಲ್ಲಿ ಲೀನಗೊಳಿಸಿಕೊಳ್ಳುವಲ್ಲಿ ತನ್ನ ಧನ್ಯತೆಯನ್ನು ಕಂಡುಕೊಳ್ಳುತ್ತಾ ಬಂದಿದೆ. ಹಾಗಾಗಿಯೇ ಕರ್ನಾಟಕದ ರಾಜ್ಯಪಾಲರು ತಮ್ಮ ಕಾರ್ಯಾಲಯದ ಸಿಬ್ಬಂದಿಗೆ ಕನ್ನಡ ಪರೀಕ್ಷೆಯಿಂದ ವಿನಾಯಿತಿ ಕೊಡಬೇಕೆಂದು ಸೂಚಿಸುವ ಸ್ವಾತಂತ್ರ್ಯ ವಹಿಸುತ್ತಾರೆ; ಅದನ್ನು ಕನ್ನಡದ ಮುಖ್ಯಮಂತ್ರಿಗಳು 'ಅದು ರಾಜ್ಯಪಾಲರ ಸೂಚನೆ, ನಾವೇನೂ ಮಾಡುವಂತಿಲ್ಲ' ಎಂಬ ಅಸಹಾಯಕತೆ ವ್ಯಕ್ತಪಡಿಸುವ ದುಃಸ್ಥಿತಿಗೆ ಈಡಾಗುತ್ತಾರೆ! ಕರ್ನಾಟಕದಲ್ಲಿ ಓಡಾಡುವ ರೈಲುಗಳಲ್ಲಿ ಹಾಗೂ ಕರ್ನಾಟಕದ ರಾಜ್ಯಪಾಲರ ಕಾರ್ಯಾಲಯದಲ್ಲಿ ಕನ್ನಡದ ಸ್ಥಾನಮಾನಗಳನ್ನು ತೀರ್ಮಾನಿಸುವ ಅಧಿಕಾರ ಕನ್ನಡ ಜನತೆಯ ಪ್ರತಿನಿಧಿಗಳ ಕೈಯಲ್ಲಿಲ್ಲ ಎಂದರೆ, ಭಾರತದ ಒಕ್ಕೂಟವೆಂಬುದು ಒಂದು ಪ್ರಜಾಪ್ರಭುತ್ವವಾದಿ ರಾಷ್ಟ್ರವೋ ಅಥವಾ ಹಳೆಯ ವಸಾಹತುಶಾಹಿ ಪಳೆಯುಳಿಕೆಗಳ ಮೇಲೆ ಕಟ್ಟಿದ ಒಂದು ಆಧುನಿಕ ಸಾಮ್ರಾಜ್ಯವೋ ಎಂದು ಆಶ್ಚರ್ಯಪಡುವಷ್ಟು; ನಮ್ಮ ಸಂವಿಧಾನದ ಆಶಯಗಳು ಬುಡಮೇಲುಗೊಂಡಿವೆ.

–೨–

ಭಾರತ ಒಂದು ಗಣರಾಜ್ಯವಾಗಿ ಉದಯವಾದಾಗ, ಅದು ಮುಂದೆ ಜನತೆಯ ಆಶೋತ್ತರಗಳ ಪ್ರತಿಬಿಂಬವಾಗಿ ಭಾಷಾವಾರು ವಿಂಗಡಣೆಯ ಆಧಾರದ ಮೇಲೆ ರೂಪಿತವಾದ ರಾಜ್ಯಗಳೆಲ್ಲ ಸೇರಿದ ಒಂದು ಒಕ್ಕೂಟವಾಗಿ, ಭಾರತವೆಂಬ ರಾಷ್ಟ್ರವಾಗಿ ಒಡಮೂಡುತ್ತದೆ ಎಂಬ ಕಲ್ಪನೆ ಇತ್ತು. ಹಾಗೇ ನಮ್ಮ ಸಂವಿಧಾನ ಕರ್ತೃಗಳು ಕೂಡಾ ಭಾರತವನ್ನು ರಾಜ್ಯಗಳ ಒಕ್ಕೂಟವೆಂದೇ ಘೋಷಿಸಿದರು. ಅಲ್ಲದೆ, ಸಂವಿಧಾನದಲ್ಲೇ ಕೇಂದ್ರ ಮತ್ತು ರಾಜ್ಯಗಳ ಹಕ್ಕು ಅಧಿಕಾರ–ಕರ್ತವ್ಯಗಳನ್ನು ಕೇಂದ್ರ, ರಾಜ್ಯ ಹಾಗೂ ಸಹಚರಿ (concurrent) ಎಂಬ ಮೂರು ಪಟ್ಟಿಗಳಾಗಿ ವಿಂಗಡಿಸಿ, ಕೇಂದ್ರ–ರಾಜ್ಯಗಳ ಸಂಬಂಧವನ್ನು ನಿರೂಪಿಸಿದರು. ವಿಶೇಷವಾಗಿ ರಾಜ್ಯಗಳ ಹಿತ ಕಾಯಲೆಂದೇ ಲೋಕಸಭೆಯ ಜೊತೆಗೆ ರಾಜ್ಯಸಭೆಯ ರಚನೆಗೂ ಸಂವಿಧಾನದಲ್ಲಿ ಅವಕಾಶ ಕಲ್ಪಿಸಲಾಯಿತು. ಹಾಗಾಗಿಯೇ ನಮ್ಮ ಸಂವಿಧಾನ ಕರ್ತೃಗಳು ಸಂಬಂಧಪಟ್ಟ ರಾಜ್ಯಗಳ ವಿಧಾನಸಭೆಗಳಿಂದ ರಾಜ್ಯಸಭೆಗೆ ಆಯ್ಕೆಯಾಗುವ ಅಭ್ಯರ್ಥಿಗಳು ಆಯಾ ರಾಜ್ಯಗಳ ನಿವಾಸಿಗಳೇ ಆಗಿರಬೇಕೆಂಬ ನಿಬಂಧನೆಯನ್ನೂ ಹಾಕಿದ್ದರು. ಆಯಾ ರಾಜ್ಯಗಳಲ್ಲಿ ಹುಟ್ಟಿ ಬೆಳೆದವರಿಗೆ ಆಯಾ ರಾಜ್ಯದ ಜನ–ನಾಡು–ನುಡಿ–ಸಂಸ್ಕೃತಿ–ಆಡಳಿತ–ಅಭ್ಯುದಯಗಳ ಬಗೆಗೆ ಅಭಿಮಾನಾಸ್ಪದವಾದ ಕಲ್ಪನೆ ಇರುತ್ತದೆ ಎಂಬುದು ಈ ನಿಬಂಧನೆಯ ಹಿಂದಿನ ತಿಳುವಳಿಕೆ.

ಆದರೆ ಕಳೆದ ೫೫ ವರ್ಷಗಳಲ್ಲಿ ರಾಷ್ಟ್ರರಾಜಕಾರಣವು ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ಎಷ್ಟು ಕೇಂದ್ರೀಕೃತಗೊಳ್ಳುತ್ತಾ ಹೋಗಿದೆ ಎಂದರೆ, ರಾಜ್ಯಗಳ ಸ್ವಾಯತ್ತತೆಯನ್ನು ದುರ್ಬಲಗೊಳಿಸುತ್ತಾ ಹೋದ ಅನೇಕ ಸಂವಿಧಾನ ತಿದ್ದುಪಡಿಗಳಿಗೆ ಕಿರೀಟವಿಟ್ಟಂತೆ ಮೂರು ವರ್ಷಗಳ ಹಿಂದೆ ರಾಷ್ಟ್ರೀಯ ಪ್ರಜಾಸತ್ತಾತ್ಮಕ ರಂಗ (ಎನ್.ಡಿ.ಎ) ಸರ್ಕಾರ ಸಂವಿಧಾನಕ್ಕೆ ತಿದ್ದುಪಡಿ ತಂದು, ರಾಜ್ಯಸಭಾ ಚುನಾವಣೆಗಿದ್ದ ರಾಜ್ಯ ನಿವಾಸಿ ನಿಬಂಧನೆಯನ್ನೇ ತೆಗೆದುಹಾಕಿತು!

ಈ ಮುನ್ನ ಈಗಿನ ಪ್ರಧಾನಮಂತ್ರಿಯೂ ಸೇರಿದಂತೆ, ವಿವಿಧ ಪಕ್ಷಗಳಿಗೆ ಸೇರಿದ ಅನೇಕರು ಸುಳ್ಳು ಅಥವಾ ಹೊಸದಾಗಿ ಸೃಷ್ಟಿಸಿಕೊಂಡ ಮನೆ ವಿಳಾಸಗಳನ್ನು ನೀಡಿ ತಮ್ಮದಲ್ಲದ ರಾಜ್ಯಗಳಿಂದ ರಾಜ್ಯಸಭೆಗೆ ಆಯ್ಕೆಯಾಗಿದ್ದರು. ಅಂದರೆ ಪಕ್ಷಭೇದವಿಲ್ಲದೇ ನಮ್ಮ ರಾಜಕಾರಣದ – ನಮ್ಮ ರಾಜ್ಯದ ರಾಜಕಾರಣವೂ ಸೇರಿದಂತೆ – ರೀತಿ ನೀತಿಗಳೇ ಸಂವಿಧಾನದ ಆಶಯಕ್ಕೆ ವಿರುದ್ಧವಾಗಿ ರಾಜ್ಯಗಳ ಸ್ವಾಯತ್ತತೆಯನ್ನೂ ನಾಶ ಮಾಡಹೊರಟಿವೆ. ಇದಕ್ಕೆ ಮುಖ್ಯಕಾರಣ, ಈಗ ಪಕ್ಷಗಳಿಗಿಂತ ನಾಯಕರು ಮುಖ್ಯವಾಗಿ ಅವರ ವರ್ಚಸ್ಸು ಹಾಗೂ ಅವರ ಹಣವಿಲ್ಲದೇ ಚುನಾವಣೆಗಳನ್ನು ಎದುರಿಸಲಾಗದಷ್ಟು ನಮ್ಮ ರಾಜಕಾರಣವು ಉದ್ಯಮೀಕರಣಗೊಂಡಿರುವುದು. ಕರ್ನಾಟಕದಲ್ಲಂತೂ ಈ ಪ್ರವೃತ್ತಿ ಎಲ್ಲ ರಾಜಕೀಯ ಮರ್ಯಾದೆಯನ್ನೂ ಮೀರಿ ಬೆಳೆದಿದೆ. ಇಂದು ರಾಜ್ಯಸಭೆಯಲ್ಲಿ ನಮ್ಮ ರಾಜ್ಯವನ್ನು ಪ್ರತಿನಿಧಿಸುತ್ತಿರುವ ಹನ್ನೆರಡು ಜನರಲ್ಲಿ ಮೂವ್ವರು ಹೊರ ರಾಜ್ಯದವರಾಗಿದ್ದಾರೆ. ಅನ್ಯಭಾಷಿಕರಾದ ಈ ಮೂವ್ವರೂ ಈಗ ಆಡಳಿತ ನಡೆಸುತ್ತಿರುವ ಪಕ್ಷಗಳ ಬೆಂಬಲದಿಂದಲೇ ಆಯ್ಕೆಯಾಗಿ ಹೋದವರು. ಇವರಲ್ಲೊಬ್ಬರೂ ಈವರೆಗೆ ರಾಜ್ಯದ ಹಿತ ಕಾಯ್ದ ದಾಖಲೆಗಳಿಲ್ಲ. ಇನ್ನು ಉಳಿದವರು ತಮ್ಮ ಪಕ್ಷಗಳ ಪ್ರತಿನಿಧಿಗಳಂತೆ ವರ್ತಿಸುತ್ತಿದ್ದಾರೆಯೇ ಹೊರತು, ರಾಜ್ಯದ ಪ್ರತಿನಿಧಿಗಳಂತಲ್ಲ. ಇವರು ರಾಜ್ಯದ ಹಿತಕ್ಕೆ ಧಕ್ಕೆಯಾದಾಗ ರಾಜ್ಯಸಭೆಯಲ್ಲಿ ಕರ್ನಾಟಕದ ಗುಂಪಿನಂತೆ ಒಟ್ಟಾಗಿ ಎದ್ದು ನಿಂತು ಮಾತನಾಡಿದ ಅಥವಾ ರಾಜಕಾರಣ ಮಾಡಿದ ಉದಾಹರಣೆ ಇಲ್ಲವೇ ಇಲ್ಲವೆನಿಸುವಷ್ಟು ಅಪರೂಪ.

ಈಚೆಗೆ –ಕಳೆದ ವರ್ಷ–ರಾಜ್ಯದಿಂದ ನಡೆದ ರಾಜ್ಯಸಭಾ ಚುನಾವಣೆಯನ್ನು ಗಮನಿಸಿದರೆ ಕನ್ನಡಿಗರು ತಮ್ಮ ರಾಜಕಾರಣವನ್ನು ಎಷ್ಟು ಆತ್ಮಘಾತುಕವಾಗಿ ನಡೆಸಿಕೊಂಡು ಹೋಗುತ್ತಾರೆ ಎಂಬುದು ಗೊತ್ತಾಗುತ್ತದೆ. (ಈ ಹಿಂದಿನ)ಸಮ್ಮಿಶ್ರ ಸರ್ಕಾರದ ಪಾಲುದಾರ ಪಕ್ಷಗಳು, ಯಾರೂ ಹೆಸರೇ ಕೇಳಿರದ ಅನ್ಯಭಾಷಿಕ ಉದ್ಯಮಿಯೊಬ್ಬನನ್ನು ಬೆಂಬಲಿಸಿ ನಾಮಪತ್ರ ಸಲ್ಲಿಸಿದಾಗ ಕನ್ನಡದ ಪ್ರತಿಭಾವಂತ ಹಿರಿಯ ಸಾಹಿತಿಯೊಬ್ಬರು ಕನ್ನಡ–ಕರ್ನಾಟಕದ ಆತ್ಮಗೌರವದ ಆಧಾರದ ಮೇಲೆ (ಅವರಿಗೆ ರಾಜಕೀಯ ಆಕಾಂಕ್ಷೆಯೂ ಇದ್ದಿರಬಹುದು. ಅದು ಅಪರಾಧವೇನಲ್ಲವಲ್ಲ!) ಕೆಲವು ಪಕ್ಷೇತರ ಶಾಸಕರ ಬೆಂಬಲದೊಂದಿಗೆ ತಮ್ಮ ನಾಮಪತ್ರ ಸಲ್ಲಿಸಿದರು. ನಮ್ಮ ಮುಖ್ಯಮಂತ್ರಿಗಳು ಕನಲಿ ಕೆಂಡವಾಗಿ 'ಯಾರೀತ? ನಮ್ಮನ್ನು ಒಂದು ಮಾತು ಕೇಳದೆ ನಾಮಪತ್ರ ಸಲ್ಲಿಸುವುದೆಂದರೇನು?' ಎಂದು ತಮ್ಮ ಸಾಂಸ್ಕೃತಿಕ ಅಮಾಯಕತ್ವವನ್ನು, ರಾಜಕೀಯ ಅಪ್ರಬುದ್ಧತೆಯನ್ನೂ ಪ್ರದರ್ಶಿಸಿತು. ಇನ್ನು 'ಕನ್ನಡ ಕನ್ನಡ' ಎಂದು ಕೂಗಾಡುವ ಸಾಹಿತಿ–ಸಂಶೋಧಕ–ಹೋರಾಟಗಾರರ ಗುಂಪೊಂದು ಮುಖ್ಯಮಂತ್ರಿಯವರ ಕನಲಿಕೆಗೆ ಬೆಂಬಲ ಸೂಚಿಸುವಂತೆ, ಆ ಹಿರಿಯ ಪ್ರತಿಭಾವಂತ ಸಾಹಿತಿಯನ್ನು 'ಕನ್ನಡ ದ್ರೋಹಿ' ಎಂದು ಕರೆಯಿತು. ಈ ಗುಂಪಿನ ಅನೇಕರು ಆ ಅನ್ಯಭಾಷಿಕ ಅನಾಮಿಕ ಉದ್ಯಮಿಯನ್ನು, ಆತ ಕರ್ನಾಟಕದ ನಿವಾಸಿ ಎಂದು ಸಮರ್ಥಿಸಿ, ಪರೋಕ್ಷವಾಗಿ ಆತನನ್ನು ಬೆಂಬಲಿಸಿದರು. ಇಲ್ಲಿ ಎದ್ದು ಕಂಡದ್ದು, ಇವರೆಲ್ಲರಿಗೆ ಕನ್ನಡದ ರಾಜಕಾರಣಕ್ಕಿಂತ ತಮ್ಮ ವೈಯಕ್ತಿಕ ಹಿತಾಸಕ್ತಿಯ ಅಧಿಕಾರ ರಾಜಕಾರಣವೇ ದೊಡ್ಡದಾಗಿದ್ದು. ಇದರಿಂದಾಗಿಯೇ, ಕನ್ನಡ ರಾಜಕಾರಣದ ಅಭ್ಯರ್ಥಿಯಾಗಿದ್ದ ಹಿರಿಯ ಸಾಹಿತಿ – ಆತನ ವೈಯಕ್ತಿಕ ದೌರ್ಬಲ್ಯಗಳು ಏನೇ ಇದ್ದರೂ – ಆ ಅನ್ಯಭಾಷಿಕ ಉದ್ಯಮಿಗಿಂತ ಹೆಚ್ಚು ಸಮರ್ಥವಾಗಿ ಪ್ರಾಮಾಣಿಕವಾಗಿ ಹಾಗೂ ಜವಾಬ್ದಾರಿಯಿಂದ ಕರ್ನಾಟಕ–ಕನ್ನಡವನ್ನು ರಾಷ್ಟ್ರ ರಾಜಕಾರಣದಲ್ಲಿ

ಪ್ರತಿನಿಧಿಸಬಲ್ಲವನಾಗಿದ್ದ ಎಂಬುದೇ ಅವರ ಅರಿವಿಗೆ ಬಾರದೇ ಹೋಯಿತು. ಹೀಗೆ ಸೃಷ್ಟಿಸಲಾದ ಗೊಂದಲದಲ್ಲಿ ಕನ್ನಡದ ಸಾಮಾನ್ಯ ಜನ, ಕನ್ನಡಿಗರಾದರೇನು-ಅನ್ಯರಾದರೇನು, ಅವರು ನಮ್ಮ ಹಿತ ಕಾಯುವುದು ಅಷ್ಟರಲ್ಲೇ ಇದೆ ಎಂದು ಸಿನಿಕರಾಗಿ ಸುಮ್ಮನಾದರು. ಇನ್ನೂ ಕೆಲವು ಕನ್ನಡ ಬುದ್ಧಿಜೀವಿಗಳಂತೂ ಈ ನೆಲದಮೇಲೇ ಇಲ್ಲದವರಂತೆ, ಸ್ವ ಮತ್ತು ಅನ್ಯವೆಂಬುದೇ ಸಂಕುಚಿತ ಪರಿಕಲ್ಪನೆಗಳು ಎಂದೆನ್ನುತ್ತಾ ತಮ್ಮ ಅನುಭಾವಿಕ ಎತ್ತರಗಳನ್ನು ಮೆರೆದರು!

ಇದು ಕನ್ನಡದ ಅಸ್ಮಿತೆಯ ಬಿಕ್ಕಟ್ಟಿನ ಮೂಲಗಳನ್ನು ಗುರುತಿಸಬಹುದಾದ ಒಂದು 'ಪರೀಕ್ಷಾ ಪ್ರಕರಣ'ದಂತೆ ಕಂಡರೆ ಆಶ್ಚರ್ಯವಿಲ್ಲ. ಕನ್ನಡಿಗರೇಕೆ ಹೀಗೆ ಕುಲಾಭಿಮಾನವಿಲ್ಲದವರಂತೆ ವರ್ತಿಸುತ್ತಿದ್ದಾರೆ? ಇವರು ಕುಲಾಭಿಮಾನದಲ್ಲಿ ನಂಬಿಕೆ ಇಲ್ಲದ ಜಾಗತಿಕ ಪ್ರಜಾವರ್ಗವಾಗಿ ಪರಿವರ್ತಿತವಾಗಿದ್ದಾರೆಂದೇನೂ ಅಲ್ಲ. ತಮಿಳು ಕುಲಾಭಿಮಾನ ಕೆರಳಿದೊಡನೆ ತಡವಿಲ್ಲದೆ ಇವರ ಕುಲಾಭಿಮಾನವೂ ಕೆರಳಬಲ್ಲಷ್ಟು ಅದು ತೀವ್ರವಾಗಿದೆ! ಇತ್ತೀಚಿನ ಉದಾಹರಣೆ ಎಂದರೆ, ಈಗ ದೊಡ್ಡ ವಿವಾದವಾಗಿ ಮಾರ್ಪಾಡಾಗಿರುವ ಶಾಸ್ತ್ರೀಯ ಭಾಷಾ ಸ್ಥಾನಮಾನಕ್ಕಾಗಿ ನಡೆದಿರುವ ಚಳುವಳಿ. ತಮಿಳರು ತಮ್ಮ ಭಾಷೆಗೆ ಆ ಸ್ಥಾನಮಾನವನ್ನು ದೊರಕಿಸಿಕೊಂಡಾಗಲಷ್ಟೇ ಎಚ್ಚೆತ್ತುಗೊಂಡ ಕನ್ನಡ ಕುಲವೀರರು, ಅವಮಾನಿತರಾದಂತೆ ಈಗ ತಮ್ಮ ಭಾಷೆಗೂ ಆ ಸ್ಥಾನಮಾನ ಬೇಕು ಎಂದು ಅನೇಕ 'ಒಂದು ದಿನದ ಆಮರಣಾಂತ ಉಪವಾಸ'ಗಳನ್ನು ಕೈಗೊಳ್ಳುತ್ತಿದ್ದಾರೆ; ಧರಣಿಗಳನ್ನು ನಡೆಸುತ್ತಾ, ಮೆರವಣಿಗೆ ತೆಗೆಯುತ್ತ ಕೇಂದ್ರ ಸರ್ಕಾರದ ಮೇಲೆ ಗುಟುರು ಹಾಕುತ್ತಿದ್ದಾರೆ! ಆದರೆ ತಮಿಳರು ತಮ್ಮ ಭಾಷೆಗೆ ಈ 'ಪ್ರತಿಷ್ಠಿತ' ಸ್ಥಾನಮಾನ ಗಳಿಸಿಕೊಳ್ಳಲು ನಡೆಸಿದ ಅಧ್ಯಯನ, ಪಟ್ಟ ಪರಿಶ್ರಮ, ಪ್ರದರ್ಶಿಸಿದ ಐಕ್ಯತೆ ಹಾಗೂ ಪಕ್ಷ ಭೇದವಿಲ್ಲದೆ ಸಂಘಟಿಸಿಕೊಂಡ ರಾಜಕೀಯ ಇಚ್ಛಾಶಕ್ತಿ ಎಂತಹುದು ಮತ್ತು ಇವೆಲ್ಲ ಯಾವ ಮೂಲದಿಂದ ಹೊಮ್ಮಿದವು ಎಂಬುದರ ಕಡೆಗೆ ಮಾತ್ರ ಇವರ ಗಮನ ಹೋದಂತಿಲ್ಲ. ತಮಿಳರಿಗೆ ಹೋಲಿಸಿದಂತೆ ಕೀಳರಿಮೆಯಿಂದ ನರಳುವಂತೆ ತೋರುವ ಕನ್ನಡ ಚಳವಳಿಕಾರರು, ತಮಿಳರಿಂದ ಕಲಿಯಬೇಕಾದುದು ಅಮೂಲ್ಯವೂ ಅಪಾರವೂ ಆಗಿದೆ.

ಅವರು ತಮಿಳಿಗೆ ಶಾಸ್ತ್ರೀಯ ಭಾಷಾ ಸ್ಥಾನಮಾನವನ್ನು ಒತ್ತಾಯಿಸುವ ಮುನ್ನ ಮಾಡಿಕೊಂಡ ಪೂರ್ವಸಿದ್ಧತೆಗಳ ಪರಿಯನ್ನೇ ನೋಡಿ. ನಮ್ಮ ಇತಿಹಾಸ ತಜ್ಞರೊಬ್ಬರು ಇತ್ತೀಚೆಗೆ ಸ್ವಲ್ಪ ಉತ್ಪ್ರೇಕ್ಷಿಸಿ ಹೇಳಿದಂತೆ, ಪ್ರತಿವರ್ಷ ತಮಿಳರ ಇತಿಹಾಸ ಹತ್ತು ವರ್ಷ ಹೆಚ್ಚುತ್ತಿದೆ. ಅದಕ್ಕಾಗಿ ಅವರು ಅಗತ್ಯ ಪೂರಕ ಮಾಹಿತಿ ಹಾಗೂ ಆಕರಗಳನ್ನು ಸಂಗ್ರಹಿಸುತ್ತಿದ್ದಾರೆ. ಹಾಗೇ ಅವರ ಹತ್ತುವರ್ಷದ ಇತಿಹಾಸಕ್ಕೆ ಸಾವಿರ ಪುಟಗಳಷ್ಟು ದಾಖಲೆ ಒದಗಿಸುವ ಕೆಲಸ ಮಾಡುತ್ತಿದ್ದಾರೆ. ಶಾಸ್ತ್ರೀಯ ಭಾಷೆ ಎಂಬುದು ಅಂತಾರಾಷ್ಟ್ರೀಯ ಮಟ್ಟದ ಭಾಷಾಶಾಸ್ತ್ರೀಯ ಪರಿಕಲ್ಪನೆಯಾದ್ದರಿಂದ, ಅವರು ಮೊದಲು ತಮಿಳನ್ನು ಶಾಸ್ತ್ರೀಯ ಭಾಷೆಯಾಗಿ ಪ್ರಚುರ ಪಡಿಸಿದ್ದು, ಒಬ್ಬ ಅಂತಾರಾಷ್ಟ್ರೀಯ ಭಾಷಾಕುಲತಜ್ಞನ ಮೂಲಕ. ನಂತರ ಅದನ್ನು ಪಡೆದುಕೊಂಡದ್ದು ತಮಿಳು ಅಸ್ಮಿತೆಯನ್ನು ಆಧರಿಸಿದ ರಾಜಕೀಯ ಇಚ್ಛಾಶಕ್ತಿಯ ಮೂಲಕ. ತಮಿಳರು ತಮ್ಮ ರಾಜಕಾರಣವನ್ನು ಹೇಗೆ ಕಟ್ಟಿಕೊಂಡಿದ್ದಾರೆಂದರೆ, ಅವರು ಯಾವ ಪಕ್ಷಕ್ಕೇ- ಅದು ರಾಷ್ಟ್ರೀಯ ಪಕ್ಷವಾದರೂ ಸರಿಯೇ - ಸೇರಿರಲಿ, ಅದರ ದಾಕ್ಷಿಣ್ಯವಿಲ್ಲದೆ ರಾಷ್ಟ್ರ ರಾಜಕಾರಣ ನಡೆಯದು! ಆದರೆ ಕನ್ನಡಿಗರ ರಾಜಕಾರಣ ಅನ್ಯರ 'ಮೋರೆ'ಗೆ ಮಸಿ ಬಳಿಯುವುದರಲ್ಲೇ ತನ್ನ ಸಾರ್ಥಕತೆಯನ್ನು ಕಂಡುಕೊಳ್ಳುತ್ತಿದೆ!

ತಮಿಳರು ದ್ರಾವಿಡ ಕುಲವೆಂದು ಪರಿಗಣಿಸಲ್ಪಟ್ಟಿದ್ದರೂ, ಇತರ ದ್ರಾವಿಡ ಕುಲಗಳಿಗೆ ಹೋಲಿಸಿದಂತೆ ಅವರು ಅನಾದಿಕಾಲದಿಂದಲೂ ತಮ್ಮ ಕುಲವಿಶಿಷ್ಟತೆಯನ್ನು ಪ್ರಜ್ಞಾಪೂರ್ವಕವಾಗಿ ಉಳಿಸಿಕೊಂಡು ಬಂದವರು. ಲಿಪಿ ಇಲ್ಲದಿದ್ದ ದ್ರಾವಿಡ ಭಾಷಾ ಪ್ರಕಾರಗಳಿಗೆ ಬ್ರಾಹ್ಮಿ ಲಿಪಿ ಒದಗಿಬಂದಾಗ, ಆ ಲಿಪಿಯ ಮೂಲಕ ಅನ್ಯ ಸಂಸ್ಕೃತಿಗಳು ಅತಿಕ್ರಮಿಸಿಯಾವು ಎಂಬ ಎಚ್ಚರದಿಂದ ತಮಿಳು, ಅನೇಕ ಶತಮಾನಗಳ ಕಾಲ ತನ್ನ ಸಾಹಿತ್ಯ ಸಂಸ್ಕೃತಿಗಳನ್ನು ಮೌಖಿಕವಾಗಿಯೇ ಉಳಿಸಿಕೊಂಡು ಬೆಳೆಸಿತು. ಬ್ರಾಹ್ಮಿ ಲಿಪಿಯನ್ನು ಅಳವಡಿಸಿಕೊಳ್ಳುವ ತುರ್ತು ಒದಗಿಬಂದಾಗ, ಅದನ್ನು ಪರಿಷ್ಕರಿಸಿಕೊಂಡು ತನ್ನ ಭಾಷಾ ಅಭಿವ್ಯಕ್ತಿಗೆ ಬೇಕಾದ ೨೬ ಅಕ್ಷರಗಳನ್ನು ಮಾತ್ರ ಸ್ವೀಕರಿಸಿ, ಉಳಿದವನ್ನು ತಿರಸ್ಕರಿಸಿತು. ಕನ್ನಡ ಮಾತ್ರ ಉದಾರವಾಗಿ ಬ್ರಾಹ್ಮಿ ಲಿಪಿಯ ೫೬ ಅಕ್ಷರಗಳನ್ನೂ ಸ್ವೀಕರಿಸಿ, ಉದಾರತೆ ಮೆರೆಯಿತು. ಆದರೆ ಈ 'ಉದಾರತೆ'ಯಿಂದ ಕನ್ನಡ ಸಂಸ್ಕೃತಿ ಪಡೆದಿದ್ದೇನು, ತಮಿಳು ಸಂಸ್ಕೃತಿ ತನ್ನ 'ಸಂಕುಚಿತತೆ'ಯಿಂದಾಗಿ ಕಳೆದುಕೊಂಡಿದ್ದೇನು ಎಂದು ಇಂದು ನಿಂತು ಯೋಚಿಸಿದಾಗ, ಈ ಉದಾರತೆ ಮತ್ತು ಸಂಕುಚಿತತೆಗಳೆಂಬ ಭಾವನೆಗಳೇ ಬ್ರಾಹ್ಮಿ ಲಿಪಿ ಮೂಲಕ ಕನ್ನಡ ಸಂಸ್ಕೃತಿಯೊಳಕ್ಕೆ ನುಸುಳಿಬಂದ ಅಪಕಲ್ಪನೆಗಳೇನೋ ಎಂದೆನ್ನಿಸದಿರದು !

ಕಳೆದ ೫೦-೫೫ ವರ್ಷಗಳಲ್ಲಿ ನಡೆದ ಅನೇಕ ಸಂವಿಧಾನ ಹಾಗೂ ಕಾನೂನು ತಿದ್ದುಪಡಿಗಳ ಮೂಲಕ ರಾಜ್ಯಗಳ ಸ್ವಾಯತ್ತತೆ ಒತ್ತರಿಸಲ್ಪಟ್ಟಿದೆ. ಆದರೆ ತನ್ನ ಭಾಷಾಕುಲ ಸಂಸ್ಕೃತಿಯನ್ನು ಗುರುತಿಸಿಕೊಂಡು ಸಹಜವೆಂಬಂತೆ ಪೋಷಿಸಿಕೊಂಡು ಬಂದ ರಾಜ್ಯಗಳು ಈ ಒತ್ತುವರಿಯನ್ನು ತಮ್ಮ ರಾಜಕೀಯ ಶಕ್ತಿ ಸಂಘಟನೆಯ ಮೂಲಕ ನಿಷ್ಕ್ರಿಯಗೊಳಿಸಿವೆ. ಆದರೆ ಕರ್ನಾಟಕ ಮಾತ್ರ ತನ್ನ ಅಭ್ಯುದಯಕ್ಕೂ ಕನ್ನಡ ಕುಲಪ್ರಜ್ಞೆಗೂ ಸಂಬಂಧವೇ ಇಲ್ಲದಂತೆ, ರಾಷ್ಟ್ರ ರಾಜಕಾರಣದ ತಾಳಕ್ಕೆ ತಕ್ಕ ಹೆಜ್ಜೆ ಹಾಕುವುದೇ ತನ್ನ ಧರ್ಮವೆಂದು ನಂಬಿಕೊಂಡು ನಡೆಯುತ್ತಾ, ತನ್ನ ಗುರುತನ್ನೇ ಅಳಿಸಿಕೊಳ್ಳುತ್ತಿದೆ. ಇದರಿಂದಾಗಿ ಕನ್ನಡ ಭಾಷಾ ಸಮುದಾಯದ ಅಂತಃಸತ್ವವೇ ಬತ್ತಿಹೋಗಿ ಅದು ಆಧುನೀಕರಣದ ಒತ್ತಡಗಳನ್ನು ತಾಳಿಕೊಳ್ಳಲಾರದೆ ಕ್ರಮೇಣ ಕುಸಿಯುತ್ತಿದೆ; ಅನ್ಯಾಕ್ರಮಣಕ್ಕೆ ಈಡಾಗುತ್ತಿದೆ.

ಇದಕ್ಕೊಂದು ಮಾದರಿ ಉದಾಹರಣೆಯಂತಿದೆ ಕರ್ನಾಟಕದ ರಾಜಧಾನಿ ಬೆಂಗಳೂರು. ಈ ನಗರ ತನಗಿಂತ ದೊಡ್ಡ ನಗರಗಳಾದ ಕೋಲ್ಕೊತ್ತಾ ಅಥವಾ ಚೆನ್ನೈ ನಗರಗಳು ಉಳಿಸಿಕೊಳ್ಳಲು ಸಾಧ್ಯವಾಗಿರುವ ಸ್ಥಳೀಯ ಸಾಂಸ್ಕೃತಿಕ ನೆಲೆಗಟ್ಟನ್ನು ಉಳಿಸಿಕೊಳ್ಳಲಾಗದೆ ಕ್ರಮೇಣ ಚಹರೆಯೇ ಇಲ್ಲದ ಭೂತನಗರಿಯಾಗುತ್ತಿದೆ. ಈ Bangaloreನ್ನು Bengaluru ಎಂದು ಪುನಃನಾಮಕರಣ ಮಾಡುವ ಉದ್ಘೋಷಣೆಯ ಮೂಲಕ ನಮ್ಮ ರಾಜ್ಯಸರ್ಕಾರ ಸಂಸ್ಕೃತಿಯ ಪ್ರಶ್ನೆಯನ್ನು ಸಾಂಕೇತಿಕತೆಯ ಮಟ್ಟಕ್ಕೆ ಇಳಿಸಿದೆ. ಆದರೆ ಜೊತೆಯಲ್ಲೇ Greater Bangalore ಎಂಬ ಯೋಜನೆಯನ್ನೂ ಘೋಷಿಸಿ, ಈ ಸಾಂಕೇತಿಕತೆಯನ್ನು ಟೊಳ್ಳುಗೊಳಿಸಿದೆ. ಈ ಬಗ್ಗೆಯೆಲ್ಲಾ ತಲೆಯನ್ನು ಕೆಡಿಸಿಕೊಳ್ಳದಿರುವಂತೆ ತೋರುತ್ತಿರುವ ಕನ್ನಡ ಸಮುದಾಯ ತಾನೂ ಟೊಳ್ಳುಗೊಳ್ಳುತ್ತಿದೆ. ಇಂಗ್ಲಿಷ್‌ಗೆ ಮುಗಿಬಿದ್ದು, ತನ್ನ ಭಾಷೆಗೂ ತನಗೂ ಇರುವ ಕಳ್ಳುಬಳ್ಳಿ ಸಂಬಂಧವನ್ನೇ ನಿರಾಕರಿಸ ಹೊರಟಿರುವ ಈ ಸಮುದಾಯ, ಎದುರು ನೋಡುತ್ತಿರುವ ಭವಿಷ್ಯವಾದರೂ ಎಂತಹುದು?

ಇಂತಹ ಪ್ರಶ್ನೆಯನ್ನು ಕೇಳಿಕೊಳ್ಳುವ ಸಂದಿಗ್ಧ ಕನ್ನಡ ಸಂಸ್ಕೃತಿಗೆ ಏಕೆ ಒದಗಿ ಬಂದಿದೆ? ತನ್ನ ನೆರೆಹೊರೆಯ ಭಾಷಾ ಸಮುದಾಯಗಳಂತೆ ಕನ್ನಡ ಭಾಷಾ ಸಮುದಾಯವೂ ಏಕೆ ಒಂದು ವಿಶಿಷ್ಟ ಸಾಂಸ್ಕೃತಿಕ ಸಮುದಾಯವಾಗಿ ತನ್ನನ್ನು ಸಂಘಟಿಸಿಕೊಳ್ಳಲಾಗುತ್ತಿಲ್ಲ? ತನ್ನ ಪಾರಂಪರಿಕ ಅಸ್ಮಿತೆಯ ಆಧಾರದ ಮೇಲೆ ತನ್ನ ಬದುಕಿನ ಅನನ್ಯತೆ – ಘನತೆಗಳನ್ನು ಕಾಪಾಡಿಕೊಳ್ಳುವ ಪ್ರಯತ್ನದಲ್ಲಿ ಈಚಿನ ವರ್ಷಗಳಲ್ಲಿ ಅದೇಕೆ ಮತ್ತೆ ಮತ್ತೆ ಸೋಲತೊಡಗಿದೆ? ಈ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳಲು, ಕರ್ನಾಟಕದ ಇತಿಹಾಸದಲ್ಲಿ ಕನ್ನಡ ರಾಷ್ಟ್ರೀಯತೆ ಎಂಬ ಪರಿಕಲ್ಪನೆ ವಿಕಾಸಗೊಂಡ ರೀತಿ ಮತ್ತು ಅದು ಎದುರಿಸಿದ ಬಿಕ್ಕಟ್ಟುಗಳನ್ನು ಪರಿಶೀಲಿಸ ಬೇಕಾಗುತ್ತದೆ.

–೩–

ಈಗ ರಾಷ್ಟ್ರೀಯತೆ ಎಂದೊಡನೆ ಅದು ಭಾರತದ ರಾಷ್ಟ್ರೀಯತೆ ಎಂದೇ ಭಾವಿಸಲಾಗುತ್ತದೆ. ಆದರೆ ಭಾರತದ ರಾಷ್ಟ್ರೀಯತೆ ಎಂಬುದೇ ಕಳೆದೊಂದು ಶತಮಾನದಲ್ಲಿ ನಾವು ಕಟ್ಟಿಕೊಂಡ ಒಂದು ಆಧುನಿಕ ಪರಿಕಲ್ಪನೆಯಾಗಿದೆ. ಏಕೆಂದರೆ ಭಾರತವೆಂಬುದು ಇತಿಹಾಸದಲ್ಲಿ ಒಂದು ರಾಜಕೀಯ ಶಕ್ತಿಯಾಗಿ ಈಗಿನ ರಾಷ್ಟ್ರ ರೂಪದಲ್ಲಿ ಇದ್ದುದೇ ಇಲ್ಲ. ಇತಿಹಾಸದಲ್ಲಿ ಅದು ಈ ರೂಪಕ್ಕೆ ಅತಿ ಸಮೀಪ ಬಂದಿದ್ದುಂದರೆ ಸಾಮ್ರಾಟ್ ಅಶೋಕ ಹಾಗೂ ಅಕ್ಬರರ ಸಾಮ್ರಾಜ್ಯ ವಿಸ್ತರಣೆಯ ಕಾಲದಲ್ಲಿ ಮಾತ್ರ. ಹೀಗಾಗಿ ನಾವು ಈಗ ಅರ್ಥೈಸಿಕೊಳ್ಳುತ್ತಿರುವಂತೆ ಭಾರತದ ರಾಷ್ಟ್ರೀಯತೆ ಎಂಬುದು ರೂಪುಗೊಂಡುದುದೇ, ಎರಡು ಶತಮಾನಗಳಿಂದೀಚೆಗೆ ಬ್ರಿಟಿಷರು ಭಾರತೀಯ ಉಪಖಂಡದಲ್ಲಿ ಕ್ರಮೇಣ ವಶಪಡಿಸಿಕೊಳ್ಳುತ್ತಾ ಹೋದ ಪ್ರಾಂತ್ಯಗಳು ಒಟ್ಟುಗೂಡಿ ಕಲ್ಪಿತವಾದ ಒಂದು ಭೂಭಾಗದ ಜನರ ರಾಜಕೀಯ ಆಶೋತ್ತರಗಳ ಆಧಾರದ ಮೇಲೆ. ಅವು, ಅವರು ೧೯ನೇ ಶತಮಾನದ ರಾಜಕೀಯ ಆವಿಷ್ಕಾರಗಳಲ್ಲಿ ಒಂದಾದ ಆಧುನಿಕ ರಾಷ್ಟ್ರವೊಂದರ ಕಲ್ಪನೆ ಇಟ್ಟುಕೊಂಡು ಸಂಘಟಿತಗೊಂಡ ಸ್ವಾತಂತ್ರ್ಯ ಹೋರಾಟದ ಪ್ರಕ್ರಿಯೆಯಲ್ಲಿ ಬಿಡುಗಡೆಯಾದ ಪ್ರಜಾಸತ್ತಾತ್ಮಕ ರಾಜಕೀಯ ಆಶೋತ್ತರಗಳಾಗಿದ್ದವು ಎಂಬುದಿಲ್ಲಿ ಗಮನಾರ್ಹ. ಇದಕ್ಕೆ ಮುನ್ನ ರಾಷ್ಟ್ರೀಯತೆಗಳೆಂಬುವೇನಾದರೂ ವ್ಯಕ್ತಗೊಂಡಿದ್ದರೆ, ಅವು ಭಾಷಾ ರಾಷ್ಟ್ರೀಯತೆಗಳೇ.

ರಾಷ್ಟ್ರೀಯತೆ ಎಂದರೆ ಸ್ಥೂಲವಾಗಿ, ಒಂದು ಸಮುದಾಯ ಉನ್ನತಿಯ ಒಂದು ಸಾಮಾನ್ಯ ಆಶಯದೊಂದಿಗೆ ಮುನ್ನಡೆಯಲು ತನ್ನನ್ನು ತಾನು ಸಂಘಟಿಸಿಕೊಳ್ಳುವುದಕ್ಕೆ ಕಂಡುಕೊಂಡ ಒಂದು ಭಾವ ಸಂಬಂಧ. ಭರತ ಖಂಡದಲ್ಲಿ ಇಂತಹ ಭಾವ ಸಂಬಂಧಗಳು ಹಲವು ಬಾರಿ ಧಾರ್ಮಿಕ ನಂಬಿಕೆಗಳ ಆಧಾರದ ಮೇಲೆ ವ್ಯಕ್ತವಾಗುತ್ತಿದ್ದವು. ಆದರೆ ಈ ಧಾರ್ಮಿಕ ಭಾವ ಧಾರೆ ಇತಿಹಾಸದುದ್ದಕ್ಕೂ ಅನೇಕ ರೂಪಾಂತರಗಳನ್ನು ಹೊಂದುತ್ತಿದ್ದು ದರಿಂದಲೂ ಮತ್ತು ಭೌಗೋಳಿಕವಾಗಿ ಅದನ್ನು ಸುಸ್ಥಿರವಾಗಿ ಸಂಘಟಿಸುವ ರಾಜಕೀಯ ಶಕ್ತಿ ಮೂಡದಿದ್ದುದರಿಂದಲೂ, ಭರತ ಖಂಡ ಬಹುಧರ್ಮೀಯ ಸಂಸ್ಕೃತಿಯನ್ನು ರೂಢಿಸಿಕೊಳ್ಳುತ್ತಾ ಬಂತು. ಇದರಿಂದಾಗಿ ಇಲ್ಲಿ ಧರ್ಮಾಧಾರಿತ ರಾಷ್ಟ್ರೀಯತೆ ತನ್ನ ಕ್ರಿಯಾಶೀಲ ರೂಪಗಳಲ್ಲಿ ಕಾಣಿಸಿಕೊಳ್ಳಲಿಲ್ಲ. ಬದಲಾಗಿ ಒಂದು ಸಾಮಾನ್ಯ ಭಾಷೆಯ ಮೂಲಕ ಬಂಧಿಸಲ್ಪಟ್ಟ

ಒಂದು ಜನಸಮುದಾಯ; ಆ ಭಾಷೆಯ ಮೂಲಕ ವ್ಯಕ್ತಪಡಿಸಿದ ಸಾಮುದಾಯಿಕ ವಿಕಾಸದ ಆಶಯಗಳು ಒಂದು ರಾಜಕೀಯ ಘಟಕದ ನಿರ್ಮಾಣಕ್ಕೆ ಕಾರಣವಾಗಿ, ರಾಷ್ಟ್ರೀಯತೆಯಾಗಿ ಬೆಳೆದುಬಂದ ಅನೇಕ ಉದಾಹರಣೆಗಳನ್ನು ನಾವು ಇತಿಹಾಸದಲ್ಲಿ ಗಮನಿಸಬಹುದು. ಇಲ್ಲಿ ಮಾತ್ರವಲ್ಲ, ಜಗತ್ತಿನ ಇತರ ಭಾಗಗಳಲ್ಲೂ ಭಾಷಾ ಸಮುದಾಯಗಳು ರಾಜಕೀಯ ಘಟಕಗಳಾಗಿ ಸಂಘಟಿತಗೊಂಡು, ತಮ್ಮದೇ ರಾಷ್ಟ್ರೀಯತೆಯನ್ನು ಬೆಳಸಿಕೊಂಡದ್ದನ್ನು ನಾವು ಗಮನಿಸಬಹುದು.

ಭಾರತದ ಜನಸಮುದಾಯದ ಮಾನಸಿಕತೆಯಲ್ಲಿ ಈ ಭಾಷಾ ರಾಷ್ಟ್ರೀಯತೆಗಳು ಅಂತರ್ಗತವಾಗಿದ್ದುದರಿಂದಲೇ, ವಸಾಹತುಶಾಹಿ ಸಂದರ್ಭದಲ್ಲಿ ಸ್ವಾತಂತ್ರ್ಯದ ಆಶಯವೂ ಭಾಷಾ ರಾಷ್ಟ್ರೀಯತೆಗಳೂ ಒಟ್ಟೊಟ್ಟಿಗೇ ವ್ಯಕ್ತವಾಗತೊಡಗಿದ್ದು. ಇನ್ನೂ ಸ್ಪಷ್ಟವಾಗಿ ಹೇಳಬೇಕೆಂದರೆ, ಭಾರತದ ಭಾಷಾ ರಾಷ್ಟ್ರೀಯತೆಗಳೇ ಭಾರತದ ರಾಷ್ಟ್ರೀಯ ಆಂದೋಲನವನ್ನು ರೂಪಿಸಿದ್ದು ಎಂದರೆ ತಪ್ಪಾಗಲಾರದು. ೧೯ನೇ ಶತಮಾನದ ಕೊನೆಯ ದಶಕಗಳಲ್ಲಿ ಬರೀ ಚರ್ಚೆ, ಮನವಿ, ಬೇಡಿಕೆ ಮಂಡನೆ ಇತ್ಯಾದಿ ರೂಪಗಳಲ್ಲಿ ಮಾತ್ರ ವ್ಯಕ್ತವಾಗುತ್ತಿದ್ದ ಸ್ವಾತಂತ್ರ್ಯದ ಅಭೀಪ್ಸೆ, ನಿಜವಾಗಿ ಹೋರಾಟದ ಆವೇಗ ಪಡೆದುಕೊಂಡದ್ದು ೧೯೦೫ರ ಬಂಗ್ಲಾ ವಿಭಜನೆಯ ಪ್ರಸ್ತಾಪದ ಸಂದರ್ಭದಲ್ಲೇ ಎಂಬುದನ್ನು ನಾವು ಗಮನಿಸಬೇಕು. ಬಂಗಾಳಿ ರಾಷ್ಟ್ರೀಯತೆಗೆ ಒದಗಿದ ಈ ಬಿಕ್ಕಟ್ಟು ಬೇರೆ ಬೇರೆ ಪ್ರಾಂತ್ಯಗಳಲ್ಲಿ(ಅಂದರೆ ಭಾಷಾ ರಾಷ್ಟ್ರೀಯತೆಗಳಲ್ಲಿ) ವಿವಿಧ ಮನೋಭೂಮಿಕೆಗಳ ಸ್ವಾತಂತ್ರ್ಯ ಹೋರಾಟಗಾರರನ್ನು ರೂಪಿಸಿ, ದೇಶದಾದ್ಯಂತ ಒಂದು ರಾಜಕೀಯ ಸಂಚಲನವನ್ನು ಉಂಟುಮಾಡಿತು. ಅಲ್ಲಿಂದಲೇ ನಿಜವಾದ ರಾಷ್ಟ್ರೀಯ ಹೋರಾಟದ ಆರಂಭವೆಂಬುದನ್ನೂ ನಾವು ಗಮನಿಸಬೇಕು.

ಹಾಗೆ ನೋಡಿದರೆ, ಭಾರತದ ಪ್ರಥಮ ಸ್ವಾತಂತ್ರ್ಯ ಸಂಗ್ರಾಮ ಎಂದು ವರ್ಣಿಸಲಾಗುವ ೧೮೫೭ರ ಸಿಪಾಯಿ ದಂಗೆಯ ಪರಿಣಾಮವಾಗಿ ಬ್ರಿಟನ್ ಭಾರತಕ್ಕೆ ಒಂದು ಮಟ್ಟದ ಸ್ವಾಯತ್ತತೆ ನೀಡುವ ಒತ್ತಡಕ್ಕೆ ಒಳಗಾದ ಹೊತ್ತಿಗೇ, ಭಾರತದ ಭಾಷಾ ರಾಷ್ಟ್ರೀಯತೆಗಳೇ ಅದರ ಮುಖ್ಯ ಆಡಳಿತ ಘಟಕಗಳೆಂದು ಮಾನ್ಯ ಮಾಡಲ್ಪಟ್ಟಿದ್ದವು. ಆ ಸ್ವಾಯತ್ತತೆಯ ಸ್ವರೂಪದ ಬಗ್ಗೆ ಬ್ರಿಟಿಷ್ ಪಾರ್ಲಿಮೆಂಟ್‌ನಲ್ಲಿ ಚರ್ಚೆ ನಡೆದ ಸಂದರ್ಭದಲ್ಲಿ, ಭಾರತದ ರಾಜಕೀಯ ಕುರಿತಂತೆ ಪರಿಣತಿ ಹೊಂದಿದ್ದ ಪಾರ್ಲಿಮೆಂಟ್ ಸದಸ್ಯ ಜಾನ್ ಬ್ರೈಟ್ ಬ್ರಿಟಿಷ್-ಭಾರತವನ್ನು ಭಾಷೆಗಳ ಆಧಾರದ ಮೇಲೆ ಐದು ಪ್ರಮುಖ ಪ್ರಾಂತ್ಯಗಳನ್ನಾಗಿ ವಿಂಗಡಿಸಿ ಅಧಿಕಾರವನ್ನು ಹಂಚಬಹುದೆಂದು ಸಲಹೆ ನೀಡಿದ್ದರು. ಅಂದರೆ, ವಸಾಹತುದಾರರೇ ಅರಿತುಕೊಂಡಂತೆ, ಭಾರತ ಒಂದು ಆಧುನಿಕ ರಾಷ್ಟ್ರವಾಗಲು ಸಿದ್ಧಗೊಳ್ಳುತ್ತಿದ್ದುದು, ತನ್ನ ಭಾಷಾ ರಾಷ್ಟ್ರೀಯತೆಗಳ ಆಧಾರದ ಮೇಲೆ!

ಏಕೆಂದರೆ, ಭಾರತದ ರಾಷ್ಟ್ರೀಯತೆ ಎಂಬ ಕಲ್ಪನೆಯೇ ಆಗಿನ್ನೂ ಮೂಡಿರಲಿಲ್ಲ. ಅದೇನಿದ್ದರೂ ಬ್ರಿಟಿಷ್ ಭಾರತದಲ್ಲಿ ಲೀನಗೊಂಡಿದ್ದ ಭಾಷಾ ರಾಷ್ಟ್ರೀಯತೆಗಳನ್ನು ಅಥವಾ ಅವುಗಳ ಆಧಾರದ ಪ್ರಾದೇಶಿಕ ಸಂಸ್ಕೃತಿಗಳನ್ನು ಪ್ರತಿನಿಧಿಸುತ್ತಿದ್ದ ಪ್ರಾಂತ್ಯಗಳ ಜನ, ಒಂದಲ್ಲ ಒಂದು ಕಾರಣದ ಮೇಲೆ ವ್ಯಕ್ತಗೊಳಿಸುತ್ತಿದ್ದ ಬ್ರಿಟಿಷ್ ಅಧಿಪತ್ಯ ವಿರೋಧಿ ಭಾವನೆಗಳ ರೂಪದಲ್ಲಿರುತ್ತಿತ್ತು. ಇದರ ಪರಿಣಾಮವಾಗಿಯೇ ಮುಂದೆ ಸಿಂಧ್, ಬಿಹಾರ ಹಾಗೂ ಒರಿಸ್ಸಾ ಪ್ರಾಂತ್ಯಗಳು ಭಾಷಾ ರಾಷ್ಟ್ರೀಯತೆಗಳ ಆಧಾರದ ಮೇಲೆ ರೂಪುಗೊಂಡವು. ಆದರೆ ಆ

ಹೊತ್ತಿಗೆ ಇಪ್ಪತ್ತಕ್ಕೂ ಹೆಚ್ಚು ಆಡಳಿತ ಘಟಕಗಳಾಗಿ ಹಂಚಿ ಹೋಗಿ, ಛಿದ್ರ ವಿಚ್ಛಿದ್ರವಾಗಿದ್ದ ಕನ್ನಡ ರಾಷ್ಟ್ರೀಯತೆ ಮತ್ತೆ ತನ್ನ ಏಕತೆಯನ್ನು, ಭಾರತದ ರಾಷ್ಟ್ರೀಯ ಆಂದೋಲನದ ಭಾಗವಾಗಿಯೇ ಕಂಡುಕೊಳ್ಳುವ ಚಾರಿತ್ರಿಕ ಅನಿವಾರ್ಯತೆಗೆ ಈಡಾಯಿತು. ಆವರೆಗಿನ ಭಾರತದ ಇನ್ನಾವ ಭಾಷಾ ರಾಷ್ಟ್ರೀಯತೆಯೂ ಈ ಪ್ರಮಾಣದ ರಾಜಕೀಯ ವಿಚ್ಛಿದ್ರತೆಗೆ ಒಳಗಾಗಿರಲಿಲ್ಲ ಎಂಬುದೂ ಗಮನಾರ್ಹ.

–೪–

ಕನ್ನಡ ರಾಷ್ಟ್ರೀಯತೆ ಎಂಬುದು ಸಾವಿರ ವರ್ಷಗಳಿಗೂ ಮೇಲ್ಪಟ್ಟ ಇತಿಹಾಸವುಳ್ಳ ಒಂದು ಕಲ್ಪಿತ ರಾಜಕೀಯ ಸಮುದಾಯವಾಗಿ, ತನ್ನದೇ ವಿಶಿಷ್ಟ ಸಂಸ್ಕೃತಿಯ–ಅಂದರೆ ಸ್ಥೂಲವಾಗಿ ಒಂದು ಸಾಮಾನ್ಯ ಬದುಕಿನ ರೀತಿನೀತಿಗಳನ್ನು ರೂಢಿಸಿಕೊಂಡು, ನೆರೆಹೊರೆಯ ಇತರ ಜನಸಮುದಾಯಗಳಿಂದ ಭಿನ್ನವಾಗಿ ಕಾಣುವಂತಹುದು– ಮೂಲಕ ತನ್ನ ಅಸ್ಮಿತೆಯನ್ನು ಕಾಪಾಡಿಕೊಂಡು ಬಂದಿದೆ. ಈ ಪ್ರಯತ್ನದಲ್ಲಿ ಅದು ಅನೇಕ ರಾಜಕೀಯ ಸ್ಥಿತ್ಯಂತರಗಳಿಗೂ, ಭೌಗೋಳಿಕ ಮಾರ್ಪಾಡುಗಳಿಗೂ, ಸಾಂಸ್ಕೃತಿಕ ಸಮೀಪೀಕರಣಗಳಿಗೂ ಒಡ್ಡಿಕೊಂಡು, ಕಾಲದ ಪರೀಕ್ಷೆಯಲ್ಲಿ ಗೆದ್ದು ಬಂದಿದೆ. ಆದುದರಿಂದಲೇ ಅದು, ಸ್ವಾತಂತ್ರ್ಯ ಆಂದೋಲನ ಸೃಷ್ಟಿಸಿದ ಅವಕಾಶದಲ್ಲಿ ಮತ್ತೆ ಪ್ರಕಟಗೊಂಡು, ಭಾರತದ ಒಕ್ಕೂಟದಲ್ಲಿ ತನ್ನದೇ ವಿಶಿಷ್ಟತೆಯನ್ನು ಕಾಪಾಡಿಕೊಳ್ಳುವ ರಾಜಕೀಯ ಇಚ್ಚಾಶಕ್ತಿಯನ್ನು ಕರ್ನಾಟಕ ಏಕೀಕರಣ ಚಳುವಳಿಯ ರೂಪದಲ್ಲಿ ಸಂಘಟಿಸಿಕೊಳ್ಳಲು ಸಾಧ್ಯವಾದದ್ದು.

ಕರ್ನಾಟಕವೆಂಬುದಕ್ಕೆ ಭೌಗೋಳಿಕವಾಗಿ ಮಹಾಭಾರತದಷ್ಟು ಪುರಾತನ ಇತಿಹಾಸ ವಿದ್ದರೂ, ಅದು ಕನ್ನಡದ ಅಸ್ತಿತ್ವವೆಂಬಂತೆ ಇತಿಹಾಸದಲ್ಲಿ ನಮ್ಮ ಗಮನಕ್ಕೆ ಬರುವುದು ಬಾದಾಮಿ ಚಾಲುಕ್ಯರ ಕಾಲದಲ್ಲಿ. ಅಂದರೆ ಕ್ರಿ.ಶ. ೬ನೇ ಶತಮಾನದ ಕೊನೆಯ ಹೊತ್ತಿಗೆ. ಈ ಹಿಂದಿನ ಶಾತವಾಹನರೂ, ಪೂರ್ವ ಗಂಗರೂ, ಕದಂಬರೂ ಈ ಭೂಭಾಗದಲ್ಲಿ ಆಳ್ವಿಕೆ ನಡೆಸಲಾರಂಭಿಸಿದ್ದರಾದರೂ, ಆ ಆಳ್ವಿಕೆಗಳು ಕನ್ನಡ ಭಾಷಾ ಸಂಸ್ಕೃತಿಯೊಂದನ್ನು ರೂಪಿಸಿಕೊಂಡು ಕನ್ನಡದ್ದೆಂದು ಹೇಳಬಹುದಾದ ಅಸ್ಮಿತೆಯೊಂದನ್ನು ಸಾಧಿಸಿಕೊಂಡಿದ್ದ ಯಾವ ಐತಿಹಾಸಿಕ ಸೂಚನೆಗಳು ನಮಗೆ ಸಿಗುವುದಿಲ್ಲ. ಆ ಆಳ್ವಿಕೆಗಳ ಐತಿಹಾಸಿಕ ಅವಶೇಷಗಳು ನಮಗೆ ಬಹುಪಾಲು ಸಿಗುವುದು ಪ್ರಾಕೃತ ಮತ್ತು ಸಂಸ್ಕೃತ ಭಾಷೆಗಳಲ್ಲೇ. ಅಲ್ಲೊಂದು ಇಲ್ಲೊಂದು ಮಾತ್ರ ಕನ್ನಡದಲ್ಲಿ. ಉದಾ: ಕನ್ನಡದ ಮೊದಲ ಲಭ್ಯ ಶಾಸನವೆಂದು ಹೇಳಲಾಗುವ ಹಲ್ಮಿಡಿ ಶಾಸನ. ಇಲ್ಲಿ ಅಸ್ಮಿತೆ ಎಂದರೇನು ಎಂದು ಹೇಳುವುದು ಒಳಿತೇನೋ. ಅಸ್ಮಿತೆ ಎಂದರೆ, ಜನಸಮುದಾಯವೊಂದು ತನ್ನ ಚರಿತ್ರೆಯ ಮೂಲಕ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಹಾಗೂ ರಾಜಕೀಯ ನೆಲೆಗಳಲ್ಲಿ ಸಂಘಟಿಸಿಕೊಂಡ ಹಾಗೂ ತನ್ನ ಮುನ್ನಡೆಗಾಗಿ ಕಾಪಿಟ್ಟುಕೊಂಡ ಶಕ್ತಿ ಸಂಚಯದ ಸ್ವರೂಪ. ಅಂದರೆ ಸ್ಥೂಲವಾಗಿ ಆ ಜನಸಮುದಾಯದ ಒಟ್ಟಾರೆ ವ್ಯಕ್ತಿತ್ವ ಅಥವಾ ಶೀಲ ಎನ್ನಬಹುದು.

ಮೂಲತಃ ಕೃಷಿಕುಲಕ್ಕೆ ಸೇರಿದವರೆಂದು ಹೇಳಲಾದ (ಸಲಿಕೆ–>ಚಲುಕೆ–>ಚಾಲುಕ್ಯ) ಬಾದಾಮಿ ಚಾಲುಕ್ಯರು (ಅಥವಾ ಚಲುಕ್ಯರು), ಆ ಹೊತ್ತಿಗೆ ಎಲ್ಲ ಭಾಷಾ ಲಕ್ಷಣಗಳನ್ನು

ಮೈಗೂಡಿಸಿಕೊಂಡಿದ್ದಿರಬಹುದಾದ ಕನ್ನಡ ನುಡಿಯನ್ನು ಆಡಳಿತ ಭಾಷೆಯಾಗಿ ಅಳವಡಿಸಿಕೊಂಡು ಅದನ್ನು ಪೋಷಿಸುವುದನ್ನು ತಮ್ಮ ರಾಜಧರ್ಮವನ್ನಾಗಿ ಮಾಡಿಕೊಂಡಿದ್ದ ಎಲ್ಲ ಸೂಚನೆಗಳು ಇವರ ಆಳ್ವಿಕೆಯ ಕಾಲದ ಶಾಸನಗಳಲ್ಲಿ ಸಿಗುತ್ತವೆ. ೭ನೇ ಶತಮಾನದ ಬಾದಾಮಿ ಶಾಸನವಂತೂ – 'ಸಾಧುಂಗೆ ಸಾಧು। ಮಾಧುರ್ಯಂಗೆ ಮಾಧುರ್ಯಂ। ಬಾದಿಪ್ಪ ಕಲಿಗೆ ಕಲಿಯುಗ ವಿಪರೀತನ್'– ಕನ್ನಡಿಗ ಮತ್ತು ಕನ್ನಡ ಭಾಷೆಯ ಅಸ್ಮಿತೆಯ ಅಸ್ತಿತ್ವವನ್ನು, ತನ್ನ ಭಾವ–ಭಾಷೆಗಳ ವಿದ್ಯುದಾಲಿಂಗನದ ಮೂಲಕ ನಿರ್ವಿವಾದಾತ್ಮಕವಾಗಿ ಮಂಡಿಸುತ್ತದೆ. ಆದರೆ ಈ ಕಾಲಘಟ್ಟದಲ್ಲಿ ಕನ್ನಡ ಸಂಸ್ಕೃತಿ ಅಭಿವ್ಯಕ್ತಿಯನ್ನು ಕಂಡುಕೊಂಡಿದ್ದು ಹೆಚ್ಚಾಗಿ ಶಿಲಾ ಶಿಲ್ಪದ ಮೂಲಕ. ಶಬ್ದಶಿಲ್ಪ ಎದ್ದು ಕಾಣುವಂತಾದ್ದು ಏನಿದ್ದರೂ, ೮ನೇ ಶತಮಾನದಿಂದೀಚೆಗೆ ಪ್ರವರ್ಧಮಾನಕ್ಕೆ ಬಂದ ರಾಷ್ಟ್ರಕೂಟರ ಕಾಲದಲ್ಲಿ. ೯ನೇ ಶತಮಾನದ ನೃಪತುಂಗನ ಕಾಲದ ಕವಿರಾಜಮಾರ್ಗ ಕನ್ನಡದ ಲಭ್ಯ ಮೊದಲ ಗ್ರಂಥವೆಂದು ಪ್ರಸಿದ್ಧವಾಗಿದ್ದು, ಅದು ಕನ್ನಡವು ರಾಷ್ಟ್ರೀಯತೆಯ ಎಲ್ಲ ಲಕ್ಷಣಗಳನ್ನು ತನ್ನಲ್ಲಿ ಸುಸ್ಥಿರಗೊಳಿಸಿಕೊಂಡಿತೆಂಬುದನ್ನು ಸಾಬೀತುಪಡಿಸುತ್ತದೆ. ಅಲ್ಲಿನ 'ಆ ಕನ್ನಡದೊಳ್ ಭಾವಿಸಿದ ಜನಪದಂ ವಸುಧಾವಲಯ ವಿಲೀನ ವಿಶದ ವಿಷಯ ವಿಶೇಷಂ' ಎಂಬ ಪದ್ಯಭಾಗವು ಸಂಕ್ಷಿಪ್ತ ರೂಪದಲ್ಲಿ, ಆ ಹೊತ್ತಿಗೆ ಕನ್ನಡವು ಭಾಷಾ, ರಾಜ ಮತ್ತು ಜನಶಕ್ತಿಯ ರೂಪಗಳಲ್ಲಿ ಪರಸ್ಪರ ಹಾಸುಹೊಕ್ಕಾಗಿ ಹೇಗೆ ಒಂದು ರಾಷ್ಟ್ರೀಯತೆಯಾಗಿ ಒಡಮೂಡಿತ್ತು ಎಂಬುದನ್ನು ನಿರೂಪಿಸುತ್ತದೆ. ನಂತರದ ಒಂದೆರಡು ಶತಮಾನಗಳಲ್ಲಿ ಪಂಪ, ಪೊನ್ನ ರನ್ನರು ವಿವಿಧ ರಾಜಾಶ್ರಯಗಳಲ್ಲಿ, ಅದಕ್ಕೊಂದು ಸಾಹಿತ್ಯಿಕ ಚೌಕಟ್ಟನ್ನು ಒದಗಿಸಿಕೊಟ್ಟರು.

ಕನ್ನಡ ರಾಷ್ಟ್ರೀಯತೆ ಒಂದು ಹೊಸ ಮಜಲು ತಲುಪುವುದು ಕಲ್ಯಾಣದ ಚಾಲುಕ್ಯರ ಕಾಲದಲ್ಲಿ. ೧೨ನೇ ಶತಮಾನದಲ್ಲಿ. ಬಸವಣ್ಣನ ಶರಣ ಚಳುವಳಿಯ ಮೂಲಕ ಒಂದು ಕ್ರಾಂತಿಕಾರಕ ಪ್ರಯೋಗಕ್ಕೆ ಒಳಗಾದ ಈ ರಾಷ್ಟ್ರೀಯತೆ, ತನ್ನೊಳಗಿನ ಸಾಮಾಜಿಕ–ಆರ್ಥಿಕ ನೆಲೆಗಳ ವಿರೋಧಾಭಾಸಗಳನ್ನು ಮುಖಾಮುಖಿಯಾಗಿಸಿಕೊಳ್ಳುವ ಧೈರ್ಯ ತೋರಿ, ಸಾಂಸ್ಕೃತಿಕವಾಗಿ ತನ್ನನ್ನು ಗಟ್ಟಿಗೊಳಿಸಿಕೊಂಡಿತು. ದುಡಿಯುವ ವರ್ಗವೇ ವ್ಯಾಪಾರೀ ವರ್ಗವಾಗಿಯೂ ಸಮಾಜದ ಮಧ್ಯರಂಗಕ್ಕೆ ಬಂದು, ಸಮಾಜದ ಪಟ್ಟಭದ್ರರಾಗಿದ್ದ ಮಧ್ಯವರ್ತಿ ವರ್ಗಗಳನ್ನು ನಿವಾರಿಸಿಕೊಳ್ಳುವ ಮೂಲಕ ಸಾಮಾಜಿಕ ಪುನಾರಚನೆಗೆ ಪ್ರಯತ್ನಿಸಿದ ಈ ಐತಿಹಾಸಿಕ ಸಾಹಸ, ಜಾತಿ ಶ್ರೇಣೀಕರಣವನ್ನು ಪ್ರಶ್ನಿಸುವುದರಲ್ಲಿ ಕೊನೆಗೊಂಡದ್ದು ಕನ್ನಡ ಅಸ್ಮಿತೆಗೆ ವಿಶಿಷ್ಟ ಆಯಾಮವನ್ನು ನೀಡಿತು. ಇಲ್ಲಿಂದಾಚೆಗೆ ಕನ್ನಡ ರಾಷ್ಟ್ರೀಯತೆ ಎಂದರೆ ಕೇವಲ ಒಂದು ಸಾಂಸ್ಕೃತಿಕ ಪರಿಕಲ್ಪನೆ ಮಾತ್ರವಾಗುಳಿಯದೆ, ಜನಾಂದೋಲನ ಶಕ್ತಿಯನ್ನೂ ತನ್ನೊಳಗೆ ಅಂತರ್ಗತಗೊಳಿಸಿಕೊಂಡಿತು. ನಂತರ ಹೊಯ್ಸಳರ ಕಾಲದ ಬಹುಧರ್ಮೀಯತೆ ರೂಢಿಸಿದ ಬಹುತ್ವದ ಜನ ಸಂಸ್ಕೃತಿ, ವಿಜಯನಗರ ಕಾಲದ ಲೌಕಿಕ ವೈಭವ ಹಾಗೂ ಉದಾರ ಜೀವನದೃಷ್ಟಿ ಮತ್ತು ಅದರ ಅಧಃಪತನ ಸೃಷ್ಟಿಸಿದ ರಾಜಕೀಯ ಕಂಪನಗಳ ಮಧ್ಯೆ ಬಿಜಾಪುರ ಆದಿಲ್‌ಷಾಹೀ ಕಾಲದಲ್ಲಿ ಕಂಡುಬಂದ ಹಿಂದೂ–ಮುಸ್ಲಿಂ ಧರ್ಮಗಳ ಅನುಸಂಧಾನ; ಮತ್ತು ಅದರ ಪ್ರಭಾವದಿಂದಾಗಿ–ವಿಶೇಷವಾಗಿ ಕೆಳವರ್ಗಗಳಲ್ಲಿ–ಮೂಡಿನಿಂತ ಜಾತ್ಯತೀತ ಅನುಭಾವಿ ತತ್ವಪರಂಪರೆ ಹಾಗೂ ಶ್ರೀರಂಗಪಟ್ಟಣದ ಚಿಕ್ಕದೇವರಾಜನ ಕಾಲದಲ್ಲಿ ಕಂಡುಕೊಂಡ ಪುನರುತ್ಥಾನ–ಹೀಗೆ ಐದು ಶತಮಾನಗಳ ಅಂತರದಲ್ಲಿ ಕನ್ನಡ ರಾಷ್ಟ್ರೀಯತೆ ಅನೇಕ ಏಳು ಬೀಳುಗಳನ್ನು ಕಂಡಿತು. ಇವುಗಳಿಂದಾಗಿಯೇ ಒಂದು ವಿಶಿಷ್ಟ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ

ಚಹರೆಗಳನ್ನು ರೂಢಿಸಿಕೊಂಡಿದ್ದ ಅದು, ೧೮ನೇ ಶತಮಾನದ ಟಿಪ್ಪುವಿನ ಕಾಲಕ್ಕೆ ಒಂದು ಪ್ರಬಲ ರಾಜಕೀಯ ಶಕ್ತಿಯಾಗಿ ಬೆಳೆದು, ದೇಶಿ ಮತ್ತು ವಿದೇಶಿ – ಈ ಎರಡೂ ಶಕ್ತಿಗಳೊಂದಿಗೆ ಹೋರಾಡುತ್ತ, ಕಾಲಕ್ಕೆ ತಕ್ಕ ಒಂದು ಆಧುನಿಕ ರಾಷ್ಟ್ರವಾಗಿ ಹೊರಹೊಮ್ಮಿತು. ಆದರೆ, ದುರದೃಷ್ಟವಶಾತ್ ಇದೇ ಅದಕ್ಕೆ ಮುಳುವಾಯಿತು.

ಟಿಪ್ಪುವಿನ ಮೈಸೂರು ಸಂಸ್ಥಾನ ಬ್ರಿಟಿಷ್ ಭಾರತದ ಉತ್ಪನ್ನಗಳಿಗೆ ತನ್ನ ಸಂಸ್ಥಾನದ ಮಾರುಕಟ್ಟೆಗೆ ಪ್ರವೇಶ ನಿರಾಕರಿಸುವ ಮೂಲಕ ಬ್ರಿಟಿಷ್ ಬಂಡವಾಳಶಾಹಿ ವಿಸ್ತರಣೆಗೆ ಅವಕಾಶ ಕೊಡದೆ ಬಹುಕಾಲ ಸೆಡ್ಡು ಹೊಡೆದು ನಿಂತಿತ್ತು. ಅದನ್ನು ಬ್ರಿಟಿಷರು, ದೇಶೀಯರ ಸಹಯೋಗದೊಂದಿಗೇ ಮತ್ತು ಟಿಪ್ಪುವಿನ ಸಹಧರ್ಮೀಯರ ಬೆಂಬಲದೊಂದಿಗೇ ದೀರ್ಘ ಹೋರಾಟದ ಮೂಲಕ ಮಣಿಸಿದರು. ನಂತರವೂ ಕಿತ್ತೂರು ಚೆನ್ನಮ್ಮ ಹಾಗೂ ಸಂಗೊಳ್ಳಿ ರಾಯಣ್ಣನ ರೂಪದಲ್ಲಿ ಕನ್ನಡ ರಾಷ್ಟ್ರೀಯತೆ, ವಸಾಹತುಶಾಹಿಗೆ ತನ್ನ ಸಣ್ಣ ಪುಟ್ಟ ಪ್ರತಿರೋಧಗಳನ್ನು ತೋರಿತಾದರೂ; ಟಿಪ್ಪು ರೂಪದಲ್ಲಿ ವ್ಯಕ್ತವಾದ ಪ್ರತಿರೋಧ ಬ್ರಿಟಿಷರನ್ನು ಎಷ್ಟು ರೊಚ್ಚಿಗೆಬ್ಬಿಸಿತ್ತೆಂದರೆ, ಭೌಗೋಳಿಕವಾಗಿ ಈಗಿನ ಕರ್ನಾಟಕವನ್ನೂ ಮೀರಿ ಹರಡಿದ್ದ ಕನ್ನಡದ ಆ ವಿಶಾಲ ಸಂಸ್ಥಾನವನ್ನು ಹರಿದು ಚೂರು ಮಾಡಿ, ಅದರ ಅಸ್ಮಿತೆಯನ್ನೇ ಛಿದ್ರಗೊಳಿಸಿದರು. ಯಾರ ಸೋಲಿನವರೆಗೆ ಭಾರತ ಪೂರ್ಣವಾಗಿ ತನ್ನ ಕೈವಶವಾಗಿರಲಿಲ್ಲವೋ, ಅಂತಹ ಟಿಪ್ಪುವಿನ ಸಾಮ್ರಾಜ್ಯ ವಿಸ್ತರಣೆಗೆ ಸಮುದ್ರ ವ್ಯಾಪಾರ–ವ್ಯವಹಾರಗಳ ಮೂಲಕ ಅನುಕೂಲ ಒದಗಿಸಿದ್ದ ಕರಾವಳಿ ಪ್ರದೇಶವನ್ನು, ಬ್ರಿಟಿಷ್ ಸರ್ಕಾರ ತನ್ನ ಅಧೀನದಲ್ಲಿದ್ದ ಮದ್ರಾಸ್ ಪ್ರಾಂತ್ಯಕ್ಕೆ ಸೇರಿಸಿಕೊಳ್ಳುವ ಜಾಣತನ ತೋರಿತು. ಮಿಕ್ಕದ್ದರಲ್ಲಿ ಸ್ವಲ್ಪ ಭಾಗಗಳನ್ನು ಮರಾಠರ ಹಾಗೂ ತೆಲುಗು–ತಮಿಳರ ಭಾಷಾ ಆಧಿಪತ್ಯಗಳಿಗೆ ಹಂಚಿ; ತನ್ನ ರಾಜಕೀಯ ನೈತಿಕತೆಯ ಪ್ರದರ್ಶನಕ್ಕೆಂಬಂತೆ, ಉಳಿದಿದ್ದನ್ನು ಮೈಸೂರು ಒಡೆಯರಿಗೆ ಅಧೀನ ಅಧಿಕಾರ ರೂಪದಲ್ಲಿ ಒಪ್ಪಿಸಿತು. ಅಷ್ಟೇ ಅಲ್ಲ, ಈ ರಾಷ್ಟ್ರೀಯತೆ ಮತ್ತೆ ತಲೆ ಎತ್ತದಂತೆ ಮಾಡಲು, ಅನ್ಯಭಾಷಾ ರಾಷ್ಟ್ರೀಯತೆಗಳಿಂದ–ವಿಶೇಷವಾಗಿ ತೆಲುಗು ಮತ್ತು ತಮಿಳು–ಆಡಳಿತ ಹಾಗೂ ಕಾರ್ಮಿಕ ವರ್ಗವನ್ನು ತಂದು ಇಲ್ಲಿ ನೆಲೆಗೊಳಿಸಿತು. ಪಶ್ಚಿಮ ಕರಾವಳಿಯಲ್ಲಿ ಬ್ರಿಟಿಷ್ ಬಂಡವಾಳಶಾಹಿ ಯೊಂದಿಗೆ ಶಾಮೀಲಾಗಿ ಅಖಿಲ ಭಾರತ ವ್ಯಾಪಾರಿ ಸಮುದಾಯವಾಗಿ ತನ್ನ ಹಿತಾಸಕ್ತಿಯನ್ನು ಬೆಳಸಿಕೊಂಡಿದ್ದ ವಣಿಜ ವರ್ಗವನ್ನು ಇಲ್ಲಿ ತನ್ನ ದಲ್ಲಾಳಿ ವರ್ಗವಾಗಿ ನೆಲೆಗೊಳಿಸಿತು. ಹೀಗೆ ಭೌಗೋಳಿಕವಾಗಲ್ಲದೆ, ಆರ್ಥಿಕ, ಸಾಮಾಜಿಕ, ಸಾಂಸ್ಕೃತಿಕ ಹಾಗೂ ರಾಜಕೀಯ–ಈ ಎಲ್ಲ ನೆಲೆಗಳಲ್ಲೂ ಛಿದ್ರ ವಿಚ್ಛಿದ್ರವಾದ ಕನ್ನಡ ರಾಷ್ಟ್ರೀಯತೆ, ಕರ್ನಾಟಕ ಏಕೀಕರಣವಾದ ಈ ೫೦ ವರ್ಷಗಳ ನಂತರವೂ ತನ್ನ ಪ್ರಜ್ಞೆಯನ್ನು ಪೂರ್ಣವಾಗಿ ಪಡೆದುಕೊಂಡಿಲ್ಲವೆಂದರೆ, ಈ ಕಾಲಾಂತರದಲ್ಲಿ ಅದು ಅನುಭವಿಸಿದ ಆಘಾತಗಳು ಎಂತಹದಿರಬಹುದೆಂಬುದನ್ನು ಊಹಿಸಬಹುದಾಗಿದೆ.

–೫–

ಭಾರತದ ರಾಷ್ಟ್ರೀಯ ಆಂದೋಲನದ ಜೊತೆಯಲ್ಲೇ ಮೂಡಿ ನಿಂತ ಕರ್ನಾಟಕ ಏಕೀಕರಣ ಚಳವಳಿಯ ಮೂಲಕ ಕನ್ನಡ ರಾಷ್ಟ್ರೀಯತೆ ಮತ್ತೆ ಒಂದು ಹೊಸ ಭೌತಿಕ

ರೂಪವನ್ನೇನ್ನೋ ಕಂಡುಕೊಂಡಂತಾಗಿದೆ. ಆದರೆ, ಅದಕ್ಕೊಂದು ಕನ್ನಡದ ಆತ್ಮ ಇನ್ನೂ ಮೂಡಿದಂತಿಲ್ಲ. ಇದಕ್ಕೆ ಟಿಪ್ಪು-ಬ್ರಿಟಿಷರ ಮುಖಾಮುಖಿಯಿಂದಾಗಿ ಕನ್ನಡ ರಾಷ್ಟ್ರೀಯತೆ ಹಲವಾರು ವರ್ಷಗಳ ಕಾಲ ಮುಕ್ಕಾಗಿದ್ದುದು ಎಷ್ಟು ಕಾರಣವೋ; ಅಷ್ಟೇ ಕಾರಣವಾದದ್ದು, ಕರ್ನಾಟಕ ಏಕೀಕರಣ ಚಳವಳಿಯು ಭಾರತದ ರಾಷ್ಟ್ರೀಯ ಆಂದೋಲನದ ಭಾವನಾತ್ಮಕ ಒತ್ತಡಗಳಿಗೆ ಸಿಕ್ಕಿ, ತನ್ನ ಆಶೋತ್ತರಗಳ ವಿಷಯದಲ್ಲಿ ಒಂದು ಸ್ಪಷ್ಟ ಹಾಗೂ ದೃಢವಾದ ತಾತ್ವಿಕತೆಯನ್ನು ಸಂಘಟಿಸಿಕೊಳ್ಳದೇ ಹೋದದ್ದು. ಇದು ಭಾಷಾ ಆಧಾರದ ಮೇಲೆ ರಚಿತವಾದ ಎಲ್ಲ ರಾಜ್ಯಗಳ ಪೂರ್ವ ರಾಷ್ಟ್ರೀಯತೆಗಳ ಬಗೆಗೂ ಹೇಳಬಹುದಾದರೂ, ಇವುಗಳಿಗೆ ಹೋಲಿಸಿದಂತೆ ಕನ್ನಡದ ಅಸ್ಮಿತೆಯು ಛಿದ್ರ ವಿಚ್ಛಿದ್ರವಾಗಿ ಹೋಗಿದ್ದ ಹಿನ್ನೆಲೆಯಲ್ಲಿ, ಕರ್ನಾಟಕ ಏಕೀಕರಣ ಚಳುವಳಿ ವಿಶೇಷ ಜಾಗ್ರತೆ ವಹಿಸಬೇಕಾಗಿತ್ತು ಎನ್ನಿಸದಿರದು. ತಾನು ಪೂರ್ಣ ಪ್ರಮಾಣದಲ್ಲಿ ಬೆಳೆಯಲು ಮೂಲ ಸ್ಫೂರ್ತಿಯಾಗಿದ್ದವರೆಗೆ ಭಾಷಾ ರಾಷ್ಟ್ರೀಯತೆಗಳನ್ನು ಮಾನ್ಯ ಮಾಡುತ್ತ ಬಂದ ಭಾರತದ ರಾಷ್ಟ್ರೀಯ ಆಂದೋಲನ, ತನ್ನ ಗುರಿ ಸಮೀಪಿಸುತ್ತಿದ್ದಂತೆ-ಬ್ರಿಟಿಷರು ಅಧಿಕಾರ ಹಸ್ತಾಂತರ ಮಾಡಲು ಸಿದ್ಧರಾಗುತ್ತಿದ್ದಂತೆ-ಅವನ್ನು ಸಂಕುಚಿತ ಆಂದೋಲನಗಳೆಂದು ತಿರಸ್ಕರಿಸತೊಡಗಿದಾಗ, ಮುಂದಿನ ಭಾರತ ಎಂತಹದ್ದಿರಬಹುದೆಂಬುದರ ಸೂಚನೆ ದೊರಕತೊಡಗಿತು.

ಭಾರತದ ರಾಷ್ಟ್ರೀಯ ಆಂದೋಲನಕ್ಕೆ ಒಂದು ತಾತ್ವಿಕತೆ ಒದಗಿಸಿ ಮುನ್ನಡೆಸಿದ ಗಾಂಧೀಜಿ ನೇತೃತ್ವವು, ಭಾರತದ ವಿಭಜನೆಯ ಪ್ರಸ್ತಾಪದಿಂದಾಗಿ ಈ ಆಂದೋಲನ ಎದುರಿಸಿದ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ರಾಜಕೀಯೇತರ ನೆಲೆಗಳಿಗೆ ಸರಿಯುವಂತಾದಾಗ, ಬಹುಭಾಷಾ ರಾಷ್ಟ್ರೀಯತೆಗಳು ಹತ್ತಿಕ್ಕಲ್ಪಟ್ಟವು. ಅಲ್ಲದೆ, ಆ ಹೊತ್ತಿಗಾಗಲೇ ಬ್ರಿಟಿಷ್ ಬಂಡವಾಳಶಾಹಿಯೊಂದಿಗೆ ಶಾಮೀಲಾಗಿ ಪ್ರವರ್ಧಮಾನಕ್ಕೆ ಬಂದಿದ್ದ ಒಂದು ಅಖಿಲ ಭಾರತ ವ್ಯಾಪಾರಿ ವರ್ಗ, ರಾಷ್ಟ್ರೀಯ ಆಂದೋಲನದ ಮೇಲೆ ಪ್ರಭಾವ ಬೀರುವಷ್ಟು ಪ್ರಬಲಗೊಂಡಿತ್ತು. ಅದು, ಬಹುಭಾಷಾ ರಾಷ್ಟ್ರೀಯತೆಗಳನ್ನಾಧರಿಸಿದ ಆಡಳಿತ ವಿಕೇಂದ್ರೀಕರಣ ನೀತಿಯು ನವಭಾರತ ನಿರ್ಮಾಣಕ್ಕೆ ಮಾರಕ ಎಂಬ ಅಭಿಪ್ರಾಯವನ್ನು ರಾಷ್ಟ್ರೀಯ ನಾಯಕತ್ವದಲ್ಲಿ ಮೂಡಿಸುವಲ್ಲಿ ಯಶಸ್ವಿಯಾಗಿತ್ತು. ಹಾಗಾಗಿಯೇ, ರಾಷ್ಟ್ರೀಯ ಆಂದೋಲನದ ನೇತೃತ್ವ ವಹಿಸಿದ್ದ ಕಾಂಗ್ರೆಸ್ಸನ್ನು ಭಾಷಾ ಪ್ರಾಂತೀಯತೆಗಳ ಆಧಾರದ ಮೇಲೆ ಸಂಘಟಿಸಲು ೧೯೨೦ರಷ್ಟು ಹಿಂದೆಯೇ ನೆಹರೂ ನೇತೃತ್ವದ ಸಮಿತಿ ಮಾಡಿದ್ದ ಶಿಫಾರ್ಸನ್ನು ಒಪ್ಪಿ ಪಾಲಿಸಿದ ಕಾಂಗ್ರೆಸ್, ೧೯೪೮ರ ಹೊತ್ತಿಗೆ ನೆಹರೂ ನೇತೃತ್ವದಲ್ಲೇ ಭಾಷಾವಾರು ಪ್ರಾಂತ್ಯಗಳ ರಚನೆಗೆ ಪ್ರಬಲ ವಿರೋಧ ವ್ಯಕ್ತಪಡಿಸಿತು. ಇದರ ಹಿಂದೆ, ಧರ್ಮಾಧಾರಿತವಾಗಿ ನಡೆದಿದ್ದ ರಾಷ್ಟ್ರ ವಿಭಜನೆ ಹುಟ್ಟಿಸಿದ್ದ ಆತಂಕವೂ ಇದ್ದೀತು. ಅದೇನೇ ಇರಲಿ, ಇಂತಹ ಬಿಕ್ಕಟ್ಟಿನ ಸಮಯದಲ್ಲಿ ಕರ್ನಾಟಕ ಏಕೀಕರಣ ಚಳವಳಿಯು ಭಾರತದ ರಾಷ್ಟ್ರೀಯ ಆಂದೋಲನದೊಂದಿಗೆ ಅನುಸಂಧಾನ ನಡೆಸಿದ ರೀತಿ ನೀತಿಗಳು, ಅದು ಕಟ್ಟಲು ಹೊರಟಿದ್ದ ನವ ಕರ್ನಾಟಕತ್ವದ ಶಿಥಿಲತೆಗೆ ಕಾರಣವಾಯಿತೆನ್ನ ಬಹುದು.

೧೮೫೮ರಷ್ಟು ಹಿಂದೆಯೇ ಧಾರವಾಡ ಸೀಮೆಯಲ್ಲಿ ಡೆಪ್ಯುಟಿ ಚೆನ್ನಬಸಪ್ಪ ಅವರಿಂದ ಸಣ್ಣ ಪ್ರಮಾಣದಲ್ಲಿ ಆರಂಭಗೊಂಡ ಕನ್ನಡ ಸ್ವಾಭಿಮಾನ ಚಳವಳಿ, ೧೮೬೫ರಲ್ಲಿ ಬೆಂಗಳೂರಿನಲ್ಲಿ ಕರ್ನಾಟಕ ಭಾಷಾ ಉಜ್ಜೀವಿನಿ ಸಭಾ; ೧೮೯೦ರಲ್ಲಿ ಧಾರವಾಡದಲ್ಲಿ ಕರ್ನಾಟಕ ವಿದ್ಯಾವರ್ಧಕ

ಸಂಘ; ೧೯೧೫ರಲ್ಲಿ ಬೆಂಗಳೂರಿನಲ್ಲಿ ಕನ್ನಡ ಸಾಹಿತ್ಯ ಪರಿಷತ್ತು; ೧೯೨೦ರಲ್ಲಿ ಧಾರವಾಡದಲ್ಲಿ ಅಖಿಲ ಕರ್ನಾಟಕ ಮಹಾಸಮ್ಮೇಳನ ಮುಂತಾದ ಸಂಸ್ಥೆ-ಸಂಘಟನೆಗಳ ಸ್ಥಾಪನೆಯ ಮೂಲಕ ಕನ್ನಡ ಭಾಷೆ ಮಾತನಾಡುವ ಪ್ರದೇಶಗಳಾದ್ಯಂತ ಸುಪ್ತವಾಗಿದ್ದ ಕನ್ನಡ ರಾಷ್ಟ್ರೀಯತೆಯನ್ನು ಜಾಗೃತಗೊಳಿಸುತ್ತಾ, ಕ್ರಮೇಣ ಕರ್ನಾಟಕ ಏಕೀಕರಣ ಚಳವಳಿಯಾಗಿ ಬೆಳೆದು ನಿಂತಿತು. ಆದರೆ ಅದು, ಅಖಿಲ ಭಾರತ ರಾಷ್ಟ್ರೀಯತೆಯ ಚೌಕಟ್ಟಿನಲ್ಲಿ ಕನ್ನಡ ರಾಷ್ಟ್ರೀಯತೆ ಪಡೆದುಕೊಳ್ಳಬಹುದಾದ ರಾಜಕೀಯ ಸ್ವರೂಪದ ಬಗೆಗೆ ಒಂದು ನೀಲ ನಕ್ಷೆ ತಯಾರಿಸುವ ಸಂಘಟಿತ ಪ್ರಯತ್ನವನ್ನು ಮಾಡಲಾಗದ ಸಂದಿಗ್ಧಕ್ಕೆ ಸಿಕ್ಕಿಕೊಂಡಿತು.

ಈ ಬಗ್ಗೆ ಸ್ಪಷ್ಟ ಕಲ್ಪನೆ ಇದ್ದಂತೆ ತೋರಿದ ಕರ್ನಾಟಕ ಕುಲ ಪುರೋಹಿತರೆಂದೇ ಪ್ರಸಿದ್ಧರಾದ ಆಲೂರು ವೆಂಕಟರಾಯರು, ಭಾರತದ ರಾಷ್ಟ್ರೀಯತೆ ಹೊಮ್ಮಿದ ಹೊಸ ಸಂದರ್ಭದಲ್ಲಿ ಕನ್ನಡ ರಾಷ್ಟ್ರೀಯತೆಯನ್ನು 'ಕರ್ನಾಟಕತ್ವ' ಎಂಬ ಪರಿಕಲ್ಪನೆಯ ಮೂಲಕ ಹೊಸದಾಗಿ ನಿರ್ವಚಿಸಿ, ಆ ಬಗೆಗೆ ವ್ಯಾಪಕ ಚಟುವಟಿಕೆಗಳನ್ನು ಕೈಗೊಂಡರು. ಆದರೆ ಅವರು, ಗಾಂಧೀಜಿಯ ಅಸ್ಪೃಶ್ಯತಾ ನಿವಾರಣೆ ಸೇರಿದಂತೆ ಅವರ ರಚನಾತ್ಮಕ ಕಾರ್ಯಕ್ರಮಗಳ ಬಗೆಗೆ ತೀವ್ರ ಭಿನ್ನಾಭಿಪ್ರಾಯ ಹೊಂದಿ ಸಾವರ್ಕರರೊಂದಿಗೆ ಗುರುತಿಸಿಕೊಂಡು, 'ಕರ್ನಾಟಕತ್ವ'ವನ್ನು 'ಹಿಂದುತ್ವ'ದ ಮಾದರಿ ಮೇಲೆ ನಿರೂಪಿಸ ಹೊರಟರು. ಇದರಿಂದಾಗಿ ಅವರು ಏಕೀಕರಣ ಚಳವಳಿಯಲ್ಲಿ ಒಂಟಿಯಾಗಿ ಹೋದರು. ಹೀಗಾಗಿ 'ಕರ್ನಾಟಕತ್ವ'ದ ರಾಜಕೀಯ ಸ್ವರೂಪ ನಿರ್ಧಾರಿತವಾಗಬೇಕಿದ್ದ ಸಂವಿಧಾನ ರಚನಾ ಸಭೆಯಲ್ಲಿ 'ಕರ್ನಾಟಕ'ವನ್ನು ಪ್ರತಿನಿಧಿಸಿದವರೆಂದರೆ, ನವಭಾರತದ ಏಕತೆ ಹಾಗೂ ಸಮಗ್ರತೆಯ ಹೆಸರಿನಲ್ಲಿ ಭಾರತದ ಭಾಷಾ ರಾಷ್ಟ್ರೀಯತೆಗಳನ್ನು ಹತ್ತಿಕ್ಕಲು ನಿರ್ಧರಿಸಿದ್ದ ರಾಷ್ಟ್ರೀಯ ಆಂದೋಲನದ ನಾಯಕರ ಪ್ರಭಾವಕ್ಕೆ ಸಿಕ್ಕಿ, 'ಕರ್ನಾಟಕತ್ವ'ದ ಕೆಚ್ಚನ್ನೇ ಕಳೆದುಕೊಂಡಿದ್ದ ಕರ್ನಾಟಕ ಏಕೀಕರಣ ಚಳವಳಿಯ ರಾಜಕೀಯ ನಾಯಕರು. ಉದಾ: ಎಸ್.ನಿಜಲಿಂಗಪ್ಪನವರಂತಹವರು. ಭಾಷಾ ರಾಷ್ಟೀಯತೆಗಳನ್ನು ಅವುಗಳ ರಾಜಕೀಯ ಹಾಗೂ ಸಾಂಸ್ಕೃತಿಕ ನೆಲೆಗಳಲ್ಲಿ ಅರ್ಥ ಮಾಡಿಕೊಳ್ಳಬಲ್ಲರಾಗಿದ್ದ ಸಮಾಜವಾದಿಗಳು, ಕಾಂಗ್ರೆಸ್ ರಾಜಕಾರಣವನ್ನು ವಿರೋಧಿಸಿ ಸಂವಿಧಾನ ರಚನಾ ಸಭೆಯನ್ನು ಬಹಿಷ್ಕರಿಸಿದ್ದೂ, ಬಹುಭಾಷಾ ರಾಷ್ಟ್ರೀಯತೆಗಳಿಗೆ ಮುಳುವಾಯಿತು. ಇನ್ನು ಸಂವಿಧಾನ ಕರಡು ಸಿದ್ಧ ಪಡಿಸಿದ ಡಾ॥ ಅಂಬೇಡ್ಕರರಂತೂ, ದಲಿತರ ಹಿತ ಅಖಿಲ ಭಾರತ ರಾಷ್ಟ್ರೀಯತೆಯಲ್ಲೇ ಅಡಗಿದೆ ಎಂದೇ ನಂಬಿದವರಾಗಿದ್ದರು.

ಕೆಲವು 'ಮೈಸೂರಿಗ'ರ ವಿರೋಧದ ನಡುವೆಯೂ, ಎ.ಜೆ. ದೊಡ್ಡಮೇಟಿಯವರ ನೇತೃತ್ವದ ಕರ್ನಾಟಕ ನಿರ್ಮಾಣ ಶಿಬಿರ ಹಾಗೂ ಶಂಕರಗೌಡ ಅಳವಂಡಿಯವರ ಅಮರಣಾಂತ ಉಪವಾಸದಂತಹ ಉಪಕ್ರಮಗಳಿಂದಾಗಿ ೧೯೫೪ರ ಹೊತ್ತಿಗೆ, ಮೈಸೂರು ಕಾಂಗ್ರೆಸ್ಸಿಗರೂ ಒಮ್ಮತದಿಂದ ಕರ್ನಾಟಕ ಏಕೀಕರಣವನ್ನು ಒತ್ತಾಯಿಸುವ ಸಂದರ್ಭ ಸೃಷ್ಟಿಯಾಯಿತು. ಅವರು ಏಕೀಕೃತ ಕನ್ನಡ ರಾಜ್ಯಕ್ಕಾಗಿ ಒತ್ತಾಯಿಸಿ ಕಾಂಗ್ರೆಸ್ ಸದಸ್ಯತ್ವ ಹಾಗೂ ತಂತಮ್ಮ ರಾಜಕೀಯ ಸ್ಥಾನಗಳಿಗೆ ಸಾಮೂಹಿಕ ರಾಜೀನಾಮೆ ನೀಡುವ ನಿರ್ಧಾರ ಕೈಗೊಂಡಾಗ, ಕರ್ನಾಟಕ ರಾಜ್ಯೋದಯಕ್ಕೆ ಅಧಿಕೃತ ಚಾಲನೆ ಸಿಕ್ಕಿತು. ಆದರೆ ಆ ಹೊತ್ತಿಗೆ ಅಖಿಲ ಭಾರತ ರಾಷ್ಟ್ರೀಯತೆಯ ಎರಕದಲ್ಲಿ ಹಾಗೂ ಬ್ರಿಟಿಷ್ ಸರ್ಕಾರ ರೂಪಿಸಿದ್ದ ೧೯೩೫ರ ಭಾರತ ಸರ್ಕಾರದ ಕಾಯಿದೆಯ ಮೂಲ ಸ್ಫೂರ್ತಿಯೊಂದಿಗೆ ನಮ್ಮ ಸಂವಿಧಾನ ರೂಪುಗೊಂಡಿತ್ತು. ಅದರ ಅಡಿಯಲ್ಲಿ ಬ್ರಿಟಿಷರ ಕಾಲದ ಪ್ರಾಂತ್ಯಗಳು ಭಾರತದ ಒಕ್ಕೂಟದ ರಾಜ್ಯಗಳಾಗಿ

ತಮ್ಮೆಲ್ಲ ಪೂರ್ವಭಾಷಾ ರಾಷ್ಟ್ರೀಯತೆಗಳ ಸ್ವಾಯತ್ತತೆಯನ್ನೂ ಕಳೆದುಕೊಂಡಿದ್ದವು. ಅವೀಗ ಉಪರಾಷ್ಟ್ರೀಯತೆಗಳೆಂಬ ಅಭಿದಾನಕ್ಕೆ ಪಾತ್ರವಾಗಿ, ತಾವೇ ರೂಪಿಸಿದ ರಾಷ್ಟ್ರೀಯ ಆಂದೋಲನ ಕಟ್ಟಿ ಕೊಟ್ಟ ಸಂವಿಧಾನ ನಿರೂಪಿಸಿದ ಭವ್ಯ ಭಾರತದ ಕಲ್ಪನೆಯ ಭಾರಕ್ಕೆ ಸಿಕ್ಕಿ, ತಮ್ಮ ಅಸ್ಮಿತೆಗಳ ಮೂಲಾಧಾರಗಳನ್ನೇ ಕಳೆದುಕೊಂಡವು.

ಕೇಂದ್ರದ ಪ್ರತಿನಿಧಿಗಳಾದ ರಾಜ್ಯಪಾಲರು ಹಾಗೂ ಕೇಂದ್ರದ ಅಧೀನದಲ್ಲಿರುವ ಅಖಿಲ ಭಾರತ ಸೇವಾ ಸಿಬ್ಬಂದಿಯ ಕಣ್ಗಾವಲಿನಲ್ಲಿ, ಸಂವಿಧಾನದಿಂದ ಪರಿಮಿತವಾದ ಸಾಮಾಜಿಕ-ಆರ್ಥಿಕ-ಸಾಂಸ್ಕೃತಿಕ ಎಲ್ಲೆಗಳಲ್ಲಷ್ಟೇ ಈ ರಾಜ್ಯಗಳು ಈಗ ಜೀವ ಆಡಿಸಿಕೊಳ್ಳಬಲ್ಲವಾಗಿವೆ. ಇಂತಹ ಒತ್ತಡಗಳಿಂದಾಗಿಯೇ, ೭೦ರ ದಶಕದಿಂದೀಚೆಗೆ ದೇಶದ ಅನೇಕ ಕಡೆ ಪ್ರತ್ಯೇಕತಾ ಚಳವಳಿಗಳು ತಲೆ ಎತ್ತಿ, ಕೇಂದ್ರ ಬಲದಿಂದ ಅವು ದಮನಕ್ಕೀಡಾಗಿ; ಈಗ ಸುಪ್ತ ಸ್ಥಿತಿಯಲ್ಲಿವೆ. ಸದ್ಯದ ಕಾಶ್ಮೀರ ಸಮಸ್ಯೆ ಕೂಡಾ ಈ ಅದಮ್ಯ ಪ್ರವೃತ್ತಿಯ ಜಟಿಲ ರೂಪವೇ ಆಗಿದೆ. ಈ ಎಲ್ಲದರ ಹಿನ್ನೆಲೆಯಲ್ಲಿ ರಾಜ್ಯಗಳ ಅಧಿಕಾರಗಳನ್ನು ಪುನರ್ನಿರೂಪಿಸಲು ೮೦ರ ದಶಕದಲ್ಲಿ ರಚಿತವಾದ ಸರ್ಕಾರಿಯಾ ಆಯೋಗ ಈ ಸಂಬಂಧ ಅನೇಕ ಶಿಫಾರ್ಸುಗಳನ್ನು ಮಾಡಿತಾದರೂ-ಅವುಗಳಲ್ಲಿ ಕೆಲವು ತೇಪೆ ತೇಪೆಯಾಗಿ ಜಾರಿಯಾದುವುದರೂ-ಒಟ್ಟಾರೆ ಅವು, ಇಂದಿನ ಹೊಸ ಸಂದರ್ಭದಲ್ಲಿ ಅಪ್ರಸ್ತುತಗೊಂಡಿವೆ.

-೬-

ಹೀಗೆ ಮೂಡಿ ನಿಂತಿರುವ ಹೊಸ-ಜಾಗತೀಕರಣದ-ಪರಿಸ್ಥಿತಿಯಲ್ಲಿ, ತಮಿಳ್ನಾಡಿನಂತಹ ರಾಜ್ಯಗಳೇನೋ ಮುಕ್ಕಾಗದಂತೆ ಉಳಿದುಕೊಂಡು ಬಂದಿದ್ದ ತಮ್ಮ ಕುಲಪ್ರಜ್ಞೆಯ ಸ್ಫೂರ್ತಿಯೊಂದಿಗೆ; ಈ ಮೊದಲು ವಿವರಿಸಿದಂತೆ, ತಮ್ಮ ಕುಲ ಸ್ವಾಯತ್ತತೆಯನ್ನು ಒತ್ತುವರಿ ಮಾಡಿಕೊಳ್ಳುವ ಈ ಹೊಸ ರಾಷ್ಟ್ರೀಯತೆಯ ಈವರೆಗಿನ ಅನೇಕ ತೆರನ ಪ್ರಯತ್ನಗಳನ್ನು ಸಮರ್ಥವಾಗಿ ಎದುರಿಸುತ್ತ ಬಂದಿವೆ. ತಮಿಳ್ನಾಡಂತೂ, ಕಳೆದ ವಿಧಾನಸಭಾ ಅಧಿವೇಶನದಲ್ಲಿ ತನ್ನ ಕುಲ ರಾಜಕಾರಣದ ಅಗತ್ಯಕ್ಕೆ ತಕ್ಕಂತೆ, ಸಂವಿಧಾನವನ್ನೇ ಪರಿಷ್ಕರಿಸುವ ಹಕ್ಕೊತ್ತಾಯವನ್ನು ರಾಜ್ಯಪಾಲರ ಭಾಷಣದ ಮೂಲಕವೇ ಮಂಡಿಸುವ ರಾಜಕೀಯ ಇಚ್ಛಾಶಕ್ತಿಯನ್ನು ಪ್ರದರ್ಶಿಸಿದೆ. ಆದರೆ ಕರ್ನಾಟಕ ಏಕೀಕರಣ ಸಮಯದಲ್ಲಾದರೂ ಕುಲಪ್ರಜ್ಞೆಯ ಆಧಾರದ ಮೇಲೆ ಕರ್ನಾಟಕತ್ವದ ಸಮರ್ಥ ಮಾದರಿ ಕಟ್ಟಿಕೊಳ್ಳಲಾಗದೇ ಹೋದ ಕನ್ನಡ ಸಮುದಾಯ, ಸಹಜವಾಗಿಯೇ ಇಂದು ಭಾರತವೆಂಬ ಒಕ್ಕೂಟದಲ್ಲಿ ಸದಾ ಅನುಭವಿಸುತ್ತಿರುವ ಎಲ್ಲ ರೀತಿಯ-ಸಾಮಾಜಿಕ, ಆರ್ಥಿಕ, ಸಾಂಸ್ಕೃತಿಕ ಹಾಗೂ ರಾಜಕೀಯ-ಒತ್ತುವರಿಗಳಿಗೆ ಸಮರ್ಥ ಪ್ರತಿರೋಧ ವ್ಯಕ್ತಪಡಿಸುವ ಅಸ್ಮಿತೆಯ ಅಂತಃಶಕ್ತಿಯನ್ನೇ ಕಳೆದುಕೊಂಡಿದೆ. ಹಾಗಾಗಿಯೇ ಇಂದು ಕನ್ನಡ ಚಳವಳಿ ಬೀದಿ ಜಗಳದ ಮಟ್ಟಕ್ಕೆ ಇಳಿದಿದೆ.

ಇದರ ಒಟ್ಟಾರೆ ಪರಿಣಾಮವೆಂದರೆ ಕರ್ನಾಟಕದ ರಾಜಕಾರಣ ತನ್ನ ಕೇಂದ್ರವನ್ನೇ ಕಳೆದುಕೊಂಡು, ಜಾಗತೀಕರಣವೆಂಬ ನವವಸಾಹತುಶಾಹಿಯ ದಲ್ಲಾಳಿಗಳ ಕೈವಶವಾಗಿ, ಕರ್ನಾಟಕದ ಸಾಮಾನ್ಯ ರೈತ ಪ್ರತಿನಿಧಿಸುವ ಸಾಮಾನ್ಯ ಕನ್ನಡಿಗ ತನ್ನ ನಾಡಿನಲ್ಲೇ ಘನತೆಯಿಂದ ಅನ್ನ ಸಂಪಾದಿಸಿಕೊಂಡು ಬದುಕುವ ನೆಲೆಗಳನ್ನು ಕಳೆದುಕೊಳ್ಳುತ್ತಿದ್ದಾನೆ. ಅಭಿವೃದ್ಧಿ ಸೂಚ್ಯಂಕದಲ್ಲಿ

೨೫ ವರ್ಷಗಳ ಹಿಂದೆ ಭಾರತದಲ್ಲಿ ೪-೫ನೇ ಸ್ಥಾನದಲ್ಲಿರುತ್ತಿದ್ದ ಕರ್ನಾಟಕ, ತನ್ನ ಹೆಮ್ಮೆಯ ಮಾಹಿತಿ ತಂತ್ರಜ್ಞಾನ ಕೈಗಾರಿಕೆ ಉತ್ಪತ್ತಿ ಮಾಡುತ್ತಿರುವ ಅಪಾರ ಸಂಪತ್ತಿನ ದ್ವೀಪಗಳ ನಡುವೆಯೂ, ಈಗ ೭-೮ನೇ ಸ್ಥಾನಕ್ಕೆ ಜಾರಿದೆ. ನೆರೆಯ ಕೇರಳ ಹಾಗೂ ತಮಿಳ್ನಾಡು ಕರ್ನಾಟಕವನ್ನು ದಾಟಿ ಹೋಗಿವೆ. ಆಂಧ್ರ ಆ ಹಾದಿಯಲ್ಲಿದೆ. ಇದನ್ನು ಸಂಕೇತಿಸುವಂತೆ ರಾಜ್ಯದ ಪೂರ್ವ ಗಡಿ, ತೆಲುಗು ರಾಜಕಾರಣದ ಒತ್ತುವರಿಗೆ ಈಡಾಗುತ್ತಿದೆ. ಕಾವೇರಿ ನೀರು ಹಂಚಿಕೆ ವಿಷಯದಲ್ಲಿ ತನ್ನ ವಾದವನ್ನು ಸಮರ್ಥವಾಗಿ ಮಂಡಿಸುವಲ್ಲಿ ರಾಜ್ಯ ಸೋತಿರುವುದು ಈಗ ಸ್ಪಷ್ಟವಾಗಿದೆ. ಇದನ್ನೆಲ್ಲ ಬೀದಿಕಾಳಗದ ಮೂಲಕ ಪರಿಹರಿಸಿಕೊಳ್ಳಲು ಸಾಧ್ಯವೇ?

ಹಾಗಾದರೆ, ಇದಕ್ಕೆ ಪರಿಹಾರವೇನು? ಇದಕ್ಕಾಗಿ ಇಂದು ಅಗತ್ಯವಿರುವುದು ನವ ಭಾರತ ತನ್ನ 'ಪ್ರಗತಿ'ಯ ಹಾದಿಯಲ್ಲಿ ಸೃಷ್ಟಿಸಿಕೊಟ್ಟಿರುವ ಹೊಸ ಸವಾಲುಗಳನ್ನು, ಕರ್ನಾಟಕದ ಮಟ್ಟಿಗೆ ಸಮರ್ಥವಾಗಿ ಎದುರಿಸಬಲ್ಲ ಹೊಸ 'ಕರ್ನಾಟಕತ್ವ'. ನವೋದಿತ ರಾಷ್ಟ್ರೀಯತೆಯ ಸಂಭ್ರಮದಲ್ಲಿ ಕರ್ನಾಟಕ ಏಕೀಕರಣ ಚಳವಳಿ ರೂಪಿಸಿಕೊಂಡ ಕರ್ನಾಟಕತ್ವ ಸಾಂಸ್ಕೃತಿಕ ಪ್ರಾಧಾನ್ಯತೆ ಹೊಂದಿದ್ದು, ಸಾಮಾಜಿಕ-ಆರ್ಥಿಕ ಆಯಾಮಗಳು ಅದರಲ್ಲಿ ಕಾಣೆಯಾಗಿದ್ದವು. ಈ ಮಾದರಿಗೆ ಸ್ಫೂರ್ತಿ ನೀಡಿದ್ದ ಆಲೂರು ವೆಂಕಟರಾಯರ ಗತ ವೈಭವಧಾರಿತ ಶಿಷ್ಟ ಸಾಂಸ್ಕೃತಿಕ ಮಾದರಿ, ಬಿ.ಎಂ. ಶ್ರೀಯವರ '*ಇವಳ ಸೊಬಗನವಳು ತೊಟ್ಟು, ನೋಡ ಬಯಸಿದೆ; ಅವಳ ತೊಡುಗೆ ಇವಳಿಗಿಟ್ಟು ಹಾಡ ಬಯಸಿದೆ*' ರೀತಿಯ ಇಂಗ್ಲಿಷ್-ಕನ್ನಡ ಸಂಸ್ಕೃತಿಗಳ ಸಮನ್ವಯದ ಆಧುನೀಕರಣದ ಮಾದರಿ ಹಾಗೂ ಕುವೆಂಪು ಅವರ '*ನೃಪತುಂಗ ಚಕ್ರವರ್ತಿ; ಪಂಪ ಅದರ ಮುಖ್ಯಮಂತ್ರಿ*' ಎಂದು ಭಾವಿಸಿಕೊಂಡು 'ನೀನೆಲ್ಲಿದ್ದರೆಯೇನ್, ಅದೆ ಕರ್ನಾಟಕ' ಎಂದು ಹೇಳುವ ಭಾವನಾತ್ಮಕ ಮಾದರಿ- ಇವು ಈ ೫೦ ವರ್ಷಗಳಲ್ಲಿ ಪ್ರಕಟಪಡಿಸಿರುವ ಮಿತಿಗಳನ್ನು ಮನಗಂಡು, ಇಂದು ಸಾಮಾಜಿಕ-ಆರ್ಥಿಕ-ರಾಜಕೀಯ ಆಯಾಮಗಳನ್ನೊಳ ಗೊಂಡ ಹೊಸ ಮಾದರಿಯೊಂದನ್ನು ರೂಪಿಸಿಕೊಳ್ಳುವ ತುರ್ತು ಅಗತ್ಯವಿದೆ.

ಇದರ ಬೀಜ ಮಾದರಿ ಈ ಮೊದಲೇ ನಿರೂಪಿಸಿದಂತೆ ಕರ್ನಾಟಕದ ಪರಂಪರೆಯಲ್ಲೇ ಇದೆ. ಅದೇ ಬಸವಣ್ಣನ ಮಾದರಿ. ಈ ಮಾದರಿಯನ್ನು, ಬಸವಣ್ಣನನ್ನು ಒಂದು ನಿರ್ದಿಷ್ಟ ಜಾತಿಯ ನಾಯಕತ್ವದಿಂದ ಬಿಡಿಸಿಕೊಂಡು ಕರ್ನಾಟಕದ ಕುಲ ನಾಯಕನನ್ನಾಗಿ ಮಾಡಿಕೊಳ್ಳುವ ಆಂದೋಲನದ ಕುಲುಮೆಯಲ್ಲಿ ರೂಪಿಸಬೇಕಿದೆ. ಇಂತಹ ಆಂದೋಲನ ಮಾತ್ರ ನಿಜವಾದ ಕನ್ನಡ ಚಳವಳಿಯಾಗಿ ಬೆಳೆದು, ಭಾರತದ ಏಕತೆ, ಸಮಗ್ರತೆ ಹಾಗೂ ಅಭ್ಯುದಯದ ಜೊತೆ ಜೊತೆಗೆ ಕರ್ನಾಟಕದ, ಅಂದರೆ ಕನ್ನಡಿಗನ ವ್ಯಕ್ತಿತ್ವದ ಏಕತೆ, ಸಮಗ್ರತೆ ಹಾಗೂ ಅಭ್ಯುದಯವನ್ನು ಸಾಧಿಸಬಲ್ಲದು.

ಇಂತಹ ಆಂದೋಲನವೊಂದಕ್ಕಾಗಿ ಕರ್ನಾಟಕ ಕಾಯುತ್ತಿದೆ.

*

ಆಧುನಿಕ ಕರ್ನಾಟಕ ಕಟ್ಟಿದ ಐವತ್ತು ಮಂದಿ ಮಹನೀಯರು

– ಡಿ.ಎಸ್. ನಾಗಭೂಷಣ

ನಿಜವಾಗಿ ಕರ್ನಾಟಕದ ಸುವರ್ಣ ಮಹೋತ್ಸವದ ಆಚರಣೆ ನಡೆಯಬೇಕಾಗಿದ್ದುದು, ೨೦೦೫ರ ನವೆಂಬರ್ ೧ರಿಂದ ೨೦೦೬ರ ನವೆಂಬರ್ ೧ರವರೆಗೆ. ಆದರೆ ಆ ಅವಧಿಯಲ್ಲಿದ್ದ ಸರ್ಕಾರ ತನ್ನ ಅಳಿವು-ಉಳಿವಿನ ಕಸರತ್ತಿನಲ್ಲೇ ತೊಡಗಬೇಕಾಗಿ ಬಂದಿದ್ದರಿಂದಾಗಿ ಅಧಿಕೃತವಾಗಿ ಘೋಷಿಸಲ್ಪಟ್ಟ ಆಚರಣೆ, ರಾಜಕೀಯ ಬಿರುಗಾಳಿಗೆ ಸಿಕ್ಕಿ ತತ್ತರಿಸಿತು. ಅದು ಆರಂಭೋತ್ಸವದೊಂದಿಗೇ ಅಂತ್ಯಗೊಂಡಿತು! ನಂತರ ಬಂದ ಹೊಸ ಸರ್ಕಾರ ಹೊಸ ಉತ್ಸಾಹದೊಂದಿಗೆ ಈ ಆಚರಣೆಯನ್ನು ೨೦೦೭ರ ನವೆಂಬರ್‌ವರೆಗೆ ವಿಸ್ತರಿಸುವ ಘೋಷಣೆ ಮಾಡಿತಾದರೂ, ಈ ಸರ್ಕಾರವೂ ರಾಜಕೀಯ ಬಿರುಗಾಳಿಗೆ ಸಿಕ್ಕಿ, ಈ ಬಂಗಾರದ ಹಬ್ಬ ಹಿನ್ನೆಲೆಗೆ ಸರಿಯಿತು. ಹೀಗಾಗಿ ಆಧುನಿಕ ಕನ್ನಡ ರಾಜ್ಯ ಸ್ಥಾಪನೆಯ ಐವ್ವತ್ತು ವರ್ಷಗಳ ಸಂಭ್ರಮ, ರಾಜ್ಯ ರಾಜಕೀಯದ ಏಳುಬೀಳುಗಳ ನಡುವೆ ಕದಡಿ ಹೋಯಿತು. ಇದೆಲ್ಲದರ ಹಿಂದಿನ ನಿರಭಿಮಾನದ ಕಥೆಯನ್ನು ಗಳಗನಾಥರು ಬರೆದ 'ಕನ್ನಡಿಗರ ಕರ್ಮಕಥೆಗೆ' ಸೇರಿಸಬಹುದಾದ ಒಂದು ಹೊಸ ಅಧ್ಯಾಯದಂತೆಯೂ ನೋಡಬಹುದಾಗಿದೆ! ರಾಜ್ಯ ಸರ್ಕಾರದ ಅಧಿಕೃತ ಪತ್ರಗಳ ಮೇಲೆ ಮತ್ತು ಅಧಿಕೃತ ಸಾರಿಗೆ ವಾಹನಗಳ ಮೇಲೆ ಸುವರ್ಣ ಕರ್ನಾಟಕದ ಮುದ್ರೆ ಹಾಕಿದುದರ ಹಾಗೂ ಅಲ್ಲಲ್ಲಿ ನಡೆದ ಹಾಡು-ಕುಣಿತಗಳ ಹಬ್ಬಗಳ ಹೊರತಾಗಿ; ಸುವರ್ಣ ಕರ್ನಾಟಕ ಆಚರಣೆಯಂತಹ ಐತಿಹಾಸಿಕ ಸಂದರ್ಭ, ಕನ್ನಡಿಗರ ಮನ-ಮನೆಗಳಲ್ಲಿ ನಡೆಯಬೇಕಾಗಿದ್ದ ಒಂದು ಸಾಂಸ್ಕೃತಿಕ ಹಿನ್ನೋಟ-ಮುನ್ನೋಟಗಳಿಗೆ ಆಸ್ಪದವೇ ಇಲ್ಲದಂತೆ, ನಮ್ಮ ಕಣ್ಮುಂದೆಯೇ ಕಳೆದು ಹೋಗುತ್ತಿದೆ.

ನಮ್ಮ ಸಂವಿಧಾನ ಅಧಿಕೃತವಾಗಿ ಏನೇ ಹೇಳಲಿ; ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸ, ಕನ್ನಡವೂ ಒಂದು ರಾಷ್ಟ್ರೀಯತೆ ಎಂಬುದನ್ನು ಸಾರಿ ಹೇಳುತ್ತದೆ. ಕನ್ನಡವೆಂಬುದು ಒಂದು ಭಾಷೆ ಮಾತ್ರವಾಗಿರದೆ, ಒಂದು ರಾಜಕೀಯ-ಸಾಂಸ್ಕೃತಿಕ ಕುಲವಾಗಿ ತನ್ನ ರಾಷ್ಟ್ರೀಯತೆಯನ್ನು ಕಟ್ಟಿಕೊಂಡಿದೆ. ಅದರ ಆಧಾರದ ಮೇಲೇ, ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗಿಯೇ ಕರ್ನಾಟಕ ಏಕೀಕರಣದ ಹೋರಾಟವೂ ನಡೆದು, ಕನ್ನಡ ರಾಜ್ಯ ಸ್ಥಾಪನೆಯಾದದ್ದು. ಆದರೆ ಕಳೆದ ಐವ್ವತ್ತು ವರ್ಷಗಳಲ್ಲಿ ಈ ಕನ್ನಡ ರಾಜ್ಯ ಸ್ಥಾಪನೆಯಾದುದರ ಉದ್ದೇಶಗಳನ್ನೇ ಮರೆತಂತೆ; ಕನ್ನಡದ ಜನ ಹಾಗೂ ಅವರು ಆರಿಸಿದ ಸರ್ಕಾರಗಳು ಕನ್ನಡಕ್ಕೆ ಬಾಯುಪಚಾರ ಮಾತ್ರ ಮಾಡುತ್ತ, ಕನ್ನಡವನ್ನು ನಿರ್ಣಾಯಕವಾದ ಎಲ್ಲ ಜಾಗಗಳಲ್ಲಿ-ಶಿಕ್ಷಣ, ಆಡಳಿತ, ಅಭಿವೃದ್ಧಿ ಇತ್ಯಾದಿ-ಕೈ ಬಿಡುತ್ತಾ ಬಂದಿವೆ. ಹೀಗಾಗಿ ಕನ್ನಡ ಕುಲವೆಂಬುದು ಬೇರಿಲ್ಲದ ಒಂದು ಸಮುದಾಯವಾಗಿ ಮಾರ್ಪಡುತ್ತಿದ್ದು, ಎಲ್ಲ ರಂಗಗಳಲ್ಲೂ ಆಳವಾದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕ್ರಮಿಸಬೇಕಾದ ತನ್ನ ಮುಂದಿನ ದಾರಿಯ

ಬಗ್ಗೆ ಸ್ಪಷ್ಟತೆಯೇ ಇಲ್ಲದಂತೆ, ತನ್ನದೇ ಒಂದು ಸಾಂಸ್ಕೃತಿಕ ಇಚ್ಛಾಶಕ್ತಿ ಇಲ್ಲದಂತೆ ಹೊರಗಿನ ಶಕ್ತಿಗಳ ಎಳೆದಾಟಕ್ಕೆ ಸಿಕ್ಕಿ ಎತ್ತಂದರತ್ತ ಚಲಿಸುತ್ತಿದೆ.

ಸುವರ್ಣ ಕರ್ನಾಟಕದ ಈ ಸಂದಿಗ್ಧ ಹಿನ್ನೆಲೆಯಲ್ಲಿ ಆಧುನಿಕ ಕರ್ನಾಟಕವನ್ನು ಕಟ್ಟಲು ಶ್ರಮಿಸಿದ ಐವತ್ತು ಮಹನೀಯರನ್ನು ಆರಿಸಿ ಇಲ್ಲಿ ಪರಿಚಯಿಸುತ್ತಿದ್ದೇವೆ. ಆ ಮೂಲಕವಾದರೂ ಹೊಸ ತಲೆಮಾರುಗಳ ಕನ್ನಡಿಗರಿಗೆ ತಮ್ಮ ಬೇರುಗಳ ನೆನಪಾಗಿ, ಅವರು ತಾವು ಹೂ ಬಿಡಬೇಕಾದ ಆಕಾಶದ ಸರಿಯಾದ ಕಲ್ಪನೆ ಮಾಡಿಕೊಳ್ಳಲಿ ಎಂಬ ಸದಾಶಯ ಈ ಆಯ್ಕೆ ಪ್ರಕ್ರಿಯೆಯ ಹಿಂದಿದೆ. ಈ ಆಯ್ಕೆ ಕನ್ನಡ ಸಂಸ್ಕೃತಿಯನ್ನು ಅದರ ಆಳಗಳಲ್ಲದೆ, ಅದರ ವಿಸ್ತಾರದಲ್ಲೂ ಬಿಂಬಿಸುವ ಉದ್ದೇಶ ಹೊಂದಿರುವುದರಿಂದ, ಕೆಲವರಿಗೆ ಬಹು ಮುಖ್ಯರೆನಿಸಿರ ಬಹುದಾದ ಸಾಧಕರ ಹೆಸರುಗಳು ಬಿಟ್ಟು ಹೋಗಿದ್ದರೂ ಆಶ್ಚರ್ಯವಿಲ್ಲ. ಅಲ್ಲದೆ ಯಾವುದೇ ನಿರ್ದಿಷ್ಟ ವಿಚಾರಧಾರೆಗೆ ಬದ್ಧವಾಗಿ ಈ ಆಯ್ಕೆ ಮಾಡಿಲ್ಲದಿರುವುದರಿಂದಾಗಿ; ವೈಚಾರಿಕ ಭಿನ್ನಾಭಿಪ್ರಾಯಗಳನ್ನಿಟ್ಟುಕೊಂಡೂ, ಕನ್ನಡ ಪ್ರಜ್ಞೆಗೆ, ಕನ್ನಡ ಬದುಕಿಗೆ ನಿಜವಾದ ಕೊಡುಗೆ ಸಲ್ಲಿಸಿದವರೆಲ್ಲರನ್ನೂ ಪರಿಗಣಿಸಿ ಈ ಆಯ್ಕೆ ಮಾಡಲಾಗಿದೆ. ಹಾಗೆ ನೋಡಿದರೆ ಇದನ್ನು 'ವಿಕ್ರಾಂತ ಕರ್ನಾಟಕ' ಆಯೋಜಿಸಿರುವ 'ಸುವರ್ಣ ಕರ್ನಾಟಕದ ಸುವರ್ಣ ಪುಟಗಳು' ಲೇಖನ ಮಾಲೆಯ ವಿಸ್ತರಣೆಯಾಗಿಯೂ ನೋಡಬಹುದಾಗಿದೆ!

ಸುವರ್ಣ ಕರ್ನಾಟಕದ ಈ ಸಂದಿಗ್ಧ ಹಿನ್ನೆಲೆಯಲ್ಲಿ ಆಧುನಿಕ ಕರ್ನಾಟಕವನ್ನು ಕಟ್ಟಲು ಶ್ರಮಿಸಿದ ಐವತ್ತು ಮಹನೀಯರನ್ನು ಆರಿಸಿ ಪರಿಚಯಿಸುತ್ತಿದ್ದೇವೆ. ಆ ಮೂಲಕವಾದರೂ ಹೊಸ ತಲೆಮಾರುಗಳ ಕನ್ನಡಿಗರಿಗೆ ತಮ್ಮ ಬೇರುಗಳ ನೆನಪಾಗಿ, ಅವರು ತಾವು ಹೂ ಬಿಡಬೇಕಾದ ಆಕಾಶದ ಸರಿಯಾದ ಕಲ್ಪನೆ ಮಾಡಿಕೊಳ್ಳಲಿ ಎಂಬ ಸದಾಶಯ ಈ ಆಯ್ಕೆ ಪ್ರಕ್ರಿಯೆಯ ಹಿಂದಿದೆ.

೧. ಫರ್ಡಿನೆಂಡ್ ಕಿಟ್ಟೆಲ್

೧೯ನೇ ಶತಮಾನದಲ್ಲೇ ಕನ್ನಡ-ಇಂಗ್ಲಿಷ್ ನಿಘಂಟನ್ನು ಪ್ರಮಾಣಿತವಾಗಿ ಹಾಗೂ ಶಾಸ್ತ್ರೀಯವಾಗಿ ರಚಿಸಿದ ಜರ್ಮನಿಯ ವಿದ್ವಾಂಸ. ಧರ್ಮ ಪ್ರಸಾರಕ್ಕಾಗಿ ಬಂದು ಕನ್ನಡ ಕಲಿತು ಅದನ್ನು ಕನ್ನಡ ನುಡಿ ಸೇವೆಗಾಗಿ ಮುಡಿಪಿಟ್ಟ ಸಾಹಸಿ. ಕಿಟ್ಟೆಲ್‌ರ ನಿಘಂಟು ಇಂದಿಗೂ ಕನ್ನಡ ಸಾಹಿತ್ಯ-ಸಂಸ್ಕೃತಿ ಅಧ್ಯಯನಕ್ಕೊಂದು ಮುಖ್ಯ ಆಕರಗ್ರಂಥ.

೨. ಗಳಗನಾಥರು

ಕನ್ನಡ ಪ್ರಜ್ಞೆ ಎಂಬುದು ಇನ್ನೂ ಎಚ್ಚೆತ್ತುಕೊಳ್ಳುತ್ತಿದ್ದ ೨೦ನೇ ಶತಮಾನದ ಆದಿಯಲ್ಲೇ ವಿಫುಲ ಹಾಗೂ ವೈವಿಧ್ಯಮಯ ಕನ್ನಡ ಸಾಹಿತ್ಯ ರಚಿಸಿ, ಅವುಗಳನ್ನು ತಲೆಮೇಲೆ ಹೊತ್ತು ಊರೂರು ತಿರುಗಿ ಕನ್ನಡಿಗರ ವಾಚನಾಭಿರುಚಿಯ ಬೆಳವಣಿಗೆಗೆ ಅಸ್ತಿವಾರ ಹಾಕಿದರು. ಸರ್ಕಾರಿ ಸೇವೆ ತ್ಯಜಿಸಿ ಮುದ್ರಣಾಲಯ ಸ್ಥಾಪಿಸಿ, ಪತ್ರಿಕೆ ನಡೆಸುವ ಸಾಹಸ ಮಾಡಿದರು. ಇಂತಹ ಸಂಕಷ್ಟಮಯ ನುಡಿ ಸೇವೆಯಲ್ಲೇ ತಮ್ಮ ಜೀವ ತೇಯ್ದು, ಕೊನೆಗೆ ಕ್ಯಾನ್ಸರ್‌ಗೆ ತುತ್ತಾದರು.

೩. ಆಲೂರು ವೆಂಕಟರಾಯರು

ಆಧುನಿಕ ಕರ್ನಾಟಕದ ಪರಿಕಲ್ಪನೆಯನ್ನು ಮಂಡಿಸಿ ಕನ್ನಡತ್ವ, ಕರ್ನಾಟಕತ್ವಗಳನ್ನು ಶಾಸ್ತ್ರೀಯವಾಗಿ ನಿರೂಪಿಸಿದ ಮೊದಲಿಗರು. ಸ್ವಾತಂತ್ರ್ಯ ಹೋರಾಟವಲ್ಲದೆ, ಕನ್ನಡ ಏಕೀಕರಣ ಚಳುವಳಿಯಲ್ಲಿ ಭಾಗವಹಿಸಿ ತಮ್ಮ ಸಾಹಿತ್ಯ, ಪತ್ರಿಕೋದ್ಯಮ ಹಾಗೂ ಸಂಸ್ಥೆಗಳ ಮೂಲಕ ಅದಕ್ಕೊಂದು ತಾತ್ವಿಕತೆ ಒದಗಿಸಿದವರು. 'ಕನ್ನಡಕುಲ ಪುರೋಹಿತ'ರೆಂದು ಹೆಸರಾದವರು

೪. ಸರ್.ಎಂ.ವಿಶ್ವೇಶ್ವರಯ್ಯ

ಮೈಸೂರು ಸಂಸ್ಥಾನದ ದಿವಾನರಾಗಿ ಆಧುನಿಕ ಕರ್ನಾಟಕದ ಅಭಿವೃದ್ಧಿಗೆ ಭದ್ರವಾದ ಅಸ್ತಿವಾರ ಹಾಕಿದ ಮೇಧಾವಿ ತಂತ್ರಜ್ಞ ಹಾಗೂ ದಕ್ಷ ಆಡಳಿತಗಾರ. ಕೈಗಾರಿಕೆ, ನೀರಾವರಿ, ವಿದ್ಯುತ್, ಶಿಕ್ಷಣ, ಬ್ಯಾಂಕೋದ್ಯಮ, ಭಾಷೆ, ಸಂಸ್ಕೃತಿ– ಹೀಗೆ ಎಲ್ಲ ಕ್ಷೇತ್ರಗಳ ಕಡೆ ಗಮನವಿಟ್ಟು ಹೊಸ ಅಭಿವೃದ್ಧಿ ಪರಿಕಲ್ಪನೆಯನ್ನು ಪರಿಚಯಿಸಿ ಜಾರಿಗೆ ತಂದ ಧೀಮಂತ.

ಇವರ ಹಿಂದೆ ರಾಜರ್ಷಿ ನಾಲ್ವಡಿ ಕೃಷ್ಣರಾಜ ಒಡೆಯರಿದ್ದರೆ, ಮುಂದೆ ದಿವಾನ್ ಮಿರ್ಜಾ ಇಸ್ಮಾಯಿಲರಿದ್ದಾರೆ.

೫.ಬಿ.ಎಂ.ಶ್ರೀಕಂಠಯ್ಯ

ತಮ್ಮ 'ಇಂಗ್ಲಿಷ್ ಗೀತೆಗಳು' ಮೂಲಕ ಕನ್ನಡ ಸಾಹಿತ್ಯಕ್ಕೆ ಆಧುನಿಕ ನೋಟ ಒದಗಿಸಿದ ಇಂಗ್ಲಿಷ್ ಅಧ್ಯಾಪಕ. ಕನ್ನಡ ಸಾಹಿತ್ಯ ಪಠ್ಯಕ್ರಮ ಹಾಗೂ ಬೋಧನೆಯಲ್ಲೂ ಹೊಸ ಹಾದಿ ತೆರೆದ ಆಧುನಿಕ ಗುರುವರ್ಯ. ಕನ್ನಡ ನಾಡಲ್ಲಿ ಕನ್ನಡ ತಲೆ ಎತ್ತಬೇಕಾದ ಅಗತ್ಯವನ್ನು, ಬಗೆಯನ್ನು ತಮ್ಮ ಅನಾರೋಗ್ಯ ಹಾಗೂ ಕೌಟುಂಬಿಕ ಸಮಸ್ಯೆಗಳ ನಡುವೆಯೂ ನಾಡಿನಾದ್ಯಂತ ಸಂಚರಿಸಿ ಪ್ರಚಾರ ಮಾಡಿದ ಕನ್ನಡದ ಕಟ್ಟಾಳು. ಸಾಹಿತ್ಯ ಪರಿಷತ್ತಿಗೊಂದು ದಿಕ್ಕು–ದೆಸೆ ನೀಡಿದ ಸಾಹಿತ್ಯ ಆಡಳಿತಗಾರ.

೬. ಡಿ.ವಿ.ಗುಂಡಪ್ಪ

ಹಳೆಯ ಮೈಸೂರು ಸಂಸ್ಥಾನ ಹಾಗೂ ಆಧುನಿಕ ಕರ್ನಾಟಕದ ಸಾಹಿತ್ಯ, ಸಂಸ್ಕೃತಿ, ಪತ್ರಿಕೋದ್ಯಮ, ಆಡಳಿತ ಹಾಗೂ ರಾಜಕಾರಣ–ಈ ಎಲ್ಲ ಕ್ಷೇತ್ರಗಳಲ್ಲಿನ ತಮ್ಮ ಅನನ್ಯ ಪ್ರತಿಭೆ ಮತ್ತು ಪರಿಶ್ರಮಗಳ ಮೂಲಕ ಬಹುಮುಖ ವ್ಯಕ್ತಿತ್ವವಾಗಿ ರೂಪುಗೊಂಡಿದ್ದ ಡಿ.ವಿ.ಜಿ., ಮುಖ್ಯವಾಗಿ ತಮ್ಮ ಗೋಖಲೆ ಸಾರ್ವಜನಿಕ ಸಂಸ್ಥೆ, 'ಮಂಕುತಿಮ್ಮನ ಕಗ್ಗ', 'ಭಗವದ್ಗೀತಾ ತಾತ್ಪರ್ಯ' ಹಾಗೂ 'ಜ್ಞಾಪಕ ಚಿತ್ರಶಾಲೆ' ಸಂಪುಟಗಳ ಮೂಲಕ ಕನ್ನಡವನ್ನು, ಕನ್ನಡಿಗನನ್ನು ಬೆಳೆಸಿದ್ದಾರೆ.

೭. ಭಾಲ್ಕಿ ಚೆನ್ನಬಸವ ಪಟ್ಟದೇವರು

ಕಲ್ಯಾಣದ ನಾಡಲ್ಲಿ ಮರಾಠಿ–ಉರ್ದು ದಬ್ಬಾಳಿಕೆಗೆ ಸಿಕ್ಕಿ ಕನ್ನಡ ಅಳಿದೇ ಹೋಗುವ ಆತಂಕದಲ್ಲಿದ್ದಾಗ, ಕನ್ನಡದ ಕೆಲಸವನ್ನು ಧರ್ಮದ ಕೆಲಸದಂತೆ ಕೈಗೊಂಡವರು ಭಾಲ್ಕಿಯ ಪಟ್ಟದೇವರು. ಇವರು, ತಮ್ಮ ಮಠದ ಸುಪರ್ದಿಯಲ್ಲಿ ಕನ್ನಡ ಶಾಲೆಗಳನ್ನು ತೆರೆದು ನಡೆಸುವ ಮೂಲಕ ಕರ್ನಾಟಕದ ಶಿರೋಭಾಗವನ್ನು ಕನ್ನಡಕ್ಕಾಗಿ ರಕ್ಷಿಸಿದ ಐತಿಹಾಸಿಕ ಸಾಹಸ ಮಾಡಿದ ತೆರೆಮರೆಯ ನುಡಿ ಸೇವಕರು.

ಇವರೊಂದಿಗೆ ನೆನಪಾಗುವುದು ಹಿಂದೂ–ಮುಸ್ಲಿಂ ಐಕ್ಯತೆಯ ಆರಾಧನ ಕೇಂದ್ರವಾಗಿರುವ ಸಾವಳಗಿ ಶಿವಲಿಂಗೇಶ್ವರ ಮಠ.

೮. ಗೋವಿಂದ ಪೈ

ತುಳು–ಕೊಂಕಣಿ–ಮಲಯಾಳ ಭಾಷಾ ಸಮುದಾಯಗಳ ಮಧ್ಯೆ ಹುಟ್ಟಿ ಬೆಳೆದರೂ, ಕನ್ನಡ ಅಭಿಮಾನವನ್ನು ತಮ್ಮ ಸಾಹಿತ್ಯಕ–ಸಾಂಸ್ಕೃತಿಕ ಸಂಶೋಧನೆಗಳ ಮೂಲಕ ಮೆರೆದ ಗೋವಿಂದ ಪೈಗಳು ಕನ್ನಡ ಭಾಷೆಯ ಮೊದಲ 'ರಾಷ್ಟ್ರಕವಿ'. ಕನ್ನಡ ಭಾಷೆಯ ಪುರಾತನತೆ ಹಾಗೂ ಕನ್ನಡ ರಾಜರ ಇತಿಹಾಸವನ್ನು ತಮ್ಮದೇ ರೀತಿಯಲ್ಲಿ ಪುನಾರಚಿಸಿ ಕನ್ನಡಿಗರಲ್ಲಿ ಆತ್ಮವಿಶ್ವಾಸ ತುಂಬಿದ ಪೈಗಳು, ತಾವು ಹುಟ್ಟಿ ಬಾಳಿದ ಮಂಜೇಶ್ವರ ಕರ್ನಾಟಕಕ್ಕೆ ಸೇರದೇ ಹೋದ ಗಾಢ ದುಃಖದಲ್ಲೇ ಮರಣ ಹೊಂದಿದರು.

೯. ಮಾಸ್ತಿ ವೆಂಕಟೇಶ ಅಯ್ಯಂಗಾರ್

ಕನ್ನಡ ಸಣ್ಣಕತೆಗಳ ಪಿತಾಮಹ. ಅಷ್ಟೇ ಅಲ್ಲ, ಸಾಹಿತ್ಯದ ಸರ್ವಕ್ಷೇತ್ರಗಳಲ್ಲೂ ಸೇವೆ ಸಲ್ಲಿಸಿ ಕನ್ನಡ ಸಾಹಿತ್ಯವನ್ನು ಸಮೃದ್ಧಗೊಳಿಸಿದ ಸಾಧಕ. ಕಿರಿಯ ಸಾಹಿತಿಗಳಿಗೆ, ಕನ್ನಡ ನುಡಿ ಸೇವಕರಿಗೆ ಸರ್ವ ರೀತಿಯ ಸಹಾಯ ನೀಡಿ ಬೆಳೆಸಿದ ಹಿರಿಯರು. ತಮ್ಮ ಉನ್ನತ ಸರ್ಕಾರಿ ಸೇವೆಯಿಂದ ಸ್ವಯಂ ನಿವೃತ್ತಿ ಪಡೆದ ನಂತರ ಕನ್ನಡನಾಡು ನುಡಿಯ ಉತ್ಕರ್ಷಕ್ಕೇ ತಮ್ಮ ಬದುಕನ್ನು ಮುಡಿಪಾಗಿಟ್ಟವರು. ಜ್ಞಾನಪೀಠ ಪ್ರಶಸ್ತಿ ವಿಜೇತರು.

೧೦. ದ.ರಾ. ಬೇಂದ್ರೆ

'ಅಂಬಿಕಾತನಯದತ್ತ'ನಾಗಿ ಕನ್ನಡ ಕಾವ್ಯಕ್ಕೊಂದು ಹೊಸ ಶೋಭೆ ತಂದುಕೊಟ್ಟ ದತ್ತಾತ್ರೇಯ ರಾಮಚಂದ್ರ ಬೇಂದ್ರೆ ಕನ್ನಡದ ಶಬ್ದ ಗಾರುಡಿಗ, ಸಹಜ ಕವಿ. ಕನ್ನಡದ ಅವಧೂತನಂತೆ ಕನ್ನಡ ಕಾವ್ಯ, ನಾಟಕ, ಮೀಮಾಂಸೆ ಹಾಗೂ ಅವೆಲ್ಲವುಗಳಿಗಿಂತ ಹೆಚ್ಚಾಗಿ ತಮ್ಮ ಮಾಂತ್ರಿಕ ಮಾತುಗಾರಿಕೆಯ ಮೂಲಕ ಕನ್ನಡ ಜನಮನವನ್ನು ಹುಚ್ಚೆಬ್ಬಿಸಿದ್ದ ಬೇಂದ್ರೆ, ಜ್ಞಾನಪೀಠ ಪ್ರಶಸ್ತಿ ಪಡೆದು ಅದರ ಗೌರವವನ್ನು ಹೆಚ್ಚಿಸಿದ್ದರು!

ಇವರೊಂದಿಗೇ ಒಂದಿಷ್ಟು ದೂರದಲ್ಲಿ ನೆನಪಾಗುವವರು ಇಂದಿನ ಕವಿ, ನಾಟಕಕಾರ ಚಂದ್ರಶೇಖರ ಕಂಬಾರರು.

೧೧. ಕೆ.ಶಿವರಾಮ ಕಾರಂತ

ಕನ್ನಡ ವೈಚಾರಿಕತೆಯ ಧೀಮಂತ ಪ್ರತಿನಿಧಿಯಂತಿದ್ದ ಕಾರಂತರ ಬಾಳ್ವೆಯೇ ಒಂದು ಪ್ರಯೋಗಶಾಲೆಯಂತಿತ್ತು. ಆಧುನಿಕ ಮನುಷ್ಯ ಏನೆಲ್ಲ ಸೃಜನಶೀಲ ಚಟುವಟಿಕೆಗಳಲ್ಲಿ ತೊಡಗಿಕೊಳ್ಳಬಹುದೋ, ಸರಿ ಸುಮಾರು ಆ ಎಲ್ಲ ಚಟುವಟಿಕೆಗಳಲ್ಲಿ ತೊಡಗಿಕೊಂಡು, ಬಾಳ್ವೆಯೇ ಬೆಳಕೆಂದು ತನ್ನ ಅನುಭವಗಳ ಮೂಲಕವೇ ಕಂಡುಕೊಂಡ ನಮ್ಮ ಕಾಲದ ಚಾರ್ವಾಕ ಮುನಿ! ಸಹಜವಾಗಿಯೇ ತಮ್ಮ ಸಾಹಿತ್ಯ ಸಾಧನೆಗಾಗಿ–ವಿಶೇಷವಾಗಿ ಕಾದಂಬರಿಕಾರರಾಗಿ–ಜ್ಞಾನಪೀಠ ಪ್ರಶಸ್ತಿ ಪಡೆದಿದ್ದ ಕಾರಂತರು, ಕನ್ನಡಿಗರಿಗೆ ಕನ್ನಡದ ಒಂದು ವಿಶಿಷ್ಟ ಬದುಕಿನ ಮಾದರಿಯಾಗಿ ಬಹುಕಾಲ ನೆನಪಿನಲ್ಲಿ ಉಳಿಯುವರು.

೧೨. ಕುವೆಂಪು

ಆಧ್ಯಾತ್ಮಿಕತೆ ಹಾಗೂ ವೈಚಾರಿಕತೆಗಳು ಬೇರೆ ಬೇರೆಯೇ ಅಲ್ಲ ಎಂದು ತಮ್ಮ ಬದುಕು ಮತ್ತು ಬರಹಗಳು ಸಾಧಿಸಿ ತೋರಿಸಿದ ಆಧುನಿಕ 'ಶೂದ್ರತಪಸ್ವಿ'ಯಾದ ಕೆ.ವಿ.ಪುಟ್ಟಪ್ಪ; ಕುವೆಂಪುವಾಗಿ ಮೈದಳೆದು ಕನ್ನಡಿಗರನ್ನು ಎಚ್ಚರಗೊಳಿಸಿದ ಬಗೆಯನ್ನೇ ಆಧುನಿಕ ಕನ್ನಡ ಸಂಸ್ಕೃತಿ ಚರಿತ್ರೆ ಎಂದು ಕರೆಯಬಹುದಾದಷ್ಟು ಯುಗ ಪ್ರವರ್ತಕವಾದ ಹೆಸರು. ಕನ್ನಡ ಪ್ರಜ್ಞೆ, ಇವರ ಸಾಹಿತ್ಯ ನಿರ್ಮಾಣ ಮತ್ತು ವ್ಯಕ್ತಿತ್ವ ನಿರೂಪಣೆಯಿಂದ ಬಹುಮುಖಿ ಸತ್ಯ ಹಾಗೂ ಸತ್ವವನ್ನು ಪಡೆದುಕೊಂಡಿತು. ಜ್ಞಾನಪೀಠ ಪ್ರಶಸ್ತಿ ಪಡೆದ ಮೊದಲ ಕನ್ನಡ ಸಾಹಿತಿ ಎನಿಸಿದ ಕುವೆಂಪು ಅವರ 'ರಾಮಾಯಣ ದರ್ಶನಂ' ಹಾಗೂ 'ಮಲೆಗಳಲ್ಲಿ ಮದುಮಗಳು' ಆಧುನಿಕ ಕನ್ನಡ ಸಂಸ್ಕೃತಿಯ ನಿಜವಾದ ಮಹಾಕಾವ್ಯಗಳೆನಿಸಿಕೊಂಡಿವೆ.

೧೩. ಬೆಳ್ಳಾವೆ ವೆಂಕಟ ನಾರಾಯಣಪ್ಪ

ಬೆಂಗಳೂರು ಸೆಂಟ್ರಲ್ ಕಾಲೇಜಿನಲ್ಲಿ ಭೌತಶಾಸ್ತ್ರದ ಅಧ್ಯಾಪಕರಾಗಿದ್ದ ಇವರು ಕನ್ನಡದಲ್ಲಿ ವಿಜ್ಞಾನ ಬರವಣಿಗೆಯ ಆದ್ಯ ಪ್ರವರ್ತಕರು. ವಿಜ್ಞಾನ ಸಾಹಿತ್ಯ ಪ್ರಚಾರಕ್ಕೆಂದು ಕಳೆದ ಶತಮಾನದ ಮೂವತ್ತರ ದಶಕದಲ್ಲಿಯೇ 'ಕರ್ನಾಟಕ ವಿಜ್ಞಾನ ಸಮಿತಿ'ಯನ್ನು ರಚಿಸಿಕೊಂಡು, ಒಂದು ವರ್ಷದ ಕಾಲ 'ವಿಜ್ಞಾನ' ಎಂಬ ಮಾಸಿಕವನ್ನು ನಡೆಸಿದರು. ಉನ್ನತ ವಿಜ್ಞಾನವನ್ನೂ ಕನ್ನಡದಲ್ಲಿ ಬರೆಯಬಹುದು; ಬೋಧಿಸಬಹುದು ಕೂಡಾ ಎಂದು ನಂಬಿದ್ದ ಬೆಳ್ಳಾವೆಯವರು ಸೇವಾ ಸ್ವಯಂ ನಿವೃತ್ತಿ ಪಡೆದು, ಕನ್ನಡದ ಈ ಕೆಲಸಕ್ಕೆ ತೊಡಗಿಕೊಂಡ ಹಿರಿಯ ನುಡಿ ಅಭಿಮಾನಿ.

೧೪. ಗುಬ್ಬಿ ವೀರಣ್ಣ

ಕನ್ನಡವೃತ್ತಿ ರಂಗಭೂಮಿಯನ್ನು ಆಧುನಿಕಗೊಳಿಸಿ ಅದಕ್ಕೊಂದು ಯಶಸ್ವಿ ವ್ಯಾಪಾರೋದ್ಯಮ ವನ್ನಾಗಿಯೂ ಬೆಳೆಸಿದ ಗುಬ್ಬಿ ವೀರಣ್ಣ, ತಮ್ಮ ಶ್ರೀ ಚನ್ನಬಸವೇಶ್ವರ ನಾಟಕ ಮಂಡಲಿ ಮೂಲಕ ಅನೇಕ ಪ್ರತಿಭಾವಂತ ನಾಟಕಕಾರರು, ನಟ ನಟಿಯರು, ನಿರ್ದೇಶಕರು, ಸಂಗೀತಗಾರರು ಹಾಗೂ ರಂಗತಜ್ಞರನ್ನು ಬೆಳಕಿಗೆ ತಂದವರು. ಚಲನಚಿತ್ರ ರಂಗವನ್ನು ಪ್ರವೇಶಿಸಿ ಅದನ್ನು ಬೆಳೆಸಿದವರು. ಕರ್ನಾಟಕದಾದ್ಯಂತ ನಾಟಕ ಅಭಿರುಚಿಯನ್ನು ಒಂದು ಆಂದೋಲನವನ್ನಾಗಿ ಬೆಳೆಸಿದ ಕೀರ್ತಿ ವೀರಣ್ಣನವರಿಗೆ ಸಲ್ಲುತ್ತದೆ.

ಇವರೊಂದಿಗೆ ನೆನಪಾಗುವವರು ಮರಾಠಿ ರಂಗಮಂಚದ ಆಕರ್ಷಣೆಗಳೆದುರು ಕನ್ನಡ ಕಳೆದು ಹೋಗದಂತೆ ತಮ್ಮದೇ ನಾಟಕ ಮಂಡಳಿ ಕಟ್ಟಿ ಉತ್ತರ ಕರ್ನಾಟಕದಲ್ಲಿ ಕನ್ನಡ ರಂಗಭೂಮಿಯನ್ನು ಬೆಳೆಸಿದ ಏಣಗಿ ಬಾಳಪ್ಪ.

೧೫. ಕೆ.ವೆಂಕಟಪ್ಪ

ಚಿತ್ರಕಲೆ, ಶಿಲ್ಪ ಹಾಗೂ ವೀಣಾವಾದನ–ಈ ಮೂರೂ ಕ್ಷೇತ್ರಗಳಲ್ಲಿ ತಮ್ಮ ಪ್ರತಿಭೆ ಮೆರೆದ ಕೆ.ವೆಂಕಟಪ್ಪ ಹಲವಾರು ಶೈಲಿ–ಸಂಪ್ರದಾಯಗಳ ಕಲಾಭ್ಯಾಸ ಮಾಡಿದ್ದರೂ, ಕನ್ನಡ–ಕರ್ನಾಟಕದ ಛಾಪನ್ನು ತಮ್ಮ ಅಭಿವ್ಯಕ್ತಿಯಲ್ಲಿ ಸಾಧಿಸಿಕೊಂಡು ಒಂದು ಪರಂಪರೆಯನ್ನೇ ಸೃಷ್ಟಿಸಿದವರು. ಹೊರಗಡೆಯ ಅನೇಕ ಆಹ್ವಾನಗಳನ್ನು ನಿರಾಕರಿಸಿ ಮೈಸೂರಿನಲ್ಲೇ ಉಳಿದು ಕರ್ನಾಟಕ ಚಿತ್ರಕಲೆಗೊಂದು ಹೊಸ ಆಯಾಮ ನೀಡಿದವರು.

ಇವರೊಂದಿಗೆ ನೆನಪಾಗುವವರು ಮುಂಬೈನಲ್ಲಿ ನೆಲೆಸಿದ್ದರೂ ಕನ್ನಡದ್ದೆನ್ನಬಹುದಾದ ಚಿತ್ರಕಲೆ ಬೆಳೆಸಿದ ಕೆ.ಕೆ. ಹೆಬ್ಬಾರರು.

೧೬. ಕೆ. ವೆಂಕಟಲಕ್ಷ್ಮಮ್ಮ

ಕರ್ನಾಟಕದ ನೃತ್ಯ ಪರಂಪರೆಯನ್ನು ತಮ್ಮ ಪ್ರತಿಭೆ–ಪರಿಶ್ರಮಗಳ ಮೂಲಕ ಉಳಿಸಿ ಬೆಳೆಸಿದ ಇವರು ಮೂಲತಃ ಲಂಬಾಣಿ ತಾಂಡ್ಯವೊಂದರಿಂದ ಬಂದವರು! ಆಗಿನ ಮೈಸೂರು ಸಂಸ್ಥಾನದಲ್ಲಿ ನಾಟ್ಯ ಸರಸ್ವತಿ ಎಂದೇ ಹೆಸರಾಗಿದ್ದ ಜೆಟ್ಟತಾಯಮ್ಮ ಅವರಲ್ಲಿ ನೃತ್ಯಾಭ್ಯಾಸ ಮಾಡಿದ ವೆಂಕಟಲಕ್ಷ್ಮಮ್ಮ, ನಾಲ್ವಡಿ ಕೃಷ್ಣರಾಜ ಒಡೆಯರರ ಆಸ್ಥಾನ ವಿದುಷಿಯಾಗಿ, ಭರತ ನಾಟ್ಯಕಲೆಯ ಮೈಸೂರು ಸಂಪ್ರದಾಯವನ್ನು ಬೆಳೆಸಿದರು. ನಂತರ ತಮ್ಮದೇ ನಾಟ್ಯ ಶಾಲೆಯ ಮೂಲಕ, ತದನಂತರ ಲಲಿತಾ ಕಲಾ ಕಾಲೇಜಿನ ಅಧ್ಯಾಪಕಿಯಾಗಿ ಹಲವು ದೇಶಿ–ವಿದೇಶಿ ಶಿಷ್ಯ–ಶಿಷ್ಯೆಯರನ್ನು ತಯ್ಯಾರು ಮಾಡಿ, ಕನ್ನಡ ನಾಟ್ಯ ಪರಂಪರೆಯನ್ನು ಊರ್ಜಿತಗೊಳಿಸಿದರು.

ಇವರೊಂದಿಗೆ ನೆನಪಾಗುವವರು ಮೈಸೂರಿನಲ್ಲಿ ನೆಲೆಸಿ, ತಾವು ಸ್ಥಾಪಿಸಿದ ಗುರುಕುಲ ಶೈಲಿಯ ಶಿಲ್ಪಶಾಲೆಯ ಮೂಲಕ ಕರ್ನಾಟಕದ ಶಿಲ್ಪ ಪರಂಪರೆಯನ್ನು ಉಳಿಸಿ ಬೆಳೆಸಿದ ಅಭಿನವ ಜಕಣಾಚಾರ್ಯರೆಂದೇ ಹೆಸರಾಗಿದ್ದ ಸಿದ್ಧಲಿಂಗ ಸ್ವಾಮಿಗಳು.

೧೭. ರೆವರೆಂಡ್ ಉತ್ತಂಗಿ ಚೆನ್ನಪ್ಪ

ಕ್ರೈಸ್ತ ಮತ ಉಪದೇಶಕರಾಗಿದ್ದ ಇವರು, ಕನ್ನಡ ಕ್ರೈಸ್ತ ಸಂಸ್ಕೃತಿಯ ಅತ್ಯುತ್ತಮ ಪ್ರತೀಕದಂತಿದ್ದಾರೆ. ಕನ್ನಡ ಜನಜೀವನದಲ್ಲಿ ಹಾಸುಹೊಕ್ಕಾಗಿ ಹೋಗಿರುವ ಸರ್ವಜ್ಞನ ವಚನಗಳನ್ನು ಮೊದಲ ಬಾರಿಗೆ ಶಾಸ್ತ್ರೀಯವಾಗಿ ಸಂಪಾದಿಸಿಕೊಟ್ಟ ಉತ್ತಂಗಿಯವರು, ಆ ಮೂಲಕ ಸರ್ವಜ್ಞನನ್ನು ಐತಿಹಾಸಿಕ ಹಿನ್ನೆಲೆಯೊಂದಿಗೆ ಕನ್ನಡಿಗರಿಗೆ ಸಮಗ್ರವಾಗಿ ಪರಿಚಯ ಮಾಡಿಕೊಟ್ಟವರು. ತಿಳಿಗನ್ನಡದಲ್ಲಿ ಕ್ರೈಸ್ತ ಮತದ ತತ್ವವಿವೇಚನೆಯ ಹಾಗೂ ಇತಿಹಾಸ-ಪುರಾಣ ಗ್ರಂಥಗಳನ್ನು ರಚಿಸಿರುವ ಮತ್ತು ಅನುವಾದಿಸಿರುವ ಚೆನ್ನಪ್ಪ, ಆವರೆಗೆ ಅಪ್ರಖ್ಯಾತರಾಗಿದ್ದ ಹಲವು ಶಿವಶರಣರ ವಚನಗಳನ್ನೂ ಸಂಪಾದಿಸಿ ಕೊಟ್ಟಿದ್ದಾರೆ.

೧೮. ಟಿ.ಪಿ. ಕೈಲಾಸಂ

ಕನ್ನಡದ-ನಿರ್ದಿಷ್ಟವಾಗಿ ಹಳೇ ಮೈಸೂರಿನ ಕನ್ನಡಿಗರ-ಆಡು ಮಾತಿನ ಸೊಗಸನ್ನು ಸೂರೆ ಮಾಡಿದ ಇವರು, ತಮ್ಮ ನಾಟಕ-ಪ್ರಹಸನ-ಹಾಡು-ಚಟಾಕಿ-ಭಾಷಣಗಳ ಮೂಲಕ ಕನ್ನಡಿಗರಲ್ಲಿ ಒಂದು ವಿಶಿಷ್ಟ ನೆಲೆಯ ಆಧುನಿಕತೆಯ ಅರಿವನ್ನು ಮೂಡಿಸಿದವರು. ಪಾಶ್ಚಾತ್ಯರ ವೈಚಾರಿಕತೆಯನ್ನು ಭಾರತೀಯ ಮೌಲ್ಯ ಪರಂಪರೆಯೊಂದಿಗೆ ಸಮನ್ವಯಿಸಿದ ಪ್ರಯತ್ನ ವೊಂದೆಂಬಂತೆ ತೋರುವ ಕೈಲಾಸಂರ ಕರ್ತೃತ್ವ ಶಕ್ತಿ, ಕನ್ನಡಕ್ಕೇ ಹೊಸದೆನ್ನುವಂತಹುದು.

ಇವರೊಂದಿಗೇ ನೆನಪಾಗುವವರು, 'ಭಯಾಗ್ರಫಿ'ಯ ಬೀಚಿ ಹಾಗೂ ಸ್ವಲ್ಪ ದೂರದಲ್ಲೆಂಬಂತೆ 'ಕೊರವಂಜಿ'ಯ ರಾಶಿ ಮತ್ತು ಲಲಿತ ಪ್ರಬಂಧಕಾರ ಎ.ಎನ್. ಮೂರ್ತಿರಾಯರು.

೧೯. ಗೊರೂರು ರಾಮಸ್ವಾಮಿ ಅಯ್ಯಂಗಾರ್

ಮುಖ್ಯವಾಗಿ ತಮ್ಮ ವಿನೋದ ಬರಹಗಳ ಮೂಲಕ ಕನ್ನಡ ಸಾಹಿತ್ಯಕ್ಕೊಂದು ಹೊಸ ಲವಲವಿಕೆ ತಂದುಕೊಟ್ಟ ಗೊರೂರರು, ಆ ಮೂಲಕ ಕನ್ನಡಿಗರಲ್ಲಿ ವಾಚನಾಭಿರುಚಿಯನ್ನು ಬೆಳೆಸಿದವರು. ಹಾಗೇ, ಗಾಂಧಿಯುಗದ ಮೌಲ್ಯಗಳನ್ನು ತಮ್ಮ ಬದುಕು ಬರಹದ ಮೂಲಕ ಕನ್ನಡ ಜನಜೀವನದಲ್ಲಿ ಬಿತ್ತಿದವರು. ಹಳೇ ಮೈಸೂರಿನ ಹಳ್ಳಿಯ ಬದುಕಿನ ಸೌಂದರ್ಯವನ್ನು, ಜನಪದ ಸಾಹಿತ್ಯದ ಶ್ರೀಮಂತಿಕೆಯನ್ನು ಕನ್ನಡಿಗರಿಗೆ ಪರಿಚಯಿಸಿದವರು.

ಇವರೊಂದಿಗೆ ನೆನಪಾಗುವವರು ಕನ್ನಡ ಜನಸಾಮಾನ್ಯರಿಗೆ ಗಾಂಧಿ ಸಾಹಿತ್ಯವನ್ನು ತಲುಪಿಸಿದ ಹಾಗೂ ಕನ್ನಡ ಗದ್ಯಕ್ಕೆ ಹೊಸ ಶೋಭೆ ಒದಗಿಸಿದ ಸಿದ್ಧವ್ವನಹಳ್ಳಿ ಕೃಷ್ಣಶರ್ಮ.

೨೦. ಎಸ್.ನಿಜಲಿಂಗಪ್ಪ

ಆಧುನಿಕ ಕರ್ನಾಟಕದ ಪಿತಾಮಹರೆನಿಸಿದ ಸಿದ್ಧನಹಳ್ಳಿ ನಿಜಲಿಂಗಪ್ಪ, ಸ್ವಾತಂತ್ರ್ಯ

ಹೋರಾಟ ಹಾಗೂ ಕರ್ನಾಟಕ ಏಕೀಕರಣಗಳೆರಡರಲ್ಲೂ ದುಡಿದು, ಎರಡು ಬಾರಿ ರಾಜ್ಯದ ಮುಖ್ಯಮಂತ್ರಿಯಾಗಿ ಕರ್ನಾಟಕದ ಸರ್ವತೋಮುಖ ಅಭಿವೃದ್ಧಿಗಾಗಿ ಶ್ರಮಿಸಿದ ಸರಳ ಬದುಕಿನ ರಾಜಕಾರಣಿ. ನಾಡು ನುಡಿಯ ಬಗ್ಗೆ ಅಪಾರ ಪ್ರೇಮವನ್ನಿಟ್ಟುಕೊಂಡಿದ್ದ ಇವರು ರಾಷ್ಟ್ರಮಟ್ಟದ ರಾಜಕಾರಣಿಯಾದರೂ, ಕನ್ನಡ ಸಂಸ್ಕೃತಿಯಲ್ಲಿ ಬೇರನ್ನಿಳಿಸಿಕೊಂಡವರು. ವೀರೇಂದ್ರ ಪಾಟೀಲ್ ಹಾಗೂ ರಾಮಕೃಷ್ಣ ಹೆಗಡೆಯವರಂತಹ ಹೊಸ ಭರವಸೆಗಳ ರಾಜಕಾರಣಿಗಳನ್ನು ತಯ್ಯಾರು ಮಾಡಿದವರು.

ಇವರೊಂದಿಗೇ ನೆನಪಾಗುವವರು, ಇವರ ರಾಜಕೀಯ ಶತ್ರುಗಳಂತಿದ್ದ ದಿಟ್ಟ ರಾಜಕಾರಣಿ ಕೆಂಗಲ್ ಹನುಮಂತಯ್ಯ ಹಾಗೂ ಸ್ವಚ್ಛ ರಾಜಕಾರಣಿ ಕಡಿದಾಳ್ ಮಂಜಪ್ಪ.

೨೧. ಶಾಂತವೇರಿ ಗೋಪಾಲಗೌಡ

ಮಲೆನಾಡಿನ ಮೂಲೆಯೊಂದರಲ್ಲಿ ದನಕಾಯುವ ಹುಡುಗನಾಗಿದ್ದ ಗೋಪಾಲ, ಕರ್ನಾಟಕದ ಧೀಮಂತ ರಾಜಕಾರಣಿ ಶಾಂತವೇರಿ ಗೋಪಾಲಗೌಡರಾದ ಕಥೆಯೇ ಕರ್ನಾಟಕದ ಸಮಾಜವಾದಿ ಚಳುವಳಿಯ ಕಥೆಯೂ ಆಗಿದೆ ಎನ್ನುವಷ್ಟರಮಟ್ಟಿಗೆ ಇವರು ಆಧುನಿಕ ಕನ್ನಡ ಸಂಸ್ಕೃತಿಯ ದಂತಕಥೆಗಳಲ್ಲೊಬ್ಬರಾಗಿದ್ದಾರೆ. ತಮ್ಮದೊಂದು ಕಿರಿಯ ಗೆಳೆಯರ ಬಳಗದ ಮೂಲಕ ಸಮಾನತೆಯ ತತ್ವದ ಪರಿಮಳವನ್ನು ಕರ್ನಾಟಕದಾದ್ಯಂತ ಪಸರಿಸಿದ ಗೋಪಾಲಗೌಡರು, ಕನ್ನಡದ ಜನಪದ ವಿವೇಕದ ಹಾಗೂ ಅದಮ್ಯ ಕ್ರಿಯಾಶೀಲತೆಯ ಪ್ರತೀಕವಾಗಿದ್ದಾರೆ.

ಇವರೊಂದಿಗೇ ನೆನಪಾಗುವವರು, ಕರ್ನಾಟಕದ ದಿಟ್ಟ ಹಾಗೂ ಸ್ವಚ್ಛ ರಾಜಕಾರಣಿಗಳಾದ ಎಸ್.ಶಿವಪ್ಪ ಹಾಗೂ ಜಗಳೂರು ಇಮಾಮ್.

೨೨. ಡಿ.ದೇವರಾಜು ಅರಸು

ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದ ಅತ್ಯಂತ ಪ್ರಗತಿಪರ ರಾಜಕಾರಣಿ. ಮುಖ್ಯಮಂತ್ರಿಯಾಗಿ ಕರ್ನಾಟಕವನ್ನು ಸರ್ವ ರೀತಿಯಲ್ಲಿ ಪ್ರಗತಿಪರವಾಗಿ ಮುನ್ನಡೆಸಿದ ಅರಸು, ಎಲ್.ಜಿ.ಹಾವನೂರರ ಸಹಕಾರದೊಂದಿಗೆ ರಾಜಕೀಯ ಹಾಗೂ ಸಾಮಾಜಿಕ ಕ್ಷೇತ್ರಗಳಲ್ಲಿ 'ಸಾಮಾಜಿಕ ನ್ಯಾಯ'ದ ಹರಿಕಾರರೆನಿಸಿಕೊಂಡರು. ಗೋಪಾಲಗೌಡರು ಕಂಡ 'ಉಳುವವನೇ ನೆಲದೊಡೆಯ' ಕನಸನ್ನು ದೊಡ್ಡ ಪ್ರಮಾಣದಲ್ಲಿ ನನಸು ಮಾಡಿದವರು. ಆದರೆ ಕೊನೆಯಲ್ಲಿ ಕರ್ನಾಟಕದ ಪ್ರಗತಿಪರ ರಾಜಕಾರಣದ ದುರಂತ ನಾಯಕನೆನಿಸಿಕೊಂಡರು.

೨೩. ಬಿ.ಎನ್.ಗುಪ್ತ

ಕನ್ನಡ ಪತ್ರಿಕೋದ್ಯಮಕ್ಕೆ ಜನಪರತೆಯ ಆಯಾಮ ನೀಡಿದ ಗುಪ್ತ, 'ಪ್ರಜಾಮತ', 'ಜನವಾಣಿ' ಹಾಗೂ 'ಜನಪ್ರಗತಿ'ಗಳ ಪ್ರಕಾಶಕರಾಗಿ/ಸಂಪಾದಕರಾಗಿ ಅಭಿವೃದ್ಧಿ

ಪತ್ರಿಕೋದ್ಯಮದಲ್ಲಿ ಸಾಮಾಜಿಕ ನ್ಯಾಯದ ಬೀಜ ಬಿತ್ತಿದವರು. ತಮ್ಮ ಪತ್ರಿಕೆಗಳ ಹೊಸ ಆಲೋಚನಾಕ್ರಮದಿಂದಾಗಿ ಬ್ರಿಟಿಷ್ ಪ್ರಭುತ್ವದಿಂದಲೂ, ಮೈಸೂರು ಸಂಸ್ಥಾನದ ಪ್ರಭುತ್ವದಿಂದಲೂ ಬೆದರಿಕೆಗಳನ್ನು ಎದುರಿಸಿದ ಗುಪ್ತ; ಅನೇಕ ಪ್ರಗತಿಪರ ಚಿಂತನೆಯ ತರುಣ ಪತ್ರಕರ್ತರನ್ನು ತಯ್ಯಾರು ಮಾಡಿ, ನವೀನ ರೀತಿಯ ಬರಹ ಹಾಗೂ ಅಂಕಣಗಳ ಮೂಲಕ ಹೊಸರುಚಿ ಅಭಿರುಚಿಗಳನ್ನು ಬೆಳೆಸಿ, ಕನ್ನಡ ಪತ್ರಿಕೋದ್ಯಮವನ್ನು ಆರಂಭದಿಂದಲೂ ಆವರಿಸಿದ್ದ ಸಾಂಪ್ರದಾಯಿಕ ಜಡತೆಗೆ ಪೆಟ್ಟು ಕೊಟ್ಟರು.

೨೪. ಪಿ.ಕಾಳಿಂಗರಾವ್

ಕನ್ನಡ ಸುಗಮ ಸಂಗೀತದ ಹರಿಕಾರ. ಪ್ರಯೋಗಶೀಲ ಸಾಹಸಿ. ಸಾಹಿತ್ಯ, ಸಂಗೀತ ಸಮಾಜವಾದಗಳ ಹುಚ್ಚು ಹತ್ತಿಸಿಕೊಂಡ ಅಲೆಮಾರಿ. ಕನ್ನಡ ನವೋದಯ ಕಾವ್ಯಕ್ಕೆ ತಮ್ಮ ತುಂಬು ಕಂಠ ಹಾಗೂ ಪಾಶ್ಚಾತ್ಯ ಶೈಲಿಯ ವಾದ್ಯವೃಂದದ ಮೂಲಕ 'ಪೂರ್ಣಕುಂಭ' ಸ್ವಾಗತ ನೀಡಿದವರು! ಕನ್ನಡ ಜನಸಮುದಾಯದಲ್ಲಿ ಸಂಗೀತಕ್ಕಾಗಿ ಒಂದು ಹೊಸ ಮಧ್ಯಮ ವರ್ಗವನ್ನು ಸೃಷ್ಟಿಸಿದವರು. ಇಲ್ಲಿ ಇವರ ಸಹ ಹಾಡುಗಾರ್ತಿಯಾದ ಮೋಹನ್ ಕುಮಾರಿ ಸೋಹನ್ ಕುಮಾರಿಯರನ್ನೂ ನೆನಪಿಸಿಕೊಳ್ಳಬೇಕು!

ಇವರೊಂದಿಗೆ ನೆನಪಾಗುವವರು, ಸುಗಮ ಸಂಗೀತವನ್ನು ಕಟ್ಟಿದ ಮೈಸೂರು ಅನಂತಸ್ವಾಮಿ, ಎಚ್.ಆರ್.ಲೀಲಾವತಿ ಹಾಗೂ ಈಗ ಕನ್ನಡ ಸುಗಮ ಸಂಗೀತವನ್ನು ಒಂದು ಚಳುವಳಿಯಂತೆ ರೂಪಿಸುತ್ತಿರುವ ಸಿ.ಅಶ್ವತ್ಥ್.

೨೫. ಅನಕೃ

ಕನ್ನಡ ಸಾಹಿತ್ಯದ ಪ್ರಗತಿಶೀಲಘಟ್ಟದ ನಾಯಕತ್ವ ವಹಿಸಿದ್ದವರು. ಆ ಮೂಲಕ ಕನ್ನಡ ಸಾಹಿತ್ಯದ ಅನಗತ್ಯ ಮಡಿ- ಮೈಲಿಗೆಗಳನ್ನು ತೊಡೆದು ಹಾಕಿದವರು. ನೂರು ಕಾದಂಬರಿಗಳನ್ನು ಕನ್ನಡಕ್ಕೆ ಕೊಟ್ಟು 'ಕಾದಂಬರಿ ಸಾರ್ವಭೌಮ'ರೆನಿಸಿಕೊಂಡು, ಕನ್ನಡ ಸಾಹಿತ್ಯಕ್ಕೆ ಒಂದು ಮಧ್ಯಮವರ್ಗದ ಓದುಗರನ್ನು ಸೃಷ್ಟಿಸಿದವರು. ಉತ್ತಮ ವಾಗ್ಮಿ. ಕನ್ನಡ ಚಳುವಳಿಗೊಂದು ಸ್ಥೂಲ ಪ್ರಣಾಳಿಕೆ ಒದಗಿಸಿದವರು.

ಇವರೊಂದಿಗೆ ನೆನಪಿಸಿಕೊಳ್ಳಬೇಕಾದವರು, ನಿರಂಜನ, ಬಸವರಾಜ ಕಟ್ಟೀಮನಿ, ತರಾಸು, ಹಾಗೂ ಎನ್.ನರಸಿಂಹಯ್ಯ.

೨೬. ದಿನಕರ ದೇಸಾಯಿ

ಉತ್ತರ ಕನ್ನಡದಲ್ಲಿನ ಸ್ವಾತಂತ್ರ್ಯ ಹೋರಾಟ, ಕರ್ನಾಟಕ ಏಕೀಕರಣ ಹೋರಾಟ, ಸಮಾಜವಾದಿ ಚಳುವಳಿ ಹಾಗೂ ರೈತ-ಕಾರ್ಮಿಕ ಸಂಘಟನೆಯ ದೊಡ್ಡ ಮುಂದಾಳಾಗಿದ್ದ ಇವರು, ಅಂತಾರಾಷ್ಟ್ರೀಯ ಕಾರ್ಮಿಕ ಸಂಸ್ಥೆಗೆ ಕಾರ್ಮಿಕರ ಪ್ರತಿನಿಧಿಯಾಗಿ ಹೋಗಿದ್ದವರು.

ದೇಸಾಯಿಯವರು ಕನ್ನಡ ಪ್ರಜ್ಞೆಯನ್ನು ಪ್ರವೇಶಿಸಿರುವುದು, ಮುಖ್ಯವಾಗಿ ಹಲವು ನೆಲೆಗಳಲ್ಲಿ ಸಮಾಜದ ಆತ್ಮಸಾಕ್ಷಿಯನ್ನು ಕೆರಳಿಸುವ ಅವರ ಚುರುಕಾದ ಚುಟುಕಗಳ ಮೂಲಕ. ಕನ್ನಡ ಚುಟುಕು ಸಾಹಿತ್ಯದ ಪಿತಾಮಹರೇ ಆಗಿರುವ ಇವರು, ಉ.ಕ.ದಲ್ಲಿ ಅನೇಕ ಶಿಕ್ಷಣ ಸಂಸ್ಥೆಗಳ ಸ್ಥಾಪನೆಯ ಮೂಲಕ ಶಿಕ್ಷಣ ಕ್ರಾಂತಿಗೆ ಕಾರಣರಾದವರು.

೨೭. ಡಿ.ಸಿ.ಪಾವಟೆ

ಅಪೂರ್ವ ಪ್ರತಿಭೆಯ ಗಣಿತ ಶಾಸ್ತ್ರಜ್ಞ ಹಾಗೂ ಶಿಕ್ಷಣ ತಜ್ಞ, ಆಕ್ಸ್‌ಫರ್ಡ್ ವಿಶ್ವವಿದ್ಯಾಲಯದಲ್ಲಿ ರ‍್ಯಾಂಗ್ಲರ್ ಆಗಿ ಉನ್ನತ ಶಿಕ್ಷಣ ಪಡೆದವರು. ಕರ್ನಾಟಕ ವಿಶ್ವವಿದ್ಯಾಲಯದ ಕುಲಪತಿಯಾಗಿ ವಿಶ್ವವಿದ್ಯಾಲಯವನ್ನು ಶಿಸ್ತು ಮತ್ತು ದಕ್ಷತೆಯಿಂದ ಅಭಿವೃದ್ಧಿ ಪಡಿಸಿದವರು. ರಾಷ್ಟ್ರಮಟ್ಟದ ಅಂತರ ವಿಶ್ವವಿದ್ಯಾಲಯ ಸಮಿತಿಗಳಲ್ಲಿ ಕಾರ್ಯನಿರ್ವಹಿಸಿ ಪಂಜಾಬ್ ರಾಜ್ಯದ ರಾಜ್ಯಪಾಲರಾಗಿ ಸಾರ್ವಜನಿಕ ಆಡಳಿತ ವ್ಯವಹಾರದಲ್ಲೂ ತಮ್ಮ ಸಾಧನೆ ತೋರಿದವರು. ಕುವೆಂಪು ಅವರ ಒತ್ತಾಸೆಯ ಮೇರೆಗೆ ಕರ್ನಾಟಕ ವಿಶ್ವವಿದ್ಯಾಲಯಕ್ಕೆ ಕನ್ನಡದ ದೀಕ್ಷೆ ನೀಡಿದವರು.

ಇವರೊಂದಿಗೆ ನೆನಪಾಗುವವರು, ವಿಚಾರವಾದ ಹಾಗೂ ಗಾಂಧಿವಾದಗಳನ್ನು ಮೇಳವಿಸಿ ಬಾಳಿದ ಎಚ್. ನರಸಿಂಹಯ್ಯನವರು.

೨೮. ಶಂ.ಬಾ. ಜೋಷಿ

ಕರ್ನಾಟಕ ಸಂಸ್ಕೃತಿ ಚರಿತ್ರೆಯನ್ನು ಹೊಸ ಆಕರಗಳ ಆಧಾರದ ಮೇಲೆ ಪುನಾರಚಿಸುವ ಮಹಾ ಸಾಹಸ ಮಾಡಿರುವ ಶಂಕರ ಬಾಳ ದೀಕ್ಷಿತ ಜೋಷಿ, ಕನ್ನಡದ ಹಿರಿಯ ವಿದ್ರೋಹಿ ಚಿಂತಕರು ಹಾಗೂ ಸಂಶೋಧಕರೆನ್ನಿಸಿಕೊಂಡಿದ್ದಾರೆ. ಅರವಿಂದ, ರಾನಡೆಯಂತಹವರಿಂದ ಪ್ರಭಾವಿತರಾಗಿದ್ದರೂ, ಕನ್ನಡ ಜನಪದ ಸಂಸ್ಕೃತಿಯ ತಲಸ್ಪರ್ಶಿ ಆಧ್ಯಯನ ಮಾಡಿ, ಹೊಸ ಪ್ರತೀಕಗಳ ನೆರವಿನಿಂದ ಕನ್ನಡ ಭಾಷೆ, ಕುಲ, ಸಂಸ್ಕೃತಿಗಳಿಗೊಂದು ಹೊಚ್ಚ ಹೊಸ ನೆಲೆ ಒದಗಿಸಿ ಎಲ್ಲರ ಬೆರಗಿಗೆ ಕಾರಣರಾದವರು.

೨೯. ಜಿ.ಬಿ.ಜೋಷಿ

ಧಾರವಾಡದ ತಮ್ಮ 'ಮನೋಹರ ಗ್ರಂಥಮಾಲೆ'ಯ ಅಟ್ಟದಲ್ಲಿ ಕನ್ನಡದ ಗುರುಕುಲ ವೊಂದನ್ನು ಕಟ್ಟಿ ನಡೆಸುತ್ತಿದ್ದ ಈ 'ಜಡಭಾರತ', ತಾನು ಬರೆದದು ಕಡಿಮೆಯಾದರೂ ಇತರ ಪ್ರತಿಭಾವಂತರಿಂದ ಬರೆಸಿದ್ದು ಅಪಾರ, ಅಮೂಲ್ಯ. ಬೇಂದ್ರೆ, ಆನಂದಕಂದರಂತಹ ಹಿರಿಯರಿಂದೊಡಗೂಡಿ ಆರಂಭವಾದ ಇವರ 'ಗೆಳೆಯರ ಬಳಗ', ಕೀರ್ತಿನಾಥ ಕುರ್ತಕೋಟಿ ಹಾಗೂ ಗಿರೀಶ್ ಕಾರ್ನಾಡರಂತಹ ಹೊಸ ತಲೆಮಾರಿನ ಪ್ರತಿಭಾವಂತರಿಗೆ ಜಾಗಮಾಡಿಕೊಟ್ಟಿತು. ಹೊಸ ಸಾಹಿತ್ಯಕ-ಸಾಂಸ್ಕೃತಿಕ ಸಂವಾದಗಳನ್ನು ಹುಟ್ಟು ಹಾಕಿತು.

ಇದೇ ಸಂದರ್ಭದಲ್ಲಿ, ಮಧುರ ಚೆನ್ನ ಹಾಗೂ ಅವರು ಕಟ್ಟಿದ ಹಲಸಂಗಿ ಗೆಳೆಯರ ಬಳಗದ ಸಾಧನೆಗಳನ್ನು ನೆನಪಿಸಿಕೊಳ್ಳುವುದೂ ಉಚಿತವಾದೀತು.

೩೦. ಮಲ್ಲಿಕಾರ್ಜುನ ಮನ್ಸೂರ್

ರಂಗನಟನಾಗಿ ನಾಟ್ಯ ಸಂಗೀತದ ಮೂಲಕ ಹಿಂದೂಸ್ತಾನಿ ಸಂಗೀತದ ಅತ್ಯುನ್ನತ ಶಿಖರವನ್ನು ಮುಟ್ಟಿದ ಮನ್ಸೂರ್, ಅಚ್ಚ ಕನ್ನಡದ ಪ್ರತಿಭೆ. ಅವರು ಹಾಡಿರುವ ವಚನಗಳ ಸೊಬಗೇ ಇದಕ್ಕೆ ಸಾಕ್ಷಿ. ಅಭ್ಯಾಸಕ್ಕಾಗಿ, ಗಾಯನಕ್ಕಾಗಿ ಹೊರಗೆ ಹೋದರೂ ಮತ್ತೆ ತಮ್ಮ ಧಾರವಾಡದ ಗೂಡಿಗೆ ಮರಳುತ್ತಿದ್ದ ಸರಳ ಸಂತೃಪ್ತಿಯ ಮನ್ಸೂರರು ಸಂಗೀತದಲ್ಲಷ್ಟೇ ಅಲ್ಲ, ಲೋಕ ಜೀವನದಲ್ಲೂ ಆಧ್ಯಾತ್ಮಿಕ ಎತ್ತರಗಳನ್ನು ಮುಟ್ಟಿದ್ದ ನಿಜವಾದ ಸಾಧಕ ಶರಣ.

ಇವರೊಂದಿಗೇ ನೆನಪಾಗುವವರು, 'ಸೊಗಸುಗಾರ' ಬಸವರಾಜ ರಾಜಗುರು ಹಾಗೂ ವಚನ ಗಾಯಕ ಸಿದ್ಧರಾಮ ಜಂಬಲದಿನ್ನಿ.

೩೧. ಬಾಳಪ್ಪ ಹುಕ್ಕೇರಿ

ಘಟಪ್ರಭೆಯ ವರಪುತ್ರನಂತಿದ್ದ ಬಾಳಪ್ಪ ಹುಕ್ಕೇರಿ, ಕನ್ನಡ ಜನಪದ ಹಾಗೂ ಸುಗಮ ಸಂಗೀತದ ದೊಡ್ಡ ಘಟ. ಸ್ವಾತಂತ್ರ್ಯ ಹೋರಾಟ ಕಾಲದಲ್ಲಿ ಗೀಗೀ ಪದ ಹಾಗೂ ಲಾವಣಿಗಳ ಮೂಲಕ ಸಂತೆ-ಜಾತ್ರೆಗಳಲ್ಲಿ ಜನರನ್ನು ಜಾಗೃತಗೊಳಿಸುತ್ತಿದ್ದ ಈ ಗಾಯಕ, ಸ್ವಾತಂತ್ರ್ಯಾನಂತರ ತನ್ನದೇ ಒಂದು ಗ್ರಾಮಾಂತರ ತಂಡ ಕಟ್ಟಿಕೊಂಡು ಕನ್ನಡ ಕಾವ್ಯವನ್ನು ತನ್ನ ಗಂಡು ಗಾಯನದ ಹಾಗೂ ನಾಟಕೀಯ ಭಾವ ಭಂಗಿಗಳ ಮೂಲಕ ಜನರಿಗೆ ಮುಟ್ಟಿಸಿದ ಸಂಸ್ಕೃತಿ ಸೇವಕ.

ಇವರೊಂದಿಗೆ ನೆನಪಾಗುವವರು, ಬಳ್ಳಾರಿ ನಾಡಿನ ಗಮಕಿ ಜೋಳದರಾಶಿ ದೊಡ್ಡನಗೌಡ.

೩೨. ಫೀಲ್ಡ್ ಮಾರ್ಷಲ್ ಕೆ.ಎಂ.ಕಾರ್ಯಪ್ಪ

ಕೊಡಗಿನ ವೀರ ಸಂಪ್ರದಾಯದ ಅಧಿಕೃತ ಪ್ರತಿನಿಧಿಯಂತಿದ್ದ ಇವರು ಸ್ವತಂತ್ರ ಭಾರತದ ಸೇನೆಯ ಪ್ರಥಮ ದಂಡನಾಯಕರು. ಸೇನಾ ಶಿಕ್ಷಣ, ತರಬೇತಿ ಹಾಗೂ ಹೋರಾಟ- ಈ ಮೂರರಲ್ಲೂ ಪರಿಣತಿ ಪಡೆದಿದ್ದ ಕಾರ್ಯಪ್ಪ, ಕನ್ನಡದ ಯೋಧ ಪರಂಪರೆಯ ಹೆಮ್ಮೆಯ ಪ್ರತೀಕವೂ ಹೌದು. ಸೇನಾ ನಿವೃತ್ತಿಯ ನಂತರ ಆಸ್ಟ್ರೇಲಿಯಾ-ನ್ಯೂಜಿಲ್ಯಾಂಡ್‌ಗಳಲ್ಲಿ ಭಾರತದ ರಾಯಭಾರಿಯಾಗಿದ್ದ ಇವರು, ತಮ್ಮ ಜೀವನದ ಕೊನೆಯವರೆಗೂ ಯುವಜನರಿಗೆ ನಾಗರಿಕ ಶಿಸ್ತು, ಸಜ್ಜನಿಕೆ, ಧೈರ್ಯ-ಸಾಹಸ ಹಾಗೂ ದೇಶಪ್ರೇಮದ ಪಾಠಗಳನ್ನು ತಮ್ಮ ಕರ್ತವ್ಯವೆಂಬಂತೆ ಹೇಳುತ್ತಲೇ ಇದ್ದರು.

೩೩. ಪುಟ್ಟಣ್ಣ ಕಣಗಾಲ್

ಕನ್ನಡ ಚಿತ್ರರಂಗ ಕಂಡ ಸೃಜನಶೀಲ ನಿರ್ದೇಶಕರಲ್ಲಿ ಒಬ್ಬರಾದ ಇವರು ಮುಖ್ಯವಾಗಿ ಕನ್ನಡ ಸಾಹಿತ್ಯ ಕೃತಿಗಳನ್ನು ಆಧರಿಸಿ ಚಿತ್ರಗಳನ್ನು ನಿರ್ದೇಶಿಸಿ, ಅತಿ ಸಾಮಾನ್ಯ ಪ್ರೇಕ್ಷಕರಲ್ಲೂ ಸಾಹಿತ್ಯದ ರುಚಿ ಹುಟ್ಟಿಸಿದವರು. ಕನ್ನಡ ಭಾಷೆ–ಸಂಸ್ಕೃತಿಗಳ ಆವರಣದಲ್ಲಿ ಜೀವಂತಗೊಳ್ಳುತ್ತಿದ್ದ ಅವರೆಲ್ಲ ಚಿತ್ರಗಳು ತಮ್ಮ ಕಲಾತ್ಮಕತೆ ಹಾಗೂ ಜನಪ್ರಿಯ ಅಂಶಗಳ ಮೂಲಕ ಕನ್ನಡ ಚಲಚಿತ್ರರಂಗಕ್ಕೊಂದು ಹೊಸ ಪ್ರಭೆಯನ್ನು ಒದಗಿಸಿಕೊಟ್ಟವು.

ಇವರೊಂದಿಗೆ ನೆನಪಾಗುವವರೆಂದರೆ, ಪಂತಲು, ಎನ್. ಲಕ್ಷ್ಮಿನಾರಾಯಣ್, ಸಿದ್ಧಲಿಂಗಯ್ಯ ಹಾಗೂ ಕಲ್ಪನಾ.

೩೪. ಎಂ. ಚಿನ್ನಸ್ವಾಮಿ

ಕರ್ನಾಟಕದ ಕ್ರಿಕೆಟ್ ಕ್ಷೇತ್ರದ ಹಿರಿಯಜ್ಜ. ಹಲವಾರು ವರ್ಷಗಳ ಕಾಲ ರಾಜ್ಯ ಕ್ರಿಕೆಟ್ ಸಂಸ್ಥೆಯ ಪದಾಧಿಕಾರದಲ್ಲಿದ್ದು, ಕರ್ನಾಟಕ ರಾಷ್ಟ್ರೀಯ–ಅಂತಾರಾಷ್ಟ್ರೀಯ ಕ್ರಿಕೆಟ್ ರಂಗದಲ್ಲಿ ಹೆಸರು ಗಳಿಸುವಂತೆ ಕ್ರೀಡೆಗೆ ಬೇಕಾದ ಮೂಲ ಸೌಲಭ್ಯಗಳನ್ನೂ ಪ್ರೋತ್ಸಾಹವನ್ನೂ ಒದಗಿಸಿದ ದಕ್ಷ ಹಾಗೂ ಜನಪ್ರಿಯ ಆಡಳಿತಗಾರ. ಇವರ ಈ ಸಾಮರ್ಥ್ಯದಿಂದಾಗಿಯೇ ಕುಂದರನ್, ಸುಬ್ರಮಣ್ಯಂ, ಚಂದ್ರಶೇಖರ್, ಪ್ರಸನ್ನ, ಜಿ.ಆರ್. ವಿಶ್ವನಾಥ್, ಕಿರ್ಮಾನಿಯವರಂತಹ ಪ್ರತಿಭೆಗಳು ಕರ್ನಾಟಕದ ಹೆಮ್ಮೆಗಳಾಗಿ ಪ್ರಕಾಶಿಸಲು ಸಾಧ್ಯವಾದದ್ದು!

೩೫. ಬಿ.ವಿ.ಕಾರಂತ

ಹವ್ಯಾಸಿ ಕನ್ನಡ ರಂಗಭೂಮಿಗೆ ತಮ್ಮ ವಿಶಿಷ್ಟ ನಿರ್ದೇಶನ ಪ್ರತಿಭೆಯ ಮೂಲಕ ಹೊಸ ಚಾಲನೆ ನೀಡಿದ ಬಿ.ವಿ.ಕಾರಂತರು, ಆಧುನಿಕ ನಾಟಕವನ್ನು ಪಾರಂಪರಿಕವಾಗಿ ಹಾಗೂ ಪಾರಂಪರಿಕ ನಾಟಕವನ್ನು ಆಧುನಿಕವಾಗಿ ಪ್ರಸ್ತುತಪಡಿಸುವ ಛಾತಿ ಹೊಂದಿದ್ದ ಅಂತಃಸ್ಫೂರ್ತಿಶಕ್ತಿಯ ರಂಗಕರ್ಮಿ. ನಾಟಕವೆಂದರೆ ಜನೋತ್ಸವವೆಂಬಂತೆ ಆಚರಿಸುತ್ತಿದ್ದ ಇವರು, ಕನ್ನಡದ ಆಧುನಿಕ ರಂಗಭೂಮಿ ತನ್ನ ಪರಂಪರೆಯೊಂದಿಗೆ ಕಳೆದುಕೊಂಡಿದ್ದ ಸಂಬಂಧವನ್ನು ಪುನಃಸ್ಥಾಪಿಸಿದರು.

೩೬. ಗೌರಮ್ಮ ಮಾದಾರ

ಬಸವ ಹುಟ್ಟಿದ ನಾಡಿನ ಗೌರಮ್ಮ ಮಾದಾರ ತನ್ನ ಚೌಡಿಕೆಯೊಂದಿಗೆ 'ಹುಟ್ಟಿ ಬಂದೀ ನೀ ಎಲ್ಲಮ್ಮನಾಗೀ...' ಎಂದು ಬಾಯಿ ಬಿಟ್ಟರೆ ಸಾಕು, ಎಲ್ಲಮ್ಮ ಕಣ್ಣ ಮುಂದೆ ಅವತರಿಸುತ್ತಿದ್ದಳು. ಈಕೆ ತನ್ನ ಸಂಗಡಿಗರೊಂದಿಗೆ ಹಾಡುತ್ತಿದ್ದ ಆವರಣ ಪುರಾಣ ಪುಳಕವಾದಂತೆ ಕಂಪಿಸುತ್ತಿತ್ತು. ಕನ್ನಡ ಸ್ತ್ರೀಶಕ್ತಿಯ ವರ್ತಮಾನದ ಸಂಕಟ–ಸಂಕಲ್ಪಗಳೆರಡನ್ನೂ ಹಾಡಾಗಿ ಹರಿಸುತ್ತಿದ್ದ ಗೌರಮ್ಮನನ್ನು ನೋಡಿದರೆ ನಮ್ಮ ಕಾಲದ ಎಲ್ಲಮ್ಮನನ್ನೇ ನೋಡಿದಂತಾಗುತ್ತಿತ್ತು!

ಇವರ ಜೊತೆಗೆ ನೆನಪಾಗುವವರು, ಸಾವಿರ ಹಾಡುಗಳ ಸಿರಿಯಜ್ಜಿ.

೩೭. ಪಿ. ಲಂಕೇಶ್

ಕನ್ನಡದ ಅನನ್ಯ ವಿಲಕ್ಷಣ ಪ್ರತಿಭೆ. ಲೇಖಕನಾಗಿ, ಪತ್ರಕರ್ತನಾಗಿ, ಸಿನಿಮಾ ನಿರ್ದೇಶಕನಾಗಿ ಕನ್ನಡ ಜನಮನದಲ್ಲಿ ಹೊಸ ಸಂಚಲನ ಉಂಟುಮಾಡಿದವರು. 'ಲಂಕೇಶ್ ಪತ್ರಿಕೆ'ಯ ಮೂಲಕ ಕನ್ನಡ ಭಾಷೆ ಹಾಗೂ ಪತ್ರಿಕೋದ್ಯಮಕ್ಕೆ ಬಹುಕಾಲ ಉಳಿಯಬಲ್ಲ ಹೊಸದೊಂದು ಜೀವಂತಿಕೆಯ ಸ್ಪರ್ಶ ನೀಡಿದವರು. ಕನ್ನಡ ಜನರಲ್ಲಿ ಹೊಸ ರಾಜಕೀಯ ಪ್ರಜ್ಞೆ ಮೂಡಿಸಿದವರು.

೩೮. ಎಸ್.ಕೆ.ಕರೀಂಖಾನ್

ಎಲ್ಲ ಅರ್ಥಗಳಲ್ಲಿ ನಿಜವಾದ ಮುಸ್ಲಿಂ ಕನ್ನಡಿಗನ ಪ್ರತೀಕ. ಆಫ್ಘನ್ ಮೂಲದ ಈ ಪಠಾಣ, ಕನ್ನಡ ಕಲಿತು ಸೆಕ್ಯುಲರಿಸಂಗೆ ಆಧುನಿಕರು ನೀಡುವ ಅರ್ಥವನ್ನೇ ಅಣಕ ಮಾಡುವಂತೆ ತನ್ನ ನಡೆ ನುಡಿಗಳನ್ನು ರೂಢಿಸಿಕೊಂಡ ಅತ್ಯಾಧುನಿಕ. ಜಾನಪದ, ನಾಟಕ, ಸಿನಿಮಾ, ಸಾಹಿತ್ಯ, ಧರ್ಮ–ಹೀಗೆ ಹಲವು ಕ್ಷೇತ್ರಗಳಲ್ಲಿ ಅಲೆಮಾರಿಯಾಗಿ ಕ್ರಿಯಾಶೀಲರಾಗಿದ್ದ ಕರೀಂಖಾನ್ ಗಾಂಧಿಯುಗದ ಕನ್ನಡ ಬದುಕಿನ ಅತ್ಯುತ್ತಮ ಮಾದರಿಗಳಲ್ಲಿ ಒಬ್ಬರು.

ಇವರೊಂದಿಗೆ ನೆನಪಾಗುವವರು ಜಾನಪದ 'ದಿಗ್ಗಜ' ಎಚ್.ಎಲ್.ನಾಗೇಗೌಡರು.

೩೯. ಕೆ.ಎಸ್.ನರಸಿಂಹಸ್ವಾಮಿ

ತಮ್ಮ ಸರಳ ಸುಂದರ ಆದರೆ ಮನೋಜ್ಞ ಕವನಗಳ ಮೂಲಕ ಕನ್ನಡದ ಜನ ಸಾಮಾನ್ಯರನ್ನು ಕಾವ್ಯದ ಹತ್ತಿರಕ್ಕೆ ಕರೆದುಕೊಂಡ ಈ 'ಮೈಸೂರು ಮಲ್ಲಿಗೆ'ಯ ಕವಿ ಎಲ್ಲ ಅರ್ಥದಲ್ಲಿ ಜನರ ಕವಿ. ಅರ್ಥ–ಪರಮಾರ್ಥಗಳೆರಡನ್ನೂ ಅತಿಗೆ ಒಯ್ಯದೆ; ಜನರ ದಿನ ನಿತ್ಯದ ತಾಪತ್ರಯಗಳ ನಡುವೆಯೂ ಅವರನ್ನು ಮುದಗೊಳಿಸುವ, ಸಾಂತ್ವನ ನೀಡುವ ಭರವಸೆಯ ಕಾವ್ಯವನ್ನು ಅವರ ಮಧ್ಯೆ ಕೂತೇ ರಚಿಸಿದಂತಿರುವ ಕೆ.ಎಸ್.ನ.ರ ಪದ್ಯಗಳು, ಸರಳ ಓದಿಗೂ ಸುಲಭ ಗಾಯನಕ್ಕೂ ಒದಗುವಷ್ಟು ಮೃದು ಮಧುರವಾದ ಕನ್ನಡದಲ್ಲಿ ಮೂಡಿ ಬಂದಿವೆ. ಕನ್ನಡ ಕಾವ್ಯಕ್ಕೆ ಒಂದು ಮಧ್ಯಮ ವರ್ಗವನ್ನು ಸೃಷ್ಟಿಸಿಕೊಟ್ಟ ಕವಿ ಇವರು.

೪೦. ಕೆ.ವಿ.ಸುಬ್ಬಣ್ಣ

ಮಲೆನಾಡಿನ ಕುಗ್ರಾಮ ಹೆಗ್ಗೋಡಿನಲ್ಲಿ ಇವರು ಕಟ್ಟಿ ಬೆಳೆಸಿದ 'ನೀನಾಸಂ' ಕರ್ನಾಟಕದ ಒಂದು ದೊಡ್ಡ ಸಾಂಸ್ಕೃತಿಕ ಕೇಂದ್ರವಾಗಿ ಇಂದು ಬಹುಮುಖಿ ಚಟುವಟಿಕೆಗಳಲ್ಲಿ ತೊಡಗಿಕೊಂಡಿದೆ. ಪ್ರತಿ ವರ್ಷ ಇಲ್ಲಿ ನಡೆಯುವ 'ಸಂಸ್ಕೃತಿ ಶಿಬಿರ' ರಾಷ್ಟ್ರದ ಒಂದು ಅನನ್ಯ ಸಂಸ್ಕೃತಿ ಘಟನೆ ಎಂದೇ ಹೇಳಬೇಕು. ಹೊಸ ಸಿನಿಮಾ, ಹೊಸ ನಾಟಕ, ಹೊಸ ಸಾಹಿತ್ಯ, ಹೊಸ ವಿಚಾರ– ಹೀಗೆ ಹೊಸ ಹೊಸ ನೆಲೆಗಳಲ್ಲಿ ಕನ್ನಡವನ್ನು ಭಾರತದೊಂದಿಗೆ ಬೆಸೆಯುವ ಈ ಪ್ರಯತ್ನದ ಹಿಂದಿನ ಸ್ಫೂರ್ತಿ ಕೆ.ವಿ.ಸುಬ್ಬಣ್ಣ.

೪೧. ರಾಜ್‌ಕುಮಾರ್

ಕನ್ನಡ ಚಿತ್ರರಂಗಕ್ಕೆ ಇನ್ನೊಂದು ಹೆಸರು ಅನ್ನಿಸುವಷ್ಟರ ಮಟ್ಟಿಗೆ ಅದರ 'ದಾತ'ರಾಗಿದ್ದ ರಾಜ್‌ಕುಮಾರ್, ತನ್ನ ಪೂರ್ವಾಶ್ರಮದ ಮುತ್ತುರಾಜ್ ಹಂತದಿಂದ ಕನ್ನಡಿಗರ ಕಣ್ಮಣಿ ರಾಜ್‌ಕುಮಾರ್ ಆಗಿ ಬೆಳೆದು ನಿಂತ ಕಥೆಯೇ; ಒಂದು ಆಧುನಿಕ ಜನಪದ ಕಥೆಯಾಗಿ, ಕನ್ನಡಿಗರ ಮನ–ಮನೆಗಳಲ್ಲಿ ಜನಜನಿತವಾಗಿದೆ. ರಾಜ್‌ಕುಮಾರ್ ತಮ್ಮ ಚಲನಚಿತ್ರಗಳ ಮೂಲಕ ಸೃಷ್ಟಿಸಿದ ಮೌಲ್ಯಗಳು, ಅಭಿರುಚಿಗಳು ಹಾಗೂ ಕನಸುಗಳು ಕನ್ನಡ ಬದುಕನ್ನು ಒಂದಲ್ಲ ಒಂದು ನೆಲೆಯಲ್ಲಿ ಕಟ್ಟಿವೆ. ಅವರು ಚಿತ್ರಗಳಲ್ಲಿ ಆಡುತ್ತಿದ್ದ ಕನ್ನಡ ಭಾಷೆಯ ಸೊಬಗೇ ಕನ್ನಡ ಭಾಷೆಯನ್ನು ಇನ್ನೂ ಎಷ್ಟೋ ತಲೆಮಾರುಗಳ ತನಕ ಉಳಿಸಬಲ್ಲದು.

ಇದೇ ಸಂದರ್ಭದಲ್ಲಿ ರಾಜ್‌ಕುಮಾರ್ 'ಜಾನಪದ' ನಿರ್ಮಿಸಿದ ಲೀಲಾವತಿ, ಫಂಡರೀಬಾಯಿ, ಅಶ್ವಥ್, ನರಸಿಂಹರಾಜು, ಬಾಲಕೃಷ್ಣ ಹಾಗೂ ಚಿ.ಉದಯಶಂಕರ್, ಜಿ.ಕೆ.ವೆಂಕಟೇಶ್, ಜಿ.ವಿ.ಅಯ್ಯರ್‌ರನ್ನೂ ನೆನಪಿಸಿಕೊಳ್ಳಬೇಕು.

೪೨. ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಕನ್ನಡ ಸಾಹಿತ್ಯದ ಕಾಡು ಪ್ರತಿಭೆ. ಕನ್ನಡ ಲೇಖಕನೊಬ್ಬ ಈವರೆಗೆ ಅನ್ವೇಷಿಸದ ಅನುಭವ ಲೋಕವನ್ನು, ಸಾಹಿತ್ಯವೂ ಸೇರಿದಂತೆ ತಮ್ಮ ವೈವಿಧ್ಯಮಯ ಸೃಜನಶೀಲ ಚಟುವಟಿಕೆಗಳ ಮೂಲಕ ಕನ್ನಡ ಸಂವೇದನೆಯ ಒಂದು ಭಾಗವನ್ನಾಗಿ ಮಾಡಿದ ಪ್ರಯೋಗಶೀಲ. ವಿಶ್ವವಿದ್ಯಾಲಯ ಮಟ್ಟದ ಅಂತರ್‌ಶಿಸ್ತೀಯ ಅಧ್ಯಯನವನ್ನು ಅಣಕ ಮಾಡಿದಂತೆ, ತತ್ವದರ್ಶನ, ರಾಜಕಾರಣ, ವಿಜ್ಞಾನ, ಕಲೆಗಳೆಲ್ಲವನ್ನೂ ಒಂದುಗೂಡಿಸಿದ ಬಹುಮುಖಿ ಬರವಣಿಗೆಯನ್ನು ಸಾಧಿಸಿದ ಲೇಖಕ.

೪೩. ಸಿದ್ದಗಂಗೆ ಶ್ರೀಗಳು

ಭಿಕ್ಷಾ ಸಂಪ್ರದಾಯವನ್ನು ಆಧುನಿಕ ಕಾಲದಲ್ಲಿ ಒಂದು ಪರಂಪರೆಯಾಗಿ ಬೆಳೆಸಿ ಸಾಮೂಹಿಕ ಅನ್ನ ಹಾಗೂ ಅಕ್ಷರ ದಾಸೋಹಗಳೆರಡನ್ನೂ ಕಳೆದೆಂಟು ದಶಕಗಳಿಂದಲೂ ನಡೆಸಿಕೊಂಡು ಬರುತ್ತಿರುವ ಶ್ರೀ ಶಿವಕುಮಾರ ಸ್ವಾಮಿಗಳು, ಧರ್ಮಕ್ಕೆ ಹೊಸ ಕಾಲದ ಭಾಷ್ಯ ಬರೆದವರು. ಬಸವಣ್ಣನ ಕಾಯಕ ತತ್ವದ ಪುನರುಜ್ಜೀವನದ ಮೂಲಕ ಮಠವೆಂಬ ವ್ಯವಸ್ಥೆಗೆ ಹೊಸ ಘನತೆ ತಂದುಕೊಟ್ಟವರು. ಲಕ್ಷಾಂತರ ಅನಾಥ ಹಾಗೂ ಬಡ ಮಕ್ಕಳಿಗೆ ಗುರುವಾಗಿ, ಪೋಷಕರಾಗಿ, ಮಾರ್ಗದರ್ಶಿಯಾಗಿ ನಾಡನ್ನು ಕಟ್ಟುತ್ತಿರುವವರು.

೪೪. ವೀರೇಂದ್ರ ಹೆಗ್ಗಡೆ

ಧರ್ಮಸ್ಥಳವನ್ನು ತುಳು ಸಂಸ್ಕೃತಿಯ ಆಚರಣಾ ಕೇಂದ್ರವನ್ನಾಗಿ ಬೆಳೆಸಿ ಅದನ್ನು ಕನ್ನಡ ಸಂಸ್ಕೃತಿಯೊಂದಿಗೆ ಜೋಡಿಸುವ ಕೆಲಸ ಮಾಡುತ್ತಿರುವ ಈ ಧರ್ಮಾಧಿಕಾರಿ, ದೇವರ ಹೆಸರಲ್ಲಿ ಹರಿದು ಬರುತ್ತಿರುವ ಹಣವನ್ನು ಜನತೆಗಾಗಿ ವಿನಿಯೋಗಿಸುವ ಹಲವು

ಜನ ಕಲ್ಯಾಣ ಯೋಜನೆಗಳ ಹರಿಕಾರರೂ ಆಗಿದ್ದಾರೆ. ವಿಭಿನ್ನ ಧಾರ್ಮಿಕ ಧಾರೆಗಳ ಸಂಗಮದಂತಿರುವ ಧರ್ಮಸ್ಥಳವನ್ನು ಒಂದು ಜಾತ್ಯತೀತ ಧಾರ್ಮಿಕ ಕೇಂದ್ರವನ್ನಾಗಿ ವಿಕಾಸಗೊಳಿಸುವಲ್ಲಿ ಹೆಗ್ಗಡೆಯವರು ತೋರಿರುವ ಪ್ರಬುದ್ಧತೆ, ಮುನ್ನೋಟ, ದಕ್ಷತೆ ಹಾಗೂ ಆಧುನಿಕ ಮನೋಭಾವ ರಾಜ್ಯಾದ್ಯಂತ ಜನರ ಗಮನ ಸೆಳೆದಿದೆ.

೪೫. ಗಂಗೂಬಾಯಿ ಹಾನಗಲ್

ಹಿಂದೂಸ್ತಾನಿ ಶಾಸ್ತ್ರೀಯ ಸಂಗೀತಕ್ಕೆ ಕನ್ನಡದ ಮತ್ತೊಂದು ಕೊಡುಗೆ. ಧಾರವಾಡದ ಗಂಡು ಮೆಟ್ಟಿನ ನೆಲದ ದಟ್ಟ ವಾಸನೆಯಲ್ಲಿ ಅರಳುವ ಇವರ ಅಪೂರ್ವ ಗಾಯನ, ಕನ್ನಡ ಸಂಸ್ಕೃತಿಯ ಅಭಿರುಚಿ-ಆಯಾಮಗಳಲ್ಲೇ ಮೈದಳೆದದ್ದೆಂಬುದು ಒಂದು ವಿಶೇಷ. ಹಾಗಾಗಿಯೇ ಇವರು ಕನ್ನಡಕ್ಕೆ ಸಂಬಂಧಪಟ್ಟ ಎಲ್ಲ ಚಳುವಳಿ-ಹೋರಾಟಗಳೊಂದಿಗೂ ಗುರುತಿಸಿಕೊಂಡು ಕನ್ನಡದ ಮನೆಯ ಹಿರಿ ಮಗಳೆನಿಸಿಕೊಂಡಿದ್ದಾರೆ.

ಇವರೊಂದಿಗೆ ನೆನಪಾಗುವವರೆಂದರೆ, ಪುಣೆಯಲ್ಲಿ ನೆಲೆಸಿದ್ದರೂ, ತುಂಬಿದ ಕೃಷ್ಣಾ ನದಿಯಂತೆ ಭೋರ್ಗರೆವ ಕಂಠದಲ್ಲಿ (ಕನ್ನಡಿಗರಿಗೆ ವಿಶೇಷವಾಗಿ ದಾಸರ ಪದಗಳನ್ನು) ಹಾಡುವ ಭೀಮಸೇನ ಜೋಷಿ ಹಾಗೂ ಮಧ್ಯ ಪ್ರದೇಶದಲ್ಲಿ ನೆಲೆಸಿ ಆಕಾಶ-ಭೂಮಿ ಒಂದಾಗುವಂತೆ ಹಾಡಿ 'ಕುಮಾರ ಗಂಧರ್ವ'ನೆನಿಸಿದ್ದ ಕನ್ನಡದ ಪ್ರತಿಭೆ ಶಿವಪುತ್ರಪ್ಪ ಕೊಂಕಾಳಿಮಠ.

೪೬. ಜಿ.ಎಸ್.ಶಿವರುದ್ರಪ್ಪ

ಕುವೆಂಪು ಪರಂಪರೆಯ ಉತ್ತರಾಧಿಕಾರಿಯೆನಿಸಿರುವ ಜಿಎಸ್ಸೆಸ್, ಕವಿಯಾಗಿ, ಕಾವ್ಯ ಮೀಮಾಂಸಕರಾಗಿ, ಅಧ್ಯಾಪಕರಾಗಿ ಹಾಗೂ ಸಾಹಿತ್ಯ ಆಡಳಿತಗಾರರಾಗಿ ಕನ್ನಡಿಗರಲ್ಲಿ ಸಾಹಿತ್ಯ-ಸಂಸ್ಕೃತಿಗಳ ಹೊಸ ರುಚಿ-ಅಭಿರುಚಿಗಳನ್ನು ಬೆಳೆಸಿದವರು. ರಾಜಕೀಯ-ಸಾಮಾಜಿಕ ವಿಚಾರಗಳಲ್ಲೂ, ಕನ್ನಡ ಪರವಾದ, ಜನಪರವಾದ ನಿಲುವುಗಳನ್ನು ಸಾರ್ವಜನಿಕವಾಗಿ ಪ್ರಕಟಿಸುತ್ತಾ, ಕನ್ನಡ ಸಮಾಜದ ಆಧುನೀಕರಣಕ್ಕೆ ಒಂದು ಸಾಂಸ್ಕೃತಿಕ ಸಂಯಮದ ಎಲ್ಲೆಯನ್ನು ಗುರುತಿಸಿರುವ ಹಿರಿಯ ಚಿಂತಕರು.

೪೭. ಯು.ಆರ್.ಅನಂತಮೂರ್ತಿ

ಕನ್ನಡದ ಬಹುಮುಖ್ಯ ಲೇಖಕ ಹಾಗೂ ಸಾರ್ವಜನಿಕ ಬುದ್ಧಿಜೀವಿಯೂ ಆದ ಅನಂತಮೂರ್ತಿಯವರು, ರಾಷ್ಟ್ರೀಯ ಹಾಗೂ ಅಂತಾರಾಷ್ಟ್ರೀಯ ಅನುಭವಗಳನ್ನು ಕನ್ನಡದ ಸಂವೇದನೆಗೆ ತಂದವರು. ಕಥನ, ಮಂಥನ, ಚಿಂತನ-ಈ ಮೂರೂ ನೆಲೆಗಳಲ್ಲಿ ಕನ್ನಡದ ಮನಸ್ಸನ್ನು ತಮ್ಮ ಸೃಜನಶೀಲ ಬರವಣಿಗೆಯ ಮೂಲಕ ವಿಸ್ತರಿಸಿದವರು. ಆಧುನಿಕ ಕನ್ನಡ ಸಂಸ್ಕೃತಿಯ ಒಳ ಟೀಕಾಕಾರರೂ ಆದ ಇವರು, ಶಿಕ್ಷಣ ಹಾಗೂ ರಾಜಕಾರಣದ ಬಗ್ಗೆಯೂ ಹೊಸ ತಿಳಿವಿನೊಂದಿಗೆ ಮಾತಾಡಬಲ್ಲವರು. ಜ್ಞಾನಪೀಠ ಪ್ರಶಸ್ತಿ ಪಡೆದವರು.

೪೮. ಸಿ.ಎನ್.ಆರ್. ರಾವ್

ನೊಬೆಲ್ ಪ್ರಶಸ್ತಿವರೆಗಿನ ಎಲ್ಲ ಅಂತಾರಾಷ್ಟ್ರೀಯ ಪ್ರಶಸ್ತಿಗಳನ್ನು ತಮ್ಮ ರಸಾಯನಶಾಸ್ತ್ರ ಸಂಶೋಧನೆಗಳಿಗಾಗಿ ಪಡೆದಿರುವ ಈ ಕನ್ನಡಿಗ, ನೊಬೆಲ್ ಪ್ರಶಸ್ತಿಗೆ ಅರ್ಹರಾದ ಭಾರತದ ಮಹಾ ಮೇಧಾವಿ ಎನಿಸಿಕೊಂಡಿದ್ದಾರೆ. ಇವರು ಕನ್ನಡ ಮಾಧ್ಯಮದಲ್ಲಿ ಓದಿದವರಷ್ಟೇ ಅಲ್ಲ, ಜಾಗತೀಕರಣದ ಈ ದಿನಗಳಲ್ಲೂ ಕನ್ನಡದ ಮಕ್ಕಳಿಗೆ ಕನ್ನಡ ಮಾಧ್ಯಮದಲ್ಲೇ ಶಾಲಾ ಶಿಕ್ಷಣ ಒದಗಿಸಬೇಕೆಂದು ಬಲವಾಗಿ ಪ್ರತಿಪಾದಿಸುವವರು. ಇದಕ್ಕೆ ಸಮರ್ಥನೆಯಾಗಿ, ಆಗಾಗ್ಗೆ ಪ್ರಾಯೋಗಿಕವಾಗಿ ಕನ್ನಡದಲ್ಲಿ ವಿಜ್ಞಾನ ಪಾಠ ಮಾಡುವ ಮೇಷ್ಟ್ರು ಕೂಡಾ! ಆಧುನಿಕ ವೈಜ್ಞಾನಿಕ ಸಂಸ್ಕೃತಿಯೆದುರು ಕನ್ನಡ ಸೋತ ಭಾಷೆ ಎಂಬ ಜನಪ್ರಿಯ ನಂಬಿಕೆಗೆ ಜೀವಂತ ಸವಾಲಂತಿರುವ ರಾವ್, ಕನ್ನಡದ ನಿಜವಾದ ಹೆಮ್ಮೆ!

೪೯. ಸಾರಾ ಅಬೂಬಕ್ಕರ್

ಮುಸ್ಲಿಂ ಪುರೋಹಿತಶಾಹಿಯ ವಿರುದ್ಧ ಎತ್ತಲ್ಪಟ್ಟ ಕನ್ನಡದ ಮೊದಲ ದಿಟ್ಟ ಧ್ವನಿ. ಸಾರಾ ತಮ್ಮ 'ಚಂದ್ರಗಿರಿ ತೀರದಲ್ಲಿ' ಹಾಗೂ 'ಮುಸ್ಲಿಂ ಹುಡುಗಿ ಶಾಲೆ ಕಲಿತದ್ದು' ಎಂಬ ಆರಂಭಿಕ ಕೃತಿಗಳ ಮೂಲಕ ಮುಸ್ಲಿಂ ಸಮಾಜದ ಒಳಕುದಿ–ಘನತೆಗಳೆರಡನ್ನೂ ಯಾವುದೇ 'ಪ್ರದರ್ಶನ'ವಿಲ್ಲದ ನಿರಾಡಂಬರ ಶೈಲಿಯಲ್ಲಿ ಕನ್ನಡ ಲೋಕಕ್ಕೆ ಪರಿಚಯಿಸಿದರು. ಇವರು ಬರೆಯಲಾರಂಭಿಸಿದ ಮೇಲೆ ಕನ್ನಡದಲ್ಲಿ ಬರೆಯುವ ಮುಸ್ಲಿಂ ಲೇಖಕ–ಲೇಖಕಿಯರ ಬರವಣಿಗೆಯ ಖದರೇ ಬದಲಾಗಿದೆ !

೫೦. ಪಿ.ಬಿ.ಶ್ರೀನಿವಾಸ್

ಜನತಾ ಕಾವ್ಯವೆಂದು ಕರೆಯಬಹುದಾದ ಚಿತ್ರಗೀತೆಗಳ ಮೂಲಕವೇ ಕನ್ನಡ ಜನತೆಗೊಂದು ಸರಳ ಸುಖ ನೀಡಿದವರು. ತಮ್ಮ ಮಧ್ಯಮ ತರಂಗಾಂತರದ ಆರ್ದ್ರ ಧ್ವನಿಯಲ್ಲಿ ಸಾವಿರಾರು ಚಿತ್ರಗೀತೆಗಳನ್ನು ಕನ್ನಡದ ತನಿ–ಬನಿಗಳೊಂದಿಗೆ ಹಾಡಿ ಸಾಮಾನ್ಯ ಕನ್ನಡಿಗರೆಲ್ಲರನ್ನೂ ಭಾವ ಪರವಶರನ್ನಾಗಿ ಮಾಡುವ ಮೂಲಕ ಅವರಲ್ಲಿ ಒಂದು ಜನಪ್ರಿಯ ನೆಲೆಯ ಭಾವ ಸಂಬಂಧವನ್ನು ಸೃಷ್ಟಿಸಿದವರು. ಪಿಬಿಎಸ್, ಕನ್ನಡ ಸಿನಿಮಾವೆಂಬುದು ಇರುವವರೆಗೂ ಕನ್ನಡಿಗರ ನೆನಪಿನಲ್ಲಿ ಉಳಿಯಬಲ್ಲ ಗಾಯಕ.

ಇವರೊಂದಿಗೆ ನೆನಪಾಗುವವರು ಸುಮಧುರ ಗಾಯಕಿ ಎಸ್.ಜಾನಕಿ.

ಅಂದಹಾಗೆ : ಈ ಐವತ್ತರ ಪಟ್ಟಿಗೆ ಸೇರಲೇ ಬೇಕಿದ್ದ; ಆದರೆ ಸೇರದೇ ಹೋದ ಮತ್ತು ಹಾಗೆ ಸೇರದಿರಲು ಕಾರಣವನ್ನೂ ಹೊತ್ತ ಹತ್ತು ಜನರ ಪಟ್ಟಿ ಇಲ್ಲಿದೆ:

೧. **ಟಿ.ಎಂ.ಎ.ಪೈ:** ಬಡವರ ಹಣದಲ್ಲಿ ಬ್ಯಾಂಕ್ ಕಟ್ಟುವ ಸಾಹಸ ಮಾಡಿ, ಅದನ್ನು ಶ್ರೀಮಂತರಿಗೆ ಒಪ್ಪಿಸಿದವರು!

೨. **ಎಚ್.ಡಿ.ದೇವೇಗೌಡ:** ರಾಜಕಾರಣದಲ್ಲಿ ಏನೆಲ್ಲ ಸಾಧನೆ ಮಾಡಿದ್ದರೂ, ಅದರ ಫಲವೆಲ್ಲ ತನ್ನ ಕುಟುಂಬಕ್ಕೇ ಸಲ್ಲತಕ್ಕದ್ದು ಎಂದು ನಂಬಿರುವವರು!

೩. **ದೇಜಗೌ:** ಕುವೆಂಪು ಮಾತಿನಂತೆ ಕನ್ನಡಕ್ಕಾಗಿ ಕೈಯೆತ್ತಿ, ಅದನ್ನು ಕಲ್ಪವೃಕ್ಷ ಮಾಡಿಕೊಂಡವರು!

೪. **ಪಾಟೀಲ ಪುಟ್ಟಪ್ಪ:** ಮಾಡಿದ ಎಲ್ಲ ಒಳ್ಳೆಯ ಕೆಲಸವನ್ನೂ, ಆಳುವವರ ಪರವಾಗಿ ಪಿಟೀಲು ಕೊಯ್ದು ಹಾಳು ಮಾಡಿಕೊಂಡವರು!

೫. **ಎಂ.ಡಿ.ನಂಜುಂಡಸ್ವಾಮಿ:** ಬಹಳ ಸರಿಯಾದ ತಾತ್ವಿಕತೆಯೊಂದಿಗೆ ಕಟ್ಟಿದ್ದನ್ನು, ಬಹಳ ಸರಿಯಾದ ತಾತ್ವಿಕತೆಯೊಂದಿಗೇ ಕೆಡುವುವ ಕೌಶಲ್ಯ ಸಾಧಿಸಿದವರು!

೬. **ಬಿ.ಕೃಷ್ಣಪ್ಪ:** ದೊಡ್ಡ ಸಂಘಟನೆ ಕಟ್ಟಿದವರು, ಅಷ್ಟೇ ದೊಡ್ಡದಾಗಿ ಯೋಚಿಸದೇ ಹೋದವರು!

೭. **ದೇವನೂರ ಮಹಾದೇವ:** ಚಿಂತನೆಯಲ್ಲಿ ತುಂಬ ಎತ್ತರ ಮುಟ್ಟಿ, ಸುಸ್ತಾಗಿ ಅಲ್ಲೇ ಮಲಗಿದವರು!

೮. **ಡಿ.ಆರ್.ನಾಗರಾಜ್:** ಇವರ ಅಸಾಧಾರಣ ಪ್ರತಿಭೆ ಗರಿ ಗೆದರಿದ್ದೇ, ಅಂತಾರಾಷ್ಟ್ರೀಯ ಸಾಂಸ್ಕೃತಿಕ ರಾಜಕಾರಣದ 'ಸ್ಫೂರ್ತಿ'ಯಲ್ಲಿ ಎಂಬ ಗುಮಾನಿಗೆ ಒಳಗಾದವರು!

೯. **ಎನ್.ಆರ್. ನಾರಾಯಣಮೂರ್ತಿ:** ಮಾಹಿತಿ = ಜ್ಞಾನ = ಹಣ = ನೆಮ್ಮದಿ ಎಂಬ ವಿಕ್ಷಿಪ್ತ ಸಮೀಕರಣದ ಯಶಸ್ವಿ ಪ್ರಚಾರಕ!

೧೦. **ವಾಟಾಳ್ ನಾಗರಾಜ್:** ಇವರ ಕನ್ನಡ ಅಭಿಮಾನದ ವೈಶಾಲ್ಯ ೧೧೦ ಎಕರೆಗಳು!

✳

ಸುವರ್ಣ ಕರ್ನಾಟಕದ ಸುವರ್ಣ ಪುಟಗಳು

– ಡಿ.ಎಸ್.ನಾಗಭೂಷಣ

ಇದೊಂದು ವಿನೂತನ ಪ್ರಯೋಗ. 'ವಿಕ್ರಾಂತ ಕರ್ನಾಟಕ'ದ ಈ ಸಂಚಿಕೆಯಿಂದ ಆರಂಭವಾಗಿರುವ ಆಧುನಿಕ ಕನ್ನಡ ಸಾಹಿತ್ಯದ ವಿವಿಧ ಪ್ರಕಾರಗಳ ಹತ್ತು ಅತ್ಯುತ್ತಮಗಳನ್ನು ಆಯುವ 'ಸುವರ್ಣ ಕರ್ನಾಟಕದ ಸುವರ್ಣ ಪುಟಗಳು' ಲೇಖನ ಮಾಲೆಗೆ ಸುವರ್ಣ ಕರ್ನಾಟಕಾಚರಣೆ ಒಂದು ನೆಪವಷ್ಟೆ. ವಿಫುಲವಾಗಿ ಬೆಳೆದಿರುವ ಹೊಸಗನ್ನಡ ಸಾಹಿತ್ಯದಿಂದ ಹೀಗೆ ಹತ್ತತ್ತನ್ನು ಆಯ್ಕೆ ಮಾಡುವುದು ಕಷ್ಟದ ಕೆಲಸವೇ ಸರಿ. ಇದು ಅನಗತ್ಯದ ಕೆಲಸ ಎನ್ನುವವರೂ ಇದ್ದಾರೆ. ಅಷ್ಟೇ ಏಕೆ, ಈ ಸಂಚಿಕೆಯಲ್ಲಿ ಪ್ರಕಟವಾಗಿರುವ ಈ ಲೇಖನ ಮಾಲೆಯ ಮೊದಲ ಲೇಖನಕ್ಕಾಗಿ ಹತ್ತು ಅತ್ಯುತ್ತಮ ಪದ್ಯಗಳನ್ನು ಆಯ್ಕೆ ಮಾಡಿರುವ ಕನ್ನಡದ ಹತ್ತು ಅತ್ಯುತ್ತಮ ವಿಮರ್ಶನ ಪ್ರತಿಭೆಗಳಲ್ಲಿ ಒಬ್ಬರಾದ(ಖಂಡಿತ ನಾನು ಈ ಮೂಲಕ ಈ ಲೇಖನ ಮಾಲೆಯ ಹತ್ತು ಅತ್ಯುತ್ತಮ ವಿಮರ್ಶೆಗಳ ಆಯ್ಕೆಯಲ್ಲಿ ಹಸ್ತಕ್ಷೇಪ ಮಾಡುತ್ತಿಲ್ಲ!) ರಾಜೇಂದ್ರ ಚೆನ್ನಿಯವರು ಆತಂಕ ಪಟ್ಟಿರುವಂತೆ, ಇದನ್ನು ಹೊಸ ಮಾಧ್ಯಮ ಸಂಸ್ಕೃತಿಯ 'ಟಾಪ್ ಟೆನ್' ವಾಣಿಜ್ಯ ಮಾದರಿಯು ಸಾಹಿತ್ಯವನ್ನೂ ಪ್ರವೇಶಿಸಿರುವುದಕ್ಕೆ ಸಾಕ್ಷಿಯಾಗಿ ನೋಡುವವರಿದ್ದರೆ ಆಶ್ಚರ್ಯವಿಲ್ಲ! ಹಾಗೇ ಈ ಲೇಖನ ಮಾಲೆಯ ಇನ್ನೊರ್ವ ಲೇಖಕರು ಅನುಮಾನಿಸಿರುವಂತೆ, ಇದೊಂದು ಉದ್ಧಟತನದ ಕೆಲಸವೆಂದು ಭಾವಿಸುವವರೂ ಇರಬಹುದು! ಆದರೆ ಇದು ಎಸ್.ಎಂ.ಎಸ್. ಅಥವಾ ಟಿ.ಆರ್.ಪಿ. ಆಧಾರಿತ ಆಯ್ಕೆಯಾಗಿರದೆ, ಸಂಬಂಧಪಟ್ಟ ಕ್ಷೇತ್ರಗಳ ಪರಿಣತರು ಮಾಡಿರುವ ಆಯ್ಕೆಯಾಗಿರುವುದರಿಂದ; ಇಲ್ಲಿ ಮಾಡಲಾಗಿರುವ ಆಯ್ಕೆ ಅಂತಿಮ ಅಥವಾ ಆತ್ಯಂತಿಕ ಎಂದು ತಪ್ಪಾಗಿ ಭಾವಿಸಿ ಭಯಪಡುವವರಷ್ಟೇ, ಈ ಪ್ರಯೋಗವನ್ನು ಮೆಚ್ಚದೇ ಹೋಗಬಹುದು ಎಂಬುದು ನನ್ನ ಭಾವನೆ.

ಕರ್ನಾಟಕದ ಬಂಗಾರದ ಹಬ್ಬದ ಸಂದರ್ಭದಲ್ಲಿ ಕನ್ನಡ ಸಾಹಿತ್ಯವನ್ನೊಮ್ಮೆ ತಿರುಗಿ ನೋಡುವ ನಮ್ಮ ಪ್ರಯತ್ನ ವಿನೂತನವಾಗಿರಲಿ, ಈವರೆಗೆ ಅನುಸರಿಸಲಾಗಿರುವ ಸಮೀಕ್ಷಾತ್ಮಕ ಪ್ರಯೋಗಗಳಿಂದ ವಿಭಿನ್ನವಾಗಿರಲಿ ಎಂಬ ಆಶಯದಿಂದ ನಾನು ಈ 'ಅತ್ಯುತ್ತಮ ಹತ್ತು' ಆಯ್ಕೆಗಳ ವಿಧಾನವನ್ನು ರೂಪಿಸಿಕೊಂಡದ್ದು. ಇದು ಕೂಡಾ ಒಂದು ಕಾಲಘಟ್ಟದ ಸಾಹಿತ್ಯದ ಮೌಲ್ಯಮಾಪನದ ಒಂದು ವಿಶ್ವಾಸಾರ್ಹ ಮಾನದಂಡ ಆಗಬಹುದು ಎಂಬುದು, ಈ ಲೇಖನ ಮಾಲೆಯನ್ನು ಓದುತ್ತಾ ಹೋದಂತೆ ಓದುಗರಿಗೆ ಮನವರಿಕೆಯಾಗಬಹುದು. ನಮ್ಮ ಪರಿಣತರು ತಮ್ಮ ಆಯ್ಕೆಗಳನ್ನು ಸಮರ್ಥಿಸುವ ಟಿಪ್ಪಣಿಗಳನ್ನೂ ಬರೆಯುತ್ತಿರುವುದರಿಂದ; ಇದು ಶುದ್ಧ ಲೆಕ್ಕಾಚಾರದಲ್ಲಿ ಕಳೆದ ಐವತ್ತು ವರ್ಷಗಳದ್ದಲ್ಲದಿದ್ದರೂ, ಆಧುನಿಕವೆಂದು ಕರೆಯಬಹುದಾದ ಕನ್ನಡ ಸಾಹಿತ್ಯದ ಪರೋಕ್ಷ ವಿಮರ್ಶೆಯೂ ಆಗುವುದನ್ನು ಓದುಗರು

ಗಮನಿಸಬಹುದು. ಇಂತಹ ವಿಶಿಷ್ಟ ಹಾಗೂ ಅಸಾಂಪ್ರದಾಯಿಕ ಆಯ್ಕೆ ವಿಧಾನದಲ್ಲೇ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಸಂಬಂಧಿಸಿದಂತೆ ಈವರೆಗೆ ಕಾಣದಂತಹ ಒಳನೋಟಗಳೂ ಮೂಡಿ ಬರಬಹುದೆಂಬ ನಿರೀಕ್ಷೆ ನಮ್ಮದು. ರಾಜೇಂದ್ರ ಚೆನ್ನಿಯವರ ಲೇಖನದಿಂದಲೇ ಈ ಒಳನೋಟಗಳ ಸರಮಾಲೆ ಆರಂಭವಾದಂತಿದೆ.

ಹಾಗೇ ವಿವಾದಗಳ ಸರಮಾಲೆಯೂ ಆರಂಭವಾಗಿರಬಹುದು! ಕನ್ನಡದ ಹತ್ತು ಅತ್ಯುತ್ತಮ ಪದ್ಯಗಳಲ್ಲಿ ಜಿ.ಎಸ್.ಎಸ್., ಕಣವಿ, ತಿರುಮಲೇಶ್ ಹೋಗಲಿ, ಕುವೆಂಪು, ಪು.ತಿ.ನ., ಕೆ.ಎಸ್.ನ.ರ ಪದ್ಯಗಳೂ ಇಲ್ಲ ಎಂದರೆ? ಆದರೆ ನಿಜವಾದ ವಿಮರ್ಶೆಯ ಜಾಯಮಾನವೇ ಹಾಗೆ. ಅದು ಜನಪ್ರಿಯ ಗ್ರಹಿಕೆಗಳ ದಾಕ್ಷಿಣ್ಯಕ್ಕೆ ಸಿಕ್ಕದೆ, ತನ್ನದೇ ತಿಳುವಳಿಕೆಯ ಆತ್ಮವಿಶ್ವಾಸದೊಂದಿಗೆ ಸಾಹಿತ್ಯ ಲೋಕದ ನಿಜಗಳನ್ನು ಸಾಧಿಸುತ್ತಾ ಹೋಗುತ್ತದೆ. ಪ್ರತಿಭೆಯ ಈ ದಿಟ್ಟತನವೇ ಸಾಹಿತ್ಯ ಪ್ರವಚನಕ್ಕೂ, ಸಾಹಿತ್ಯ ವಿಮರ್ಶೆಗೂ ಇರುವ ಮುಖ್ಯ ವ್ಯತ್ಯಾಸ. ಅದು ಸ್ಥಾಪಿತ ಅಭಿಪ್ರಾಯಗಳನ್ನು ಪ್ರಶ್ನೆ ಮಾಡುತ್ತಲೇ, ಆ ಪ್ರಶ್ನೆಗಳಿಗೆ ಉತ್ತರ ಕಂಡುಕೊಳ್ಳುವ ಮೂಲಕ ಸಾಹಿತ್ಯ ಅಧ್ಯಯನದ ದಿಗಂತಗಳನ್ನು ವಿಸ್ತರಿಸುತ್ತಾ ಹೋಗುತ್ತದೆ. ನೀವು ಒಪ್ಪಬಹುದು, ಬಿಡಬಹುದು; ವಿಮರ್ಶೆ ತನ್ನ ದಾರಿಯನ್ನು ತಾನೇ ಕಂಡುಕೊಂಡು ಆ ದಾರಿಯ ಅನುಭವದ ಬೆಳಕಲ್ಲಿ ಕೃತಿಯ ಮೌಲ್ಯಮಾಪನ ಮಾಡುತ್ತ, ಕೃತಿಯನ್ನು ಬೆಳಸುತ್ತ ಮತ್ತು ಬೆಳಗಿಸುತ್ತ ಹೋಗುತ್ತದೆ.

ವಿಮರ್ಶೆಗೆ, ಕೃತಿಗೆ ಹೊರತಾದ ಸ್ವಾಯತ್ತತೆ ಎಂಬುದಿದೆಯೇ ಎಂಬುದು ಬಹು ಚರ್ಚಿತ ಪ್ರಶ್ನೆ. ಆದರೆ, ವಿಮರ್ಶೆ ಕೃತಿ ವಿಮರ್ಶೆಯಾಗಷ್ಟೇ ಅಲ್ಲ; ಒಂದು ಕಾಲ ಸಂದರ್ಭದ ಸಮಷ್ಠಿ ವಿಮರ್ಶೆಯೂ ಆಗಿ, ಮನುಷ್ಯ ಪ್ರಜ್ಞೆಯ ಆಯಾಮಗಳನ್ನು ವಿಸ್ತರಿಸುತ್ತಾ ಹೋಗುವ ಮೂಲಕವೇ ಕೃತಿಯ ಅರ್ಥ ಸಂಪತ್ತನ್ನು ಅನ್ವೇಷಿಸುವ ಪ್ರಯತ್ನವೂ ಆಗುತ್ತಿರುವುದನ್ನು ನಾವು ಆಧುನಿಕ ಸಾಹಿತ್ಯ, ವಿಮರ್ಶೆಯುದ್ದಕ್ಕೂ ಗಮನಿಸುತ್ತಿದ್ದೇವೆ. ಹೀಗಾಗಿ ಯಾವುದೇ ಒಂದು ಸಾಹಿತ್ಯ ಪ್ರಕಾರದಲ್ಲಿ ಹತ್ತು ಅತ್ಯುತ್ತಮಗಳನ್ನು ಆಯುವಾಗ, ಲೇಖಕರು ಮುಖ್ಯವಾಗದೆ, ಆಯಾ ಪ್ರಕಾರದ ಒಟ್ಟಾರೆ ಸಾಹಿತ್ಯವೇ ವಿಮರ್ಶೆಯ ಕೇಂದ್ರ ಕಳಕಳಿಯಾಗುತ್ತದೆ. ಉದಾಹರಣೆಗೆ, ಕಾವ್ಯ ಕುರಿತಂತೆ ಚೆನ್ನಿಯವರನ್ನು ಕನ್ನಡದ ಅತ್ಯುತ್ತಮ ಹತ್ತು ಕವನಗಳಿಗೆ ಬದಲಾಗಿ ಕವಿಗಳನ್ನು ಆಯಿರಿ ಎಂದು ಹೇಳಿದ್ದರೆ, ಅದು ಅವರಲ್ಲಿ ಬೇರೆಯೇ ವಿಮರ್ಶಾ ತರಂಗಗಳನ್ನೆಬ್ಬಿಸಿ ಅವರ ಪಟ್ಟಿಯೇ ಬೇರೆಯಾಗುತ್ತಿತ್ತೇನೋ! ಅಥವಾ ಕನ್ನಡ ಕಾವ್ಯದ ಎಲ್ಲ ಪಂಥಗಳನ್ನೂ ಪ್ರತಿನಿಧಿಸುವಂತಹ ಹತ್ತು ಅತ್ಯುತ್ತಮ ಪದ್ಯಗಳನ್ನು ಆರಿಸಿರಿ ಎಂದು ಹೇಳಿದ್ದರೂ(ಅದನ್ನು ಚೆನ್ನಿ ಮಾಡುತ್ತಿದ್ದರೋ ಇಲ್ಲವೋ ತಿಳಿಯದು!), ಪಟ್ಟಿ ಸಂಪೂರ್ಣ ಭಿನ್ನವಾಗಿರುತ್ತಿತ್ತು. ಅಷ್ಟೇ ಅಲ್ಲ, ಚೆನ್ನಿಯವರನ್ನು ಬಿಟ್ಟು ಬೇರೆಯವರು ಈ ಆಯ್ಕೆ ಮಾಡಿದ್ದಲ್ಲಿ, ಪಟ್ಟಿ ಬೇರೆಯಾಗಿಯೇ ಇರುತ್ತಿತ್ತು ಎಂಬುದನ್ನು ನಾನು ಪ್ರಾಯೋಗಿಕವಾಗಿಯೇ ಕಂಡುಕೊಂಡೆ. ನಾನು ಸುಮ್ಮನೆ, ಇತರ ಒಂದಿಬ್ಬರು ವಿಮರ್ಶಕ ಮಿತ್ರರಿಗೆ ಅವರ ಹತ್ತನ್ನು ಆಯಲು ಹೇಳಿದೆ. ಅವರು ಸಿದ್ಧ ಪಡಿಸಿದ ಪಟ್ಟಿಗಳಲ್ಲಿ ಚೆನ್ನಿಯವರ ಪಟ್ಟಿಯ ಅರ್ಧಕ್ಕರ್ಧ ಹೆಸರುಗಳು ಮಾಯವಾಗಿದ್ದವು!

ನಾನು ಇದನ್ನು ಏಕೆ ಹೇಳುತ್ತಿದ್ದೇನೆಂದರೆ, ಸಾಹಿತ್ಯ ವಿಮರ್ಶೆ ಎಷ್ಟೇ ತಾತ್ವಿಕವಾಗಿ ಬೆಳೆಯುತ್ತಿದ್ದರೂ, ಅದರಲ್ಲಿ ವ್ಯಕ್ತಿನಿಷ್ಠ ನೋಟವೂ ಒಂದು ಪ್ರಧಾನ ಆಯಾಮವಾಗಿ ಕ್ರಿಯಾಶೀಲವಾಗಿರುತ್ತದೆ ಎಂಬುದನ್ನು ನಾವು ಅಲ್ಲಗಳೆಯಲಾಗುವುದಿಲ್ಲ ಎಂಬುದನ್ನು

ಸೂಚಿಸಲು. ಏಕೆಂದರೆ, ಸಾಹಿತ್ಯ ಅಧ್ಯಯನವೆಂಬುದೇ ಒಂದು ರೀತಿಯಲ್ಲಿ ಮಾನವನ ಅಂತರಂಗದ ಚೈತನ್ಯಶೀಲತೆಯ ಒಂದು ಅಧ್ಯಯನವೂ ಆಗಿರುವುದರಿಂದ, ವಿಮರ್ಶಕನೂ ಒಬ್ಬ ವ್ಯಕ್ತಿಯಾಗಿ ಅದಕ್ಕೆ ಒಂದು ವೈಯುಕ್ತಿಕ ನೆಲೆಯಲ್ಲೂ ಪ್ರತಿಕ್ರಿಯಿಸುತ್ತಲೇ, ತನ್ನ ಸಾಹಿತ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳುತ್ತಿರುತ್ತಾನೆ. ಆದರೆ ಆ ವಿಮರ್ಶಕನ ವೈಯುಕ್ತಿಕತೆ ಎಷ್ಟರ ಮಟ್ಟಿಗೆ ಸಾಹಿತ್ಯದ ಆಂತರಿಕ ಸ್ವಾಯತ್ತತೆಗೆ ಭಂಗ ಬಾರದಂತೆ ಅದನ್ನು ಅರ್ಥ ಮಾಡಿಕೊಳ್ಳಲು ಯತ್ನಿಸಿದೆ ಎಂಬುದರ ಮೇಲೆ ವಿಮರ್ಶೆಯ ಗುಣಮಟ್ಟ ನಿರ್ಧರಿತವಾಗುತ್ತದೆ. ಚೆನ್ನಿ ಈ ದೃಷ್ಟಿಯಿಂದ, ಗಂಭೀರವಾಗಿ ಬರೆಯಲು ಕೂತಾಗಲೆಲ್ಲ ನಮ್ಮ ಶ್ರೇಷ್ಠ ವಿಮರ್ಶಕರಲ್ಲಿ ಒಬ್ಬರೆನಿಸಿ ಕೊಂಡಿರುತ್ತಾರೆ.

ಸದ್ಯದ ತಮ್ಮ ಆಯ್ಕೆಯನ್ನು ಚೆನ್ನಿಯವರು ಗಂಭೀರ ಅಧ್ಯಯನ, ವಿವೇಚನೆ ಹಾಗೂ ಔಚಿತ್ಯ ಪ್ರಜ್ಞೆಗಳೊಂದಿಗೆ ಮಾಡಿದ್ದಾರೆಂದು ನಾನು ನಂಬಿದ್ದೇನೆ. ಏಕೆಂದರೆ ಅವರು ಆಯ್ದಿರುವ ಹತ್ತೂ ಪದ್ಯಗಳು, ಈವರೆಗಿನ ಕನ್ನಡ ವಿಮರ್ಶೆ ಒಂದಲ್ಲ ಒಂದು ಕಾಲಘಟ್ಟದಲ್ಲಿ ಒಂದಲ್ಲ ಒಂದು ಕಾರಣಕ್ಕೆ ಶ್ರೇಷ್ಠವೆಂದು ಗುರುತಿಸಿದ ಪದ್ಯಗಳೇ ಆಗಿವೆ. ಚೆನ್ನಿಯವರ ಈ ಪಟ್ಟಿಯಲ್ಲಿ Shocking ಎನ್ನುವುದು ಏನಾದರೂ ಇದ್ದರೆ, ಅಂತಹ Shock ಇಂದು ಕನ್ನಡ ಸಾಹಿತ್ಯಕ್ಕೆ ಅಗತ್ಯವಾಗಿತ್ತೆಂದೇ ನಾನು ಭಾವಿಸಿದ್ದೇನೆ. ಸಾಮಾಜಿಕ ನ್ಯಾಯ, ಲಿಂಗ ನ್ಯಾಯ, ಪ್ರಾದೇಶಿಕ ನ್ಯಾಯಗಳ ಹೆಸರಲ್ಲಿ ಸಾಹಿತ್ಯ ಲೋಕದ ಪುಢಾರಿಗಳು ರಾಜಕೀಯ ಪುಢಾರಿಗಳ ಸಹಕಾರದೊಂದಿಗೆ ಎಲ್ಲ ಅನ್ಯಾಯಗಳನ್ನು ನಡೆಸಿ, ಸಾಹಿತ್ಯವನ್ನು ವೋಟ್ ಬ್ಯಾಂಕ್ ರಾಜಕಾರಣಕ್ಕೆ ಬಳಸಬಹುದಾದ ಸರಕನ್ನಾಗಿ ಮಾರ್ಪಡಿಸಿದ್ದಾರೆ.

ಇದರ ಇತ್ತೀಚಿನ ಉದಾಹರಣೆ, ರಾಜ್ಯ ಸರ್ಕಾರ ಬ್ಯಾರಿ ಸಾಹಿತ್ಯ ಅಕಾಡೆಮಿಯನ್ನು ಸ್ಥಾಪಿಸಲು ಮುಂದಾಗಿರುವುದು. ಸುಮಾರು ಇಪ್ಪತ್ತು ವರ್ಷಗಳ ಹಿಂದೆ ಸರ್ಕಾರ ತುಳು, ಕೊಂಕಣಿ ಹಾಗೂ ಕೊಡವ ಸಾಹಿತ್ಯ ಅಕಾಡೆಮಿಗಳನ್ನು ಸ್ಥಾಪಿಸಲು ಹೊರಟಾಗ ದೊಡ್ಡ ವಿವಾದವೇ ಉಂಟಾಯಿತು. ಏಕೆಂದರೆ, ಸರ್ಕಾರದ ಈ ನಿರ್ಧಾರ ಯಾವುದೇ ಭಾಷಾ ಜನಸಮುದಾಯದ ಬೇಡಿಕೆಯನ್ನಾಧರಿಸಿರಲಿಲ್ಲ. ಮೂಲತಃ ಅದು ಆಗ ಅಧಿಕಾರ ರಾಜಕಾರಣದ ನಡುಮಧ್ಯೆ ಇದ್ದ ವೀರಪ್ಪ ಮೊಯ್ಲಿಯವರ ಚುನಾವಣಾ ಕ್ಷೇತ್ರದ ವೋಟ್ ಬ್ಯಾಂಕ್ ರಾಜಕಾರಣವೇ ಆಗಿತ್ತು. ಆಗ ರಾಜ್ಯ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿದ್ದ ಜಿ.ಎಸ್.ಶಿವರುದ್ರಪ್ಪನವರು, ರಾಜ್ಯ ಸಾಹಿತ್ಯ ಅಕಾಡೆಮಿಯು ಕನ್ನಡ ಸಾಹಿತ್ಯ ಅಕಾಡೆಮಿಯಾಗಿರದೆ, ಕರ್ನಾಟಕ ಸಾಹಿತ್ಯ ಅಕಾಡೆಮಿ ಆಗಿರುವುದರಿಂದ; ಆದರ ಆಶ್ರಯದಲ್ಲೇ, ಕನ್ನಡ ಸಾಹಿತ್ಯದ ಜೊತೆಯಲ್ಲೇ, ಕನ್ನಡದ ಇತರ ಜೊತೆಗಾರ ಭಾಷೆಗಳ ಸಾಹಿತ್ಯ ಪೋಷಣೆ ನಡೆಯುವುದು ಅವುಗಳ ಗುಣಮಟ್ಟದ ದೃಷ್ಟಿಯಿಂದ ಕೂಡಾ ಒಳ್ಳೆಯದು ಎಂಬ ಸದ್ಭಾವನೆಯಿಂದ, ಈ ಅಕಾಡೆಮಿಗಳ ಸ್ಥಾಪನೆಯನ್ನು ವಿರೋಧಿಸಿದ್ದರು. ಆ ಹೊತ್ತಿಗಾಗಲೇ ಜಿ.ಎಸ್.ಎಸ್. ಯಾರ ಶಿಫಾರ್ಸೂ ಇಲ್ಲದೆ, ತುಳು ಭಾಷೆಯ ಉತ್ತಮ ಕೃತಿಗಳು ಪ್ರಕಟವಾದಲ್ಲಿ, ಅವುಗಳಿಗೂ ಅಕಾಡೆಮಿ ಬಹುಮಾನಗಳನ್ನು ನೀಡುವ ಯೋಜನೆಯನ್ನು ಆರಂಭಿಸಿದ್ದರು. ಆದರೂ, ಅವರನ್ನು ಹಾಗೂ ಅವರೊಂದಿಗೆ ಸಹಮತ ಹೊಂದಿದ್ದವರನ್ನು ಭಾಷಾ ಸಂಕುಚಿತವಾದಿಗಳೆಂದು, ಇಂದು ಬ್ಯಾರಿ ಸಾಹಿತ್ಯ ಅಕಾಡೆಮಿ ಸ್ಥಾಪನೆಯನ್ನು ಬಹುಮುಖಿ ಸಂಸ್ಕೃತಿ ಪೋಷಣೆಯ ಹೆಸರಲ್ಲಿ ಸಮರ್ಥಿಸುತ್ತಿರುವ ಪ್ರಗತಿಪರೇಶ್ವರರೇ ಖಂಡಿಸಿದ್ದರು.

ಆದರೆ ಒಂದು ಅಕಾಡೆಮಿಯ ಅಗತ್ಯವೇಳುವಂತಹ ಮೌಲಿಕ ಸಾಹಿತ್ಯ ನಿರ್ಮಾಣ

ಮಾಡುವ ಸೃಷ್ಟಿಶೀಲ ಶಕ್ತಿಯನ್ನು-ಅದರ ಜೊತೆಗೇ ಅದಕ್ಕೆ ಓದಿನ ಮನ್ನಣೆ ನೀಡುವಂತಹ ಜನಸ್ತೋಮವನ್ನೂ-ಒಂದು ಭಾಷೆ ತನ್ನ ಸ್ವಂತ ಶಕ್ತಿಯಿಂದ ರೂಢಿಸಿಕೊಳ್ಳುವ ಮುನ್ನವೇ ಅದಕ್ಕೊಂದು ಅಕಾಡೆಮಿ ವ್ಯವಸ್ಥೆ ಒದಗಿಸಿವುದು ಅಕಾಡೆಮಿಯ ಪರಿಕಲ್ಪನೆಯ ಘನತೆಗಷ್ಟೇ ಅಲ್ಲ, ಸಾಹಿತ್ಯದ ಪರಿಕಲ್ಪನೆಯ ಘನತೆಗೂ ಕುಂದುಂಟು ಮಾಡುವಂತಹ ಅಗ್ಗದ ಕ್ರಮವಾಗುವುದಿಲ್ಲವೇ? ಈ ಅಕಾಡೆಮಿಗಳಿಂದಾಗಿ ಈಗ ತುಳು, ಕೊಂಕಣಿ, ಕೊಡವ ಭಾಷೆಗಳಲ್ಲಿ ಎಂತಹ ಸಾಹಿತ್ಯ ಸೃಷ್ಟಿಯಾಗುತ್ತಿದೆ, ಇದಕ್ಕೆ ಎಷ್ಟು ಓದುಗ ವರ್ಗ ಸೃಷ್ಟಿಯಾಗಿದೆ ಹಾಗೂ ಕ್ರಮೇಣ ಎಂತಹ ಸಾಹಿತಿಗಳಿಗೆ ಮನ್ನಣೆ ನೀಡಬೇಕಾಗಿದೆ ಎಂಬುದನ್ನು ಈ ಭಾಷಾ ಸಮುದಾಯಗಳ ಸಾರಸ್ವತ ಲೋಕದ ಜನರೇ ದಿಟ್ಟವಾಗಿ ಹೇಳಬೇಕಿದೆ. ಇದಕ್ಕೆ ಬದಲಾಗಿ ಕರ್ನಾಟಕ ಸಾಹಿತ್ಯ ಅಕಾಡೆಮಿಯಲ್ಲೇ ಈ ಭಾಷೆಗಳ ಸಾಹಿತಿಗಳಿಗೆ ಸೂಕ್ತ ಪ್ರಾತಿನಿಧ್ಯ ನೀಡಿ, ಆಯಾ ಭಾಷೆಗಳಲ್ಲಿ ಗಮನಾರ್ಹ ಕೃತಿಗಳು ಪ್ರಕಟವಾದಾಗ ಒಂದು ತೌಲನಿಕ ಚರ್ಚೆಯ ನೆಲೆಯಲ್ಲಿ ಅದರ ಮೌಲ್ಯಮಾಪನ ಮಾಡಿ, ಅವಕ್ಕೆ ಸೂಕ್ತ ಮನ್ನಣೆ ನೀಡುವುದರ ಮೂಲಕ ಆ ಭಾಷಾ ಸಾಹಿತ್ಯಗಳನ್ನು ಇನ್ನಷ್ಟು ಮೌಲಿಕವಾಗಿ ಬೆಳೆಸಬಹುದಿತ್ತಲ್ಲವೇ? ಇನ್ನು ಬ್ಯಾರಿ ಭಾಷೆಯಲ್ಲಿ ಯಾವ ಲಿಪಿಯೊಂದಿಗೆ ಎಂತಹ ಮತ್ತು ಎಷ್ಟು ಸಾಹಿತ್ಯ ಬರುತ್ತಿದೆ ಹಾಗೂ ಅದಕ್ಕೆಂತಹ ಓದುಗ ವರ್ಗವಿದೆ ಎಂಬುದರ ಒಂದು ಸಮೀಕ್ಷೆಯನ್ನೂ ಮಾಡದೆ, ರಾಜಕೀಯ ಒತ್ತಡಕ್ಕೆ ಮಣಿದು ಅದಕ್ಕೊಂದು ಅಕಾಡೆಮಿ ಸ್ಥಾಪಿಸುವುದನ್ನು ಈಗ ಕನ್ನಡದಲ್ಲಿ ಅತ್ಯುತ್ತಮ ಸಾಹಿತ್ಯ ನಿರ್ಮಿಸುತ್ತಿರುವ ನಮ್ಮ ಬ್ಯಾರಿ ಗೆಳೆಯರು ಹೇಗೆ ಸ್ವಾಗತಿಸುವರೋ ಕಾದು ನೋಡಬೇಕಾಗಿದೆ!

ಹೀಗಾಗಿ, ಇಂತಹ ದಟ್ಟ ಅಸಾಹಿತ್ಯಿಕ ವಾತಾವರಣದಲ್ಲಿ, ಸಾಹಿತ್ಯದಿಂದ ಸಾಹಿತ್ಯದ ಪರಿಮಳದ ಹೊರತಾಗಿ ಇನ್ನೆಲ್ಲಾ 'ಪರಿಮಳ'ಗಳು ಹೊಮ್ಮುವುದು ಸಹಜವೇ ಆಗಿದೆ. ಮಾನವ ಸಹಜ ಸಾಹಿತ್ಯಾಭಿವ್ಯಕ್ತಿಗೆ ತೆರೆದುಕೊಂಡ ಎಷ್ಟೋ ಎಳೆಯರು ಈ 'ಪರಿಮಳ'ಗಳಿಂದ ವಿಚಲಿತರಾಗಿರುವುದೂ ಉಂಟು. ಇಂತಹ ಸಂದಿಗ್ಧ ಸಂದರ್ಭದಲ್ಲಿ ಚೆನ್ನಿಯವರು ಸಾಹಿತ್ಯದ ಮೂಲ ಸೆಲೆಗಳಿಗೇ ಕೈ ಹಾಕಿ ಹುಟ್ಟಿಸಿರುವ Shock ಸದ್ಯದ ಕನ್ನಡ ಸಾಹಿತ್ಯ ಸಂದರ್ಭಕ್ಕೆ ಕೆಟ್ಟದ್ದಕ್ಕಿಂತ ಒಳ್ಳೆಯದನ್ನೇ ಮಾಡುವುದು ಎಂದು ನಾವು ನಂಬಿದ್ದೇವೆ. ಹಾಗೇ ಈ ಲೇಖನ ಮಾಲೆಯ ಮುಂದಿನ ಲೇಖನಗಳು ಕೂಡಾ ಇನ್ನಷ್ಟು ಆಶ್ಚರ್ಯಗಳು ಹಾಗೂ ಕಂಪನಗಳೊಂದಿಗೆ ಮೂಡಿ ಬಂದು, ಕನ್ನಡ ಸಾಹಿತ್ಯ ಲೋಕದ ತತ್ಕಾಲೀನ ಕೊಳೆಗಳನ್ನು ತೊಳೆಯುತ್ತದೆ ಎಂದು ನಾವು ನಿರೀಕ್ಷಿಸಿದ್ದೇವೆ. ಈ ದೃಷ್ಟಿಯಿಂದ ನಮ್ಮ ಈ ಪ್ರಯತ್ನ ಕನ್ನಡ ಸಾಹಿತ್ಯ ಲೋಕದ ಪುನರಾನಾವರಣದ ಒಂದು ಪ್ರಾಮಾಣಿಕ ಪ್ರಯತ್ನವೇ ಆಗಿದೆ ಎಂಬುದನ್ನು ನಮ್ಮ ಓದುಗರೂ ಒಪ್ಪುತ್ತಾರೆಂಬುದು ನಮ್ಮ ಭಾವನೆ. ಇದಕ್ಕಿಂತ ಹೆಚ್ಚಾಗಿ, ಇದು ನಮ್ಮ ಓದುಗರನ್ನು ಒಳ್ಳೆಯ ಸಾಹಿತ್ಯದ ಓದಿನ ಕಡೆ ಪ್ರೇರೇಪಿಸದರೆ, ನಮ್ಮ ಈ ಪ್ರಯತ್ನ ಸಾರ್ಥಕ.

ಕನ್ನಡ ಸಾಹಿತ್ಯದ ಜೊತೆಗೇ, ಕನ್ನಡ ಚಲನಚಿತ್ರ, ಕರ್ನಾಟಕದ ರಾಜಕಾರಣ ಮತ್ತು ಕ್ರೀಡಾ ಕ್ಷೇತ್ರದ ಹತ್ತು ಅತ್ಯುತ್ತಮಗಳನ್ನು ಆಯುವ ಪ್ರಯತ್ನವನ್ನೂ ಈ ಸುವರ್ಣ ಕರ್ನಾಟಕ ಸರಣಿಯಲ್ಲಿ ನಾವು ಮಾಡುತ್ತಿದ್ದೇವೆ. 'ಸುವರ್ಣ ಕರ್ನಾಟಕದ ಸುವರ್ಣ ಪುಟಗಳು' ಎಂಬ ಮಾಲಿಕೆಯಲ್ಲಿ ಪ್ರಕಟವಾಗುತ್ತಿರುವ ಈ ಲೇಖನಗಳು ಒಟ್ಟಾರೆಯಾಗಿ ಓದುಗರ ಕುತೂಹಲ ಕೆರಳಿಸುವುದೆಂದು ಭಾವಿಸಿದ್ದೇವೆ.

❊

ಆಖೈರಾಗದ ಪದ್ಯದ ಹತ್ತು ಸಾಲುಗಳು

– ಡಾ.ರಾಜೇಂದ್ರ ಚೆನ್ನಿ

ಆಧುನಿಕ ಕನ್ನಡದ ೧೦ ಅತ್ಯುತ್ತಮ ಕವನಗಳು :

೧. ನನ್ನ ನಲ್ಲ	–	ಮಧುರ ಚೆನ್ನ
೨. ಸಣ್ಣ ಸೋಮವಾರ	–	ದ.ರಾ.ಬೇಂದ್ರೆ
೩. ಶ್ರೀರಾಮನವಮಿಯ ದಿವಸ	–	ಎಂ.ಗೋಪಾಲಕೃಷ್ಣ ಅಡಿಗ
೪. ಹರಿವ ನೀರಿದು	–	ಗಂಗಾಧರ ಚಿತ್ತಾಲ
೫. ಸಮಗಾರ ಭೀಮವ್ವ	–	ಎಚ್.ಎಸ್.ಶಿವಪ್ರಕಾಶ್
೬. ಹೇಳತೇನ ಕೇಳ	–	ಚಂದ್ರಶೇಖರ ಕಂಬಾರ
೭. ಮಾಯಿಯ ಮೂರು ಮುಖಗಳು	–	ಶಂಕರ ಮೊಕಾಶಿ ಪುಣೇಕರ
೮. ಪಾಂಡು-ಮಾದ್ರಿ	–	ರಾಮಚಂದ್ರ ಶರ್ಮ
೯. ಸಖಿಗೀತ	–	ದ.ರಾ.ಬೇಂದ್ರೆ
೧೦. ಚಿಂತಾಮಣಿಯಲ್ಲಿ ಕಂಡ ಮುಖ	–	ಎಂ.ಗೋಪಾಲಕೃಷ್ಣ ಅಡಿಗ

ಗೆಳೆಯ ಡಿ.ಎಸ್.ನಾಗಭೂಷಣರು ಆಧುನಿಕ ಕನ್ನಡದ ಹತ್ತು ಅತ್ಯುತ್ತಮ ಪದ್ಯಗಳನ್ನು ಆಯ್ಕೆ ಮಾಡಿ ಅವುಗಳ ಬಗ್ಗೆ ಬರೆಯಿರಿ ಎಂದಾಗ ಅವಿವೇಕದ ಗಳಿಗೆಯೊಂದರಲ್ಲಿ ಒಪ್ಪಿಕೊಂಡುಬಿಟ್ಟೆ. ಈಗ ಪಟ್ಟಿ ಸಿದ್ಧ ಮಾಡಿಕೊಂಡ ಮೇಲೆ ಹಳಹಳಿ, ಆತಂಕ ಮತ್ತು ತೀವ್ರವಾದ ಪಾಪಪ್ರಜ್ಞೆಗಳು ಕಾಡುತ್ತಿವೆ. ಮಾಡಬಾರದ ಪಾತಕವೊಂದನ್ನೆಸಗಿ ಏಳುಜನ್ಮಗಳಿಗೂ ಕಾವ್ಯದ ಸ್ಪರ್ಶವಾಗದೆ ಅಂತರ್‌ಪಿಶಾಚಿಯಾಗುವೆನೆಂಬ ಹೆದರಿಕೆ ಉಂಟಾಗಿದೆ. ಕಾರಣಗಳು ಹೀಗಿವೆ : ಕೊಳ್ಳುಬಾಕ ಸಂಸ್ಕೃತಿ ಹಾಗೂ ಅದರ ಹಿರಿಮಗನಾಗಿರುವ ಆಧುನಿಕ ಮಾಧ್ಯಮ ಸಂಸ್ಕೃತಿಯ ಮೆಚ್ಚಿನ ಆಟವಾಗಿರುವ 'ಟಾಪ್ ೧೦' ಆಯ್ಕೆಯನ್ನು ಕನ್ನಡ ಕಾವ್ಯಕ್ಕೂ ಲಗಾಯಿಸುವ ಕೆಲಸದಲ್ಲಿ ಭಾಗಿಯಾಗಿಬಿಟ್ಟೆನೇ ಎನ್ನುವ ಆತಂಕ. ಅದಕ್ಕಿಂತ ಹೆಚ್ಚಾಗಿ, ಆಯ್ಕೆಪಟ್ಟಿಯನ್ನು ತಯಾರಿಸಲು ಬೇಕಾಗಿರುವ ಹುಂಬ ಆತ್ಮವಿಶ್ವಾಸ ಅಥವಾ ನಿರುಮ್ಮಳವಾದ ತೀರ್ಪುಗಾರನ ಖಚಿತತೆಯ ಬದಲಾಗಿ ನನಗೆ ಕಾವ್ಯದ ಬಗ್ಗೆ ಯಾವಾಗಲೂ ಇರುವ ಹೊಯ್ದಾಟ, ಸಂದಿಗ್ಧತೆ ಮತ್ತು ಪ್ರೇಮಿಯೊಬ್ಬನಲ್ಲಿ ಇರುವ ಖಾಯಂ ಆದ ಆತಂಕದ ಮನಸ್ಥಿತಿ. ಈ ಹೊಯ್ದಾಟದ ಮನಸ್ಸಿನಲ್ಲಿ ಈಗಲೂ ಇರುವ ಹಲವು ಪ್ರಶ್ನೆಗಳು ಹೀಗಿವೆ : ಅತ್ಯುತ್ತಮವಾದ ಆಧುನಿಕ ಕನ್ನಡ ಕಾವ್ಯ ಕುವೆಂಪು ಅವರ 'ಮಲೆಗಳಲ್ಲಿ ಮದುಮಗಳು' ಹಾಗೂ ದೇವನೂರು ಮಹಾದೇವರ 'ಕುಸುಮಬಾಲೆ' ಕೃತಿಗಳಲ್ಲಿ ಇದೆ ಅಲ್ಲವೆ? ಮೂಲತಃ

ಚಂಪೂ ಮಾದರಿಯನ್ನು ಮಾತ್ರ ಸ್ವೀಕರಿಸುತ್ತ ಬಂದಿರುವ ಕನ್ನಡ ಸಂವೇದನೆಗೆ ಕಾವ್ಯ, ಗದ್ಯ, ಕಥನ ಎನ್ನುವ ಪಶ್ಚಿಮದ ಸಾಹಿತ್ಯ ಪ್ರಕಾರಗಳ ವಿಭಜನೆ ಅಸಹಜವಲ್ಲವೆ? ಮುದ್ರಣ ಸಂಸ್ಕೃತಿ ಹಾಗೂ ಅದರ ಬೆನ್ನೆಲುಬಾಗಿರುವ ಬಂಡವಾಳಶಾಹಿಯ ಹಿಡಿತದಲ್ಲಿ ಪಶ್ಚಿಮವು ಇಂಥ ಪ್ರಕಾರಗ್ಗಳ ವಿಭಜನೆಯನ್ನು ಆಖೈರಾಗಿ ಮಾಡಿಕೊಂಡಿದ್ದರೆ, ಕನ್ನಡದ ಶ್ರೇಷ್ಠ ಬರಹ ಈ ವಿಭಜನೆಗಳ ಮಧ್ಯದ ಕ್ರಿಯಾಶೀಲವಾದ ಬಹು ಸ್ತರಗಳ ಇಂಬಿನೊಳಗೆ ಬಂದಿದೆಯಲ್ಲವೆ; ಹೀಗಾಗಿ ಆಧುನಿಕ ಕನ್ನಡದ ಶ್ರೇಷ್ಠ ಕಾವ್ಯ, ಕಥೆ, ಕಾದಂಬರಿಯೆಂದು ಕರೆಯುವ ಪ್ರಕಾರಗಳಲ್ಲಿರಬಹುದೆ ಎನ್ನುವ ಅನುಮಾನ ನನಗಿದೆ.

ಆಧುನಿಕ ಜಗತ್ತಿನ ಅಪ್ಪಟ ಶ್ರೇಷ್ಠ ಕಾವ್ಯವನ್ನು ಮಾತ್ರ ಹೆಸರಿಸುತ್ತೇನೆಂದು ಸೂಫಿ ಸಂತರ ಹುಚ್ಚನ್ನು ಹೋಲುವ ಕಾವ್ಯ ಶ್ರದ್ಧೆಯಿಂದ ಹೊರಟರೆ, ಬಹುಶಃ ನನ್ನ ಪಟ್ಟಿಯ ಹತ್ತೂ ಪದ್ಯಗಳು ಬೇಂದ್ರೆಯವರ ಪದ್ಯಗಳಾಗಿರುತ್ತಿದ್ದವು. ಕಾವ್ಯದ ಸ್ವಯಂಪೂರ್ಣವಾದ ಅಂದರೆ ಅರಿವು, ಭಾವನೆ, ಜ್ಞಾನವೆಲ್ಲವುಗಳಿಗೆ ಸಮಗ್ರವಾದ ನೆಲೆಯಾಗಿರುವಂಥ ಪ್ರತಿ ಲೋಕವನ್ನು, ಕಲ್ಪವೃಕ್ಷ ವೃಂದಾವನವನ್ನು ಕಟ್ಟಿದವರು ಬೇಂದ್ರೆಯವರೇ ಎಂದು ನನಗೆ ಅನಿಸಿದೆ. ಹಲವಾರು ಕವಿಗಳು ಅವರಂಥ ಕಾವ್ಯ ಪ್ರತಿಭೆ ಹೊಂದಿದ್ದರೂ, ತಮ್ಮ ಇತರ ಹಂಗುಗಳನ್ನು ಬಿಟ್ಟು ಬರೆಯಲಿಲ್ಲ. ಹೀಗಾಗಿ ಕನ್ನಡದ ಶ್ರೇಷ್ಠ ಪದ್ಯಗಳಲ್ಲಿ ಎಲ್ಲೋ ಒಂದೆಡೆ ವಾದ ಮಂಡನೆ, ನ್ಯಾಯಬದ್ಧತೆ, ಕಾವ್ಯಶಿಲ್ಪದ ಬಗೆಗಿನ ಅತಿಯಾದ ಎಚ್ಚರ, ಕಾವ್ಯದ ಉಪಕರಣಗಳು ಮಾತ್ರವಾಗಿರಬೇಕಾದ ಪ್ರತಿಮೆ ಸಂಕೇತಗಳಲ್ಲಿಯೇ ಮುಳುಗಿಹೋಗುವ ಹಂಬಲಗಳು ನುಸುಳಿಬಿಡುತ್ತವೆ. ನಾನು ಶುದ್ಧ ಕಾವ್ಯದ ಪರವಾಗಿ ವಕಾಲತ್ತು ಮಾಡುತ್ತಿಲ್ಲ. ಜಗತ್ತನ್ನು ಅರಿಯಲು ಕಾವ್ಯ ಸ್ವಯಂಪೂರ್ಣವಾದ ಮಾರ್ಗವೆನ್ನುವ ಶ್ರದ್ಧೆಯಿಂದ ಬೇಂದ್ರೆಯವರು ಬರೆದಂತೆ ಇತರ ಕವಿಗಳು ಬರೆಯಲಿಲ್ಲವೆಂದು ನನಗೆ ಅನ್ನಿಸಿದೆ. ನನಗೆ ಅತ್ಯಂತ ಪ್ರಿಯವಾಗಿರುವ ಆಧುನಿಕ ಕನ್ನಡದ ಹಲವಾರು ಪದ್ಯಗಳನ್ನು ಪಟ್ಟಿಯಲ್ಲಿ ಸೇರಿಸದಿದ್ದಕ್ಕೆ ಈ ಅನಿಸಿಕೆಯೂ ಕಾರಣವಾಗಿದೆ.

ಇನ್ನೊಂದು ಅತಂಕವನ್ನು ನಾನು ಹೇಳಿಬಿಡುತ್ತೇನೆ. ಕನ್ನಡದ ಶ್ರೇಷ್ಠ ಪದ್ಯವೊಂದು ಖಂಡಿತವಾಗಿ ಇದೆ. ಇದರ ಕೆಲವು ಸಾಲುಗಳನ್ನು ಪಂಪ, ನಾರಣಪ್ಪ, ವಚನಕಾರರು, ಬೇಂದ್ರೆ, ಅಡಿಗರು ಬರೆದಿದ್ದಾರೆ. ಶಿವಪ್ರಕಾಶ್, ಕಂಬಾರ, ಮಂಜುನಾಥ, ಸರ್ವಮಂಗಳ, ಸವಿತಾ, ಪ್ರತಿಭಾ – ಇವರು ಅದಕ್ಕೆ ತಮ್ಮ ಸಾಲುಗಳನ್ನು ಸೇರಿಸುತ್ತಿದ್ದಾರೆ. ಇದು ಇಂದಿಗೂ, ಎಂದಿಗೂ ಆಖೈರಾಗದ ಪದ್ಯ. ಅಪೂರ್ವವಾದ ಕಾವ್ಯ ವಿವೇಕವಿರುವ ಕನ್ನಡ ಸಂವೇದನೆ, ಈ ಎಲ್ಲರ ಶ್ರೇಷ್ಠ ಸಾಲುಗಳನ್ನು ಹೆಣೆದು ಈ ಪದ್ಯವನ್ನು ಬರೆದು, ತಿದ್ದಿ ಬರೆಯುತ್ತಲೇ ಇರುತ್ತದೆ. ನಾನು ಆಯ್ಕೆ ಮಾಡಿಕೊಂಡಿರುವ ಹತ್ತು ಪದ್ಯಗಳು ಕನ್ನಡದ ಈ ಶ್ರೇಷ್ಠ ಪದ್ಯದ ಕೆಲವು ಸಾಲುಗಳು ಮಾತ್ರ.

ವಸಾಹತುಶಾಹಿ ತಂದ ಆಧುನಿಕತೆ, ಹಂಚಿಹೋಗಿದ್ದ ಕನ್ನಡನಾಡನ್ನು ನುಡಿಯ ಮೂಲಕ ಕಟ್ಟುವ ಸಾಮುದಾಯಿಕ ಪ್ರಯತ್ನ ಹಾಗೂ ಅದರ ಜೊತೆಗೆ ಕನ್ನಡ ಅಸ್ಮಿತೆಯನ್ನು ಕಟ್ಟಿಕೊಳ್ಳುವ ಪ್ರಯತ್ನಗಳ ಕೂಡಲದಲ್ಲಿ ಆಧುನಿಕ ಕನ್ನಡ ಕಾವ್ಯ ಹುಟ್ಟಿತು. ವಸಾಹತುಶಾಹಿ ಆಧುನಿಕತೆ ಸಾಮಾನ್ಯವಾಗಿ ತರುವ ವಿಸ್ಮೃತಿ ಅಥವಾ ಸಾಂಸ್ಕೃತಿಕ ಪರಂಪರೆಗಳೊಳಗಿನ ಹಠಾತ್ ಕಡಿತ ಕನ್ನಡ ಕಾವ್ಯಲೋಕದಲ್ಲಿ ಆಗಲಿಲ್ಲ. ಏಕೆಂದರೆ ನವೋದಯದ ಪ್ರಮುಖ

ಕವಿಗಳಿಗೆ ಕನ್ನಡ ಕಾವ್ಯ ಪರಂಪರೆಯನ್ನು ತಿರಸ್ಕರಿಸುವ ಅವಶ್ಯಕತೆ ಕಾಣಲಿಲ್ಲ. ಜೊತೆಗೆ ಅವರಿಗೆಲ್ಲ ಕನ್ನಡದ ಓದಿನ ದೊಡ್ಡ ಶಕ್ತಿಯೂ ಇತ್ತು. ಕನ್ನಡ ಪರಂಪರೆಯನ್ನು ಓದದೆ ಆಧುನಿಕ ಜಗತ್ತನ್ನು ಅರಿಯುತ್ತೇವೆ ಎನ್ನುವ ಪಶ್ಚಿಮ ಬುದ್ಧಿ ನಮಗೆ ಬಂದದ್ದು ನವ್ಯದ ಪರ್ವಕಾಲದಲ್ಲಿ. ಸಂಪೂರ್ಣ ವಿಸ್ಮೃತಿ ಬರುವ ಅಪಾಯವಿರುವುದು ಜಾಗತೀಕರಣಕ್ಕೆ ಸಂಪೂರ್ಣವಾಗಿ ಶರಣಾಗುತ್ತಿರುವ ಇಂದಿನ ದಿನಗಳಲ್ಲಿ. ಪರಂಪರೆಯನ್ನು ಅತ್ಯಂತ ತೀವ್ರವಾಗಿ ಪ್ರಶ್ನಿಸಿದ ಕುವೆಂಪು ಅವರಿಗೆ ಕನ್ನಡ ಕಾವ್ಯದ ಪರಂಪರೆಯ ಅತ್ಯಂತ ಆತ್ಮೀಯವಾದ ಪ್ರಬುದ್ಧವಾದ ಪರಿಚಯವಿದ್ದಿತು. ಆದ್ದರಿಂದಲೆ ಅವರಿಗೆ ತಾವು ಸೃಷ್ಟಿಸಿಕೊಂಡ ಕಾವ್ಯಭಾಷೆ ಅವರ ಆಧುನಿಕ ಬಂಡಾಯಗಾರ ಪ್ರಜ್ಞೆಗೆ ಅಸಮರ್ಪಕವೆನಿಸಲಿಲ್ಲ. 'ಗರಿ' ಸಂಕಲನದ ಬೇಂದ್ರೆಯವರಿಗೆ ಪಂಪನ ಮುಂದಿನ ಕಾವ್ಯದ ಲಯಗಳನ್ನು ಬಳಸಿಕೊಳ್ಳುವುದು, ಶಿಷ್ಟ ಕಾವ್ಯ ಭಾಷೆಯ ಜೊತೆಗೆ ಧಾರವಾಡದ ಅಚ್ಚ ದೇಸಿಯನ್ನು ಬಳಸಿಕೊಳ್ಳುವುದರಲ್ಲಿ ಯಾವ ವಿರೋಧಾಭಾಸಗಳೂ ಕಾಣಲಿಲ್ಲ. ಅಲ್ಲದೆ ಆಧುನಿಕ ಕಾವ್ಯವೆಂದರೆ, ಅದು ಆಡುಮಾತಿನಲ್ಲಿಯೇ ಇರಬೇಕು ಎನ್ನುವ ಉಗ್ರ ಸಿದ್ಧಾಂತವೂ ಅವರಿಗೆ ಬೇಕಾಗಿರಲಿಲ್ಲ. ಏಕೆಂದರೆ ಕಾವ್ಯವೂ ಆಡುಮಾತು ಎಂದು ನಂಬಿರುವ ಜನಸಮುದಾಯಗಳ ವಾರಸುದಾರರಾದ ಕನ್ನಡದ ಕವಿಗಳಿಗೆ ಈಗಲೂ ಆಡುಮಾತಿನ ಸಮಕಾಲೀನತೆ ಮುಖ್ಯವಾಗಿಯೇ ಇಲ್ಲ. ಅದು ಆಧುನಿಕತೆಯ ಲಾಂಛನವಾಗಬೇಕಾದ ಅವಶ್ಯಕತೆಯೂ ಕಂಡಿಲ್ಲ. ಶಿವಪ್ರಕಾಶರಿಗಾಗಲೀ, ಕಂಬಾರರಿಗಾಗಲೀ ಕಾವ್ಯದ ಭಾಷೆ ಬಹುಸ್ತರೀಯವಾಗಿರುವುದರಿಂದ ಆಧುನಿಕ ನುಡಿಗಟ್ಟು ಅದರ ಒಂದು ಅಂಶವಾಗಿದೆ. ನವೋದಯ ಕವಿಗಳಿಗೂ ಇದೇ ನಂಬಿಕೆ ಇದ್ದುದ್ದರಿಂದ ಕನ್ನಡ ಕಾವ್ಯದ ಭಾಷೆ ತನ್ನ ಸ್ವಾಯತ್ತತೆಯನ್ನು ಕಾಪಾಡಿಕೊಂಡಿತು. ಜನರ ಭಾಷೆ (ಸಾಮಾನ್ಯ ಜನರ ಭಾಷೆ)ಯಲ್ಲಿ ಬರೆಯುವ ಮೂಲಕ Politically Correct ಆಗಬೇನ್ನುವ ಧೋರಣೆಯಿಂದ ಬಂದ ಪ್ರತಿಭಟನಾತ್ಮಕ ಕಾವ್ಯ ಸೊರಗಿದ್ದು ಇದಕ್ಕೆ ಸಂಬಂಧಪಟ್ಟಿದೆ.

ಕಾವ್ಯ ಭಾಷೆಯ ಸ್ವಾಯತ್ತತೆಯನ್ನು ವಿವೇಕಪೂರ್ಣವಾಗಿ ಆಯ್ಕೆ ಮಾಡಿಕೊಂಡ ಕನ್ನಡ ಕಾವ್ಯ ಆಧುನಿಕ ಜಗತ್ತಿನ ಎಲ್ಲ ಸಂಕೀರ್ಣ ಜಂಜಡಗಳೊಂದಿಗೆ ಸಂವಾದ ಮಾಡಿಕೊಂಡು ಬೆಳೆದಿದೆ. ಹೊಸ ಯುಗದ ಹಲವು ವಿಕಾರಗಳನ್ನು ಬೇಂದ್ರೆಯವರ 'ಕುರುಡು ಕಾಂಚಾಣ', 'ನರಬಲಿ', ಕುವೆಂಪು ಅವರ 'ಕಲ್ಕಿ' ಮತ್ತು ಹಲವಾರು ಪದ್ಯಗಳು ಟೀಕಿಸಿರುವ ವ್ಯಗ್ರತೆ ಮತ್ತು ತೀವ್ರತೆಗಳು ಕನ್ನಡ ಕಾವ್ಯದ ಒಂದು ಪ್ರಮುಖ ಎಳೆಯಾಗಿವೆ. ಮುಂದೆ ಅಡಿಗರ ಪ್ರಗತಿಶೀಲ ಹಂತದ ಕಾವ್ಯದಲ್ಲಿ, 'ಭೂಮಿಗೀತ'ದಲ್ಲಿ ಅವರ ವಿಡಂಬನಾತ್ಮಕ ಪದ್ಯಗಳಲ್ಲಿ, ಲಂಕೇಶರ ಪದ್ಯಗಳಲ್ಲಿ, ದಲಿತ–ಬಂಡಾಯ ಮಾರ್ಗದ ಕವನಗಳಲ್ಲಿ ಈ ಎಳೆ ಮುಂದುವರಿದಿದೆ. ಅಂದರೆ ಕನ್ನಡ ಕಾವ್ಯಕ್ಕೆ ಸದ್ಯದ ಹಂಗನ್ನು ಬಿಡಲಾಗಿಲ್ಲ. ಅದು ಲೋಕಸಂವಾದಿಯಾಗಿಯೇ ಉಳಿದಿದೆ. ಸಾಂಸ್ಕೃತಿಕವಾಗಿ ಇದು ಅತ್ಯಂತ ಮುಖ್ಯವೆಂದೇ ನಾನು ಭಾವಿಸಿದ್ದೇನೆ.

ಇಷ್ಟಾದರೂ ಕನ್ನಡದ ಶ್ರೇಷ್ಠ ಪದ್ಯಗಳು ಲೋಕಸಂವಾದಿಯಾದ ಈ ವಲಯದ ಬದಲಾಗಿ; ಮನುಷ್ಯಲೋಕ ತನ್ನೊಂದಿಗೆ ಸಂವಾದಿಯುಗುವ ಆಪ್ತವಲಯದಲ್ಲಿ ಸೃಷ್ಟಿಯಾಗಿವೆಯೆಂದು ನನಗೆ ಅನ್ನಿಸಿದೆ. ತಾಳಿ ಹಾಗಲ್ಲ. ಎರಡು ಪರಸ್ಪರ ವಿಮುಖಿಯಾದ ಅನುಭವ ವಲಯಗಳಿವೆಯೆಂದು ನಾನು ಹೇಳುತ್ತಿಲ್ಲ. ಮತ್ತೆ ಮತ್ತೆ ನಮ್ಮನ್ನು ಕಾಡುವ, ಸಾಂತ್ವನಗೊಳಿಸುವ, ಎಚ್ಚರಗೊಳಿಸುವ ಕನ್ನಡ ಪದ್ಯಗಳು ಸಾರ್ವಜನಿಕವಲ್ಲದ ಅಂತರಂಗದ

ಲೋಕಗಳೊಂದಿಗೆ ಮೆಲುದನಿಯಲ್ಲಿ ಮಾತನಾಡುತ್ತವೆ. ಲೋಕಸಂವಾದಿಯಾಗಿಯೇ, ಆರ್ದ್ರವಾಗಿ, ಜೀವಪ್ರೀತಿ ತುಳುಕುವ ಪಾಬ್ಲೋ ನೆರೊಡನ ಪದ್ಯಗಳಂಥ ಪದ್ಯಗಳು ಕನ್ನಡದಲ್ಲಿ ಕಡಿಮೆ. **ಬೇಂದ್ರೆ**ಯವರ ನಿಬಿಡವೂ, ಅದ್ಭುತವೂ ಆದ ಕಾವ್ಯ ಪ್ರಪಂಚದಿಂದ **'ಸಣ್ಣ ಸೋಮವಾರ'** ಮತ್ತು 'ಸಖಿಗೀತ'ಗಳನ್ನು ಆಯ್ಕೆಮಾಡಿಕೊಂಡಿದ್ದಕ್ಕೆ ಇದೇ ಕಾರಣ. ಈ ಎರಡೂ ಪದ್ಯಗಳಲ್ಲಿ ಕವಿ ತನ್ನನ್ನೇ ದೂರ ನಿಂತು ನೋಡಿಕೊಂಡು, ಆತ್ಮಚರಿತ್ರೆಯ ಸಾಮಾನ್ಯ ವಿವರಗಳಲ್ಲೇ ಅಸಾಮಾನ್ಯವಾದ ಅನುಭವಗಳನ್ನು ಪಡೆದುಕೊಂಡು; ಅದನ್ನು ಹದವಾದ ಅಪೂರ್ವ ಸಂಯಮದ ಭಾಷೆಯಲ್ಲಿ ಹೇಳುತ್ತಾನೆ. ಇಹ–ಪರಗಳ ಕೂಡಲು ಕನ್ನಡ ಕಾವ್ಯದ ನಿರಂತರ ವಸ್ತುವಾಗಿದೆ. ಈ ವಸ್ತುವನ್ನು ಇಷ್ಟು ಹದವಾಗಿ ನಿರ್ವಹಿಸುವ ಅದ್ಭುತ ಸೃಜನಶೀಲತೆ ನನಗೆ ಇಷ್ಟವಾಗುತ್ತದೆ. 'ಜೋಗಿ'ಯ ಮೊನಾಲಿಸಾ ಗುಣ, 'ಬೆಳಗು' ಪದ್ಯದ ಫಲವಂತಿಕೆ ಇವುಗಳಿಗೆ ಮನಸ್ಸು ಹೊಯ್ದಾಡಿದರೂ ಕೊನೆಗೆ ಈ ಪದ್ಯಗಳು ಉತ್ತಮವೆನಿಸಿದವು. 'ನನಗೂ ನಿನಗೂ ಅಂಟಿದ ನಂಟಿನ' ಒಲುಮೆಯ ಲೋಕದ 'ಸಖಿಗೀತ', ಮನಸ್ಸಿನ ಎಲ್ಲ ಮಜಲುಗಳನ್ನು ಆವರಿಸಿ ಕೊಂಡು ಬಿಡುತ್ತದೆ.

ಇನ್ನೊಂದು ಲೇಖನದಲ್ಲಿ ನಾನು ಇದನ್ನು ಹೇಳಿದ್ದೇನೆ. ಏನೆಂದರೆ ಕನ್ನಡ ಕಾವ್ಯಲೋಕದಲ್ಲಿ ಯಾವ ಮುನ್ನೆಚ್ಚರಿಕೆಯೂ ಇಲ್ಲದೆ ಇಳಿದು ಬರುವ ನವಿಲು, ನಿತ್ಯದ ಲೋಕವನ್ನು ಬೆಳಗಿಸಿ ಹೋಗುವ ವಿಸ್ಮಯ. ಇದು ಕನ್ನಡ ಕಾವ್ಯಕ್ಕೆ ವಚನಕಾರರು ನೀಡಿದ ಬಳುವಳಿಯಾಗಿದೆ. ಅಂದರೆ Transcendental ಆಗಿರುವ ಅನುಭವವನ್ನು ನಿತ್ಯದ ಬದುಕಿನ ಲೋಕದಲ್ಲಿ ಕಂಡು, ಯಾವ ತಬ್ಬಿಬ್ಬು ಇಲ್ಲದೆ ಬಾಲ್ಯದ ಗೆಳೆಯನೊಂದಿಗೆ ಮಾತನಾಡಿದ ಹಾಗೆ ಅದರ ಜೊತೆ ಮಾತನಾಡುವುದು. ಇದು ಅಲ್ಲಮನಿಗಿಂತ ಅಕ್ಕನಿಗೆ ಹೆಚ್ಚು ಸಹಜವಾಗಿ ಒಲಿದು ಬಂದ ಕ್ರಮವಾಗಿದೆ. **ಮಧುರ ಚೆನ್ನ**ರ ಕಾವ್ಯಕ್ಕೆ ಈ ಗುಣವಿದೆ. ಕನ್ನಡ ಕಾವ್ಯದ ಜೀವಾಳವೇ ಆಗಿರುವ ಅಕ್ಕನ ದನಿ 'ನನ್ನ ನಲ್ಲ' ಪದ್ಯದಲ್ಲಿದೆ. ವಿಭಿನ್ನವಾದ ಜಿಜ್ಞಾಸೆಯ ಮಾರ್ಗದ ಮೂಲಕ ಅಡಿಗರ **'ಶ್ರೀ ರಾಮನವಮಿಯ ದಿವಸ'** ಇಂಥದೇ ಅನುಭವ ಸ್ಥಿತಿಯನ್ನು ತಲುಪುತ್ತದೆ. ಕೇಡಿನ ಶಾಶ್ವತ ಮತ್ತು ಪುರುಷೋತ್ತಮನಾಗುವ ಮನುಷ್ಯನ ಹಂಬಲಗಳನ್ನು ಅಡಿಗರು ಈ ಪದ್ಯದಲ್ಲಿ ಮೂರ್ತಗೊಳಿಸಿದ್ದಾರೆ. 'ಭೂಮಿಗೀತ', 'ಭೂತ' ಪದ್ಯಗಳ ಅನುಭವ ತೀವ್ರತೆ ಈ ಪದ್ಯಕ್ಕಿಲ್ಲವಾದರೂ ತಾವು ತಮ್ಮ ಕಾವ್ಯದುದ್ದಕ್ಕೂ ಶೋಧಿಸಿದ ವಸ್ತುವನ್ನು ಈ ಪದ್ಯದಲ್ಲಿ ಅಡಿಗರು ಒಟ್ಟಂದವಾಗಿ ತಂದಿದ್ದಾರೆ ಅನ್ನಿಸುತ್ತದೆ. **ಶಂಕರ ಮೊಕಾಶಿ ಪುಣೇಕರ** ಅವರ **'ಮಾಯಿಯ ಮೂರು ಮುಖಗಳು'** ನನಗೆ ಇಷ್ಟವಾಗುವುದಕ್ಕೆ ಕಾರಣವೆಂದರೆ ಪ್ರಾಸಬದ್ಧವಾದ, ಎಚ್ಚರ ತಪ್ಪಿದರೆ ಯಾಂತ್ರಿಕವಾಗಿಬಿಡಬಹುದಾಗಿದ್ದ ಲಯದ ಮೂಲಕ ಅತ್ಯಂತ ಸಂಕೀರ್ಣವಾದ ಅಸಾಂಪ್ರದಾಯಕವಾದ ಮಾಯಿಯ ಮುಖಗಳನ್ನು ಅದು ಅನಾವರಣಗೊಳಿಸುವ ರೀತಿ. ಬೇಂದ್ರೆ ಕಾವ್ಯ ಕನ್ನಡಕ್ಕೆ ನೀಡಿದ ಅತ್ಯಂತ ಮಹತ್ವಪೂರ್ಣ Motif ಅಂದರೆ ತಾಯಿ. ಅದು **ಲಂಕೇಶ**ರ 'ಅವ್ವ', **ಶಿವಪ್ರಕಾಶ**ರ 'ಸಮಗಾರ ಭೀಮವ್ವ'ಗಳಲ್ಲಿ ಪುನರ್ ವ್ಯಾಖ್ಯಾನವಾಗುವ ರೀತಿ ಅಪರೂಪದ್ದು. ಕಂಬಾರ ಕಾವ್ಯ ಕೂಡ ಮಾತೃಮುಖಿಯಾದ ಕಾವ್ಯವೇ ಅಲ್ಲವೇ?

'ಸಮಗಾರ ಭೀಮವ್ವ' ಕನ್ನಡ ಅನುಭಾವಿ ಪರಂಪರೆಯ ಚಾರಿತ್ರಿಕವಾದ ಸತ್ಯತೆಯನ್ನು; ಚರಿತ್ರೆ ಹಾಗೂ ಪುರಾಣಗಳನ್ನು ನಿತ್ಯಸತ್ಯಗಳಾಗಿ ನೋಡುವ ಶಕ್ತಿಯನ್ನು ಬಳಸಿಕೊಳ್ಳುವ ಪದ್ಯ. ನಾಗಲಿಂಗನಿಗೆ ಭೀಮವ್ವನ ಆಸರೆ ಬೇಕಾಗುವುದು ಕೂಡ ಕನ್ನಡ ಸಾಹಿತ್ಯದಲ್ಲಿ

ಪುನರಾವರ್ತನೆಯಾಗುವ ಅಮ್ಮನಿಗೆ ಶರಣಾಗುವ ಅನುಭವದ ಕಥನವಾಗಿದೆ. ಭೀಮವ್ವ, 'ಸಂಸ್ಕಾರ'ದ ಚಂದ್ರಿ, 'ಒಡಲಾಳ'ದ ಸಾಕವ್ವ, 'ಕುಸುಮಬಾಲೆ'ಯ ಅವ್ವಂದಿರು, 'ಮಲೆಗಳಲ್ಲಿ ಮದುಮಗಳು' ಕಾದಂಬರಿಯ ಪೀಂಚಲು – ಹೀಗೆ ಪುರುಷ ಅಹಂಕಾರವನ್ನು ಇಲ್ಲವಾಗಿಸುವ ಅವ್ವಂದಿರ ದೊಡ್ಡ ಪರಂಪರೆಯೆ ಕನ್ನಡಕ್ಕಿದೆ. ಜೊತೆಗೆ ನಾಗಲಿಂಗನಿಗೆ ತಗುಲಿದ ರೋಗವನ್ನು ವಿಕ್ಟೋರಿಯಾ ರಾಣಿಯ ಕಾಲದ ನಾಣ್ಯಗಳ ಜೊತೆಗೆ ಶಿವಪ್ರಕಾಶ್ ಸಂಬಂಧಿಸುವ ರೀತಿ ಅಪೂರ್ವವಾದುದು. ಶೋಷಕರ ಸೊಕ್ಕಿನ ಇತಿಹಾಸ ಕಥನಗಳನ್ನು ಇಕ್ಕಿಮೆಟ್ಟುವ ಶರೀಫ, ನಾಗಲಿಂಗ, ವಚನಕಾರರ ಅಥೆಂಟಿಕ್ ಇತಿಹಾಸವನ್ನು ಕನ್ನಡ ಸಂವೇದನೆ ಇಂದು ಶೋಧಿಸುತ್ತಿದ್ದರೆ, ಇದಕ್ಕೆ ಶಿವಪ್ರಕಾಶರ ಕಾವ್ಯದ ಕೊಡುಗೆ ದೊಡ್ಡದು.

ವಸಾಹತುಶಾಹಿ ಆಧುನಿಕತೆಯ ಬರುವಿಕೆಯ ಹಳವಂಡಗಳನ್ನು ಕೇಳುವ **ಕಂಬಾರರ 'ಹೇಳತೇನ ಕೇಳ'** ಇಂಥದೇ ಪ್ರಕ್ರಿಯೆಯನ್ನು ಅದ್ಭುತವಾಗಿ ನಿರ್ವಹಿಸುತ್ತದೆ. ಆಧುನಿಕತೆ ತರುವ ವಿಘಟನೆಯನ್ನು ಅನಾಧುನಿಕವಾದ ಜನಪದೀಯ ಮಾರ್ಗದಲ್ಲಿ ಕಥಿಸುವ ಬಗೆ ಇಷ್ಟವಾಗುತ್ತದೆ. ಮುಖ್ಯವಾಗಿ ಆಧುನಿಕ ಪೂರ್ವ ಜಗತ್ತನ್ನು ಸಂಭ್ರಮ ಹಳಹಳಿಕೆಯಿಂದ ನೋಡುತ್ತಲೇ, ಹೊಸ ಜಗತ್ತಿನ ಇಬ್ಬಂದಿ ಪ್ರಜ್ಞೆಯನ್ನು ಅವರು ವಿವರಿಸುವುದರಲ್ಲಿ ಸಂಕೀರ್ಣತೆ ಇದೆ.

ಅಪ್ಪಟ ಆಧುನಿಕರಂತೆ ಬರೆದು ಕನ್ನಡ ಸಂಪ್ರದಾಯಕ್ಕೆ ಅನ್ಯರೆನಿಸುವ ಅಪಖ್ಯಾತಿಯನ್ನು ಪಡೆದ **ರಾಮಚಂದ್ರಶರ್ಮ**ರ ನಿಜವಾದ ನೆಲೆಗಳೇ ಬೇರೆ. ಅದನ್ನು ಇಲ್ಲಿ ಚರ್ಚಿಸುವುದಿಲ್ಲ. ಅವರು ಬಯಸುತ್ತಿದ್ದ ಕಾವ್ಯ ಶಿಲ್ಪದ ಪರಿಪೂರ್ಣತೆಯ ಆಚೆಗೆ; ವ್ಯಕ್ತ–ಅವ್ಯಕ್ತಗಳ ಬಗೆಗಿನ ಆತಂಕಿಕವಾದ ಭಾವನೆಯನ್ನು ಬಹು ಸಾಂದ್ರವಾಗಿ ಹೇಳುವ **'ಪಾಂಡು–ಮಾದ್ರಿ'** ಸುಂದರವಾದ ಪದ್ಯ.

ಕನ್ನಡ ಕಾವ್ಯದ ಸತ್ವವಿರುವುದು ಅದರ ಮಾನವತಾವಾದಿ ಶ್ರದ್ಧೆಯಲ್ಲಿ ಎಂದು ನಾನು ನಂಬಿದ್ದೇನೆ. ಈ ಶ್ರದ್ಧೆಯನ್ನು ನೇರವಾಗಿ ತಾತ್ವಿಕವಾಗಿ ಹೇಳುತ್ತಲೇ ಗ್ರಹಿಕೆಯ ತೀವ್ರತೆಯಿಂದಲೇ ಕಾವ್ಯದ ಗುಣವನ್ನು ಪಡೆದುಕೊಳ್ಳುವ **ಗಂಗಾಧರ ಚಿತ್ತಾಲರ 'ಹರಿವ ನೀರಿದು'** ನನಗೆ ಸ್ವಲ್ಪ ವಿಕ್ಷಿಪ್ತವಾದ ಕಾರಣಕ್ಕೆ ಪ್ರಿಯವಾದದ್ದು. ತಾತ್ವಿಕತೆ ಕಾವ್ಯವಲ್ಲವೆನ್ನುವ ನನಗೆ; ಈ ಪದ್ಯ ಕಾವ್ಯದ ಇನ್ನೊಂದು ಪ್ರಬುದ್ಧ ಮಾರ್ಗವಾಗಿ, ಸಾಧ್ಯತೆಯಾಗಿ ಕಂಡಿದೆ.

ಯಾವುದಕ್ಕೆ ಮತ್ತೆ ಮತ್ತೆ ಮರಳುತ್ತೇವೆಯೋ ಅದು ಕಾವ್ಯವೆನ್ನುತ್ತಾರೆ. ಈ ಹತ್ತು ಪದ್ಯಗಳು ನನಗಂತೂ ಮತ್ತೆ ಮತ್ತೆ ಮರಳುವ ತಾಣಗಳಾಗಿವೆ.

ಡಾ. ರಾಜೇಂದ್ರ ಚೆನ್ನಿ ಕನ್ನಡದ ಸುಪ್ರಸಿದ್ಧ ಸಾಹಿತ್ಯ ವಿಮರ್ಶಕರು ಹಾಗೂ ಸಂಸ್ಕೃತಿ ಚಿಂತಕರು. ವಿಸ್ತೃತ ಓದಿನ ಹಾಗೂ ಬಹುಮುಖಿ ಚಿಂತನದ ಅನನ್ಯ ಒಳನೋಟಗಳುಳ್ಳ ಸಾಹಿತ್ಯ ವಿಮರ್ಶೆ ಬರೆಯುವ ಚೆನ್ನಿ ಕುವೆಂಪು ವಿಶ್ವ ವಿದ್ಯಾಲಯದ ಇಂಗ್ಲಿಷ್ ವಿಭಾಗದ ಮುಖ್ಯಸ್ಥರು. 'ಅಧ್ಯಯನ', 'ಅಮೂರ್ತತೆ ಮತ್ತು ಪರಿಸರ', 'ನಡುಹಗಲಿನಲ್ಲಿ ಕಂದೀಲುಗಳು', 'ಮಾಸ್ತಿ' ಮತ್ತು 'ಬೇಂದ್ರೆ' ಇವರ ವಿಮರ್ಶಾ ಸಂಕಲನಗಳು. ಚೆನ್ನಿ ಕನ್ನಡದಲ್ಲಿ ಸಣ್ಣ ಕಥೆಗಳನ್ನು, ಇಂಗ್ಲಿಷ್‌ನಲ್ಲಿ ಕಾದಂಬರಿಗಳನ್ನು ಬರೆದಿದ್ದಾರೆ.

ನಮ್ಮ ಕಾಲದ ಹೊಸ ವ್ಯಾಖ್ಯಾನಗಳು

– ಡಾ. ಗಿರಡ್ಡಿ ಗೋವಿಂದರಾಜ

ಕನ್ನಡದ ಹತ್ತು ಅತ್ಯುತ್ತಮ ಸಣ್ಣಕತೆಗಳು :

೧. ವೆಂಕಟಿಗನ ಹೆಂಡತಿ	– ಮಾಸ್ತಿ ವೆಂಕಟೇಶ ಅಯ್ಯಂಗಾರ್
೨. ನಾನು ಕೊಂದ ಹುಡುಗಿ	– ಆನಂದ
೩. ಕ್ಷಿತಿಜ	– ಶಾಂತಿನಾಥ ದೇಸಾಯಿ
೪. ಕತೆಯಾದಳು ಹುಡುಗಿ	– ಯಶವಂತ ಚಿತ್ತಾಲ
೫. ಸೂರ್ಯನ ಕುದುರೆ	– ಯು.ಆರ್.ಅನಂತಮೂರ್ತಿ
೬. ಮುಟ್ಟಿಸಿಕೊಂಡವನು	– ಪಿ.ಲಂಕೇಶ್
೭. ಯಂಗ್ಟನ ಪುಂಗಿ	– ಕೆ.ಪಿ.ಪೂರ್ಣಚಂದ್ರ ತೇಜಸ್ವಿ
೮. ಅಮಾಸ	– ದೇವನೂರ ಮಹಾದೇವ
೯. ಹುಲಿ ಸವಾರಿ	– ವಿವೇಕ ಶಾನಭಾಗ
೧೦. ಅಮ್ಮಚ್ಚಿ ಎಂಬ ನೆನಪು	– ವೈದೇಹಿ

ಕಳೆದ ಶತಮಾನದ ಕನ್ನಡದ ಹತ್ತು ಅತ್ಯುತ್ತಮ ಸಣ್ಣ ಕತೆಗಳನ್ನು ಆಯ್ದುಕೊಳ್ಳುವ ಕೆಲಸ ನಾನಂದುಕೊಂಡಷ್ಟು ಸರಳವಾಗಿರಲಿಲ್ಲ. ಕನ್ನಡದಲ್ಲಿ ಸಣ್ಣ ಕತೆ ಎಷ್ಟೊಂದು ಕ್ರಿಯಾಶೀಲ ಹಾಗೂ ಚೈತನ್ಯಶಾಲಿಯಾಗಿದೆಯೆಂದರೆ, ನೆನಪು ಮಾಡಿಕೊಳ್ಳಲು ಯತ್ನಿಸತೊಡಗಿದೊಡನೆ ಹಲವಾರು ಕತೆಗಳು ಒಟ್ಟಿಗೆ ಕಣ್ಣೆದುರು ಬರುತ್ತವೆ. ಅತ್ಯುತ್ತಮ ಕತೆಗಳೆಂದು ಬೇರೆ ಬೇರೆ ಕಾರಣಗಳಿಗಾಗಿ ಲಕ್ಷ್ಯ ಸೆಳೆಯುತ್ತವೆ. ಅವುಗಳಲ್ಲಿ ಹತ್ತಕ್ಕೆ ಸಂಖ್ಯೆಯನ್ನು ಮಿತಗೊಳಿಸಬೇಕೆಂಬ ಸೂಚನೆಯನ್ನು ಅನುಸರಿಸುವಾಗ ನನಗೆ ಮಹತ್ವದವೆಂದು ಕಂಡ ಕೆಲವು ಕತೆಗಳನ್ನು ಅನಿವಾರ್ಯವಾಗಿ ಕೈಬಿಡಬೇಕಾಯಿತು. ಈ ಪಟ್ಟಿಯಲ್ಲಿನ ೧೦ ಕತೆಗಳು ಅಂತಿಮವಾಗಿ ನಾನು ಆರಿಸಿದ ಕತೆಗಳು.

ಇಲ್ಲಿಯ ಆಯ್ಕೆಗೆ ಮುಖ್ಯ ಮಾನದಂಡ ನಮ್ಮ ಕತೆಗಳು ಆಧುನಿಕತೆಗೆ ಸ್ಪಂದಿಸಿದ ರೀತಿ. ಆಧುನಿಕತೆಯಲ್ಲಿ ಆಧುನಿಕೋತ್ತರ ಚಿಂತನೆಯೂ ಸೇರಿಕೊಳ್ಳುತ್ತದೆ. ಈ ದೃಷ್ಟಿಯಿಂದ ಈ ಕತೆಗಳು ಇಂದಿನ ಸಮಾಜ–ಸಂಸ್ಕೃತಿಗಳೊಂದಿಗೆ ನಿಕಟ ಸಂಬಂಧ ಪಡೆದು ಕೊಂಡಿರುವುದರ ಜೊತೆಗೆ, ಕಲಾತ್ಮಕವಾಗಿಯೂ ಶ್ರೇಷ್ಠವಾಗಿವೆ. ಈ ಕತೆಗಳನ್ನು ನಾವು ಜೋಡಿಸಿರುವುದು ಕಾಲಾನುಕ್ರಮದಲ್ಲಿಯೇ ಹೊರತು, ಗುಣಾನುಕ್ರಮದಲ್ಲಿ ಅಲ್ಲ. ಆಯ್ಕೆಯ ಮಿತಿ ಮತ್ತು ಮಾನದಂಡದ ಕಾರಣದಿಂದಾಗಿ, ಅನೇಕ ಕಾರಣಗಳಿಂದ ನನಗೆ ಮೆಚ್ಚುಗೆಯಾಗಿರುವ ಆನಂದಕಂದರ 'ಜಾಡರ ಜಾನಪ್ಪ', ಕೊರಡ್ಕಲ್ ಶ್ರೀನಿವಾಸರಾಯರ 'ಧನಿಯರ ಸತ್ಯನಾರಾಯಣ', ರಾಘವೇಂದ್ರ ಖಾಸನೀಸರ 'ತಬ್ಬಲಿಗಳು' ಮೊದಲಾದ ಕತೆಗಳನ್ನು ಇಲ್ಲಿ ಸೇರಿಸಿಕೊಳ್ಳಲಾಗಲಿಲ್ಲ.

ಈ ಕತೆಗಳು, ಕಾಲಕಾಲಕ್ಕೆ, ಸಾಮಾಜಿಕ ಬದಲಾವಣೆಗಳಿಗೆ ನಮ್ಮ ಲೇಖಕರು ಹೇಗೆ ಸ್ಪಂದಿಸಿದರು ಎಂಬುದಕ್ಕೆ ನಿದರ್ಶನಗಳಾಗಿವೆ.

ಮಾಸ್ತಿಯವರ 'ವೆಂಕಟಿಗನ ಹೆಂಡತಿ' ಒಂದು ವರ್ಗದ ಮೌಲ್ಯ ವ್ಯವಸ್ಥೆಯನ್ನು ಇನ್ನೊಂದು ವರ್ಗದ ಮೌಲ್ಯ ವ್ಯವಸ್ಥೆಯ ದೃಷ್ಟಿಕೋನದಿಂದ ನೋಡಿದಾಗ ಆಗುವ ಭಿನ್ನತೆಗಳನ್ನು ಕುತೂಹಲಕರವಾಗಿ ಚಿತ್ರಿಸುತ್ತದೆ. ಆ ಇನ್ನೊಂದು ವರ್ಗ ಮೊದಲಿನದರ ಬೆಳಕಿನಲ್ಲಿ ತನ್ನ ದೃಷ್ಟಿಕೋನದಲ್ಲಿ ತಿದ್ದುಪಡಿ ಮಾಡಿಕೊಳ್ಳುವ ಕ್ರಮ ಇಲ್ಲಿ ಮಹತ್ವದ್ದಾಗಿದೆ. ಈ ಸಮಸ್ಯೆ ಮುಂದಿನ ಕತೆಗಳಲ್ಲಿ ಹೆಚ್ಚು ವೈವಿಧ್ಯಪೂರ್ಣವೂ, ವ್ಯಾಪಕವೂ ಆದ ತಿರುವುಗಳನ್ನು ಪಡೆದುಕೊಳ್ಳುತ್ತದೆ.

ಉದಾಹರಣೆಗೆ, **ಆನಂದರ 'ನಾನು ಕೊಂದ ಹುಡುಗಿ'**ಯಲ್ಲಿ ಇದು ಎರಡು ಸಂಸ್ಕೃತಿಗಳ ಮುಖಾಮುಖಿಯಾಗುತ್ತದೆ. ಒಂದು ಆದಿಮ ದೇಸಿ ಸಂಸ್ಕೃತಿ, ಇನ್ನೊಂದು ಪಶ್ಚಿಮದ ಪ್ರಭಾವದಿಂದಾದ ಆಧುನಿಕ ಸಂಸ್ಕೃತಿ. ಆಧುನಿಕ ಸಂಸ್ಕೃತಿ ತನ್ನ ಮೌಲ್ಯ ವ್ಯವಸ್ಥೆಯೇ ಸರಿ ಎಂಬ ಅಹಂಕಾರದಿಂದ ದೇಸಿ ಸಂಸ್ಕೃತಿಯ ಮೇಲೆ ನಡೆಸುವ ಆಕ್ರಮಣ ಮತ್ತು ಅದರ ದುಷ್ಪರಿಣಾಮಗಳನ್ನು ಚಿತ್ರಿಸುತ್ತದೆ. ಆಧುನಿಕ ಸಂಸ್ಕೃತಿಗೆ ತನ್ನ ತಪ್ಪಿನ ಅರಿವಾಗುವ ಹೊತ್ತಿಗೆ ದೇಸಿ ಸಂಸ್ಕೃತಿ ಆಗಲೆ ರಿಪೇರಿ ಮಾಡಲಾಗದಷ್ಟು ಹಾನಿ ಮಾಡಿಬಿಟ್ಟಿರುತ್ತದೆ. ವಸಾಹತುವಾದದ ಹಿನ್ನೆಲೆಯಲ್ಲಿ ಈ ಕತೆ ಹೆಚ್ಚಿನ ಪ್ರಸ್ತುತತೆ ಪಡೆದುಕೊಂಡಿದೆ.

ಶಾಂತಿನಾಥ ದೇಸಾಯಿಯವರ 'ಕ್ಷಿತಿಜ' ಸಾಂಪ್ರದಾಯಿಕ ಮಧ್ಯಮ ವರ್ಗದ ಸೀಮಿತ ಮೌಲ್ಯ ವ್ಯವಸ್ಥೆಯಿಂದ ಹೆಚ್ಚು ಮುಕ್ತವಾದ ಆಧುನಿಕ ವ್ಯವಸ್ಥೆಯ ಕಡೆಗೆ ಒಲವು ತೋರಿಸುತ್ತದೆ. 'ಕ್ಷಿತಿಜ'ದ ಹಡಗು ಪೂರ್ವದ ಭಾರತದಿಂದ ಪಶ್ಚಿಮದ ಇಂಗ್ಲೆಂಡಿನತ್ತ ಚಲಿಸುತ್ತದೆ. ಮಿಸ್ ಭಾಟೆ ಕ್ರಮೇಣ ಮೈಚಳಿ ಬಿಟ್ಟು ಆಧುನಿಕತೆಯತ್ತ ಚಲಿಸುತ್ತಾಳೆ. ಮಂಜು ಕರಗಿ ತಿಳಿಯಾಗಿ ಗೋಚರಿಸುವ ಪಶ್ಚಿಮದ ಕ್ಷಿತಿಜದ ನೋಟವನ್ನು ಸಂಭ್ರಮದಿಂದ ಸ್ವಾಗತಿಸುವುದರೊಂದಿಗೆ ಕತೆ ಮುಗಿಯುತ್ತದೆ. ಹೆಚ್ಚಿನ ಕತೆಗಳು ಆಧುನಿಕತೆಯನ್ನು ಸಂಶಯದಿಂದ ನೋಡುತ್ತಿದ್ದರೆ, ಈ ಕತೆ ಅದನ್ನು ಉತ್ಸಾಹದಿಂದ ಸ್ವಾಗತಿಸುತ್ತದೆ ಎಂಬುದು ಕುತೂಹಲಕರವಾಗಿದೆ.

ಯಶವಂತ ಚಿತ್ತಾಲರ 'ಕತೆಯಾದಳು ಹುಡುಗಿ' ಸಂವೇದನಾಶೀಲವಾದ ಲೇಖಕನೊಬ್ಬ ತನ್ನ ಸುತ್ತಲಿನ ಸಾಮಾಜಿಕ-ರಾಜಕೀಯ-ಸಾಂಸ್ಕೃತಿಕ ಒತ್ತಡಗಳಿಂದಾಗಿ ಸಾಮಾಜಿಕ ಮತ್ತು ಕಲಾತ್ಮಕ ಸತ್ಯದೊಂದಿಗೆ ಒಪ್ಪಂದ ಮಾಡಿಕೊಳ್ಳುತ್ತ ಹೋಗಿ ಸತ್ಯವನ್ನು ವಿರೂಪಗೊಳಿಸಬೇಕಾದ, ತನ್ನ ಸೃಜನಶೀಲತೆಗೆ, ನಿಜವಾದ ಮಾನವೀಯ ಸಂಬಂಧಗಳಿಗೆ ಅಪಚಾರ ಮಾಡಬೇಕಾದ ಪರಿಸ್ಥಿತಿಯನ್ನು ಚಿತ್ರಿಸುತ್ತದೆ. ಆ ಮೂಲಕ ಬಂಡಾಯದಂಥ ಏಕಮುಖಿ ಸಾಹಿತ್ಯಧಾರೆಗಳು ಸೃಷ್ಟಿಸಿರುವ ಸೃಜನಶೀಲತೆಯ ಬಿಕ್ಕಟ್ಟುಗಳನ್ನು ತೋರಿಸುತ್ತದೆ.

ಅನಂತಮೂರ್ತಿಯವರ 'ಸೂರ್ಯನ ಕುದುರೆ'ಯೂ ದೇಸಿ ಮತ್ತು ಆಧುನಿಕ ಪಾಶ್ಚಾತ್ಯ ದೃಷ್ಟಿಕೋನಗಳ ಮುಖಾಮುಖಿಯನ್ನು ಶಕ್ತಿಯುತವಾಗಿ ಚಿತ್ರಿಸಿರುವ ಕತೆ. ಇದು ಆಧುನಿಕತೆಯನ್ನು ತಿರಸ್ಕರಿಸುವುದಿಲ್ಲ. ಆದರೆ ಅದರಿಂದ ನಾವು ಕಳೆದುಕೊಂಡಿರುವ ದೇಸಿ ಸಂಸ್ಕೃತಿಯ ಒಳ್ಳೆಯ ಮತ್ತು ಚೈತನ್ಯದಾಯಕ ಅಂಶಗಳ ಕಡೆಗೆ ನಮ್ಮ ಗಮನ ಸೆಳೆಯುತ್ತದೆ. ಆಧುನಿಕತೆಯನ್ನು ಬಿಡಲಾರದ, ದೇಸಿ ಸಂಸ್ಕೃತಿಯನ್ನು ನಾವು ಕಳೆದುಕೊಳ್ಳುತ್ತಿರುವುದರ

ಬಗ್ಗೆ ಕಾಳಜಿಯನ್ನು ಹೊಂದಿರುವ ನಮ್ಮ ಅನೇಕರ ಎಡಬಿಡಂಗಿತನಕ್ಕೆ ಇದು ಸಾಕ್ಷಿಯಾಗಿದೆ.

ಲಂಕೇಶರ **'ಮುಟ್ಟಿಸಿಕೊಂಡವನು'** ಕತೆ ಅಸ್ಪೃಶ್ಯ ಮತ್ತು ಮೇಲ್ವರ್ಗದವರ ನಡುವೆ ನಡೆಯುವ ಪರಸ್ಪರ ಸ್ಪರ್ಶದ ಮೂಲಕವೇ ಹೊಸ ಬದುಕಿನ ಉತ್ಸಾಹ ಕುದುರುವುದನ್ನು ಚಿತ್ರಿಸುತ್ತವೆ. ಅಸ್ಪೃಶ್ಯತೆಯಿಂದ ಮುಕ್ತಿ ಅಸ್ಪೃಶ್ಯರಿಗಷ್ಟೇ ಅಲ್ಲ, ಮೇಲುವರ್ಗದವರಿಗೂ ಒಂದು ಬಿಡುಗಡೆಯಾಗುವುದನ್ನು ಕತೆ ಚಿತ್ರಿಸುತ್ತದೆ.

ಸಾಮಾನ್ಯವಾಗಿ, ಆಧುನಿಕ ಮತ್ತು ವೈಜ್ಞಾನಿಕ ಮನೋವೃತ್ತಿಗಳು ದೇಸಿ ನಂಬಿಕೆಗಳನ್ನು ಮೂಢನಂಬಿಕೆ, ಅವೈಜ್ಞಾನಿಕ ತಿಳುವಳಿಕೆ ಎಂದು ತಿರಸ್ಕರಿಸುತ್ತವೆ. ಅದರೆ ತೇಜಸ್ವಿ ತಮ್ಮ **'ಯಂಗ್ಟನ ಪುಂಗಿ'**ಯಲ್ಲಿ ಈ ನಂಬಿಕೆಯನ್ನು ಬುಡಮೇಲು ಮಾಡುತ್ತಾರೆ. ಕಿವಿಗಳಿಲ್ಲದ ಹಾವುಗಳು ಪುಂಗಿಯ ನಾದಕ್ಕೆ ಸ್ಪಂದಿಸಲಾರವೆಂದು ವಿಜ್ಞಾನ ಹೇಳಿದರೆ, ಯಂಗ್ಟ ತನ್ನ ಪುಂಗಿಯ ನಾದದ ಮೂಲಕವೇ ಹಾವುಗಳನ್ನು ಆಡಿಸಿ ವಿಜ್ಞಾನದ ಗ್ರಹಿಕೆಯನ್ನು ಸುಳ್ಳು ಮಾಡಿ ತೋರಿಸುತ್ತಾನೆ. ಆ ಮೂಲಕ ನಿರೂಪಕನ ವೈಜ್ಞಾನಿಕ ನಂಬಿಕೆಯೂ ಸಡಿಲವಾಗುವುದನ್ನು ಕತೆ ತೋರಿಸುತ್ತದೆ. ಈ ಮೂಲಕ ದೇಸಿ ತಿಳುವಳಿಕೆಯಲ್ಲೂ ಸತ್ಯವಿರಬಹುದೆಂದು ಕತೆ ಚಿತ್ರಿಸುತ್ತದೆ.

ದೇವನೂರರ ಕತೆಗಳಲ್ಲಿ ದಲಿತ ಲೋಕದ ವಿಭಿನ್ನ ಹಾಗೂ ಸೂಕ್ಷ್ಮ ಚಿತ್ರಗಳು ಬೆಳಕಿಗೆ ಬಂದವು. ನಾವು ಸಹಜವೆಂಬಂತೆ ಒಪ್ಪಿಕೊಂಡಿರುವ ಭಾರತೀಯ ಸಮಾಜ ವ್ಯವಸ್ಥೆಯ ದುರಂತಗಳನ್ನು **'ಅಮಾಸ'**ದಂಥ ಕತೆಗಳು ಮುನ್ನೆಲೆಗೆ ತಂದು, ನಮ್ಮ ವ್ಯವಸ್ಥೆಯ ಬಗ್ಗೆ ಮರು ಆಲೋಚನೆಗೆ ತೊಡಗಲು ಪ್ರೇರೇಪಿಸುತ್ತವೆ. ದಲಿತರ ಶೋಷಣೆಯ ಬಗೆಗೆ ದೇವನೂರರು ಹೊಸ ಒಳನೋಟಗಳನ್ನು ಒದಗಿಸಿದ್ದಕ್ಕೆ ಇದೊಂದು ನಿದರ್ಶನ.

ಆಧುನಿಕ ತಂತ್ರಜ್ಞಾನದ ಇಂದಿನ ಜಗತ್ತೆ ಬೇರೆ ರೀತಿಯದು. ಹಳೆಯ ವಸಾಹತುಶಾಹಿ ನಡೆಸಿದ ವಂಚನೆಗಳನ್ನು ಅರ್ಥಮಾಡಿಕೊಂಡು ಅವುಗಳನ್ನು ಎದುರಿಸಲು ಸಿದ್ಧವಾಗುತ್ತಿರುವಂತೆಯೇ ಪಶ್ಚಿಮದ ಹೊಸ ತಂತ್ರಜ್ಞಾನ, ಜಾಗತೀಕರಣಗಳು ನಮ್ಮ ಅರಿವಿಗೇ ಬಾರದಂತೆ ನವ ವಸಾಹತುಶಾಹಿಯನ್ನು ಪ್ರತಿಷ್ಠಾಪಿಸತೊಡಗಿವೆ. ಜಾಗತೀಕರಣ ಒಂದು ಬಗೆಯ 'ಹುಲಿ ಸವಾರಿ'. ಒಮ್ಮೆ ಜಾಗತೀಕರಣದ ಹುಲಿಯನ್ನು ಹತ್ತಿದ್ದಾಗಿದೆ. ಕೂಡ್ರುವಂತೆಯೂ ಇಲ್ಲ, ಇಳಿಯುವಂತೆಯೂ ಇಲ್ಲ. ಹಾಗೆ ಅಂಜಿಕೆಯಲ್ಲಿಯೇ ಮುಂದುವರಿಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿದೆ. **ವಿವೇಕ ಶಾನಭಾಗರ 'ಹುಲಿ ಸವಾರಿ'** ಇಂದು ನಾವು ಅನುಭವಿಸುತ್ತಿರುವ ಅವಸ್ಥೆಗೆ ಕನ್ನಡಿ ಹಿಡಿದು, ಅದರ ನಯವಂಚನೆ, ತಂತ್ರಗಾರಿಕೆ, ಬಿಗಿ ಹಿಡಿತಗಳ ಬಗೆಗೆ ವಿಶಿಷ್ಟ ಒಳನೋಟಗಳನ್ನು ನೀಡುವ ಮೂಲಕ ಮುಖ್ಯವಾಗುತ್ತದೆ.

ಸ್ತ್ರೀವಾದ ಎಂಬುದು ಇಂದಿನ ನಮ್ಮ ಕತೆಗಾರ್ತಿಯರ ಬರವಣಿಗೆಯಲ್ಲಿ ಸಾಕಷ್ಟು ಢಾಳಾಗಿಯೇ ಕಾಣತೊಡಗಿದೆ. ಇದು ಕೂಡ ಪಶ್ಚಿಮದ ವಿಚಾರಧಾರೆಗಳು ಮೂಡಿಸಿದ ಹೊಸ ಎಚ್ಚರಿಕೆಗಳ ಪರಿಣಾಮ. ಆದರೆ ವೈದೇಹಿ ಇವರೆಲ್ಲರಿಗಿಂತ ಭಿನ್ನವಾಗಿ ಸ್ತ್ರೀ ಚೈತನ್ಯ ಪ್ರಕಟವಾಗುವ ದಾರಿಗಳ ಹುಡುಕಾಟ ನಡೆಸಿದ್ದಾರೆ. **ಅಮ್ಮಚ್ಚಿ** ಸ್ತ್ರೀವಾದವೆಂದರೇನೆಂದೇ ಗೊತ್ತಿಲ್ಲದ ಹುಡುಗಿ. ಆದರೆ ಆಕೆಯಲ್ಲೂ ಪುರುಷಾಹಂಕಾರದ ವಿರುದ್ಧ ಬಂಡಾಯವೇಳುವ ಎಚ್ಚರ

ಹುಟ್ಟಿಕೊಂಡಿದೆ. ತನ್ನದೇ ರೀತಿಯ ಪ್ರತಿಭಟನೆಯ ಮೂಲಕ ಆಕೆ ತನ್ನ ಬದುಕಿನ ಬಿಡುಗಡೆಯನ್ನು ಪಡೆಯುತ್ತಾಳೆ. ಸ್ತ್ರೀವಾದವೆಂದು ಹೇಳದೆಯೂ ಅದು ಕತೆಯಲ್ಲಿ ಅಂತರ್ಗತವಾಗಿ ಬಂದು ಧ್ವನಿಪೂರ್ಣ ಅಭಿವ್ಯಕ್ತಿ ಪಡೆದಿದೆ.

ಹೀಗೆ ಈ ಕತೆಗಳು ನಮ್ಮ ಕಾಲವನ್ನು ಹೊಸ ರೀತಿಯಿಂದ ವ್ಯಾಖ್ಯಾನಿಸಲು ಪ್ರಯತ್ನಿಸಿರುವುದರಿಂದ ಬಹಳ ಮುಖ್ಯವಾಗಿವೆ.

ಡಾ. ಗಿರಡ್ಡಿ ಗೋವಿಂದರಾಜರು ಕನ್ನಡದ ಹಿರಿಯ ವಿಮರ್ಶಕರಲ್ಲಿ ಒಬ್ಬರು. ನವ್ಯ ಸಾಹಿತ್ಯವನ್ನು ಸಂಪನ್ನಗೊಳಿಸಿದ ಬಹುತೇಕ ಲೇಖಕರಂತೆ ಇಂಗ್ಲಿಷ್ ಅಧ್ಯಾಪಕರಾಗಿದ್ದವರು. ನವ್ಯದ ನಂತರದ ಸಾಹಿತ್ಯ ಚಳುವಳಿಗಳಿಂದ ಒಂದಿಷ್ಟೂ ವಿಚಲಿತರಾಗದೆ, ತಮ್ಮ ಸಾಹಿತ್ಯ ನಂಬಿಕೆಗಳಲ್ಲೆ ನಿಷ್ಠೆ ಇಟ್ಟು ವಿಮರ್ಶೆ ಬರೆಯುತ್ತಿರುವ ಇವರು ಕತೆ, ಕವನಗಳನ್ನೂ ಬರೆದಿದ್ದಾರೆ. 'ಮಣ್ಣು' ಇವರ ಮಹತ್ವದ ನೀಳ್ಗತೆ.

'ಸಣ್ಣ ಕತೆಯ ಹೊಸ ಒಲವುಗಳು', 'ಕಾದಂಬರಿ: ವಸ್ತು ಮತ್ತು ತಂತ್ರ', 'ಸಾಹಿತ್ಯ ಮತ್ತು ಪರಂಪರೆ', 'ನವ್ಯ ವಿಮರ್ಶೆ', 'ವಚನ ವಿನ್ಯಾಸ' ಇವರ ಪ್ರಮುಖ ವಿಮರ್ಶಾ ಕೃತಿಗಳು. ಇತ್ತೀಚೆಗೆ ಇವರ 'ಹಿಡಿಯದ ಹಾದಿ' ಎಂಬ ಪ್ರಬಂಧ ಸಂಕಲನವೂ ಹೊರಬಂದು, ಸುದ್ದಿ ಮಾಡುತ್ತಿದೆ!

ವಿಭಿನ್ನ ಲೋಕ ದರ್ಶನದ ಮಾದರಿಗಳು

– ಕೆ.ಸತ್ಯನಾರಾಯಣ

ಕನ್ನಡದ ಹತ್ತು ಅತ್ಯುತ್ತಮ ಕಾದಂಬರಿಗಳು :

೧. ಮಲೆಗಳಲ್ಲಿ ಮದುಮಗಳು	–	ಕುವೆಂಪು
೨. ಮರಳಿ ಮಣ್ಣಿಗೆ	–	ಕೆ.ಶಿವರಾಮ ಕಾರಂತ
೩. ಕಂಕಣ	–	ತ್ರಿವೇಣಿ
೪. ಒಡಲಾಳ	–	ದೇವನೂರ ಮಹಾದೇವ
೫. ಸಂಸ್ಕಾರ	–	ಯು.ಆರ್. ಅನಂತಮೂರ್ತಿ
೬. ಶಿಕಾರಿ	–	ಯಶವಂತ ಚಿತ್ತಾಲ
೭. ಗ್ರಾಮಾಯಣ	–	ರಾವಬಹಾದ್ದೂರ
೮. ಮಾಯಾಲೋಕ	–	ಕೆ.ಪಿ.ಪೂರ್ಣಚಂದ್ರ ತೇಜಸ್ವಿ
೯. ಭುಜಂಗಯ್ಯನ ದಶಾವತಾರಗಳು	–	ಶ್ರೀಕೃಷ್ಣ ಆಲನಹಳ್ಳಿ
೧೦. ಗಂಗವ್ವ ಗಂಗಾಮಾಯಿ	–	ಶಂಕರ ಮೊಕಾಶಿ ಪುಣೇಕರ

ನೂರು ವರ್ಷಕ್ಕೂ ಮೀರಿದ ದೀರ್ಘ ಪರಂಪರೆ ಹೊಂದಿರುವ ಕನ್ನಡ ಕಾದಂಬರಿ ಪರಿಸರದಿಂದ ಹತ್ತೇ ಹತ್ತು ಕಾದಂಬರಿಗಳನ್ನು ಪಟ್ಟಿ ಮಾಡುವುದು ಕಷ್ಟದ ಕೆಲಸ. ಈ ನೂರು ವರ್ಷಗಳಲ್ಲಿ ಕನ್ನಡ ಕಾದಂಬರಿ ಪರಿಸರವು ತನ್ನದೇ ಆದ ಲೋಕದರ್ಶನವನ್ನು ಮಂಡಿಸಿದೆ. ಈ ಲೋಕದರ್ಶನದ ವಿವರಗಳು, ಒಳನೋಟಗಳನ್ನು ತಿಳಿಯಲು ಕೆಲವು ಪ್ರಮುಖ ಕೃತಿಗಳನ್ನಾದರೂ ಕುರಿತು ಹೇಳಲೇಬೇಕಾಗುತ್ತದೆ. ಹೀಗಾಗಿ ಹತ್ತು ಕೃತಿಗಳ ಆಯ್ಕೆ ಅನಿವಾರ್ಯ. ಆದರೆ ಈ ಆಯ್ಕೆಯಿಂದಾಗಿ ಉಂಟಾಗುವ ಶ್ರೇಣೀಕರಣದ ಬಗ್ಗೆ ನನಗೆ ಒಲವಿಲ್ಲ, ನಂಬಿಕೆಯಿಲ್ಲ. ಈ ಆಯ್ಕೆಯಲ್ಲಿ ಸೇರದೆ ಹೋದ ಎಷ್ಟೋ ಕೃತಿಗಳು, ಲೇಖಕರು ಕೂಡ ಕನ್ನಡ ಕಾದಂಬರಿ ಪರಿಸರ ಬೆಳೆಯಲು ಕಾರಣವಾಗಿದ್ದಾರೆ. ಪಟ್ಟಿಯ ಕೊನೆಯಲ್ಲಿ ಅಂತಹ ಕೃತಿಗಳು-ಲೇಖಕರ ಪುಟ್ಟ ಪ್ರಸ್ತಾಪವಿದೆ.

ಹೀಗೆ ಆಯ್ಕೆ ಮಾಡುವಾಗ ನಾನು ಕೃತಿಗಳ ಶ್ರೇಷ್ಠತೆಯನ್ನೇ ವ್ಯಸನವನ್ನಾಗಿ ಮಾಡಿಕೊಂಡಿಲ್ಲ. ನಮ್ಮ ಕಾದಂಬರಿ ಪರಿಸರ ಇಲ್ಲಿಯತನಕ ಬೆಳೆಯಲು ಕಾರಣವಾದ ವೈವಿಧ್ಯತೆ, ಪ್ರಯೋಗಶೀಲತೆ, ಕಲಾತ್ಮಕತೆ, ವೈಚಾರಿಕತೆ, ಹೊಸ ಹೊಸ ಅನುಭವ ಲೋಕಗಳು, ಕನಸುಗಳ ಒಳಗೊಳ್ಳುವಿಕೆ-ಇದೆಲ್ಲವನ್ನು ಗಮನದಲ್ಲಿಟ್ಟುಕೊಂಡಿದ್ದೇನೆ. ಜೀವನದುದ್ದಕ್ಕೂ ಕಾದಂಬರಿ ರಚನೆಯನ್ನೇ ಬರವಣಿಗೆಯ ಮಾಧ್ಯಮವಾಗಿ ಆಯ್ಕೆ ಮಾಡಿಕೊಂಡಿದ್ದ ಕಾರಂತರ ಒಂದೇ ಒಂದು ಕೃತಿಯನ್ನಾಗಲೀ, ಎರಡೇ ಕಾದಂಬರಿಗಳನ್ನು ಬರೆದರೂ Greater Novel

ಮತ್ತು Meta Novel ದಿಕ್ಕಿನಲ್ಲಿ ಹೊರಟ ಕುವೆಂಪು ಕಾದಂಬರಿಗಳಲ್ಲಿ ಒಂದೇ ಒಂದನ್ನು ಆಯ್ಕೆ ಮಾಡುವುದಾಗಲಿ ಯಾವುದೇ ದೃಷ್ಟಿಯಿಂದಲೂ ಸರಿಯೆಂದು ನನಗನಿಸುವುದಿಲ್ಲ. ಆದರೆ ಈ ಸಂದರ್ಭದಲ್ಲಿ ಅದೊಂದು ವೃತ್ತಿಪರ ಅನಿವಾರ್ಯತೆ. ನನ್ನ ಆಯ್ಕೆಯಲ್ಲಿ ನಾನು ಕೃತಿಗಳು ಪ್ರಕಟವಾದ ಕಾಲಾನುಕ್ರಮಣಿಕೆಯನ್ನಾಗಲೀ, ಸಂಸ್ಕೃತಿ ಲೋಕದಲ್ಲಿ ಲೇಖಕರಿಗಿರುವ ಪ್ರಸಿದ್ಧಿ ಹಿರಿತನವನ್ನಾಗಲೀ ಕೂಡ ಅಷ್ಟಾಗಿ ಗಮನದಲ್ಲಿಟ್ಟುಕೊಂಡಿಲ್ಲ. ಕನ್ನಡ ಕಾದಂಬರಿ ಪರಿಸರದ ಬೆಳವಣಿಗೆಗೆ ಈ ಕೃತಿಗಳು ನೀಡಿರುವ ಕಾಣಿಕೆಯ ಬಗ್ಗೆಯೇ ಹೆಚ್ಚಾಗಿ ನನ್ನ ಗಮನ.

೧. ಮಲೆಗಳಲ್ಲಿ ಮದುಮಗಳು

ಕಲಾಕೃತಿಯ ಚೌಕಟ್ಟಿನೊಳಗೆ ಸಾಧಿಸಬೇಕಾದ ಮಹತ್ವಾಕಾಂಕ್ಷೆಯ ಸ್ವರೂಪ ಹೇಗಿರಬಹುದು ಎಂಬುದಕ್ಕೆ ಈ ಕಾದಂಬರಿ ಜೀವಂತ ಉದಾಹರಣೆ. ಮಹಾಕಾವ್ಯ ಮತ್ತು ಟಾಲ್‌ಸ್ಟಾಯ್‌ರ ಬೃಹತ್ ಕಾದಂಬರಿಗಳ ಸ್ವರೂಪಕ್ಕೆ ಒಲಿದಿದ್ದ ಕುವೆಂಪು, ನವ್ಯ ಚಳುವಳಿ ತನ್ನ ತೀವ್ರ ಸ್ಥಿತಿಯಲ್ಲಿದ್ದಾಗ ಈ ಕಾದಂಬರಿ ಬರೆದರು. ನಮ್ಮ ಕಾದಂಬರಿ ಪರಿಸರದಲ್ಲಿ ತುಂಬ ಮುಖ್ಯವಾಗಿರುವ "ಸಾಂಸ್ಕೃತಿಕ ಮುಂಗಾಣ್ಕೆ"ಯಿಂದ ಈವತ್ತಿನ ಲೇಖಕರು ಕಲಿಯಬೇಕಾದ್ದು ಬಹಳವಿದೆ. ಕನ್ನಡ ಕಾದಂಬರಿಕಾರನೆಂದರೆ ಕೇವಲ ಕತೆ ಹೇಳುವವನಲ್ಲ, ಸಮಾಜಶಾಸ್ತ್ರಜ್ಞರಿಗೆ ಪ್ರಿಯವಾದ ಸಾಮಾಜಿಕ ಇತಿಹಾಸವನ್ನು ಮಾತ್ರ ರಚಿಸುವವನಲ್ಲ, ದಾಖಲೆಕಾರನಂತೆ ವರ್ತಮಾನವನ್ನು ಮಾತ್ರ ಕುರಿತು ಬರೆಯುವವನಲ್ಲ ಎಂಬುದನ್ನು ಈವತ್ತು ನಾವೆಲ್ಲ ಒಪ್ಪಿಕೊಂಡಿದ್ದರೆ, ಆ ಒಪ್ಪಿಗೆಯ ಹಿಂದೆ 'ಮದುಮಗಳು'ವಿನಂತಹ ಕೃತಿಯ ಪ್ರಭಾವವಿದೆ. ತಕ್ಷಣ-ಅನಂತ, ವೈಯಕ್ತಿಕ-ಸಾಮಾಜಿಕ, ನಿಮಿತ್ತ-ಅನಿಮಿತ್ತ, ಪರಂಪರೆ-ಪ್ರತಿಭಟನೆ, ಕೇವಲ ಕತೆ ಮತ್ತು ಕಲಾವಿದ ರೂಪಿಸುವ ಕಥನ-ಇದೆಲ್ಲವೂ ಒಬ್ಬ ಉತ್ತಮ ಕಲಾವಿದನಲ್ಲಿ ಯಾವಾಗಲೂ ಹೇಗೆ ಬೆರೆತಿರಲೇಬೇಕು ಎಂಬುದಕ್ಕೆ ಕುವೆಂಪು ಇಲ್ಲಿ ಷರಾ ಬರೆದಂತಿದೆ. ಪರಿವರ್ತನೆಯ ತಳಮಳದಲ್ಲಿ ಹೊಸ ಹೊಸ ಮನುಷ್ಯ ಮಾದರಿಗಳ (Human Type) ಬೀಜಗಳು ಕಾಣಿಸಿಕೊಂಡು ಕಾಲಾನುಕ್ರಮದಲ್ಲಿ ಸ್ಪಷ್ಟವಾಗಿ ಮೂಡುತ್ತವೆ. ಶ್ರೇಷ್ಠ ಕಾದಂಬರಿಕಾರರು ಇಂತಹ ಮನುಷ್ಯ ಮಾದರಿಗಳನ್ನು ಎಲ್ಲರಿಗಿಂತ ಮುಂಚೆಯೇ ಕಾಣಬಲ್ಲವರಾಗಿರುತ್ತಾರೆ. ಹೂವಯ್ಯ, ಗುತ್ತಿ-ಇಂತಹ ಪಾತ್ರಗಳ ಮೂಲಕ ಕುವೆಂಪು ಇಂತಹ ಮಾದರಿಯನ್ನು ನಮಗೆ ಸೂಚಿಸಿದರು. ಈ ಪಾತ್ರಗಳ ಸೃಷ್ಟಿಯಲ್ಲಿ ಪರಿಪೂರ್ಣತೆಯಿದೆಯೇ ಅನ್ನುವುದು ಅಷ್ಟು ಮುಖ್ಯವಲ್ಲ. ಹೊಸ ಕಾಣ್ಕೆ ಇದೆಯೇ ಎಂಬುದೇ ಮುಖ್ಯವಾದ್ದು. ಕಾದಂಬರಿಯಲ್ಲಿ ಕೇಂದ್ರಪ್ರಜ್ಞೆಯ ಸ್ವರೂಪ ಮತ್ತು ಕಾಲದ ಬೇರೆ ಬೇರೆ ಆಯಾಮಗಳನ್ನು-ನಮ್ಮಂತಹ ಸಂಸ್ಕೃತಿಯಲ್ಲಿ ಅಂದರೆ-ದೀರ್ಘ ಇತಿಹಾಸ ಮತ್ತು ಸಾಮಾಜಿಕ ವೈವಿಧ್ಯ-ಎರಡೂ ಇರುವ-ಕಲಾಕೃತಿಗಳು ಹೇಗೆ ಒಳಗೊಳ್ಳಬೇಕು ಎಂಬಂತೆ ಕೂಡ ಈ ಕೃತಿಯ ಹಿಂದಿರುವ ದರ್ಶನ ಮಹತ್ವದ ವಾಗ್ವಾದಗಳನ್ನು ರೂಪಿಸಿದೆ. ದಲಿತ ಮತ್ತು ಬ್ರಾಹ್ಮಣ ಪಾತ್ರಗಳ ಸೃಷ್ಟಿಯಲ್ಲಿ-ಚಿತ್ರಣದಲ್ಲಿ ಕುವೆಂಪು ಸಮತೋಲನ ತೋರಲಿಲ್ಲವೆಂಬ ಮಾತು ಕೂಡ ಜಾತಿಪದ್ಧತಿ ಮತ್ತು ಸೃಜನಶೀಲತೆ ನಡುವೆ ಇರುವ ಸಂಬಂಧ ಕುರಿತಂತೆ ಮಹತ್ವದ ವಾಗ್ವಾದಗಳನ್ನು ಹುಟ್ಟುಹಾಕಿದೆ. ಕಾದಂಬರಿಯೊಂದರಿಂದ ಏನೇನನ್ನು ಅಪೇಕ್ಷಿಸಬಹುದು ಎಂಬ ಪ್ರಜ್ಞೆಗೆ ನಮ್ಮ ಕಾದಂಬರಿ ಪರಿಸರದಲ್ಲಿ ನಾವು ನೀಡುವ ಉತ್ತರದಲ್ಲಿ 'ಮದುಮಗಳು'ವಿನ ಆಕಾಂಕ್ಷೆ ಮತ್ತು ಸಾಧನೆ

ಯಾವಾಗಲೂ ಅಂತರ್ಗತವಾಗಿರುತ್ತದೆ. ಈ ಪಟ್ಟಿಯಲ್ಲಿ 'ಮದುಮಗಳು' ಮಾತ್ರ ನಮೂದಾಗಿದ್ದರೂ, ಕುವೆಂಪುರ-'ಕಾನೂರು ಹೆಗ್ಗಡತಿ' ಸೇರಿದಂತೆ-ಎರಡೂ ಕಾದಂಬರಿಗಳನ್ನು ಒಂದೇ ಕಾದಂಬರಿಯಾಗಿ ಓದುವುದು ಅನಿವಾರ್ಯವೆನ್ನುವಷ್ಟು, ಎರಡೂ ಕೃತಿಗಳ ನಡುವೆ ಕೊಡುಕೊಳ್ಳುವಿಕೆ-ಅಂತರ್ ಸಂಬಂಧವಿದೆ ಎಂಬುದನ್ನು ಮರೆಯುವ ಹಾಗಿಲ್ಲ.

೨. ಮರಳಿ ಮಣ್ಣಿಗೆ

ಬದಲಾವಣೆ-ಸ್ಥಿತ್ಯಂತರ ೨೦ನೇ ಶತಮಾನದಲ್ಲಿ ಪ್ರಾಕೃತಿಕ ನಿಯಮವೆಂಬಂತೆ ಜರುಗುತ್ತಲೇ ಬಂದಿತು. 'ಮರಳಿ ಮಣ್ಣಿಗೆ'ಯಂತಹ ಕೃತಿಯಲ್ಲಿ ಕಾರಂತರು ಈ ಬದಲಾವಣೆಯನ್ನು ಮಾತ್ರ ದಾಖಲಿಸಲಿಲ್ಲ. ಈ ಬದಲಾವಣೆಯ ಪರಿಣಾಮ, ನಮ್ಮ ಒಳಮನಸ್ಸಿನ ರಚನೆಗಳ ಮೇಲೆ, ದಿನನಿತ್ಯದ ಬದುಕಿನ ಮೇಲೆ, ಕೌಟುಂಬಿಕ ಚೌಕಟ್ಟಿನ ಮೇಲೆಲ್ಲ ಏನಾಗಬಲ್ಲದು ಎಂಬುದರ ಬೆಲೆಯನ್ನು ಕೂಡ ಕಟ್ಟಿದರು. ದೀರ್ಘಕಾಲದ ಇತಿಹಾಸವಿರುವ ನಮ್ಮ ಸಮಾಜ, ಬದಲಾವಣೆಗೆ-ಸಂಕ್ರಮಣಕ್ಕೆ ಹೆದರುವುದಿಲ್ಲ. ಹಾಗೆಂದು ಎಲ್ಲವನ್ನು ಕುರುಡಾಗಿ ಸ್ವೀಕರಿಸುವುದಿಲ್ಲ. ಇವೆರಡು ಸ್ಥಿತಿಗಳ ನಡುವೆ ಇತಿಹಾಸದ ಚಲನೆಯ ಗತಿ ಮತ್ತು ದಿನನಿತ್ಯದ ಬದುಕಿನ ಲಯ 'ಮರಳಿ ಮಣ್ಣಿಗೆ'ಯಲ್ಲಿ ತುಂಬ ಸಾವಧಾನದಿಂದ ಮೂಡಿ ಬಂದಿದೆ. ಇತಿಹಾಸ ಅಥವಾ ಪ್ರಗತಿಯೆಂದರೆ ಸುಮ್ಮನೆ ಮುಂದೆ ಹೋಗುವುದಲ್ಲ-ನಿಂತು ಯೋಚಿಸುವುದು ಮತ್ತು ಕನಸು ಕಾಣುವುದು ಕೂಡ ಎಂದು ಕಾರಂತರು 'ಮರಳಿ ಮಣ್ಣಿಗೆ'ಯಲ್ಲಿ ಸೂಚಿಸಿದ್ದಾರೆ. ಸಂಕ್ರಮಣದ ಸಮಯದಲ್ಲಿ ಉದ್ಭವವಾಗುವ ಹೊಸ ಮನುಷ್ಯ ಮಾದರಿಗಳ ಬಗ್ಗೆ ಕೂಡ ಈ ಕೃತಿ, ರಾಮ-ಲಚ್ಚ ಇಂತಹವರ ಪಾತ್ರಗಳ ಮೂಲಕ ಸಾಂಸ್ಕೃತಿಕ ಮುಂಗಾಣ್ಕೆಯನ್ನು ತೋರಿದೆ. ಒಂದು ಸಾಹಿತ್ಯ ಪ್ರಕಾರದ ಇತಿಹಾಸದಲ್ಲಿ ಕೃತಿಯೊಂದು ಮುಖ್ಯವಾಗಬೇಕಾದರೆ ನಂತರದ ಕೃತಿಕಾರರ ಮೇಲೆ ಬೀರಿದ ಪರಿಣಾಮವನ್ನು ಕೂಡ ಗಮನಿಸಬೇಕಾಗುತ್ತದೆ. ಈ ದೃಷ್ಟಿಯಿಂದ ಕೂಡ 'ಮರಳಿ ಮಣ್ಣಿಗೆ' ಮುಖ್ಯ ಕೃತಿ. ರಾಮ ಮತ್ತು ಲಚ್ಚ ನಮಗೆ ಎಷ್ಟು ಜನ ಲೇಖಕರ ಕೃತಿಗಳಲ್ಲಿ ಮತ್ತೆ ಮತ್ತೆ ಎದುರಾಗಿಲ್ಲ. ಹೆಂಗಸರ ದುಡಿಮೆ ಮತ್ತು ಅವರ ದೈನಿಕದ ನೀರಸ ಲಯವನ್ನು ದಾಖಲಿಸುವ ದೃಷ್ಟಿಯಿಂದಲೂ ಮರಳಿ ಮಣ್ಣಿಗೆ ಮುಖ್ಯ ಕೃತಿ.

೩. ಕಂಕಣ

ಕಾದಂಬರಿ ಲೋಕದಲ್ಲಿ ಹೊಸ ರೀತಿಯ ಪಾತ್ರಗಳ, ಕನಸುಗಳ ಮಾತನ್ನು ಓದುಗರಿಗೆ ಕೇಳಿಸಿ, ಒಪ್ಪಿಸುವುದು ತುಂಬಾ ಕಷ್ಟದ ಸಂಗತಿ. ತ್ರಿವೇಣಿ ನಮ್ಮ ಶ್ರೇಷ್ಠ ಕಥನಕಾರರ ಪಟ್ಟಿಯಲ್ಲಿಲ್ಲದೆ ಹೋದರೂ, ಜನಪ್ರಿಯ ಕಾದಂಬರಿಗಳ ಶೈಲಿಯಲ್ಲೇ ಬರೆದಿದ್ದರೂ, ಹೊಸ ಕಾಲದ ಹೆಂಗಸಿನ 'ಆಯ್ಕೆ'ಯ ಬಹುತೇಕ ಆಯಾಮಗಳನ್ನು ತಮ್ಮ ಕಾದಂಬರಿಗಳಲ್ಲಿ ಗುರುತಿಸಿದರು. 'ಕಂಕಣ' ಅವರ ಪ್ರಾತಿನಿಧಿಕ ಕೃತಿ. ವೃತ್ತಿ-ಮದುವೆ, ಕುಟುಂಬ-ವೈಯಕ್ತಿಕತೆ, ಶೀಲ-ನೈತಿಕತೆ-ಈ ಸಂಗತಿಗಳನ್ನು ಕುರಿತಂತೆ ಈ ಕಾದಂಬರಿ ಹೆಂಗಸಿನ ಸಂದಿಗ್ಧತೆಯನ್ನು ಸೂಚಿಸುತ್ತದೆ. ಹೊಸ ಕಾಲದ ಹೆಣ್ಣುಮಕ್ಕಳು ಅನುಭವಿಸುವ ತಹತಹ, ಕಾಣುವ ಕನಸು, ಭಗ್ನಗೊಂಡ ಸ್ವಪ್ನ-ಎಲ್ಲವೂ ಕೂಡ ಬೇರೆ ಬೇರೆ ಸಾಂಸ್ಕೃತಿಕ ಭಿತ್ತಿ ಮತ್ತು ವಿವರಗಳಲ್ಲಿ, ತದನಂತರದ ಲೇಖಕಿಯರಿಂದ ನಿರೂಪಿತವಾಗುತ್ತಲೇ ಇದೆ. ಪುರುಷ ಪ್ರಧಾನ ಸಮಾಜ ಮತ್ತು ಕುಟುಂಬ

ಹೆಂಗಸನ್ನು ಕುರಿತಂತೆ ಹೇಳಿಸುತ್ತಲೇ ಇರುವ 'ಅಪಸ್ವರ'ದ ವಿರುದ್ಧ ಮೊದಲ ಖಚಿತ ಮತ್ತು ಸ್ಪಷ್ಟ ಧ್ವನಿ ತ್ರಿವೇಣಿಯವರದು. ತಮ್ಮ ನಂತರದ ಲೇಖಕಿಯರ ಮೇಲೆ ಮಾತ್ರವಲ್ಲ, ತನ್ನ ಕಾಲದ ಮತ್ತು ನಂತರದ ತಲೆಮಾರಿನ ಓದುಗರು ವಿಶೇಷವಾಗಿ ಮಹಿಳಾ ಓದುಗರ ಮೇಲೆ ತ್ರಿವೇಣಿ ಮಾಡಿದ ಪರಿಣಾಮ ಕೂಡ ಗಮನಾರ್ಹವಾದ್ದು.

೪. ಒಡಲಾಳ

ಈ ನೀಳ್ಗತೆಯನ್ನು ಕಾದಂಬರಿಯ ಪಟ್ಟಿಯಲ್ಲಿ ಸೇರಿಸಲು ಕಾರಣ ಕಥನಕ್ಕೆ ಇರುವ ಹರವು ಮತ್ತು ವ್ಯಾಪ್ತಿ ಹಾಗೂ ಸಾಂಸ್ಕೃತಿಕ ಮಹತ್ವ. 'ಕುಸುಮ ಬಾಲೆ' ಏಕೆ ಈ ಪಟ್ಟಿಯಲ್ಲಿಲ್ಲ ಎನ್ನುವುದನ್ನು ನಂತರ ವಿವರಿಸಲಾಗಿದೆ. ಸಂಕ್ರಮಣದ ಸಮಯದ ಓದುಗರನ್ನು ಸಾಂಸ್ಕೃತಿಕ ಪರಿವರ್ತನೆಗೆ ಒಗ್ಗಿಸುವುದು, ಒಪ್ಪಿಸುವುದು ಕೂಡ ಕಲಾಕೃತಿಗಳ ಕೆಲಸವೇ. ಈ ಕೃತಿಯ ಓದುಗರು ಓದುವ ಸಮಯದಲ್ಲೇ ತಮಗೆ ಗೊತ್ತಿಲ್ಲದಂತೆ ದಲಿತರ/ದಮನಿತರ ಪರವಾಗಿ ಪರಿವರ್ತನೆ ಹೊಂದಿರುತ್ತಾರೆ. ನಂತರ ಬಂದ ನೂರಾರು ಬಂಡಾಯ-ದಲಿತ ಕೃತಿಗಳು ಈ ಸಾಂಸ್ಕೃತಿಕ ಪರಿವರ್ತನೆಯ ಕೆಲಸವನ್ನು ನಿರ್ವಹಿಸಲಾರದೆ ಹೋದವು. ಪ್ರತಿಭಟನೆಯೆಂಬುದು ನಮ್ಮ ಸಮಾಜವು ಆರೋಗ್ಯವಾಗಲು, ಸುಂದರವಾಗಲು ಎಷ್ಟು ಅವಶ್ಯಕ, ಅನಿವಾರ್ಯ; ಆದರೆ ಎಷ್ಟು ಕಷ್ಟ ಎಂಬುದನ್ನು ಇನ್ನಿಲ್ಲದ ಮನುಷ್ಯ ಪ್ರೀತಿ ಮತ್ತು ಲಘು ಹಾಸ್ಯದ ಧ್ವನಿಯಲ್ಲಿ ಹೇಳಿದ ರೀತಿಯಿದು. ಬಂಡಾಯ/ದಲಿತ ಕೃತಿಯೆಂದು ಇದನ್ನು ವಿಮರ್ಶಕರು ಪರಿಗಣಿಸಲು ಇಷ್ಟಪಟ್ಟಿದ್ದರೂ, ಕನ್ನಡ ಗದ್ಯ ಕಥನದ ಎಲ್ಲ ಉತ್ತಮ ಅಂಶಗಳನ್ನು ಹೀರಿಕೊಂಡ ರೀತಿ ತನ್ನ ನಿರೂಪಣಾ ಧಾಟಿಯಲ್ಲಿ ಅಭಿಜಾತ ಪರಂಪರೆಗೆ ಸೇರುವಂತದ್ದು. ಒಂದು ಭಾಷಿಕ ವಾತಾವರಣದಲ್ಲಿ ಕೆಲಸ ಮಾಡುವವರೆಲ್ಲ ಒಂದೇ ಪರಂಪರೆಗೆ ಸೇರಿದವರಾಗಿರುತ್ತಾರೆ-ಬೇರೆ ಬೇರೆ ಸಾಮಾಜಿಕ ಸ್ತರದಲ್ಲಿದ್ದರೂ-ಎಂಬುದನ್ನು ಅಘೋಷಿತವಾಗಿ ಒಪ್ಪಿಕೊಳ್ಳುವ ಈ ಕೃತಿ, ಓದುಗರನ್ನು ಗೆದ್ದಿದೆ. ಓದುಗರು ಈ ಕೃತಿಯ ಕನಸುಗಾರಿಕೆಯನ್ನು ಕನ್ನಡ ಸಂಸ್ಕೃತಿಯ ಕನಸುಗಾರಿಕೆಯ ಭಾಗವಾಗಿ ಸ್ವೀಕರಿಸಿದ್ದಾರೆ.

೫. ಸಂಸ್ಕಾರ

ಕಳೆದ ಶತಮಾನದ ಕನ್ನಡ ಕಥನದ ಮುಖ್ಯ ಆಯಾಮಗಳಾದ ವೈಚಾರಿಕ ತೀವ್ರತೆ, ದಟ್ಟ ಸಮಕಾಲೀನತೆ, ಸಂಸ್ಕೃತಿಯ ಆತ್ಮವಿಮರ್ಶೆ, ಮನುಷ್ಯ ಸ್ವಭಾವದ ಸೂಕ್ಷ್ಮ ಪರೀಕ್ಷೆ-ಈ ಎಲ್ಲ ಸಂಗತಿಗಳನ್ನು ಅನಂತಮೂರ್ತಿಯವರ ಈ ಕೃತಿ, ಕಲಾತ್ಮಕ ಎಚ್ಚರದಲ್ಲಿ ಒಳಗೊಂಡಿದೆ. 'ಸಂಸ್ಕಾರ' ಪ್ರಕಟವಾದ ಮೇಲೆ ನಮ್ಮ ಯಾವ ಮುಖ್ಯ ಲೇಖಕನೂ ತಾನು ಭಾಗವಾಗಿರುವ ಸಂಸ್ಕೃತಿ ಮತ್ತು ಹಿನ್ನೆಲೆಯ ಬಗ್ಗೆ ವಿಮರ್ಶಾತ್ಮಕವಾಗಿ ಬರೆಯುವುದರಿಂದ ತಪ್ಪಿಸಿಕೊಳ್ಳಲು ಸಾಧ್ಯವೇ ಇಲ್ಲ. ಕುವೆಂಪು ಮತ್ತು ಕಾರಂತರಂಥವರು ವಾಸ್ತವದ ನಿರೂಪಣೆಯಲ್ಲಿ ರೊಮ್ಯಾಂಟಿಸಿಸಂನ್ನು ಮೀರುತ್ತಿದ್ದರೂ ಇತರ ಲೇಖಕರ ಬಹುಪಾಲು ಕಥನ ಇನ್ನೂ ರೊಮ್ಯಾಂಟಿಕ್ ಧಾಟಿಯಲ್ಲೇ ಇದ್ದಾಗ, 'ಸಂಸ್ಕಾರ' ವಾಸ್ತವದ ನಿಷ್ಠುರ ಮತ್ತು ವಸ್ತುನಿಷ್ಠ ಕಥನದ ಶಕೆಯನ್ನು ಪ್ರಾರಂಭಿಸುವುದರ ಮೂಲಕ ಕನ್ನಡ ಕಥನದ ದಿಕ್ಕಿನ ಮೇಲೆ ಮಹತ್ತರ ಪರಿಣಾಮವನ್ನು ಬೀರಿತು. ನಿಲುವಿನಲ್ಲಿ ಕ್ರಾಂತಿಕಾರಕತೆಯನ್ನು ಸೂಚಿಸುವ ಈ ಕೃತಿ, ಪಾತ್ರ ಸೃಷ್ಟಿಯಲ್ಲಿ ಕಾರಂತರಂಥವರನ್ನು ತನ್ನ ಹಿಂದೆ ಇಟ್ಟುಕೊಂಡು(ಲಚ್ಚ-ನಾರಾಣಪ್ಪ) ನಮ್ಮ

ಕಾದಂಬರಿ ಪರಂಪರೆಯ ಒಂದು ಭಾಗವೇ ಆಗಿತ್ತು. ಮನುಷ್ಯನ ಮೂಲಭೂತ ಸ್ವಭಾವದ ಬಗ್ಗೆಯೇ ಪ್ರಶ್ನೆಗಳನ್ನು ಎತ್ತುವ ಈ ಕಾದಂಬರಿ ಸಂಸ್ಕೃತಿ ನಿರ್ದಿಷ್ಟವಾಗಿದ್ದು, ಕನ್ನಡ ಭಾಷೆಯ ಹೊರಗೂ ಮುಖ್ಯವಾಯಿತು. ಹೀಗೆ, ಹಲವು ಮೊದಲಿಗೆ ಕಾರಣವಾದ ಈ ಕಾದಂಬರಿಯ ಆತ್ಮವಿಮರ್ಶೆಯ ಗುಣ ಈವತ್ತಿನ ದೇಶೀವಾದದ ದಿನಗಳಲ್ಲಿ ತುಂಬ ಪ್ರಸ್ತುತವಾದದ್ದು.

೬. ಶಿಕಾರಿ

ಬರವಣಿಗೆಯಲ್ಲಿನ ಕ್ಲಾಸಿಕಲ್ ಗುಣದಿಂದಾಗಿ 'ಮೂರು ದಾರಿಗಳು' ಈ ಪಟ್ಟಿಗೆ ಸೇರಬೇಕಾದರೂ, 'ಶಿಕಾರಿ'ಯನ್ನೇ ನಾನು ಸೂಚಿಸಲು ಕಾರಣವಿದೆ. ನಗರ ಜೀವನದ ಕಥೆಗಳೆಂದರೆ, ಮನುಷ್ಯನು ಆಧುನಿಕ ನಾಗರೀಕತೆಯ ಸಂದರ್ಭದಲ್ಲಿ ದುಡಿಯುವ ಕಾರ್ಖಾನೆ-ಕಚೇರಿಗಳೆಂದರೆ ನಮ್ಮ ವಿಮರ್ಶಕರಿಗೆ ಒಂದು ರೀತಿಯ ಅಲರ್ಜಿ. ಜಾಗತೀಕರಣ, ಅಮೆರಿಕೀಕರಣದ ಬಗ್ಗೆ ಹುಯ್ಯಿಲು ಏಳುವ ಮುಂಚೆಯೇ ಬರೆದ 'ಶಿಕಾರಿ'ಯಲ್ಲಿ ಮನುಷ್ಯನ ಸ್ವಾತಂತ್ರ್ಯ, ಘನತೆ, ಆಯ್ಕೆ, ಜೀವನ ಪ್ರೀತಿಯೆಲ್ಲ ಎಲ್ಲಿ ಹೇಗೆ ಮುಕ್ಕಾಗುತ್ತದೆ; ಇಂತಹ ಸನ್ನಿವೇಶದಲ್ಲಿ ಮನುಷ್ಯ ತನ್ನ ಸುತ್ತಲಿರುವ ಹಿಂಸೆ ಮತ್ತು ತನ್ನೊಳಗೆ ಇರುವ ಆತ್ಮಹಿಂಸೆಯಿಂದ ಹೇಗೆ ಬಿಡುಗಡೆ ಪಡೆಯಬಹುದೆಂಬುದನ್ನು ಯಶವಂತ ಚಿತ್ತಾಲರು ಮಹಾನಗರದ ಬದುಕು ಮತ್ತು ದುಃಸ್ವಪ್ನದ ಸಂದರ್ಭದಲ್ಲಿ ಅವರಿಗೇ ವಿಶಿಷ್ಟವಾದ ಅಂತಃಕರಣಪೂರಿತ ಧಾಟಿಯಲ್ಲಿ ಶೋಧಿಸಿದರು. 'ಶಿಕಾರಿ' ಕೂಡ ಎಲ್ಲ ಮುಖ್ಯ ಕೃತಿಗಳಂತೆ ಮನುಷ್ಯನ ಸ್ವಭಾವದಲ್ಲೇ ಅಂತರ್ಗತವಾಗಿರುವ ಪರಸ್ಪರ ಹಿಂಸೆ, ಶೋಷಣೆಯ ನೆಲೆಗಳನ್ನು ಕನ್ನಡಕ್ಕೆ ಹೊಸದೆನ್ನಿಸುವ ಸನ್ನಿವೇಶದಲ್ಲಿ ಶೋಧಿಸಿತು. ಚಿತ್ತಾಲರನ್ನು ಕನ್ನಡ ಓದುಗರು ಸ್ವೀಕರಿಸಿದ ರೀತಿ ಕೂಡ ಕನ್ನಡ ಕಾದಂಬರಿ ಪರಿಸರದ ಜೀವಂತಿಕೆಗೆ ಸಾಕ್ಷಿ. ಚಿತ್ತಾಲರ ಮುಂದಿನ ಕಾದಂಬರಿಗಳು ಇನ್ನೂ ಹೆಚ್ಚು ಪ್ರಬುದ್ಧತೆ ಮತ್ತು ಸಂಕೀರ್ಣತೆಯತ್ತ ಹೊರಟಿದ್ದರೂ, 'ಶಿಕಾರಿ'ಯಲ್ಲಿರುವ ಪ್ರಾರ್ಥನೆಯ ಗುಣ ಮತ್ತು ಕಳಕಳಿಯ ತೀವ್ರತೆ, ಅವರ ಈಚಿನ ಕತೆಗಳಲ್ಲೇ ಹೆಚ್ಚು ಧ್ವನಿಪೂರ್ಣವಾಗಿ ಮೂಡಿ ಬರುತ್ತಿರುವಂತಿದೆ.

೭. ಗ್ರಾಮಾಯಣ

ನವ್ಯರು ಕಲಾಕೃತಿಗಳಲ್ಲಿ ಬಯಸುತ್ತಿದ್ದ 'ಸಾವಯವ ಶಿಲ್ಪ'ದ ಕಲ್ಪನೆಗೆ ಹತ್ತಿರ ಬರುವ ಕಾದಂಬರಿಯನ್ನು ಯಾವ ಪಂಥಕ್ಕೂ ಸೇರದ ರಾವಬಹಾದ್ದೂರ ಬರೆದರು. ಬರವಣಿಗೆಯು ಜೀವನಕ್ಕೆ ಎಷ್ಟು ಹತ್ತಿರವಿರಬಹುದು, ಸಾಹಿತ್ಯ ಕೃಷಿಯಲ್ಲಿ ಜೀವಂತಿಕೆಯೆಂಬುದು ಹೇಗಿರುತ್ತದೆ, ಸನ್ನಿವೇಶ ನಿರ್ಮಾಣ, ಪಾತ್ರ ಸೃಷ್ಟಿ-ಇಂತಹ ಸಂಗತಿಗಳಿಗೆ ಬಂದಾಗ, ಅತ್ಯುತ್ತಮ ಪರಿಣತಿ ಅನ್ನುವುದು ಹೇಗೆ ಕ್ರಿಯಾಶೀಲವಾಗಿರುತ್ತದೆ ಎಂಬುದನ್ನು ರಾವಬಹಾದ್ದೂರ ಈ ಕೃತಿಯಲ್ಲಿ ಸೂಚಿಸಿದರು. ಚಲನೆಯೇ ಇಲ್ಲ ಎಂದು ನಾವು ತಿಳಿದಿರುವಂತಹ ಕಾಲದ ಘಟ್ಟದಲ್ಲೂ, ಬದುಕಿನ ಕ್ರಮದಲ್ಲೂ ಆಳದಲ್ಲಿರುವ ತಳಮಳ, ಅಗ್ನಿಪರ್ವತಗಳನ್ನು ಈ ಕಾದಂಬರಿಯಲ್ಲಿ ನಾವು ಕಾಣುತ್ತೇವೆ. ಪ್ರತಿಯೊಬ್ಬ ಭಾರತೀಯನಲ್ಲೂ ಅಂತರ್ಗತವಾಗಿದ್ದ/ವಾಗಿರುವ ಸಮುದಾಯ ಪ್ರಜ್ಞೆ ಎಲ್ಲಿ, ಹೇಗೆ ಕಳೆದು ಹೋಗುತ್ತದೆ ಎಂಬ ದುರಂತವನ್ನು ಕೂಡ ಈ ಕೃತಿ ಶೋಧಿಸುತ್ತದೆ. 'ಗ್ರಾಮಾಯಣ' ಕಲಾಕೃತಿಯಾಗಿಯೇ ಕುವೆಂಪು-ಕಾರಂತರಿಗಿಂತ ಒಂದು ಹೆಜ್ಜೆ ಮುಂದೆ ಹೋಗಿದ್ದರೂ, ಈ ಇಬ್ಬರೂ ತಮ್ಮ ಕೃತಿಗಳಲ್ಲಿ ಬೆಳಗಿದ ಸಾಂಸ್ಕೃತಿಕ ತಳಮಳ-ಮುಂಗಾಣ್ಕೆ-

ಇತಿಹಾಸ ಪ್ರಜ್ಞೆ–ರಾವಬಹಾದ್ದೂರರಿಗೂ ಇದ್ದಿದ್ದರೆ ಎಂದು ಆಸೆಯಾಗುತ್ತದೆ. ಸಂಸ್ಕೃತಿ–ಸಾಹಿತ್ಯದ formal ವಲಯಗಳಿಂದಾಚೆಗೂ ಇರುವ ಸೃಜನಶೀಲತೆಯ ಪರಿಯನ್ನು ಸೂಚಿಸುವ ಕೃತಿಯಾಗಿಯೂ ಈ ಕಾದಂಬರಿ ಮುಖ್ಯ.

೮. ಮಾಯಾಲೋಕ

ಎಲ್ಲರೂ ಒಪ್ಪುವ 'ಕರ್ವಾಲೊ' ಬಿಟ್ಟು ಈ ಕಾದಂಬರಿಯನ್ನು ನಾನು ಸೂಚಿಸಲು ಮುಖ್ಯ ಕಾರಣ ನಮ್ಮ ಕಾದಂಬರಿ, ಪರಿಸರದ ಮುಖ್ಯ ಗುಣವಾದ ಪ್ರಯೋಗಶೀಲತೆಯನ್ನು ಇದು ಪ್ರತಿನಿಧಿಸುವುದರಿಂದ. ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ'ಯ ದಿನಗಳಿಂದಲೂ ನಮ್ಮ ಕಾದಂಬರಿ ಲೋಕ, ಪ್ರಯೋಗಶೀಲತೆಯ ಕಡೆಗೆ ಸದಾ ತುಡಿಯುತ್ತಿರುತ್ತದೆ. ತಮ್ಮನ್ನು, ತಮ್ಮ ಇದುವರೆಗಿನ ಬರವಣಿಗೆಯ ಕ್ರಮವನ್ನು, ಓದುಗರ ನಡುವೆ ಇದ್ದ ಅಸಾಧಾರಣ ಜನಪ್ರಿಯತೆಯನ್ನು ಪಕ್ಕಕ್ಕೆ ತಳ್ಳಿ ತೇಜಸ್ವಿಯವರು, ಈ ಕೃತಿಯ ಮೂಲಕ ಸೃಷ್ಟಿಶೀಲ ಕಲಾವಿದನೊಬ್ಬನು ಏಕೆ ನಿರಂತರವಾಗಿ ಪ್ರಯೋಗಶೀಲತೆಯತ್ತ ತುಡಿಯುತ್ತಿರುತ್ತಾನೆ ಎಂದು ಓದುಗರ ಮುಂದೆ ಪ್ರಾಂಜ್ವಲವಾಗಿ ಕೇಳಿಕೊಂಡು, ಓದುಗರ ಸಮ್ಮುಖದಲ್ಲೇ, ಓದುಗರ ಬದುಕನ್ನೇ ವಿವರಿಸುತ್ತಾ, ಈ ಲೋಕದ ಮಾಯೆಯನ್ನು ಹಿಡಿದಿಡಲು ಪ್ರಯತ್ನಿಸಿದರು. ಜೀವನವು ಕೊನೆಗೂ ಮಾಯೆಯೇ; ಆದರೆ ಆ ಮಾಯೆ ಇರುವುದು ಇಲ್ಲೇ, ಈ ಕ್ಷಣದಲ್ಲೇ, ಈ ಲೋಕದಲ್ಲೇ ಎಂಬ ನಂಬಿಕೆಯೊಡನೆ ಬರೆದ ಕೃತಿಯಿದು. ಜೀವನವು ಪ್ರತಿಕ್ಷಣವೂ ಸಂಭವಿಸುತ್ತಿರುತ್ತದೆ ಮತ್ತು ಹಾಗೆ ಸಂಭವಿಸುತ್ತಲೇ ಹೊರಳಿಕೊಳ್ಳುತ್ತಲೇ ಇರುತ್ತದೆ–ಮತ್ಯಾವುದೋ ಮಹತ್ವವಾದದ್ದಕ್ಕೆ–ಎಂದು ಸೂಚಿಸುವ ಈ ಕೃತಿ, ಕುವೆಂಪು ದರ್ಶನವನ್ನೇ ಇನ್ನೊಂದು ಪರಿಭಾಷೆಯಲ್ಲಿ demythify ಮಾಡಿ ಹೇಳಲು ಪ್ರಯತ್ನಿಸುತ್ತಿದೆಯೇನೋ ಎಂದು ಭಾಸವಾಗುತ್ತದೆ. ತೇಜಸ್ವಿಯವರಿಗೆ ಹೀಗೆ ಬರವಣಿಗೆಯ ಹೊಸದಾರಿ ಹುಡುಕುವ ಜರೂರು ಮತ್ತೆ ಮತ್ತೆ ಬರುತ್ತಲೇ ಇತ್ತು. ಇನ್ನೊಂದು ಕಾರಣಕ್ಕೆ ಕೂಡ ಈ ಕಾದಂಬರಿಯನ್ನು ನಾನು ಇಲ್ಲಿ ಸೂಚಿಸುತ್ತಿದ್ದೇನೆ. ಇನ್ನೂ ಪೂರ್ಣವಾಗಿ ಸಾಕ್ಷಾತ್ಕಾರಗೊಳ್ಳಬೇಕಾದ 'ಮಾಯಾಲೋಕ'ದ ಬರವಣಿಗೆಯ ಕ್ರಮದಲ್ಲಿ ಕನ್ನಡದಲ್ಲಿ ಮುಂದೆ ಬರಬಹುದಾದ ಹತ್ತಾರು ಕಾದಂಬರಿಗಳ ಬೀಜಗಳಿವೆ.

೯. ಭುಜಂಗಯ್ಯನ ದಶಾವತಾರಗಳು

ನವ್ಯ ಪಂಥದಲ್ಲಿದ್ದೂ, ತೇಜಸ್ವಿಯವರಂತೆ ನವ್ಯ ವಿರೋಧಿ ಪ್ರಣಾಳಿಕೆ ಹೊರಡಿಸುವ ಗೋಜಿಗೆ ಹೋಗದೆ ಕೃಷ್ಣ ಆಲನಹಳ್ಳಿ ಈ ಕಾದಂಬರಿ ಬರೆದರು. ಏಕೆಂದರೆ ಸಾಹಿತ್ಯದಲ್ಲಿ ಎಲ್ಲ ಬದಲಾವಣೆಗಳು–ಬಂಡಾಯಗಳು ಯಾವಾಗಲೂ ಘೋಷಿತ ಧಾಟಿಯಲ್ಲೇ ಇರಬೇಕಿಲ್ಲ. ಈ ಕಾದಂಬರಿಯನ್ನು ನನ್ನ ಆಯ್ಕೆಯಲ್ಲಿ ಸೇರಿಸಲು ಮುಖ್ಯ ಕಾರಣ, ಕೃತಿಯೊಳಗೆ ಅಡಕವಾಗಿರುವ ದೇಶೀ ಕಲ್ಪನೆಯ ರೀತಿ. ಆಧುನಿಕ ಜೀವನದಲ್ಲಿ ಆಯ್ಕೆ–ಸಂದಿಗ್ಧತೆಯ ಪ್ರಶ್ನೆಯನ್ನು ಎದುರಿಸಲು ನಮ್ಮೆಲ್ಲ ಲೇಖಕರು ಕಲಿತ(!) ಮತ್ತು ನಾಗರೀಕ(!) ವಾತಾವರಣದ ಒತ್ತಾಸೆಯಲ್ಲೇ ಬರೆಯುತ್ತಿದ್ದಾಗ ಕೃಷ್ಣ, ಇಂತಹ ಪ್ರಶ್ನೆಗಳನ್ನು ಗ್ರಾಮ ಭಾರತದ ಸಂದರ್ಭದಲ್ಲೂ ಎದುರಿಸಬಹುದು, ಎದುರಿಸಲಾಗುತ್ತಿದೆ ಮತ್ತು ಹಾಗೆ ಎದುರಿಸುವಾಗಲೂ ಧೀಮಂತವಾದ ಮತ್ತು ಮೌಲಿಕವಾದ ಆಯ್ಕೆಗಳಿರುತ್ತವೆ ಹಾಗೂ ಇಂತಹ ಆಯ್ಕೆಗಳು ನಿರಂತರವಾಗಿರುತ್ತವೆ ಎಂಬುದನ್ನು 'ಭುಜಂಗಯ್ಯ'ನ ಪಾತ್ರ ಕಲ್ಪನೆಯ ಮೂಲಕ ತೋರಿಸಿಕೊಟ್ಟರು. ಕಾಲದ

ಚಲನೆಯ ಆವರ್ತನ ಸ್ವರೂಪ ಮತ್ತು ಸರಳರೇಖಾತ್ಮಕ ಗುಣವನ್ನು ಒಟ್ಟಿಗೇ ಹಿಡಿಯಲು ಪ್ರಯತ್ನಿಸಿದ ಕೃತಿಯಾಗಿಯೂ ಈ ಕಾದಂಬರಿ ಮುಖ್ಯ. ತೇಜಸ್ವಿಯವರ ಕಥಾ ಸಾಹಿತ್ಯದಲ್ಲಾದಂತೆ ಇಲ್ಲಿ ಗ್ರಾಮ ಭಾರತ ಅವನತಿಯ ಹಾದಿ ಹಿಡಿದಿಲ್ಲವೆಂಬುದನ್ನೂ ಕೂಡ ಗಮನಿಸಬೇಕು. ನಾಗರೀಕತೆಗೆ ಸಂಬಂಧಪಟ್ಟ ಪ್ರಶ್ನೆಗಳನ್ನು ಗ್ರಾಮ ಭಾರತದ ಸಂದರ್ಭದಲ್ಲಿ ಎತ್ತುವಾಗಲೂ ಈ ಕೃತಿಯ ನಿರೂಪಣಾ ಧಾಟಿ ಪ್ರೌಢವಾದದ್ದು, ಗಂಭೀರಸ್ತರದ್ದು;ವ್ಯಂಗ್ಯ ಮತ್ತು ಸಿನಿಕತೆಯದಲ್ಲ.

ರಾವಬಹಾದ್ದೂರ, ತೇಜಸ್ವಿ, ಕೃಷ್ಣ ಇಂಥವರ ಕೃತಿಗಳನ್ನು ಓದುವುದರಿಂದ ನಾವು ನಮ್ಮ ಗ್ರಾಮ ಭಾರತದ ಬಗ್ಗೆ ಪಡೆಯುವ ಒಳನೋಟಗಳು ಸಮಾಜಶಾಸ್ತ್ರಜ್ಞರು ನೀಡುವ ಒಳನೋಟಗಳಿಗಿಂತ, ಗಾಂಧಿ–ಅಂಬೇಡ್ಕರ್‌ರಂತಹ ಚಿಂತಕರು ನೀಡುವ ನೋಟಗಳಿಗಿಂತ ಭಿನ್ನವಾಗಿವೆ ಎಂಬುದನ್ನು ಗಮನಿಸಬೇಕು. ಎಂ.ಎನ್.ಶ್ರೀನಿವಾಸ್ ಹೊಸ ಕಾಲದ ಸಂಚಲನವನ್ನು ಸಂಸ್ಕೃತೀಕರಣ ಮತ್ತು ಅಬ್ರಾಹ್ಮಣೀಕರಣದ ಪರಿಕಲ್ಪನೆಗಳ ಮೂಲಕ ಗ್ರಹಿಸಲು ಪ್ರಯತ್ನಿಸಿದರು. ಗಾಂಧಿಗೆ ನಮ್ಮ ಸ್ವಯಂಪೂರ್ಣ ಗ್ರಾಮಗಳು ನಾಗರೀಕತೆಯ ಆದರ್ಶವಾಗಿ ಕಂಡಿದ್ದವು. ಅಂಬೇಡ್ಕರ್‌ಗೆ ಗ್ರಾಮ ಭಾರತದ ಸಾವಯವ ಸಾಮಾಜಿಕ ಜೀವನವನ್ನು, ಸಮುದಾಯ ಪ್ರಜ್ಞೆಯನ್ನು, ದಲಿತರ ದೃಷ್ಟಿಕೋನದಿಂದ ಮಾತ್ರ ನೋಡಲು ಸಾಧ್ಯವಾಯಿತು. ಕನ್ನಡ ಕಾದಂಬರಿಗಳ ಲೋಕದರ್ಶನದಿಂದ ಮೂಡಿಬರುವ ತಿಳುವಳಿಕೆಯೆಂದರೆ ಇಂತಹ ಚಿಂತಕರ ಪರಿಕಲ್ಪನೆಗಳೆಲ್ಲ ಕೇವಲ ಆಂಶಿಕ ಸತ್ಯವನ್ನು ಹೇಳುತ್ತದೆಂಬುದು.

೧೦. ಗಂಗವ್ವ ಗಂಗಾಮಾಯಿ

೧೯೬೭ರಲ್ಲಿ ಅಂದರೆ ನವ್ಯ ಚಳುವಳಿಯ ತೀವ್ರ ದಿನಗಳಲ್ಲಿ ಪ್ರಕಟವಾದ ಶಂಕರ ಮೊಕಾಶಿ ಪುಣೇಕರರ ಈ ಕೃತಿ, ಸಾಂಪ್ರದಾಯಿಕ ಕಥನದಲ್ಲಿರುವ ಎಲ್ಲ ಓದುಗಸ್ನೇಹಿ ಗುಣಗಳನ್ನು ಒಳಗೊಂಡಿದೆ. ಇಲ್ಲಿ ನಿರೂಪಣೆಯೆಂಬುದು ಕಲೆ ಮಾತ್ರವಲ್ಲ, ಓದುಗನೊಡನೆ ಹೂಡುವ ಒಂದು ಸಂವೇದನಾಶೀಲವಾದ ಆಟ ಕೂಡ. ಕಲಾಕೃತಿಯ ನಿರ್ಮಾಣದಲ್ಲಿ ಸಂವೇದನೆಯ ಪಾತ್ರ ದೊಡ್ಡದ್ದೊ, ಬೌದ್ಧಿಕತೆಯ ಪಾತ್ರ ದೊಡ್ಡದ್ದೊ, ಸಂವೇದನೆಯೇ ಕೃತಿಯ ತಾತ್ವಿಕತೆಯೂ ಆಗುವ ಸೃಜನಶೀಲ ಪರಿ ಯಾವುದು–ಈ ಪ್ರಶ್ನೆಗಳ ಬಗ್ಗೆ ಓದುಗರ ಸಂದೇಹವನ್ನು ಇದೊಂದೇ ಕಾದಂಬರಿ ಪರಿಹರಿಸಬಲ್ಲದು. ಜೀವನ ವಿಮುಖವಾದ ಅತಿ ಗಹನತೆ, ಅತಿ ಬೌದ್ಧಿಕತೆಯನ್ನು ಪ್ರಶ್ನಿಸುವ; ಆದರೆ ಅದೇ ಸಮಯದಲ್ಲಿ ತೆಳುವಾಗದ, ಸಿನಿಕವಾಗದ ನಿರೂಪಣಾ ಧಾಟಿ ಯಾವ ರೀತಿಯದ್ದಿರಬಹುದು ಎಂಬುದನ್ನು ಕೂಡ, ಈ ಕಾದಂಬರಿ ಸೂಚಿಸುತ್ತದೆ. ಕಿರಿದಾದ್ದು, ನಗಣ್ಯವಾದ್ದು ಎಂದು ನಾವು ಭಾವಿಸುವ ಬದುಕಿನ ಪುಟ್ಟ ವಲಯವೊಂದರ ಮೂಲಕವೇ ಜೀವನ ಸಮೃದ್ಧತೆ, ಜೀವನಪ್ರೀತಿಯ ಮಹತ್ವವನ್ನು ಸೂಚಿಸುವ ಬರವಣಿಗೆಯ ಕ್ರಮದ ಮಾದರಿಯೂ ಇಲ್ಲಿದೆ. ಈ ಕೃತಿಯ ಪಾತ್ರಗಳು ಬದುಕಿನ ಮಧ್ಯದಿಂದ ಮಾತ್ರವಲ್ಲದೆ ಓದುಗರಾದ ನಮ್ಮೊಳಗಿಂದಲೂ ಪ್ರತಿಕ್ಷಣವೂ ಮೂಡಿ ಬರುತ್ತಿರುವ ಅನುಭವವಾಗುತ್ತದೆ. ಪುಣೇಕರರೇ ಮತ್ತೆ ಇಂತಹ ಕಾದಂಬರಿ ಬರೆಯಲಿಲ್ಲವಾದರೂ ತೇಜಸ್ವಿ, ಮಹಾದೇವ, ಕುಂವೀ–ಇಂತರಂತವರ ಪಾತ್ರಸೃಷ್ಟಿಯ ಕ್ರಮದಲ್ಲಿ ಈ ಪರಂಪರೆ ಮುಂದುವರಿದಿದೆ.

***

ಆಯ್ಕೆಯ ಕಾರಣಕ್ಕಾಗಿ ಈ ಹತ್ತು ಕಾದಂಬರಿಗಳನ್ನು ಬೇರೆ ಬೇರೆ ಲೇಖಕರ ಭಿನ್ನ ಭಿನ್ನ ಕೃತಿಗಳೆಂದು ಗುರುತಿಸಿದ್ದರೂ, ಈ ಎಲ್ಲ ಕೃತಿಗಳಿಗೂ ಪರಸ್ಪರ ಸಂಬಂಧವಿದೆ. ಇವುಗಳ ನಡುವೆ ಧ್ವನಿ, ಆಶಯ, ನಿರೂಪಣೆ–ಈ ಎಲ್ಲ ಸಂಗತಿ ಕುರಿತಂತೆ ವಾಗ್ವಾದವಿದೆ, ಕೊಡುಕೊಳ್ಳುವಿಕೆ, ಪ್ರಭಾವ–ಪ್ರಶ್ನೆಗಳು ಇದ್ದೇ ಇವೆ. ಈ ಕಾಲದ ವಿಮರ್ಶೆಯ ಪರಿಭಾಷೆಯಲ್ಲಿ ಹೇಳುವುದಾದರೆ, ಈ ಕೃತಿಗಳ ನಡುವೆ ಇರುವ ಅಂತರ್–ಪಠ್ಯೀಯ ಸಂಬಂಧಗಳು (Intertextual relationship) ತುಂಬಾ ಮುಖ್ಯವಾದದ್ದು. ಹೀಗಾಗಿ ಈ ಎಲ್ಲ ಕೃತಿಗಳನ್ನು ಒಂದು ಸಂಸ್ಕೃತಿ, ಒಂದು ಭಾಷಿಕ ಸಮುದಾಯ ನಿರ್ದಿಷ್ಟ ಕಾಲಮಾನವೊಂದರಲ್ಲಿ ಬರೆದ ಮಹಾಪಠ್ಯದ ಭಾಗಗಳನ್ನಾಗಿ ಕೂಡ ಓದಬಹುದು.

ನನ್ನ ಆಯ್ಕೆಯನ್ನು ವಿವರಿಸುವುದಕ್ಕೆ ಇನ್ನೂ ಕೆಲವು ಪೂರಕ ಮಾತುಗಳು ಅಗತ್ಯವೆನಿಸುತ್ತವೆ. ಶ್ರೀರಂಗರ 'ವಿಶ್ವಾಮಿತ್ರನ ಸೃಷ್ಟಿ'ಗೆ ಚಾರಿತ್ರಿಕವಾಗಿ ಪ್ರಮುಖ ಸ್ಥಾನವಿದೆ. ಪರಿಸರದಿಂದ ದೂರವಾಗಿ, ಭಿನ್ನವಾಗಿ ಆಧುನಿಕ ಮನುಷ್ಯ ಪಡುವ ಪಾಡನ್ನು ರೂಪಿಸುವ ನಂತರದ ನವ್ಯ ಕತೆ–ಕಾದಂಬರಿಗಳ ನಾಯಕರ ಮನೋಭಾವದ ಮೊದಲ ಸೂಚನೆ ಈ ಕೃತಿಯಲ್ಲಿದೆ. ನವ್ಯ ಲೇಖಕರು ಈ ರೀತಿಯ ಮನೋಭಾವದ ವಿಶ್ಲೇಷಣೆಯಲ್ಲಿ ತೋರಿದ ಸಾಧನೆಯ ಹಿನ್ನೆಲೆಯಲ್ಲಿ ಶ್ರೀರಂಗರ ಕೃತಿಯ ಚಾರಿತ್ರಿಕ ಪ್ರಾಮುಖ್ಯತೆಯನ್ನು ಒಪ್ಪಿಕೊಂಡು ಕೂಡ ಈ ಪಟ್ಟಿಯಲ್ಲಿ ಸೇರಿಸಿಲ್ಲ. ನಗರಪ್ರಜ್ಞೆಯ ಪಾತ್ರಗಳನ್ನು, ಅವುಗಳ ತಾಕಲಾಟವನ್ನು ಶಾಂತಿನಾಥ ದೇಸಾಯಿ ತಮ್ಮ ಕಾದಂಬರಿಗಳಲ್ಲಿ ಮೊದಮೊದಲಿಗೆ ತಂದದ್ದು ನಿಜವಾದರೂ, ಚಿತ್ತಾಲರು ದೇಸಾಯಿಯವರ ಸಾಧನೆಗಳನ್ನು ಒಳಗೊಂಡು ಬಹು ಮುಂದೆ ಹೋಗಿ ನಗರ ಜೀವನದ ಹಿಂದಿರುವ ಸಮಸ್ಯೆಗಳನ್ನು ಕುರಿತಂತೆ ಒಟ್ಟು ನಾಗರೀಕತೆಯ ಸ್ತರದಲ್ಲೇ ಮುಖ್ಯ ಪ್ರಶ್ನೆಗಳನ್ನು ಎತ್ತುತ್ತಿರುವುದರಿಂದ; ದೇಸಾಯಿಯವರ ಕಾದಂಬರಿ ಇಲ್ಲಿ ಸೇರಿಲ್ಲ. ಲಂಕೇಶರ 'ಮುಸ್ಸಂಜೆ ಕಥಾ ಪ್ರಸಂಗ' ಗ್ರಾಮೀಣ ಭಾರತದ ನಿರೂಪಣೆಯಲ್ಲಿದ್ದ ಶಿಥಿಲತೆಯನ್ನು ತೊಡೆದು ಹಾಕಿ ಜೀವಂತಿಕೆ ತಂದದ್ದು ನಿಜವಾದರೂ, ತೇಜಸ್ವಿ, ಕೃಷ್ಣ ಆಲನಹಳ್ಳಿ– ಇಂತಹ ಲೇಖಕರು ಗ್ರಾಮೀಣ ಭಾರತದ ಬಗ್ಗೆ, (ಚಿತ್ತಾಲರು ನಗರ ಜೀವನದ ಹಿನ್ನೆಲೆಯಲ್ಲಿ ನಾಗರೀಕತೆಯ ಸ್ತರದಲ್ಲೇ ಪ್ರಶ್ನೆಗಳನ್ನು ಎತ್ತಿದ ಹಾಗೆ) ತಮ್ಮ ಕಾದಂಬರಿಗಳಲ್ಲಿ ಮಂಡಿಸಿದ ಹೊಸ ನೋಟ, ಕಾಣ್ಕೆಯಿಂದಾಗಿ, 'ಮುಸ್ಸಂಜೆ'–ಇಲ್ಲಿ ಸೇರಿಲ್ಲ. ಮಹಾದೇವರ 'ಕುಸುಮಬಾಲೆ'ಯನ್ನು ನಾನು ಸೇರಿಸದಿರಲು ಕಾರಣ ಎರಡು. ಈ ಕೃತಿಯಲ್ಲಿ ತೋರಿದ ಪ್ರಯೋಗಶೀಲತೆಯನ್ನು ಮಹಾದೇವ ಮುಂದುವರಿಸಲೇ ಇಲ್ಲ; ಒಂದು ದಡ ತಲುಪಿಸಲೇ ಇಲ್ಲ. ಕನ್ನಡ ಓದುಗರು ಪ್ರಯೋಗಶೀಲತೆಯನ್ನು ಗೌರವಿಸುತ್ತಾರೆ. ಆದರೆ ಅದಕ್ಕೆ ಒಬ್ಬ ಲೇಖಕ ತನ್ನನ್ನು ತೆತ್ತುಕೊಳ್ಳಬೇಕೆಂದು ಬಯಸುತ್ತಾರೆ. 'ಭೂಮಿಗೀತ–ವರ್ಧಮಾನ' ಬರೆಯದೇ ಹೋಗಿದ್ದರೆ ಅಡಿಗರ 'ಚಂಡಮದ್ದಳೆ', 'ನಡೆದು ಬಂದ ದಾರಿ'ಯನ್ನು ಯಾರು ಕೇಳುತ್ತಿದ್ದರು? ಕಾದಂಬರಿ ಕ್ಷೇತ್ರಕ್ಕೇ ಬಂದರೆ ತೇಜಸ್ವಿಯವರ ಪ್ರಯೋಗಶೀಲತೆಯನ್ನು ಓದುಗರು ಒಪ್ಪಿದ ಹಾಗೆ ಮಹಾದೇವರ ಪ್ರಯೋಗಶೀಲತೆಯನ್ನು ಒಪ್ಪಿಲ್ಲ. ಇನ್ನೊಂದು ಕಾರಣ, ನಾನು ಕೃತಿಗಳನ್ನು ಆಯುವಾಗ ಒಬ್ಬ ಲೇಖಕನ–ಕೃತಿ ಓದುಗ ಸಂಸ್ಕೃತಿಯಲ್ಲಿ ಹೇಗೆ ಸ್ವೀಕಾರವಾಗಿದೆ ಎಂಬುದನ್ನೂ ಗಮನದಲ್ಲಿಟ್ಟುಕೊಂಡಿದ್ದೇನೆ. ಈ ಮಾನದಂಡದಿಂದಲೂ 'ಕುಸುಮಬಾಲೆ' ಈ ಪಟ್ಟಿಯಲ್ಲಿ ಸೇರಲಾರದು.

ಒಬ್ಬ ಲೇಖಕನ ಒಂದೇ ಕಾದಂಬರಿಯನ್ನು ಈ ಪಟ್ಟಿಯಲ್ಲಿ ಸೇರಿಸಿರುವುದರಿಂದ, ಕಾರಂತರಂತಹ ಧೀಮಂತ ಲೇಖಕರಿಗೆ ದ್ರೋಹ ಬಗೆದಂತಾಗುತ್ತದೆ. ಪ್ರಯೋಗಶೀಲತೆ, ವಸ್ತುವೈವಿಧ್ಯ ಮತ್ತು ಸಿದ್ಧಿ- ಈ ಮಾನದಂಡಗಳ ಹಿನ್ನೆಲೆಯಲ್ಲಿ ಗಮನಿಸಿದರೆ ಕನ್ನಡದ ಯಾವ ಕಾದಂಬರಿಕಾರನೂ ಕಾರಂತರಷ್ಟು ಎತ್ತರವನ್ನು ತಲುಪುವುದಿಲ್ಲ. 'ಸರಸಮ್ಮನ ಸಮಾಧಿ', 'ಚೋಮನದುಡಿ', 'ಬೆಟ್ಟದ ಜೀವ', 'ಅಳಿದ ಮೇಲೆ', 'ಮೂಕಜ್ಜಿಯ ಕನಸುಗಳು'-ಹೀಗೆ ಭಿನ್ನ ಸ್ವರೂಪಗಳ ಕಾದಂಬರಿಗಳನ್ನು ಬರೆದ ಕಾರಂತರಿಗೆ 'ಶಿಲ್ಪ'ದ ಬಗ್ಗೆ ಕಾಳಜಿ ಇರಲಿಲ್ಲವೆಂಬ ನವ್ಯ ವಕ್ತಾರರ ಮಾತು, ಈಗ ಇತಿಹಾಸದ ಕಸದ ಬುಟ್ಟಿಗೆ ಸೇರಿದೆ. ತನ್ನ ನಂಬಿಕೆ ಮತ್ತು ಅನಿಸಿಕೆಗಳಿಗೆ ವಿರುದ್ಧವಾಗಿ ಬದುಕುವವರನ್ನು ಕೂಡ ಕಾದಂಬರಿ ಲೋಕದೊಳಗೆ ಅಂತಃಕರಣ ದಿಂದ ತಂದವರಲ್ಲಿ ಕಾರಂತರೆ ಅಗ್ರಗಣ್ಯರು.

ಡಾ॥ ಎಸ್.ಎಲ್.ಭೈರಪ್ಪನವರೇಕೆ ಈ ಪಟ್ಟಿಯಲ್ಲಿ ಸೇರುವುದಿಲ್ಲ ಎಂದು ವಿವರಿಸುವುದು ನನ್ನ ಜವಾಬ್ದಾರಿ. ಭೈರಪ್ಪ ಕಾದಂಬರಿಕಾರರೇ ಅಲ್ಲ ಅನ್ನುವ ಸಾರಾಸಗಟು, ಮೂರ್ತಿಭಂಜಕ ಅಭಿಪ್ರಾಯವನ್ನು ನಾನು ಒಪ್ಪುವುದಿಲ್ಲ. 'ವಂಶವೃಕ್ಷ', 'ಗೃಹಭಂಗ', 'ಪರ್ವ', 'ಅನ್ವೇಷಣೆ' ಹಾಗೂ 'ಭಿತ್ತಿ' ಮತ್ತು 'ಸಾಕ್ಷಿ'ಯ ಕೆಲವು ಭಾಗಗಳು ಸೂಚಿಸುವ ಮಹತ್ವದ ಬರಹಗಾರ ಕೊನೆಗೂ ವಿಕಾಸವಾಗಲೇ ಇಲ್ಲ. ನಲವತ್ತು ವರ್ಷಗಳ ಕಾಲ ಕಥನ ಕ್ರಿಯೆಗೇ ಒಪ್ಪಿಸಿಕೊಂಡ ಭೈರಪ್ಪನವರ ಬದ್ಧತೆ ಮತ್ತು ಸೃಜನಶೀಲ ಚೈತನ್ಯದ ಬಗ್ಗೆ ಗೌರವ ಸೂಚಿಸುತ್ತಲೇ, ಇಷ್ಟೊಂದು ದೀರ್ಘಕಾಲ ಬರೆದ ಲೇಖಕರಲ್ಲಿ ಕಾಣಬೇಕಾದ ಪ್ರಯೋಗಶೀಲತೆ, ಆಂತರಿಕ ಪರಿವರ್ತನೆ-ಮಾಗುವಿಕೆಯನ್ನು, ನಾವು ಇವರಲ್ಲಿ ಕಾಣಲಾರೆವು ಎಂಬುದನ್ನು ಕೂಡ ಹೇಳಲೇಬೇಕು. ಭೈರಪ್ಪನವರನ್ನು ಒಬ್ಬ ಮೇಜರ್ ಮತ್ತು ಜನಪ್ರಿಯ ಲೇಖಕರನ್ನಾಗಿ ಬೆಳೆಸಿದ್ದು, ಕನ್ನಡ ಓದುಗರೇ ಎಂದು ಒಪ್ಪುವುದಾದರೆ, ಆ ಓದುಗರನ್ನು ಕೈಹಿಡಿದು ನಡೆಸಬೇಕಾದ ಸಾಂಸ್ಕೃತಿಕ ಜವಾಬ್ದಾರಿಯೂ ಲೇಖಕರಿಗಿರುತ್ತದೆ ಎಂಬುದು ಕೂಡ ನಿಜ ತಾನೇ. ಈಚಿನ ಅವರ 'ಆವರಣ' ಇಂತಹ ಸಾಂಸ್ಕೃತಿಕ ಜವಾಬ್ದಾರಿಯಿಂದ ವಿಮುಖವಾದ ಕೃತಿ.

ಕೆ.ಸತ್ಯನಾರಾಯಣ ಕನ್ನಡ ನವ್ಯೋತ್ತರ ಕಥನ ಸಾಹಿತ್ಯ ಕ್ಷೇತ್ರದ ಒಂದು ಗಮನಾರ್ಹ ಹೆಸರು. ನವೋದಯದವರಂತೆ ಒಂದು ನೈತಿಕ ಪ್ರಜ್ಞೆಯ ಹಿನ್ನೆಲೆಯಲ್ಲಿ ಹಾಗೂ ನವ್ಯದವರಂತೆ ಸೂಕ್ಷ್ಮವಾಗಿ ಸಮಕಾಲೀನ ಬದುಕಿನ ವೈರುಧ್ಯಗಳನ್ನು ಗಮನಿಸುತ್ತಲೂ ಬರೆಯುವ ಇವರ ಪ್ರಮುಖ ಕಾದಂಬರಿಗಳು: 'ಗೌರಿ', 'ಸನ್ನಿಧಾನ ಮತ್ತು ಕಾಲಜಿಂಕೆ'. ಕಥಾ ಸಂಗ್ರಹಗಳು: 'ನಿಮ್ಮ ಮೊದಲ ಪ್ರೇಮದ ಕಥೆ', 'ವಿಕ್ಟೋರಿಯಾ ಮಗ ದೇವಲಿಂಗು' ಹಾಗೂ 'ಹಳೆಯ ಕಾಲದ ಹೊಸ ಕತೆ'. ಪ್ರಬಂಧಗಳನ್ನೂ, ಕೈಲಾಸ ಪರ್ವತದ ಪ್ರವಾಸ ಕಥನವನ್ನೂ ಬರೆದಿರುವ ಸತ್ಯನಾರಾಯಣರ ವಿಮರ್ಶೆ-ಸಾಂಸ್ಕೃತಿಕ ಬರಹಗಳ ಸಂಕಲನಗಳೆಂದರೆ, 'ಆಸಕ್ತ' ಮತ್ತು 'ಮನೋಧರ್ಮ'. ಸದ್ಯಕ್ಕೆ ಇವರೀಗ ಮಹಾರಾಷ್ಟ್ರದ ಕೊಲ್ಲಾಪುರದಲ್ಲಿ ವರಮಾನ ತೆರಿಗೆ ಇಲಾಖೆಯಲ್ಲಿ ವರಿಷ್ಠಾಧಿಕಾರಿಯಾಗಿದ್ದಾರೆ

*

ಶ್ರೇಷ್ಠತೆಯ ಸಂದಿಗ್ಧತೆ

– ಡಾ. ಕೆ. ಮರುಳಸಿದ್ದಪ್ಪ

ಕನ್ನಡದ ಹತ್ತು ಶ್ರೇಷ್ಠ ನಾಟಕಗಳು :

೧. ತುಘಲಕ್	–	ಗಿರೀಶ್ ಕಾರ್ನಾಡ್
೨. ವಿಗಡ ವಿಕ್ರಮರಾಯ	–	ಸಂಸ
೩. ಜೋಕುಮಾರಸ್ವಾಮಿ	–	ಚಂದ್ರಶೇಖರ ಕಂಬಾರ
೪. ಕಾಕನ ಕೋಟೆ	–	ಮಾಸ್ತಿ ವೆಂಕಟೇಶ್ ಅಯ್ಯಂಗಾರ್
೫. ಸಂಕ್ರಾಂತಿ	–	ಪಿ.ಲಂಕೇಶ್
೬. ಶ್ಮಶಾನ ಕುರುಕ್ಷೇತ್ರಂ	–	ಕುವೆಂಪು
೭. ಗೋಕುಲ ನಿರ್ಗಮನ	–	ಪು.ತಿ.ನರಸಿಂಹಾಚಾರ್
೮. ಕತ್ತಲೆ ಬೆಳಕು	–	ಶ್ರೀರಂಗ
೯. ಟೊಳ್ಳುಗಟ್ಟಿ	–	ಟಿ.ಪಿ.ಕೈಲಾಸಂ
೧೦. ಕದಡಿದ ನೀರು	–	ಜಿ.ಬಿ.ಜೋಷಿ

ಕನ್ನಡ ನಾಟಕ ಪರಂಪರೆಯಲ್ಲಿ ಹತ್ತು ಶ್ರೇಷ್ಠ ನಾಟಕಗಳು ಮತ್ತು ಐದು ಗಮನಾರ್ಹ ಉತ್ತಮ ನಾಟಕಗಳನ್ನು ಆಯ್ಕೆ ಮಾಡಬೇಕೆನ್ನುವ ಪ್ರಮೇಯ ಎದುರಾದಾಗ ನಮ್ಮ ಮುಂದಿರುವ ಸವಾಲುಗಳೇನು? ಹೀಗೆ ನಿಶ್ಚಿತವಾಗಿ ಪಟ್ಟಿ ಮಾಡಲು ಸಾಧ್ಯವೇ? ಹೀಗೆ ಪಟ್ಟಿ ಮಾಡಲು ಅನುಸರಿಸುವ ಮಾನದಂಡಗಳಾವುವು? ಮತ್ತು ಇಂತಹ ಆಯ್ಕೆಯ ಪರಿಮಿತಿಗಳೇನು? ಎಂಬುದನ್ನು ಮೊದಲು ಸ್ಪಷ್ಟಪಡಿಸಿಕೊಳ್ಳಬೇಕಾಗುತ್ತದೆ.

ಎಷ್ಟೇ ವಸ್ತುನಿಷ್ಠವಾಗಿದ್ದರೂ ಎಲ್ಲ ಆಯ್ಕೆಗಳು ಸ್ವಂತ ಅಭಿರುಚಿಗೆ ಬದ್ಧವಾಗಿರುತ್ತವೆ ಎಂಬುದನ್ನು ಮೊತ್ತ ಮೊದಲು ಒಪ್ಪಿಕೊಳ್ಳಬೇಕಾಗುತ್ತದೆ. ಆಯ್ಕೆಯು ಬಹುಜನಾಭಿಪ್ರಾಯಕ್ಕೆ ಸಮ್ಮತವಾಗಿರುವಂತಿದ್ದಾಗ, ಸಹಜವಾಗಿಯೇ ಅನಿಶ್ಚಿತವಾದ ನಿರ್ಧಾರಗಳಿರುತ್ತವೆ. ಏಕೆಂದರೆ, ನನಗನ್ನಿಸಿದಂತೆಯೇ ಹತ್ತು ಶ್ರೇಷ್ಠ ನಾಟಕಗಳನ್ನೇ ಆಯ್ಕೆ ಮಾಡುವುದಾದರೆ, ಬಹುಶಃ ಅಲ್ಲಿ ನಾಲ್ಕೈದು ನಾಟಕಕಾರರಿಗೆ ಮಾತ್ರ ಪ್ರಾತಿನಿಧ್ಯ ದೊರೆಯಬಹುದು; ಮತ್ತು ಒಬ್ಬನೇ ನಾಟಕಕಾರನ ಎರಡು ಮೂರು ಕೃತಿಗಳಿಗೆ ಆದ್ಯತೆ ಸಿಕ್ಕಿದರೂ ಸಿಗಬಹುದು. ಆದರೆ ಒಂದು ಪರಂಪರೆಯನ್ನು ಪ್ರತಿನಿಧಿಸುವಂತೆ ಆಯ್ಕೆ ಇರಬೇಕೆನ್ನುವುದಾದರೆ, ಒಬ್ಬ ನಾಟಕಕಾರನ ಒಂದು ನಾಟಕಕ್ಕಿಂತ ಹೆಚ್ಚು ಪ್ರಾತಿನಿಧ್ಯವಿಲ್ಲದಿರುವುದು ಸೂಕ್ತವಾಗುತ್ತದೆ. ಕಾಲಾನುಕ್ರಮವಾಗಿ ಎಲ್ಲ ಕಾಲಘಟ್ಟ ಹಾಗೂ ಎಲ್ಲ ಸಾಹಿತ್ಯ ಚಳುವಳಿಗಳಿಗೂ ಸಾಧ್ಯವಿದ್ದ ಮಟ್ಟಿಗೂ ಪ್ರಾತಿನಿಧ್ಯ ದೊರಕಿಸಿ ಕೊಡಬೇಕಾಗುತ್ತದೆ. ಆದುದರಿಂದ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಹುಟ್ಟಿದ ನಾಟಕಕಾರರ

ಹತ್ತು ಶ್ರೇಷ್ಠ ನಾಟಕಗಳನ್ನು ಮೊದಲು ಪಟ್ಟಿಯಲ್ಲಿ ಕಾಣಿಸಿ ಬಳಿಕ–ಸ್ವಾತಂತ್ರ್ಯ ಬಂದ ಮೇಲೆ ಹುಟ್ಟಿದ ನಾಟಕಕಾರರ ನಂತರದ ಐದು ಶ್ರೇಷ್ಠ ನಾಟಕಗಳೆಂದು ಕೊನೆಯಲ್ಲಿ ಹೆಸರಿಸಲಾಗಿದೆ.

ಕವಿತೆ, ಕತೆ, ಕಾದಂಬರಿಗಳಿಗಿಲ್ಲದ ಒಂದು ವಿಶಿಷ್ಟ ಸಮಸ್ಯೆ, ನಾಟಕಗಳ ಆಯ್ಕೆಯಲ್ಲಿ ಎದುರಾಗುತ್ತದೆ. ನಾಟಕವು ಸಾಹಿತ್ಯ ಕೃತಿಯೂ ಹೌದು; ರಂಗಕೃತಿಯೂ ಹೌದು. ಶ್ರೇಷ್ಠ ನಾಟಕವೊಂದು ಎರಡೂ ನೆಲೆಯಿಂದ ಶ್ರೇಷ್ಠವೆನ್ನಿಸಿಕೊಳ್ಳುವಂತಿರಬೇಕು. ಸಾವಿರಾರು ಪ್ರದರ್ಶನಗಳಾಗಿರುವ ಹಲವಾರು ರಂಗಕೃತಿಗಳು, ಸಾಹಿತ್ಯ ದೃಷ್ಟಿಯಿಂದ ತೀರಾ ಕಳಪೆಯಾಗಿರುವ ನಿದರ್ಶನಗಳಿವೆ. ಶ್ರೇಷ್ಠ ರಂಗಕೃತಿಗಳಾಗಿ ಗಾಢವಾಗಿ ಪ್ರೇಕ್ಷಕರ ಮನಸ್ಸನ್ನು ಕಲಕಿರುವ ನಾಟಕಗಳೂ, ಸಾಹಿತ್ಯ ಕೃತಿಗಳಾಗಿ ಶ್ರೇಷ್ಠವೆನ್ನಿಸದಿರಬಹುದು. ನಿದರ್ಶನಕ್ಕೆ, ನಮ್ಮ ವೃತ್ತಿರಂಗದ ಕಂಪನಿ ನಾಟಕಗಳನ್ನೇ ಗಮನಿಸುವುದಾದರೆ, ಸದಾರಮೆ, ದೇವದಾಸಿ, ಎಚ್ಚಮನಾಯಕ, ಸಂಪತ್ತಿಗೆ ಸವಾಲ್, ಜಗಜ್ಯೋತಿ ಬಸವೇಶ್ವರ, ಹೇಮರೆಡ್ಡಿ ಮಲ್ಲಮ್ಮ– ಇವೆಲ್ಲ ಹಲವು ದಶಕಗಳ ಕಾಲ ಲಕ್ಷಾಂತರ ಪ್ರೇಕ್ಷಕರ ಮನಗೆದ್ದಿವೆ. ಆದರೆ ಸಾಹಿತ್ಯ ಕೃತಿಗಳಾಗಿ ಇವುಗಳನ್ನು ಶ್ರೇಷ್ಠವೆಂದು ಒಪ್ಪಲಾಗುವುದಿಲ್ಲ. ಆಧುನಿಕ ರಂಗಭೂಮಿಯಲ್ಲಿಯೂ ಇತ್ತೀಚೆಗೆ ಅತ್ಯಂತ ಜನಪ್ರಿಯವಾಗಿರುವ ಕಥಾ ರಂಗಭೂಮಿಯಿದೆ. ಈ ಮಾದರಿಗೆ ಸೇರಿದ ಕೆಲವು ರಂಗಕೃತಿಗಳು ಹೊಸ ಅಲೆಯನ್ನೇ ಎಬ್ಬಿಸಿವೆ. ಒಡಲಾಳ, ಕುಸುಮಬಾಲೆ, ಇಂತಹ ಹತ್ತಾರು ಉತ್ತಮ ರಂಗಕೃತಿಗಳು ಇಲ್ಲಿ ಗಮನಾರ್ಹವಾಗಿವೆ. ಆದರೆ ಸಾಹಿತ್ಯ ಪರಂಪರೆಯಲ್ಲಿ ಈ ಕೃತಿಗಳನ್ನು ನಾಟಕವೆನ್ನಲು ಬರುವುದಿಲ್ಲ. ಇನ್ನು ಜನಪದ ರಂಗಭೂಮಿಯನ್ನು ಗಮನಿಸುವುದಾದರೆ ಕಾವ್ಯ ರೂಪದಲ್ಲಿಯೇ ಇರುವ ಕಥಾ ಪ್ರಸಂಗವನ್ನು ಹೊರತುಪಡಿಸಿದರೆ, ಸಂವಾದವೂ ಸೇರಿದಂತೆ ಉಳಿದೆಲ್ಲ ನಾಟಕೀಯ ಪರಿಕರವೂ ಮೌಖಿಕ ಸ್ವರೂಪದಲ್ಲಿಯೇ ಇರುವಾಗ, ಸಾಹಿತ್ಯ ಕೃತಿಯಾಗಿ ಇವುಗಳನ್ನು ಹೇಗೆ ಗ್ರಹಿಸಬೇಕೆಂಬುದು ಸಮಸ್ಯೆಯಾಗಿದೆ. ಆದುದರಿಂದ ನಮ್ಮ ಆಯ್ಕೆಯ ಪರಿಧಿಯಿಂದ ವೃತ್ತಿರಂಗಭೂಮಿ ಹಾಗೂ ಜನಪದ ರಂಗಭೂಮಿಯನ್ನು, ಕಥಾ ರಂಗಭೂಮಿಯನ್ನು ಬಿಟ್ಟು ಬಿಡುವುದು ಅನಿವಾರ್ಯವಾಗುತ್ತದೆ.

ಕೊನೆಯದಾಗಿ, ಹೀಗೆ ಸಾಹಿತ್ಯ ಕೃತಿಗಳನ್ನು ಶ್ರೇಷ್ಠ, ಕನಿಷ್ಠ ಮುಂತಾಗಿ ದರ್ಜೀಕರಿಸುವುದೇ ಕ್ಲೀಷೆಯಾಗಿರಬಹುದೆಂಬ ಸಂದೇಹವೂ ನನ್ನನ್ನು ಬಹುದಿನದಿಂದ ಕಾಡುತ್ತಿದೆ. ಶ್ರೇಷ್ಠತೆಯ ಹುಡುಕಾಟ ಒಂದು ವ್ಯಸನವಾಗಬಾರದೆಂಬ ಕೆ.ವಿ.ಸುಬ್ಬಣ್ಣನವರ ಎಚ್ಚರಿಕೆ ನಮಗೆಲ್ಲಾ ಮನದಟ್ಟಾಗಬೇಕಿದೆ. ಒಂದು ಬಗೆಯ ಹಿಂಜರಿಕೆಯಿಂದಲೇ ಸಾಹಿತ್ಯ ಪರಂಪರೆಯ ನಾಟಕಗಳನ್ನು ಮಾತ್ರ ಪರಿಗಣಿಸಿ, ಹತ್ತು ನಾಟಕಗಳನ್ನು ಮೊದಲ ಹಂತದಲ್ಲಿ, ಉಳಿದಂತೆ ಐದು ನಾಟಕಗಳನ್ನು ಮುಂದಿನ ಹಂತದಲ್ಲಿ ಹೆಸರಿಸಲಾಗಿದೆ.

ಕನ್ನಡ ರಂಗಭೂಮಿ ಮತ್ತು ನಾಟಕ ಸಾಹಿತ್ಯ ಪರಂಪರೆಯ ಹಳಮೆ ಎಷ್ಟೇ ಇರಲಿ, ಕನ್ನಡದ ಮೊದಲ ಮಹತ್ವದ ನಾಟಕಕಾರರೆಂದು **ಕೈಲಾಸಂ**(೧೮೮೪–೧೯೪೬) ಅವರನ್ನು ಗುರುತಿಸಲಾಗುತ್ತದೆ. **'ಟೊಳ್ಳು ಗಟ್ಟಿ'** ಅವರ ಮೊದಲ ನಾಟಕ. ಇದು ಅವರ ಎಲ್ಲ ನಾಟಕಗಳ ಆಶಯವನ್ನು ಪ್ರತಿನಿಧಿಸುವ ಕೃತಿಯಾಗಿದ್ದು ಶಿಕ್ಷಣದ ಸ್ವರೂಪ ಮತ್ತು ಗುರಿಯನ್ನು ಕುರಿತು ಅಲ್ಲಿ ಚರ್ಚಿಸಲಾಗಿದೆ. ಲೌಕಿಕ ಯಶಸ್ಸು, ಉಪಯುಕ್ತತೆಯನ್ನೇ ಪ್ರಧಾನ ಮೌಲ್ಯವನ್ನಾಗಿ ಒಪ್ಪಿಕೊಂಡ ಇಂಗ್ಲಿಷ್ ಶಿಕ್ಷಣ ಪದ್ಧತಿಯು, ವ್ಯಕ್ತಿತ್ವ ನಿರ್ಮಾಣದತ್ತ ಗಮನ ಹರಿಸದಿರುವ

ದುರಂತವನ್ನು ಈ ನಾಟಕ ವಿಡಂಬಿಸುತ್ತಿದ್ದು, ಇಂತಹ ಶಿಕ್ಷಣ ಕ್ರಮದಿಂದಾಗಿ ಸ್ವಂತಿಕೆಯನ್ನೇ ಕಳೆದುಕೊಂಡ ಸಾಮಾಜಿಕ ದಿವಾಳಿ ಸ್ಥಿತಿಯೊಂದನ್ನು ಅಲ್ಲಿ ಕಾಣಬಹುದಾಗಿದೆ. ಒಂದೇ ಕುಟುಂಬದ ಇಬ್ಬರು ಮಕ್ಕಳಾದ ಪುಟ್ಟು, ಮಾಧು ಎರಡು ಮಾದರಿಗಳು. ಇವರಿಬ್ಬರ ಹೋಲಿಕೆಯೇ ನಾಟಕದ ಕಥಾ ರಚನೆಯ ಗುರಿ. ಈ ಹೋಲಿಕೆಯ ಶಿಖರ ಪ್ರಾಯ ಸನ್ನಿವೇಶವಾದ ಮನೆಗೆ ಬೆಂಕಿ ಬೀಳುವ ಪ್ರಸಂಗ, ಸಾಂಕೇತಿಕವಾಗಿದ್ದು- ಅದರಲ್ಲಿ ಓದಿನಲ್ಲಿ ದಡ್ಡನಾಗಿದ್ದ ಮಾಧು ಗೆದ್ದು, ಎಲ್ಲರ ಪ್ರಶಂಸೆಗೆ ಪಾತ್ರನಾಗುವುದು ಧ್ವನಿಪೂರ್ಣ ವ್ಯಂಗ್ಯವಾಗಿದೆ. ಈ ನಾಟಕವು ಎತ್ತಿದ ಪ್ರಶ್ನೆ, ಇಂದಿಗೂ ಪ್ರಸ್ತುತವಾಗಿರುವುದು ಮಾತ್ರ ಗಮನಾರ್ಹವಾಗುತ್ತದೆ.

ಸಂಸ (೧೮೯೮-೧೯೩೯) ಮತ್ತು ಕೈಲಾಸಂ, ಇಬ್ಬರೂ ಏಕಕಾಲಕ್ಕೆ ಆಧುನಿಕ ಕನ್ನಡ ನಾಟಕ ಪರಂಪರೆಯಲ್ಲಿ ಕಾಣಿಸಿಕೊಳ್ಳುತ್ತಾರೆ. ಐತಿಹಾಸಿಕ ವಸ್ತುವಿಗೆ ಘನತೆ ಮತ್ತು ಕಲಾತ್ಮಕತೆಯನ್ನು ತಂದುಕೊಟ್ಟ ಮೊದಲ ಕನ್ನಡ ನಾಟಕಕಾರರೆಂದು ಸಂಸರನ್ನು ಸ್ಮರಿಸಬೇಕಾಗುತ್ತದೆ. ಪಾತ್ರ ರಚನೆ ಮತ್ತು ದೃಶ್ಯ ನಿರ್ಮಾಣ ಕೌಶಲದಲ್ಲಿ ಸಂಸರು ಸಿದ್ಧಹಸ್ತರು. ಹನ್ನೆರಡು ದೃಶ್ಯಗಳಿರುವ '**ವಿಗಡ ವಿಕ್ರಮರಾಯ**'ದ ಒಂದೊಂದು ಸನ್ನಿವೇಶವೂ ನಾಟಕದ ಕ್ರಿಯಾಗತಿಯನ್ನು ನಿರ್ದಿಷ್ಟ ಗುರಿಯೆಡೆಗೆ ಸಾಗಿಸುತ್ತದೆ. ವಿಕ್ರಮರಾಯನ ಪತನ, ರಣಧೀರನ ಉದಯವನ್ನು ಕ್ರಮಬದ್ಧವಾಗಿ ರಚಿಸಿ ತೋರಿಸುವ ಈ ನಾಟಕದಲ್ಲಿ ವಿಕ್ರಮರಾಯನ ಕೊಲೆಯಾಗಿ ಅಂತ್ಯ ಕಾಣುವ ಸಂದರ್ಭದ ನಾಟಕೀಕರಣ ಅದ್ಭುತವಾಗಿದೆ.

ಮೈಸೂರಿನ ಚರಿತ್ರೆಗೆ ಸಂಬಂಧಿಸಿದ ಹಳೆಯ ದಾಖಲೆಗಳನ್ನೆಲ್ಲ ಆಳವಾಗಿ ಅಭ್ಯಸಿಸಿ ಅಲ್ಲಿನ ಭಾಷಾಶೈಲಿಯನ್ನು ದಕ್ಕಿಸಿಕೊಂಡಿದ್ದ ಸಂಸರು, ಪ್ರೌಢವಾದ ವಿಶಿಷ್ಟ ಭಾಷಾ ಶೈಲಿಯೊಂದನ್ನು ತಮ್ಮ ನಾಟಕಗಳಿಗಾಗಿ ರೂಢಿಸಿಕೊಂಡಿದ್ದರು. ತಮ್ಮ ನಾಟಕಗಳಲ್ಲಿ ಅವರು ನಿರೂಪಿಸಿದ ಚಾರಿತ್ರಿಕ ಪರಿಸರದ ಸಮರ್ಥ ಅಭಿವ್ಯಕ್ತಿಗೆ ಈ ಭಾಷೆ ನೆರವಾಯಿತು.

ಮೈಸೂರಿನ ಚರಿತ್ರೆಯನ್ನು ಆಧರಿಸಿ ಅವರು ರಚಿಸಿದರೆಂದು ಹೇಳಲಾಗುವ ಇಪ್ಪತ್ತೂರು ನಾಟಕಗಳಲ್ಲಿ ಆರು ಕೃತಿಗಳು ಮಾತ್ರ ಲಭ್ಯವಾಗಿವೆ. ಸಂಸರ ಜೊತೆಗೇ ಅಂಟಿಕೊಂಡು ಬಂದ ಸ್ವಹಿಂಸೆಯ ಮನೋವ್ಯಾಧಿಯಿಂದಾಗಿ ಬಹುಪಾಲು ನಾಟಕಗಳನ್ನು ಅವರೇ ನಾಶ ಮಾಡಿರಬೇಕು, ಇಲ್ಲವೇ ಕಳೆದುಕೊಂಡಿಬೇಕೆಂದು ಜಿ.ಪಿ.ರಾಜರತ್ನಂ ಊಹಿಸುತ್ತಾರೆ.

ಹೆಗ್ಗೋಡಿನ 'ತಿರುಗಾಟ'ದವರು ಚಿದಂಬರರಾವ್ ಜಂಬೆ ನಿರ್ದೇಶನದಲ್ಲಿ ಮಾಡಿದ ರಂಗಪ್ರಯೋಗವು ಈ ನಾಟಕದ ಶ್ರೇಷ್ಠ ರಂಗಕೃತಿ ಎನ್ನಬಹುದಾಗಿದೆ. ಪ್ರಸನ್ನ ನಿರ್ದೇಶನದಲ್ಲಿ ಸಮುದಾಯವು ಈ ನಾಟಕವನ್ನೇ ಆಧರಿಸಿ 'ಹುತ್ತವ ಬಡಿದೊಡೆ' ಎಂಬ ರಂಗಕೃತಿಯನ್ನು ಕಲ್ಪಿಸಿ (ಕೆ.ವಿ.ನಾರಾಯಣ) ಯಶಸ್ವಿಯಾಗಿ ಪ್ರಯೋಗಿಸಿದರೆಂಬುದೂ ಇಲ್ಲಿ ದಾಖಲಾಗ ಬಹುದಾಗಿದೆ.

ಕನ್ನಡ ನಾಟಕ ಪರಂಪರೆಯಲ್ಲಿ ಕೈಲಾಸಂ ತರುವಾಯ ಸಾಮಾಜಿಕ ವಸ್ತುವಿಗೆ ಆದ್ಯತೆ ನೀಡಿದ **ಶ್ರೀರಂಗ** (೧೯೦೪-೮೪) ಆಧುನಿಕ ಭಾರತೀಯ ರಂಗಭೂಮಿಯ ಬಹುದೊಡ್ಡ ನಾಟಕಕಾರರೆಂದು ಮನ್ನಣೆ ಪಡೆದಿದ್ದಾರೆ.

ಸಮಕಾಲೀನ ಬದುಕು ಮತ್ತು ರಂಗಭೂಮಿಯ ಮೂಲಸೂತ್ರವನ್ನು ಅನ್ವೇಷಿಸುವ '**ಕತ್ತಲೆ ಬೆಳಕು**', ಶ್ರೀರಂಗರ ನಾಟಕಗಳಲ್ಲಿ ವಿಶಿಷ್ಟ ಕೃತಿಯಾಗಿದೆ. ಆಧುನಿಕ ಕನ್ನಡ ರಂಗಭೂಮಿಯು

ಹೊಸ ತಿರುವಿಗೆ ಹೊರಳಿಕೊಂಡ ಸಂದರ್ಭದ ನಾಟಕವಿದಾಗಿದ್ದು, ನಾಟಕಕಾರ ಶ್ರೀರಂಗರು ಇಲ್ಲಿಂದ ಮುಂದೆ ವೈಚಾರಿಕತೆಯತ್ತ ಗಾಢವಾದ ಒಲವು ತೋರಿಸತೊಡಗಿದರು. ರಂಗಭೂಮಿಯ ಪ್ರೇಕ್ಷಕ, ನಾಟಕಕಾರ, ಕಂಪನಿ ಮಾಲೀಕ – ಈ ಮೂವರ ನಡುವೆಯೂ ಅರ್ಥಪೂರ್ಣ ಸಂವಾದ, ಸಂಪರ್ಕವಿಲ್ಲದಿರುವ ಅಸಾಂಗತ್ಯವನ್ನು 'ಕತ್ತಲೆ ಬೆಳಕು' ಒಂದು ನೆಲೆಯಲ್ಲಿ ಪ್ರತಿಪಾದಿಸುತ್ತದೆ; ಮತ್ತೊಂದು ನೆಲೆಯಲ್ಲಿ ಒಟ್ಟಾರೆ ಜನಜೀವನವೇ ಅಸಂಬದ್ಧ ವೆನಿಸುತ್ತಿರುವುದನ್ನು ಮನವರಿಕೆ ಮಾಡಿಕೊಡುತ್ತದೆ. ಎಲ್ಲ ಸಂಬಂಧಗಳೂ ಜಡವಾಗಿರುವುದರಿಂದ ಅವರಾಡುವ ಮಾತುಗಳಿಗೂ ಅರ್ಥವಿಲ್ಲ; ಏಕತಾನತೆ, ಪುನರಾವರ್ತನೆ, ಚಿಲ್ಲರೆ ಸಂಗತಿಗಳಿಂದ ಉದ್ವಿಗ್ನಗೊಳ್ಳುವುದು ಇಲ್ಲಿನ ಪಾತ್ರಗಳ ವಿಶೇಷವಾಗಿದೆ. ಪರಿಸರದೊಡನೆ ಸಂಬಂಧ ಕಡಿದುಕೊಂಡ ವ್ಯಕ್ತಿಯ ಬದುಕಿನಂತೆಯೇ ಜಡಗೊಂಡ ಪರಿಸರದಲ್ಲಿ ನಾಟಕ ಬರೆಯಲು ಅಸಮರ್ಥನಾದ ನಾಟಕಕಾರನ ಸ್ಥಿತಿಯೂ ಇದ್ದ, ಇವೆರಡೂ ಕಥಾ ಸಂದರ್ಭವನ್ನು ನಾಟಕ ರಚನೆಯಲ್ಲಿ ಒಟ್ಟಾಗಿ ಜೋಡಿಸಿ ಹೆಣೆದಿರುವ ನಾಟಕೀಯ ತಂತ್ರ ಅದ್ಭುತವಾಗಿದೆ.

ಅಸಂಗತ ನಾಟಕಗಳು ಕನ್ನಡದಲ್ಲಿ ಕಾಣಿಸಿಕೊಳ್ಳುವ ಮುನ್ನವೇ ಶ್ರೀರಂಗರು ಈ ನಾಟಕವನ್ನು ರಚಿಸಿದರೆಂಬುದು ಗಮನಾರ್ಹವಾಗಿದೆ. ರಚನೆ, ವೈಚಾರಿಕತೆ ಎರಡೂ ದೃಷ್ಟಿಯಿಂದ 'ಕತ್ತಲೆ ಬೆಳಕು' ಮೊದಲ ಪ್ರಾಯೋಗಿಕ ನಾಟಕವೆನ್ನಬಹುದಾಗಿದೆ. ಈ ನಾಟಕದ ಹಲವಾರು ರಂಗಪ್ರಯೋಗಗಳಲ್ಲಿ ಬಿ.ವಿ.ಕಾರಂತರು 'ರಂಗಾಯಣ'ಕ್ಕಾಗಿ ನಿರ್ದೇಶಿಸಿದ ರಂಗಪ್ರಯೋಗ ವಿಶಿಷ್ಟ ಬಗೆಯದಾಗಿತ್ತೆಂದು ಗಮನಿಸಬಹುದಾಗಿದೆ.

ಕೈಲಾಸಂ, ಸಂಸ, ಶ್ರೀರಂಗರು ರಂಗಮಾಧ್ಯಮಕ್ಕೆ ವಿಶೇಷ ಒತ್ತು ನೀಡಿದ ನಾಟಕಕಾರರು. ನವೋದಯದ ಆಚಾರ್ಯ ಬಿ.ಎಂ.ಶ್ರೀ. ಚಾಲನೆ ನೀಡಿದ ನಾಟಕ ಪರಂಪರೆ ಪ್ರಧಾನವಾಗಿ ಸಾಹಿತ್ಯ ಪರಂಪರೆ. ಬಿ.ಎಂ.ಶ್ರೀ. ಮೇಲ್ಪಂಕ್ತಿಯನ್ನು ಅನುಸರಿಸಿದ ನಾಟಕಕಾರರಲ್ಲಿ ಕುವೆಂಪು, ಮಾಸ್ತಿ, ಪು.ತಿ.ನ. ಪ್ರಮುಖರು.

ಷೇಕ್ಸ್‌ಪಿಯರ್‌ನಿಂದ ಪ್ರಭಾವಿತರಾಗಿದ್ದ **ಕುವೆಂಪು** (೧೯೦೪–೧೯೯೪)ರವರು ರಕ್ತಾಕ್ಷಿ, ಬಿರುಗಾಳಿ, ಚಂದ್ರಹಾಸದಂತಹ ನಾಟಕಗಳನ್ನು ರಚಿಸಿದರೂ, ಅವರ ಮಹತ್ವ ಪೂರ್ಣ ನಾಟಕಗಳು ಮಹಾಭಾರತ, ರಾಮಾಯಣದಿಂದ ವಸ್ತು ಪಡೆದಿವೆ. ವರ್ತಮಾನ ಕಾಲದ ಬೆಳಕಿನಲ್ಲಿ ಪುರಾಣವಸ್ತುವನ್ನು ಪುನರ್ ರಚಿಸುವುದು ಕುವೆಂಪು ವೈಶಿಷ್ಟ್ಯ. ಅವರ ಪದ್ಯ ನಾಟಕಗಳ ಸಂವಾದ ಕ್ಲಿಷ್ಟತೆ ರಂಗಪ್ರಯೋಗಕ್ಕೆ ತೊಡಕಾಗುವಂತಿದೆ ಯಾದರೂ ಪ್ರಯೋಗಶೀಲ ನಿರ್ದೇಶಕರು ಮನಸ್ಸು ಮಾಡಿದರೆ ಅದ್ಭುತ ರಂಗಕೃತಿಗಳನ್ನು ನಿರ್ಮಿಸಬಹುದೆಂಬುದನ್ನು ಬಿ.ವಿ.ಕಾರಂತ, ಸಿ.ಬಸವಲಿಂಗಯ್ಯ, ಎಂ.ಎಸ್.ಸತ್ಯು, ಬಿ.ಜಯಶ್ರೀ ತೋರಿಸಿಕೊಟ್ಟಿದ್ದಾರೆ.

ಜಗತ್ತನ್ನೇ ತಲ್ಲಣಗೊಳಿಸಿದ ಮೊದಲ ಮಹಾಯುದ್ಧವಾದ ಹತ್ತು ವರ್ಷಗಳ ಬಳಿಕ ಮತ್ತು ಎರಡನೆಯ ಮಹಾಯುದ್ಧದ ಮುನ್ಸೂಚನೆಯಿದ್ದ ಸಂಧಿಕಾಲದಲ್ಲಿ ಕುವೆಂಪು **'ಶ್ಮಶಾನ ಕುರುಕ್ಷೇತ್ರಂ'** ರಚಿಸಿದರು. ಮಹಾಭಾರತ ಕತೆಯ ವಸ್ತು ವಿಚಾರದ ಚೌಕಟ್ಟಿನಲ್ಲಿಯೇ ಸಾರ್ವಕಾಲಿಕವಾದ ಯುದ್ಧ ವಿರೋಧಿ ಸಂದೇಶವನ್ನು ಈ ನಾಟಕ ನೀಡುತ್ತದೆ. ಕುವೆಂಪುರವರೇ ಹೇಳಿರುವಂತೆ, "ಇದೊಂದು ಪ್ರತಿಮಾ ಸೃಷ್ಟಿ. ಯುದ್ಧದ ದುರಂತತೆ, ಅನ್ಯಾಯ, ಕ್ರೌರ್ಯ, ವಿನಾಶನ, ಅವಿವೇಕ, ದುರ್ಲಂಘ್ಯ ವಿಧಿ, ಸರ್ವ ವಿಫಲತೆ, ಸಂಸ್ಕೃತಿಯ ಸಾವು–ಇದಕ್ಕೆ

ಪ್ರತಿಮೆ. ಒಂದೊಂದು ಯುದ್ಧವೂ ಪ್ರಾರಂಭವಾಗುವಾಗ ಅದು ಯುದ್ಧವನ್ನೇ ಕೊನೆಗಾಣಿಸುವ ಜಗತ್ತಿನ ಕೊನೆಯ ಅನಿವಾರ್ಯ ಸಂಕಟವೆಂದು ಸಾರುತ್ತೇವೆ. ಅನ್ಯಾಯವೆಲ್ಲ ತೊಲಗಿ ನ್ಯಾಯ ಸ್ಥಾಪನೆಯಾಗುವುದೆಂದು ಭಾವಿಸುತ್ತೇವೆ..... ಆದರೆ? ಸಂಸ್ಕೃತಿ, ನಾಗರಿಕತೆ, ಪ್ರಗತಿ ಎಲ್ಲಾ ಶ್ಮಶಾನರುದ್ರನ ಮೆಯ್ಗೆ ಭಸ್ಮ ಲೇಪನವಾಗುತ್ತದೆ...."

ದ್ವಾಪರ-ಕಲಿಯುಗದ ಸಂಧಿಕಾಲದ ಒಂದೇ ಒಂದು ರಾತ್ರಿಯ ಕಥಾ ಚೌಕಟ್ಟಿನಲ್ಲಿಯೇ ಎರಡು ಯುಗದ ಸಮೀಕ್ಷೆಯನ್ನು ನಡೆಸುವ ಈ ನಾಟಕದ ವಸ್ತುವಿಸ್ತಾರ ಮಹಾಕಾವ್ಯೋಚಿತ ವಾದುದು. ಸಂಭಾಷಣೆಯ ಕ್ರಮದಲ್ಲಿಯೇ ಹಿಂದಿನ ಕಥಾಭಾಗವನ್ನು ಸಂಗ್ರಹಿಸಿ ವ್ಯಾಖ್ಯಾನಿಸುವ ತಂತ್ರ, ಹತ್ತನೆಯ ಶತಮಾನದ ಕವಿ ರನ್ನನ 'ಸಿಂಹಾವಲೋಕನ ಕ್ರಮ'ವನ್ನು ನೆನಪಿಸುವಂತಿದೆ. 'ಸಮುದಾಯ'ದವರಿಗಾಗಿ ಎಂ.ಎಸ್. ಸತ್ಯು ನಿರ್ದೇಶಿಸಿ ಪ್ರಯೋಗಿಸಿದ ರಂಗಪ್ರಯೋಗ ವಿಶಿಷ್ಟವಾಗಿತ್ತು. ಅದಲ್ಲದೆ ಇನ್ನೂ ಅನೇಕ ಪ್ರಯೋಗಗಳಾಗಿವೆಯಾದರೂ, ಅವೆಲ್ಲ ಸರಳವಾಗಿ ನಾಟಕವನ್ನು ಪ್ರದರ್ಶಿಸಿದವೆಂಬುದನ್ನು ಗಮನಿಸಬಹುದಾಗಿದೆ.

ಮಾಸ್ತಿಯವರ (೧೮೯೧-೧೯೮೬) **'ಕಾಕನಕೋಟೆ'**, ಜಾನಪದ ಸಾಮಗ್ರಿಯನ್ನು ಬಳಸಿಕೊಂಡು ಕಟ್ಟಿದ ಒಂದು ಐತಿಹಾಸಿಕ ನಾಟಕ. ೧೯೩೮ರಲ್ಲಿಯೇ ರಚನೆಗೊಂಡು ಪ್ರಕಟವಾಗಿರುವ ಈ ನಾಟಕವು ರಂಗಪ್ರಯೋಗ ಕಾಣಲು ಮೂರು ದಶಕವಾಯಿತೆಂಬುದು, ಕನ್ನಡ ಹವ್ಯಾಸಿ ರಂಗಭೂಮಿಯ ದುಸ್ಥಿತಿಗೆ ಹಿಡಿದ ಕನ್ನಡಿಯೆನ್ನಬಹುದು.

ಕಾಡು ಮತ್ತು ನಾಡು, ಜಾನಪದ ಹಾಗೂ ನಾಗರಿಕ ಸಂಸ್ಕೃತಿಗಳ ಮುಖಾಮುಖಿಯಲ್ಲಿ ಬುಡಕಟ್ಟು ಜನಾಂಗವೊಂದು ರಾಜಸತ್ತೆಯ ಮಡಿಲಿಗೆ ಬೀಳುವ ಕತೆಯನ್ನು 'ಕಾಕನಕೋಟೆ' ನಿರೂಪಿಸುತ್ತದೆ. ನಾಟಕದ ಮುಕ್ತಾಯದಲ್ಲಿ ಪ್ರವೇಶಿಸುವ ರಣಧೀರ ಕಂಠೀರವನನ್ನು ಬಿಟ್ಟರೆ, ಇಡೀ ನಾಟಕದ ಘಟನಾವಳಿಗಳಿಗೆ ಹಿನ್ನೆಲೆಯಾದ ಬುಡಕಟ್ಟು ಜನಾಂಗದ ಬದುಕನ್ನು ಅತ್ಯಂತ ಸಮರ್ಥವಾಗಿ ನಾಟಕಕಾರರು ರಚಿಸಿದ್ದಾರೆ. ನಾಟಕದ ಭಾಷೆ, ವಾತಾವರಣ ನಿರ್ಮಾಣ, ಪುರಾಣ ಪುರುಷ ಕರಿ ಹೈದನ ಕತೆಯನ್ನು ವಸ್ತುವಿನಲ್ಲಿ ಸಮಾವೇಶಗೊಳಿಸಿರುವ ತಂತ್ರ-ಇವೆಲ್ಲವೂ ಸೇರಿ ಅದೊಂದು ಸಂಸ್ಕೃತಿ ಕಥನದಂತೆ ಮೈದಾಳಿದೆ. ಜಾನಪದವೆನ್ನುವುದು ಅಲ್ಲಿಗೆ ತಾಂತ್ರಿಕ ಅಗತ್ಯವಾಗಿರದೆ, ನಾಟಕದ ಜೀವಧಾತುವಿನಂತಿದೆ.

'ಕಾಕನ ಕೋಟೆ'ಯ ಕಾಡು ಕುರುಬರ ಇತಿಹಾಸವು ಸಂಕ್ಷಿಪ್ತವಾಗಿ ಮಾನವ ಕೋಟಿಯ ಸಾಂಸ್ಕೃತಿಕ ವಿಕಾಸ ಕ್ರಮವನ್ನೇ ಧ್ವನಿಸುವಂತಿದೆ. ಕರಿಹೈದ, ಕಾಕ, ಮೊಲ್ಲೆ ಈ ಮೂರೂ ಘಟ್ಟಗಳನ್ನು ಕಾಡು ಕುರುಬರ ವಿಕಾಸದ ಮೂರು ಮಜಲುಗಳೆನ್ನುವುದಾದರೆ, ಕಾಕ ಅದರ ಕೇಂದ್ರಬಿಂದು. ಕಿರು ಸಂಸ್ಕೃತಿಯೊಂದು ನಾಗರಿಕ ಬದುಕಿನ ಮಹಾಸಾಗರದಲ್ಲಿ ಒಂದಾಗುವ ಹರ್ಷ, ದುರಂತವೆರಡನ್ನು ಕಾಕನ ಕೋಟೆಯ ಕತೆ ಧ್ವನಿಸುತ್ತದೆ.

ಸಿ.ಆರ್.ಸಿಂಹ ನಿರ್ದೇಶನದಲ್ಲಿ ನಟರಂಗದವರು ಪ್ರಯೋಗಿಸಿದ ಮೊದಲ ಪ್ರಯೋಗವೇ ಗಮನಾರ್ಹವಾಗಿತ್ತು. ಮುಂದೆ ಇದೇ ಬಳಗವು 'ಕಾಕನ ಕೋಟೆ'ಯ ಚಲನಚಿತ್ರವಾಗುವಲ್ಲಿಯೂ ನಿರ್ಣಾಯಕ ಪಾತ್ರ ವಹಿಸಿತು.

ಪು.ತಿ.ನ. (೧೯೦೫-೯೮) ಕನ್ನಡಕ್ಕೆ ಶ್ರೇಷ್ಠ ಗೀತ ನಾಟಕಗಳನ್ನು ರಚಿಸಿಕೊಟ್ಟಿದ್ದಾರೆ. ಸಂಗೀತ ಮತ್ತು ಕಾವ್ಯವೆರಡೂ ಹದವಾಗಿ ಸಂಯೋಜನೆಗೊಂಡು ನಾಟಕೀಯವಾಗಿ

ನಿರೂಪಣೆಗೊಳ್ಳುವ '**ಗೋಕುಲ ನಿರ್ಗಮನ**', ಪು.ತಿ.ನ.ರವರ ಅತ್ಯುತ್ತಮ ಗೀತನಾಟಕವೆನ್ನಬಹುದಾಗಿದೆ. ಕೃಷ್ಣನನ್ನು ಕುರಿತ ಪುರಾಣಕಥೆಗಳಲ್ಲಿ ಉತ್ಕಟವಾದ ಭಾವನಾಪ್ರಧಾನ ಸಂದರ್ಭವೊಂದು ಈ ನಾಟಕದ ಕಥಾ ಭಾಗದಲ್ಲಿದೆ. ಹದಿಹರೆಯದ ಕೃಷ್ಣ ಗೋಕುಲದಲ್ಲಿ ಬೆಳೆದು ಯೌವನಕ್ಕೆ ಕಾಲಿಡುತ್ತಿರುವಾಗ ಕಂಸಾಹ್ವಾನ ಬರುತ್ತದೆ. ಮಧುರೆಗೆ ಹೋಗಲಾರದ, ಗೋಕುಲದಲ್ಲಿ ಉಳಿಯಲೂ ಆಗದ ಸಂದಿಗ್ಧತೆಯ ಒಳತೋಟಿ, ಅವನ ಸಂಗಾತಿಗಳ ಅಳಲು, ಇವೆಲ್ಲವನ್ನೂ ಒಂದೇ ಒಂದು ದಿನದ ಕ್ರಿಯಾ ವಿವರಗಳಲ್ಲಿ ನಾಟಕವು ಕಟ್ಟಿಕೊಡುತ್ತಿದೆ. 'ಅಕ್ರೂರಾಗಮನ' ಮತ್ತು 'ವೇಣು ವಿಸರ್ಜನ'ವೆಂಬ ಎರಡು ಭಾಗಗಳಲ್ಲಿ ಈ ರೂಪಕ ಬೆಳೆದು ನಿಲ್ಲುತ್ತದೆ. ಈ ಎರಡೂ ದೃಶ್ಯಗಳನ್ನು ಒಗ್ಗೂಡಿಸುವ ಕೃಷ್ಣನ ಕೊಳಲು ನಾಟಕದ ಕೇಂದ್ರ ಸಂಕೇತ. ಮುಗ್ಧವಾಗಿದ್ದ ಸರಳ ಗೋವಳ ಸಂಸ್ಕೃತಿಯೊಂದು ನಗರ ನಾಗರಿಕತೆಯ ಕರೆಗೆ ಓಗೊಟ್ಟು ಅದರೊಂದಿಗೆ ಸೆಣಸಲೇಬೇಕಾದ ಚಿತ್ರವೊಂದನ್ನು ನಾಟಕದಲ್ಲಿ ರಚಿಸಿರುವ ಪು.ತಿ.ನ. ಮುಕ್ತಾಯದಲ್ಲಿ 'ವಿರಕ್ತೆ'ಯೊಂದನ್ನು ಜೋಡಿಸಿದ್ದಾರೆ. ಪಾಶ್ಚಾತ್ಯ ಸಂಸ್ಕೃತಿಯ ಪ್ರಭಾವಕ್ಕೆ ತುತ್ತಾಗಿ ಅನಾಥವಾಗಿರುವ ನಮ್ಮ ದೇಶದ ಪರಿಸ್ಥಿತಿಯನ್ನು, ಗೋಕುಲದಲ್ಲಿ ಅಂದು ಕೃಷ್ಣ ಬಿಸುಟು ಹೋದ ಕೊಳಲಿಗೆ ಹೋಲಿಸುತ್ತಾರೆ.

ಮಾಸ್ತಿಯವರ 'ಕಾಕನ ಕೋಟೆ', ಪು.ತಿ.ನ.ರವರ 'ಗೋಕುಲ ನಿರ್ಗಮನ', ಎರಡೂ ನಾಟಕಗಳು ಮೂಲತಃ ಒಂದೇ ಬಗೆಯ ಸಾಂಸ್ಕೃತಿಕ ಒಳನೋಟಗಳಿಂದ ಕೂಡಿವೆಯೆಂಬುದು ನವೋದಯ ಕಾವ್ಯ ಮತ್ತು ನಾಟಕ ಪರಂಪರೆಯ ತಾತ್ವಿಕತೆಯ ಮೇಲೆ ಬೆಳಕು ಚೆಲ್ಲುವಂತಿದೆ.

ಬಿ.ವಿ.ಕಾರಂತರು ಹೆಗ್ಗೋಡಿನ 'ತಿರುಗಾಟ'ಕ್ಕಾಗಿ 'ಗೋಕುಲ ನಿರ್ಗಮನ'ದ ರಂಗ ಪ್ರಯೋಗವನ್ನು ಅದ್ಭುತವಾಗಿ ನಿರ್ದೇಶಿಸಿ ಕೊಟ್ಟ ಅನುಭವ, ಪ್ರೇಕ್ಷಕರ ಮನಸ್ಸಿನಲ್ಲಿ ಅಚ್ಚಳಿಯದೆ ನಿಂತಿದೆ.

ಉತ್ತರ ಕರ್ನಾಟಕದ ಆಧುನಿಕ ನಾಟಕಕಾರರಲ್ಲಿ ಜಿ.ಬಿ.ಜೋಷಿಯವರು (೧೯೦೪-೯೩) ತೀವ್ರವಾದ ರಂಗ ನಿಷ್ಠೆಯುಳ್ಳವರು. ಅವರ '**ಕದಡಿದ ನೀರು**', ಶ್ರೀರಂಗರ 'ಶೋಕಚಕ್ರ'ದಂತೆಯೇ ಪರಿಣಾಮಕಾರಿಯಾದ ನಾಟಕ. ಕುಟುಂಬವೊಂದರ ಕತೆಯ ಮೂಲಕವೇ ಸ್ವಾತಂತ್ರ್ಯೋತ್ತರ ಗ್ರಾಮೀಣ ಭಾರತದ ಅವನತಿಯ ರಾಜಕಾರಣವನ್ನು ಅಲ್ಲಿ ಚಿತ್ರಿಸಲಾಗಿದೆ. ಸಶಕ್ತ ಪಾತ್ರ ಕಲ್ಪನೆ ಹಾಗೂ ಸಂವಾದಕ್ಕೆ ಸಹಜ ದೇಸಿಯ ಬಳಕೆ, ನಾಟಕದ ಅರ್ಥವಂತಿಕೆಯನ್ನು ಹೆಚ್ಚಿಸಿವೆ. ಈ ನಾಟಕದ ದುರಂತದ ಸ್ವರೂಪವು ಕೌಟುಂಬಿಕವೆಂಬಂತಿದ್ದರೂ, ಅದು ಒಂದು ಪರಂಪರೆಯ ಅಳಿವನ್ನೇ ಸೂಚಿಸುತ್ತಿರುವಂತಿದೆ, ಗಾಂಧಿವಾದಿ ಶಿವಪ್ಪ ಈ ಪರಂಪರೆಯ ಸಂಕೇತ. ಕಥಾ ಪ್ರಧಾನವಾದ ಹಾಗೂ ನೀತಿ ಸಂದೇಶದ ಗುರಿ ಇಟ್ಟುಕೊಂಡಿರುವ ಈ ನಾಟಕವು ಆಧುನಿಕ ರಂಗಭೂಮಿಯ ಜನಪ್ರಿಯ ಮಾದರಿಗೆ ಒಂದು ಅತ್ಯುತ್ತಮ ನಿದರ್ಶನವಾಗಿದ್ದು, ಬೆಂಗಳೂರಿನ ತಂಡವೊಂದಕ್ಕೆ ಪ್ರಸನ್ನ ಇದನ್ನು ಯಶಸ್ವಿಯಾಗಿ ನಿರ್ದೇಶಿಸಿ, ರಂಗಪ್ರದರ್ಶನ ನೀಡಿದರು.

ಗಿರೀಶ್ ಕಾರ್ನಾಡರ (೧೯೩೮) '**ತುಘಲಕ್**', ಆಧುನಿಕ ಭಾರತೀಯ ರಂಗಭೂಮಿಯ ಶ್ರೇಷ್ಠ ಸಾಧನೆಯೆಂದು ಮನ್ನಣೆ ಪಡೆದಿದೆ. ಕನ್ನಡ ನವ್ಯ ನಾಟಕ ಪರಂಪರೆಯ ಮೊದಲ ನಾಟಕವಿದು. ಈ ಕೃತಿಯ ತಾತ್ವಿಕತೆಯನ್ನು ಅಸಂಗತ ಹಾಗೂ ಅಸ್ತಿತ್ವ ವಾದಗಳು ರೂಪಿಸಿದ್ದರೆ,

ರಾಜಕೀಯವಾಗಿ ಸ್ವಾತಂತ್ರ್ಯೋತ್ತರ ನೆಹರೂ ಯುಗದ ಆದರ್ಶಗಳು ಇಲ್ಲಿ ಚರ್ಚೆಗೆ ಗುರಿಯಾಗಿವೆ. ಐತಿಹಾಸಿಕ ವಸ್ತುವಿನ ಮೂಲಕ ಮನುಷ್ಯನ ಸಾರ್ವಕಾಲಿಕ ಅನುಭವಕ್ಕೆ ರೂಪು ಕೊಡಬಯಸುವ ಈ ನಾಟಕವು ಇಂಗ್ಲಿಷ್ ಸೇರಿದಂತೆ ಬಹುಪಾಲು ಎಲ್ಲ ಪ್ರಮುಖ ಭಾರತೀಯ ಭಾಷೆಗಳಿಗೂ ಅನುವಾದಗೊಂಡು ಪ್ರಯೋಗಗೊಂಡಿದೆ.

ತುಘಲಕನೇ ನಾಟಕದ ಕೇಂದ್ರ ಪಾತ್ರವಾಗಿದ್ದು, ಇದೊಂದು ಪಾತ್ರ ಪ್ರಧಾನ ನಾಟಕವೆನ್ನಬಹುದು. ಅವನ ಮೂಲಕವೇ ಉಳಿದೆಲ್ಲ ಪಾತ್ರಗಳೂ ತಮ್ಮ ವ್ಯಕ್ತಿತ್ವಕ್ಕೆ ಒಂದು ಅರ್ಥ ತಂದುಕೊಳ್ಳುತ್ತಾರೆ. ಅವರೆಲ್ಲ ತುಘಲಕನ ವ್ಯಕ್ತಿತ್ವದ ಬೇರೆ ಬೇರೆ ಮಾದರಿಗಳಂತೆಯೂ ಇದ್ದಾರೆ. ಗ್ರೀಕ್ ರುದ್ರನಾಟಕಗಳ ನಾಯಕನಂತೆ ಪ್ರತಿಕೂಲ ಪರಿಸ್ಥಿತಿಯೊಡನೆ ಹೋರಾಡುವ ಮಹಮ್ಮದ್‌ನಲ್ಲಿ ಅಪ್ರತಿಹತವಾದ ಕ್ರೌರ್ಯವಿದೆ; ಪ್ರಜಾಪೀಡನೆಯ ಹಿಂಸೆಯಿದೆ; ಆತ್ಮಮರುಕ ಹಾಗೂ ಸ್ವಹಿಂಸೆಯೂ ಅಲ್ಲಿ ಸೇರಿಕೊಂಡಿದೆ. ಈ ಪಾತ್ರ ಕಲ್ಪನೆಗೆ ಸರಿಸಾಟಿಯಾದ ಸೃಷ್ಟಿ, ರಂಗಭೂಮಿಯಲ್ಲಿ ಅಪೂರ್ವವಾಗಿ ಕಾಣಿಸಿಕೊಳ್ಳುವಂತಹುದು. ಪ್ರತಿನಾಯಕನಂತೆ ಕಲ್ಪಿಸಲಾಗಿರುವ ಅಝೀಜ ಒಬ್ಬ ಸಾಮಾನ್ಯ ಅಗಸನಾಗಿದ್ದು ಮಹಮ್ಮದ್‌ನ ಆದರ್ಶಗಳನ್ನೆಲ್ಲಾ ಅಪಹಾಸ್ಯ ಮಾಡುವಂತೆ ಅವನ ಸುಧಾರಣೆಗಳನ್ನೆಲ್ಲಾ ನಿರರ್ಥಕಗೊಳಿಸುತ್ತಾ ಹೋಗುವುದು ಇಲ್ಲಿನ ದುರಂತ ವ್ಯಂಗ್ಯವೆನ್ನಬಹುದು.

ರಚನಾ ವಿನ್ಯಾಸದ ದೃಷ್ಟಿಯಿಂದ, 'ತುಘಲಕ್' ಒಂದು ಅಸದೃಶ ನಾಟಕವಾಗಿದ್ದು, ಚದುರಂಗದಾಟದ ಸ್ವರೂಪ ವಿನ್ಯಾಸವನ್ನು ಈ ನಾಟಕದ ರಚನೆಯು ಹೇಗೆ ಹೋಲುತ್ತಿದೆ ಎಂಬುದನ್ನು ಈಗಾಗಲೇ ವಿಮರ್ಶಕರು ಎತ್ತಿ ತೋರಿಸಿದ್ದಾರೆ.

ದೆಹಲಿಯ ಕೆಂಪುಕೋಟೆಯನ್ನು ಹಿನ್ನೆಲೆಯಾಗಿರಿಸಿಕೊಂಡು ರಾಷ್ಟ್ರೀಯ ನಾಟಕ ಶಾಲೆಯ ವಿದ್ಯಾರ್ಥಿಗಳಿಗಾಗಿ ಇಬ್ರಾಹಿಂ ಅಲ್ಕಾಜಿಯವರ ನಿರ್ದೇಶನದಲ್ಲಿ ಈ ನಾಟಕದ ಹಿಂದಿ ಅವತರಣಿಕೆಯನ್ನು ರಂಗದ ಮೇಲೆ ಪ್ರಯೋಗಿಸಿದ್ದು, ಒಂದು ಚಾರಿತ್ರಿಕ ದಾಖಲೆಯಾಗಿ ಉಳಿದಿದೆ. ಕನ್ನಡದಲ್ಲಿ ಪ್ರೊ.ಬಿ.ಚಂದ್ರಶೇಖರ್ ನಿರ್ದೇಶನದಲ್ಲಿ ಆದ ಪ್ರಯೋಗವೇ ಮೊದಲನೆಯದು.

ಚಂದ್ರಶೇಖರ ಕಂಬಾರರು (೧೯೩೭) ಆಧುನಿಕ ಕನ್ನಡ ರಂಗಭೂಮಿಗೆ ಜಾನಪದ ಕಸಿ ನಡೆಸಿದ ಅಪೂರ್ವ ಬಗೆಯ ಪ್ರಯೋಗಶೀಲ ನಾಟಕಕಾರ. ಬೆಂಗಳೂರಿನ ರವೀಂದ್ರ ಕಲಾಕ್ಷೇತ್ರದ ಬಯಲು ರಂಗಭೂಮಿಯಲ್ಲಿ ಬಿ.ವಿ.ಕಾರಂತರ ನಿರ್ದೇಶನದಲ್ಲಿ ೧೯೭೨ರಲ್ಲಿ ನಡೆದ **'ಜೋಕುಮಾರಸ್ವಾಮಿ'**ಯ ಪ್ರಯೋಗ ಕನ್ನಡ ರಂಗಭೂಮಿಯಲ್ಲಿ ಒಂದು ಹೊಸ ಅಲೆಯನ್ನು ಎಬ್ಬಿಸಿತು. ಆಧುನಿಕ ಜನಪದ ನಾಟಕ ಪರಂಪರೆಗೆ 'ಜೋಕುಮಾರಸ್ವಾಮಿ' ದಾರಿ ಮಾಡಿಕೊಟ್ಟಿತಲ್ಲದೆ, ಉತ್ತರ ಕರ್ನಾಟಕದ ಜನಪದ ರಂಗ ಮಾದರಿಗಳು ಆಧುನಿಕ ಸಂದರ್ಭದಲ್ಲಿ ಹೊಸ ಹೊಸ ಆವಿಷ್ಕಾರ ಪಡೆಯಲು ಈ ನಾಟಕ ಪ್ರೇರಣೆಯಾಯಿತು.

'ಜೋಕುಮಾರಸ್ವಾಮಿ' ಕಥಾ ಪ್ರಧಾನ ನಾಟಕವಾಗಿದ್ದು, ಪುರಾಣ ಮತ್ತು ವಾಸ್ತವಗಳೆರಡನ್ನು ಐಕ್ಯಗೊಳಿಸಿ, ಸಮಕಾಲೀನ ಸಂದರ್ಭದ ಊಳಿಗಮಾನ್ಯ ವ್ಯವಸ್ಥೆಯ ಶೋಷಣೆಯ ಸ್ವರೂಪವನ್ನು ಚರ್ಚಿಸುವುದು ಅದರ ಉದ್ದೇಶವಾಗಿದೆ. ಈ ನಾಟಕದ ಜನಪ್ರಿಯತೆಯ ಮೂಲ ಕಾರಣ, ಅಲ್ಲಿನ ಸಂವಾದದ ಚೇತೋಹಾರಿ ಸರಸ ವಿನೋದಗಳಲ್ಲಿ, ಹಾಡುಗಳ ಅದ್ಭುತ ಕಾವ್ಯಾತ್ಮಕತೆ

ಹಾಗೂ ಗೇಯತೆಯಲ್ಲಿದೆ ಎಂಬುದು ಈಗಾಗಲೇ ಸಿದ್ಧವಾಗಿರುವ ಸಂಗತಿ. ಜನಪದ ಶೈಲಿಗೆ ಸಹಜವೆನ್ನಿಸುವ ಅತಿರಂಜಕತೆ, ಶೃಂಗಾರ ರಸ ಪ್ರತಿಪಾದನೆಯು, ಅವರು ಚಿತ್ರಿಸಲೆಳಸುವ ಸಮಕಾಲೀನ ಸಾಮಾಜಿಕ ಕಠೋರ ವಾಸ್ತವವನ್ನು ಅಸ್ಪಷ್ಟಗೊಳಿಸಿತೆಂಬ ವಿಮರ್ಶೆಯಿದೆ ಯಾದರೂ, ಆಧುನಿಕ ಕನ್ನಡ ರಂಗಭೂಮಿಯು ಎಂದೂ ಕಂಡರಿಯದ ಸಂಭ್ರಮ ಹಾಗೂ ಉತ್ಕರ್ಷವನ್ನು ಈ ನಾಟಕದ ಮೂಲಕ ಪಡೆಯಿತೆಂಬುದು ಸಹ ಗಮನಾರ್ಹ ವಿಚಾರವಾಗಿದೆ. ಶೃಂಗಾರ, ಹಾಸ್ಯ, ಕರುಣ ರಸ ಪ್ರತಿಪಾದನೆಯಲ್ಲಿ ಈ ನಾಟಕವನ್ನು ಯಾವುದೇ ಅಭಿಜಾತ ಪರಂಪರೆಯ ಸಾಂಪ್ರದಾಯಿಕ ಶ್ರೇಷ್ಠ ರಂಗ ಕೃತಿಯೊಂದಿಗೆ ಹೋಲಿಸಲು ಸಾಧ್ಯವಿದೆ.

ಪಿ.ಲಂಕೇಶರ (೧೯೩೫-೨೦೦೦) **'ಸಂಕ್ರಾಂತಿ'**, ಹನ್ನೆರಡನೆಯ ಶತಮಾನದ ಶರಣ ಚಳುವಳಿಯ ಭಿತ್ತಿಯ ಮೇಲೆ ರಚಿಸಿದ ಸಮಕಾಲೀನ ಚಿತ್ರವಾಗಿದ್ದು, ಈ ನಾಟಕವನ್ನು ಸಾಂಪ್ರದಾಯಿಕ ಅರ್ಥದಲ್ಲಿ ಮಾತ್ರ ಐತಿಹಾಸಿಕವೆನ್ನಬೇಕಾಗಿದೆ. ಉಷಾ-ರುದ್ರರ ಪ್ರೇಮಪ್ರಕರಣವೂ ಸೇರಿದಂತೆ ಇಲ್ಲಿನ ಹೆಚ್ಚಿನ ಪಾತ್ರಗಳು ಮೂಲ ಕತೆಯಿಂದ ಸಂಪೂರ್ಣ ಭಿನ್ನವಾಗಿವೆ. ಈ ಪ್ರೇಮ ಪ್ರಕರಣವನ್ನು ಸಮಕಾಲೀನ ನೆಲೆಯಿಂದ ಪುನರ್ ರಚಿಸಲಾಗಿದೆ; ಇದರ ಮೂಲಕ ಅಂದಿನ ಶರಣ ಚಳುವಳಿಯ ತಾತ್ವಿಕತೆಯನ್ನು ವಿವರಿಸುವ ಪ್ರಯತ್ನವಿದೆ. ಲೋಹಿಯಾವಾದ ಮತ್ತು ಹಿಂದಿನ ಶತಮಾನದ ಎಪ್ಪತ್ತರ ದಶಕದ ಸಾಹಿತ್ಯದಲ್ಲಿ ಪ್ರಚಲಿತವಿದ್ದ ಬ್ರಾಹ್ಮಣ-ಶೂದ್ರ ಸಂಘರ್ಷದ ಪರಿಕಲ್ಪನೆಗಳು ಈ ನಾಟಕದ ಆಲೋಚನಾ ಕ್ರಮವನ್ನು ಪ್ರಭಾವಿಸಿರುವುದು ಸ್ಪಷ್ಟವಿದೆ.

ಪರಿವರ್ತನೆಯ ಪ್ರಕ್ರಿಯೆಯಲ್ಲಿದ್ದ ಕೆಳಜಾತಿಗಳು ಮತ್ತು ಈ ಪರಿವರ್ತನೆಯನ್ನು ತಡೆಯಲು ಕಂಕಣಬದ್ಧರಾಗಿದ್ದ ಪ್ರತಿಷ್ಠಿತ ಜಾತಿಗಳ ನಡುವೆ ಏರ್ಪಡುವ ಹೋರಾಟವೇ ಈ ನಾಟಕದ ಕೇಂದ್ರವಾಗಿದ್ದು, ಯಥಾಸ್ಥಿತಿ ಕಾಪಾಡಿಕೊಳ್ಳುವ ರಾಜಕಾರಣದ ಪ್ರತಿನಿಧಿಯಾಗಿ ರಾಜ ಬಿಜ್ಜಳನಿದ್ದರೆ, ಪರಿವರ್ತನೆಯ ಹರಿಕಾರನಂತೆ ಬಸವಣ್ಣನಿದ್ದಾನೆ. ರಾಜಕೀಯ ಅಧಿಕಾರವನ್ನು ಬಳಸಿಕೊಂಡು ತನ್ನ ಸಾಮಾಜಿಕ ಆದರ್ಶಗಳ ಕನಸನ್ನು ಸಾಕಾರಗೊಳಿಸಲು ಬಸವಣ್ಣ ಬಯಸಿದರೆ, ಬಸವಣ್ಣನ ಜನಪ್ರಿಯತೆಯನ್ನು ಬಳಸಿಕೊಂಡು ವ್ಯವಸ್ಥೆಯ ಹಿಡಿತವನ್ನು ಭದ್ರಗೊಳಿಸುವುದು ಬಿಜ್ಜಳನ ಹುನ್ನಾರ. ನಾಟಕದ ಘಟನಾವಳಿಗಳು ಬಿಚ್ಚಿಕೊಳ್ಳುತ್ತಾ ಹೋದಂತೆ ಬಸವಣ್ಣ ಅಸಹಾಯಕನಾಗಿ ಉಳಿದು, ಬಿಜ್ಜಳನು ಪರಿಸ್ಥಿತಿಯ ಮೇಲೆ ಹತೋಟಿ ಸಾಧಿಸುವುದು ಸಮಕಾಲೀನ ನೆಲೆಯಲ್ಲಿಯೂ ಅರ್ಥಪೂರ್ಣವಾಗಿದೆ.

ಸಮಕಾಲೀನ ಪ್ರಸ್ತುತತೆಯ ಬಗೆಗೆ ಹೆಚ್ಚು ನಿಷ್ಠರಾಗಿರುವ ನಾಟಕಕಾರರು, 'ಸಂಕ್ರಾಂತಿ'ಯ ಚಾರಿತ್ರಿಕ ನೆಲೆಯನ್ನು ಗಟ್ಟಿಮುಟ್ಟಾಗಿ ರಚಿಸಿ ತೋರಿಸಲು ಸಾಧ್ಯವಾಗಿದ್ದರೆ, ಅದೊಂದು ಅಪೂರ್ವ ಕೃತಿಯಾಗುತ್ತಿತ್ತು. ಸಂವಾದಕ್ಕಿಂತ ಘಟನಾಬದ್ಧವಾಗಿ ನಾಟಕ ಆಕಾರ ಪಡೆದಿಲ್ಲವೆಂಬ ಅಂಶವು 'ಸಂಕ್ರಾಂತಿ'ಯ ಪ್ರಯೋಗಕ್ಕೆ ಆತಂಕವೆನ್ನಿಸಬಹುದಾದರೂ ಹಲವು ನಿರ್ದೇಶಕರು ಈ ನಾಟಕದ ವಿಭಿನ್ನ ಪ್ರಯೋಗಗಳನ್ನು ಕೊಟ್ಟಿದ್ದಾರೆ. ಸಮುದಾಯಕ್ಕಾಗಿ ಸಿ.ಬಸವಲಿಂಗಯ್ಯ ನಿರ್ದೇಶಿಸಿದ ಪ್ರಯೋಗ ವಿಶಿಷ್ಟ ಬಗೆಯಲ್ಲಿತ್ತು.

ನವೋದಯ, ನವ್ಯ, ನವ್ಯೋತ್ತರ-ಎಂಬುದಾಗಿ ಕನ್ನಡ ನಾಟಕ ಪರಂಪರೆಯನ್ನು ವಿಂಗಡಿಸುವುದಾದರೆ, ನವೋದಯ-ನವ್ಯ ನಾಟಕಕಾರರೆಲ್ಲ ಸ್ವಾತಂತ್ರ್ಯಪೂರ್ವ ಕಾಲದಲ್ಲಿ

ಹುಟ್ಟಿದವರೆಂಬುದು ಗಮನಾರ್ಹವಾಗುತ್ತದೆ. ಸ್ವಾತಂತ್ರ್ಯೋತ್ತರ ಕಾಲದಲ್ಲಿ ಹುಟ್ಟಿದ ನವ್ಯೋತ್ತರ ಸಂದರ್ಭದ ಐದು ಜನ ನಾಟಕಕಾರರ ಐದು ಗಮನಾರ್ಹ ಕೃತಿಗಳನ್ನು ಹೆಸರಿಸಿ, ಈ ಚರ್ಚೆಯನ್ನು ಮುಕ್ತಾಯ ಗೊಳಿಸಬಹುದಾಗಿದೆ:

೧.	ಸುಲ್ತಾನ ಟಿಪ್ಪು	–	ಎಚ್.ಎಸ್.ಶಿವಪ್ರಕಾಶ್(೧೯೫೪)
೨.	ನಮ್ಮೊಳಗೊಬ್ಬ ನಾಜೂಕಯ್ಯ	–	ಟಿ.ಎನ್.ಸೀತಾರಾಮ್ (೧೯೪೯)
೩.	ಹದ್ದುಮೀರಿದ ಹಾದಿ	–	ಪ್ರಸನ್ನ (೧೯೫೧)
೪.	ಚಿಕ್ಕದೇವ ಭೂಪ	–	ಲಿಂಗದೇವರು ಹಳೇಮನೆ (೧೯೪೯)
೫.	ಸಹ್ಯಾದ್ರಿ ಕಾಂಡ	–	ಕೆ.ವಿ.ಅಕ್ಷರ (೧೯೬೦)

ಡಾ॥ ಕೆ.ಮರುಳಸಿದ್ದಪ್ಪ ಕನ್ನಡ ರಂಗಭೂಮಿಯ ಇತಿಹಾಸ ಹಾಗೂ ವರ್ತಮಾನಗಳ ಬಗ್ಗೆ ಅಧಿಕೃತವಾಗಿ ಮಾತಾಡಬಲ್ಲ ಕೆಲವೇ ಕೆಲವರಲ್ಲಿ ಒಬ್ಬರು.. ವೃತ್ತಿಯಿಂದ ಬೆಂಗಳೂರು ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಾಪಕರಾಗಿದ್ದವರು. ರಂಗಭೂಮಿ ಅಧ್ಯಯನವಲ್ಲದೆ ಆಧುನಿಕ ಕನ್ನಡ ವೈಚಾರಿಕ ಲೋಕದ ಪ್ರಮುಖ ವಕ್ತಾರರೂ ಆದ ಇವರು ಸಾಮಾಜಿಕ ಅನ್ಯಾಯ, ಸಾಂಸ್ಕೃತಿಕ ಲೋಪಗಳಾದಾಗಲೆಲ್ಲ ಪ್ರತಿಭಟನೆಯ ಧ್ವನಿ ಎತ್ತುವ ಮೂಲಕ ತಮ್ಮ ಸಹಮನಸ್ಕ ವೈಚಾರಿಕರೊಂದಿಗೆ ಕನ್ನಡ ಸಮಾಜದ 'ಮನಸ್ಸಾಕ್ಷಿ' ಎನಿಸಿಕೊಂಡವರು.

'ಆಧುನಿಕ ಕನ್ನಡ ನಾಟಕ' ಇವರ ಮುಖ್ಯ ಕೃತಿ. ಇದರ ಜೊತೆಗೆ 'ಕನ್ನಡ ನಾಟಕದ ಸಮೀಕ್ಷೆ' ಹಾಗೂ ಇವರು ಸಂಪಾದಿಸಿರುವ 'ಶತಮಾನದ ನಾಟಕ' ಕನ್ನಡ ರಂಗಭೂಮಿಯ ಯಾವುದೇ ನೆಲೆಯ ಅಧ್ಯಯನಕ್ಕೆ ಮೂಲ ಆಕರ ಗ್ರಂಥಗಳೆನಿಸಿಕೊಂಡಿವೆ. 'ಷಟ್ಪದಿ ಸಾಹಿತ್ಯ', 'ನೋಟ ನಿಲುವು' ಇವರ ಇತರ ಕೃತಿಗಳು.

ಕಾವ್ಯ ಬಂದೀತು, ವಿಮರ್ಶೆ ಹದಗೊಳ್ಳುವುದು ಬರಿಯ ಚಿನ್ನಾಟದ ಕೆಲಸವಲ್ಲ!

– ಡಾ॥ ಎಂ.ಎಸ್.ಆಶಾದೇವಿ

ಕನ್ನಡದ ಹತ್ತು ಅತ್ಯುತ್ತಮ ವಿಮರ್ಶೆಗಳು :

೧.	ದ.ರಾ.ಬೇಂದ್ರೆ	–	ವಿಮರ್ಶೆಯ ಕಾರ್ಯ
೨.	ಯು.ಆರ್.ಅನಂತಮೂರ್ತಿ	–	ಗಾಳಿ ಕಡೆಯಲು ಸೆಟೆದ ಬೆಳ್ಳಿಮಂತು
೩.	ಕುವೆಂಪು	–	ಹೊಸ ಕಾವ್ಯ ಹೊಸ ದೃಷ್ಟಿ
೪.	ಪಿ.ಲಂಕೇಶ್	–	ರಮ್ಯಪ್ರಜ್ಞೆಯ ಉನ್ನತ ಶಿಖರ ಕುವೆಂಪು
೫.	ಡಿ.ಆರ್.ನಾಗರಾಜ್	–	ಮಾಸ್ತಿಯವರ ಕಥೆಗಳಲ್ಲಿ ಕೇಡಿನ ಕಲ್ಪನೆ
೬.	ಕೆ.ವಿ.ಸುಬ್ಬಣ್ಣ	–	ಗೋಕುಲ ನಿರ್ಗಮನ
೭.	ಗೋಪಾಲಕೃಷ್ಣ ಅಡಿಗ	–	ಕಾವ್ಯದಲ್ಲಿ ಮಣ್ಣಿನ ವಾಸನೆ
೮.	ಕೆ.ವಿ.ನಾರಾಯಣ	–	ಕನ್ನಡಿಗಳು ಸಾಕು
೯.	ಬಿ.ಎಂ. ಶ್ರೀಕಂಠಯ್ಯ	–	ಕನ್ನಡ ಮಾತು ತಲೆಯೆತ್ತುವ ಬಗೆ
೧೦.	ಕೀರ್ತಿನಾಥ ಕುರ್ತಕೋಟಿ	–	ಭಾಷಾಂತರ ಮತ್ತು ಪುನರ್‌ಲೇಖನ

ಸುದೀರ್ಘವೂ, ಸತ್ವಶಾಲಿಯೂ ಮಾತ್ರವಲ್ಲದೆ ಅನನ್ಯ ಗುಣಲಕ್ಷಣಗಳನ್ನು ಹೊಂದಿರುವ ಕನ್ನಡ ಸಾಹಿತ್ಯ ಪರಂಪರೆಯನ್ನು ಹೀಗೆ ಆಯ್ಕೆಗಳ ಮೂಲಕ ಮರುಮೌಲ್ಯಮಾಪನಕ್ಕೆ ಒಡ್ಡುವ ಮತ್ತು ಆ ಮೂಲಕ ಆರೋಗ್ಯಪೂರ್ಣ ಚರ್ಚೆಗೆ ಒಡ್ಡುವ ಪ್ರಯತ್ನ ಸ್ವಾಗತಾರ್ಹ ಎನ್ನುವುದು ನಿಜ. ಆದರೆ ಆಯ್ಕೆಯನ್ನು ೧೦ ಲೇಖನಗಳಿಗೆ ಸೀಮಿತಗೊಳಿಸಬೇಕು ಎನ್ನುವ ಹೊತ್ತಿಗೆ ಅದು ಸವಾಲುಗಳನ್ನು ಮಾತ್ರವಲ್ಲ, ಅನೇಕ ಸಮಸ್ಯೆಗಳನ್ನೂ ಎದುರಿಸಬೇಕಾಗುತ್ತದೆ. ಹೀಗಾಗಿ ನಿಜದಲ್ಲಿ ಇದೊಂದು ಅಸಂಪೂರ್ಣ ಆಯ್ಕೆಯೂ ಹೌದು ಎನ್ನಿಸಿಬಿಡುತ್ತದೆ. ಅಥವಾ ಸಂಪೂರ್ಣವಾಗಿ ಇದೊಂದು ವೈಯಕ್ತಿಕ ನೆಲೆಯ ಆಯ್ಕೆಯೂ ಹೌದು. ಕೊನೆಗೂ ಇದೊಂದು ಭಗೀರಥ ಸಾಹಸದ ಕೆಲಸ ಎನ್ನುವ ಆತಂಕವನ್ನು, ವೈಯಕ್ತಿಕ ನೆಲೆಯ ಆಯ್ಕೆ ಎನ್ನುವುದು ಸ್ವಲ್ಪವಾದರೂ ಕಡಿಮೆ ಮಾಡುತ್ತದೋ ಏನೋ!

ಆಧುನಿಕ ಕನ್ನಡ ವಿಮರ್ಶೆಯ ಇತಿಹಾಸ ಇತರ ಸಾಹಿತ್ಯ ಪ್ರಕಾರಗಳ ಇತಿಹಾಸದಷ್ಟೇ ರೋಚಕವಾಗಿದ್ದು, ಇವುಗಳಿಗಿಂತ ಖಂಡಿತವಾಗಿಯೂ ಭಿನ್ನವಾದದ್ದು ಹೌದು. ಐತಿಹಾಸಿಕ ಕಾರಣಗಳಿಗಾಗಿ ಕನ್ನಡ ವಿಮರ್ಶೆಯ ಆರಂಭದ ಘಟ್ಟವು ಇತರ ಹೊಸ ಸಾಹಿತ್ಯ ಪ್ರಕಾರಗಳಿಗೆ

ಇದ್ದ ಮತ್ತು ಸಿಕ್ಕ ಸವಲತ್ತು ಸ್ವೀಕಾರ (acceptence)ದಿಂದ ಅಷ್ಟರ ಮಟ್ಟಿಗೆ ವಂಚಿತವಾಯಿತೆಂದೇ ಹೇಳಬೇಕು. ಕನ್ನಡ ಸಾಹಿತ್ಯ ಸಂದರ್ಭವು ಅನಿವಾರ್ಯ ಕಾರಣಗಳಿಗಾಗಿ ವಿಮರ್ಶೆಯ ಮೊದಲ ಘಟ್ಟವನ್ನು 'ಸುರಕ್ಷಿತ'ವೆಂದು ಹೇಳಬಹುದಾದ ಇತ್ಯಾತ್ಮಕ ಚೌಕಟ್ಟಿನೊಳಗೆ ನಿಯಂತ್ರಿಸಲು ಪ್ರಯತ್ನಿಸಿತು. ಹೀಗಿದ್ದೂ ಕನ್ನಡ ವಿಮರ್ಶೆಯ ತಾತ್ವಿಕತೆಗೆ ನವೋದಯ ವಿಮರ್ಶೆಯ ಕೊಡುಗೆ ಅಕ್ಷರಶಃ ಬೆಲೆ ಕಟ್ಟಲಾಗದ್ದು. 'ಆಶಯ ವಿಮರ್ಶೆ'ಯ ರೂಢಿಗತ ದೃಷ್ಟಿಕೋನದಾಚೆಗೆ ನವೋದಯ ವಿಮರ್ಶೆಯನ್ನು ಪರಿಶೀಲಿಸುವ ಪ್ರಯತ್ನಗಳು ಕನ್ನಡದಲ್ಲಿ ಈಗ ಆರಂಭವಾಗಿವೆ.

ಕನ್ನಡ ವಿಮರ್ಶಾ ಪರಂಪರೆಯಲ್ಲಿಯ ನಿರ್ಣಾಯಕವಾದ ಲೇಖನಗಳನ್ನು ಆಯ್ದುಕೊಳ್ಳಲು ಹಲವು ಮಾದರಿಗಳು ನಮ್ಮೆದುರಿಗಿವೆ. ಕನ್ನಡ ಸಾಹಿತ್ಯ ಪರಂಪರೆಯ ಸಾತತ್ಯವನ್ನು ಕಟ್ಟಿಕೊಡಲು ನೆರವಾಗುವ ವಿಮರ್ಶಾ ಲೇಖನಗಳ ಆಯ್ಕೆ ಒಂದು ವಿಧಾನವಾದರೆ, ಕನ್ನಡದ ಮಹತ್ವದ ಕೃತಿಗಳ ಪುನರ್‌ಪರಿಶೀಲನೆಯ ಮೂಲಕ ಮಹತ್ವದ ಕೃತಿಗಳ ಮರುಸ್ಥಾನ ನಿರ್ದೇಶನಕ್ಕೆ ಅನುವು ಮಾಡಿಕೊಡುವ ಅಧ್ಯಯನಗಳ ಮಾದರಿ ಮತ್ತೊಂದು. ಈ ಎರಡಲ್ಲದೆ ಕನ್ನಡ ವಿಮರ್ಶೆಯ ತಾತ್ವಿಕತೆಯ ಬೆಳವಣಿಗೆಯನ್ನು ಸೂಚಿಸುವ ಅಧ್ಯಯನಗಳ ಮಾದರಿ, ಒಳನೋಟಗಳ ಸೌಂದರ್ಯಕ್ಕಾಗಿ ಮುಖ್ಯವಾಗುವ ಲೇಖನಗಳ ಮಾದರಿ..... ಹೀಗೆ ಹಲವು ನಿರ್ದಿಷ್ಟ ದೃಷ್ಟಿಕೋನಗಳಲ್ಲಿ ಲೇಖನಗಳನ್ನು ಆರಿಸುವುದು ಸಾಧ್ಯ.

ಈ ನನ್ನ ಪ್ರಯತ್ನದಲ್ಲಿ ನಾನು ಮೇಲಿನ ಯಾವ ಮಾದರಿಯನ್ನೂ ಅನುಸರಿಸಿಲ್ಲ. ಕನ್ನಡ ವಿಮರ್ಶೆಯ ಸಮೃದ್ಧ, ಚಲನಶೀಲ, ಸೃಜನಶೀಲ, ಇತಿಹಾಸದಲ್ಲಿ ಅನೇಕ ಕಾರಣಗಳಿಗಾಗಿ ನನಗೆ ಮುಖ್ಯವೆಂದು ಕಂಡ, ಮತ್ತೆ ಮತ್ತೆ ಓದಿದ, ಕಾಡಿದ, ಸೃಜನಶೀಲ ಕೃತಿಗಳಷ್ಟೇ ಬಹುಮುಖಿ ಆಯಾಮಗಳನ್ನು, ಅವುಗಳ ಶಕ್ತಿ-ಸೌಂದರ್ಯಗಳನ್ನು ಹೊಂದಿವೆ ಎನಿಸಿದ ಲೇಖನಗಳಲ್ಲಿ ಹತ್ತನ್ನು ಆರಿಸುವ ವ್ಯರ್ಥ(?!) ಪ್ರಯತ್ನವೊಂದನ್ನು ಇಲ್ಲಿ ಮಾಡಲಾಗಿದೆ. ಈ ಆಯ್ಕೆಯನ್ನು ವೈಯಕ್ತಿಕ ಎಂದು ಪುನರುಕ್ತಿಯಲ್ಲಿ ಸ್ಪಷ್ಟಪಡಿಸುತ್ತಿರುವುದಕ್ಕೆ ಕಾರಣವೂ ಇದೆ. ಈ ಬಗೆಯ ಸಮೀಕ್ಷೆಗಳಲ್ಲಿ ಸಾಮಾನ್ಯವಾಗಿ ಸ್ಥಿತ್ಯಂತರಗಳ ಪ್ರಾತಿನಿಧಿಕ ಲೇಖನಗಳನ್ನು ಆರಿಸುವುದರಲ್ಲಿ ಹೆಚ್ಚಿನ ಆಸಕ್ತಿಯಿರುತ್ತದೆ. ಆದರೆ ಈ ಬಗೆಯ ಪ್ರಯತ್ನಗಳಲ್ಲಿ ನನಗೆ ಹೆಚ್ಚಿನ ಉತ್ಸಾಹವಿಲ್ಲ. ಬದಲಿಗೆ ಕನ್ನಡದ ಸಾಹಿತ್ಯಕ-ಸಾಂಸ್ಕೃತಿಕ ಸಂವೇದನೆಯಲ್ಲಿಯೇ ಹೊಸ ಚಲನೆಗಳಿಗೆ ಕಾರಣವಾದ, ತಾತ್ವಿಕ ದೃಷ್ಟಿಯಿಂದ ಮಾತ್ರವಲ್ಲದೆ ಗ್ರಹಿಕೆಗಳ ಸೃಜನಶೀಲತೆಯಿಂದಾಗಿ ನಮ್ಮನ್ನು ಅಪ್ಪಟ ಕಾವ್ಯ, ಕಥೆ, ಕಾದಂಬರಿಗಳ ಹಾಗೆ ನಿರಂತರವಾಗಿ ಕಾಡುವ ಲೇಖನಗಳನ್ನು ಆರಿಸುವುದು ಹೆಚ್ಚು ಸೂಕ್ತವೇನೋ ಎನಿಸಿತು.

ಬಿ.ಎಂ.ಶ್ರೀಯವರ ಲೇಖನವು ಕನ್ನಡದ ಅಸ್ತಿತ್ವ, ಅಸ್ಮಿತೆ ಮತ್ತು ಭವಿಷ್ಯದ ಪ್ರಶ್ನೆಗಳನ್ನು, ಪ್ರಶ್ನಿಸಲಾಗದ ಕಾಳಜಿ ಮತ್ತು ಬದ್ಧತೆಗಳಿಂದ ಚರ್ಚಿಸುತ್ತದೆ. ಈ ಮೂಲಕವೇ ಕನ್ನಡ ಕಾವ್ಯಮೀಮಾಂಸೆಯ ತಳಹದಿಯಾದ 'ಕನ್ನಡ ಮೀಮಾಂಸೆ'ಯೊಂದನ್ನು ಕಟ್ಟುವ ಮಹತ್ವದ ಪ್ರಯತ್ನವನ್ನೂ ಈ ಲೇಖನ ಮಾಡುತ್ತದೆ. ಈ ಪ್ರಯತ್ನವನ್ನು ತೀವ್ರತೆಯಿಂದ ಆದರೆ ಭಾವಾವೇಶವಿಲ್ಲದೆ ವಿವರಗಳನ್ನು, ನಿಲುವುಗಳನ್ನು ಅಪಾರ ಸಂಯಮದಲ್ಲಿ ಮಂಡಿಸುತ್ತದೆ. ಲೇಖನದ ಹೆಗ್ಗಳಿಕೆಯ ಅಂಶಗಳಲ್ಲಿ ಇದೂ ಒಂದು. ಕನ್ನಡವು ಸಂಸ್ಕೃತ ಮತ್ತು ಇಂಗ್ಲಿಷಿನ ಪ್ರಭಾವಗಳಿಗೆ ಬೇಕಾಗಿ, ಬೇಡವಾಗಿ ಒಡ್ಡಿಕೊಂಡೂ, ಪಡೆದುಕೊಂಡೂ ತನ್ನ ಅಸ್ಮಿತೆಯನ್ನು

ಕಟ್ಟಿಕೊಳ್ಳುವ 'ಸನ್ನಿವೇಶ ನಿರ್ಮಾಣ'ಕ್ಕೆ ಕನ್ನಡಿಗರು ಹಿಡಿಯಬೇಕಾದ ಹಾದಿಯ ಪ್ರಕ್ರಿಯೆಯನ್ನು ಶ್ರೀಯವರು ಇಲ್ಲಿ ಚರ್ಚಿಸುತ್ತಾರೆ. ಇದರಲ್ಲಿ ಶ್ರೀಯವರು ಪ್ರಸ್ತಾಪಿಸುವ ಅಂಶಗಳು ಕನ್ನಡದ ಮಟ್ಟಿಗೆ ಈಗಲೂ ನಿಜ, ಪ್ರಸ್ತುತ ಎನ್ನುವ ಅಂಶವೇ ಈ ಲೇಖನವನ್ನು ಕನ್ನಡದ ಮುಖ್ಯ ಲೇಖನಗಳ ಪಟ್ಟಿಯಲ್ಲಿ ನಿಲ್ಲಿಸುತ್ತದೆ.

ಬೇಂದ್ರೆ ನಿಸ್ಸಂದೇಹವಾಗಿ ಕನ್ನಡದ ಶ್ರೇಷ್ಠ ವಿಮರ್ಶಕರು. ತತ್ವಜ್ಞಾನ, ಸಂಖ್ಯಾಶಾಸ್ತ್ರ, ವಿಜ್ಞಾನ, ಸೌಂದರ್ಯ ಮೀಮಾಂಸೆ, ಅನುಭಾವಿ ಪರಂಪರೆ... ಹೀಗೆ ಅನೇಕ ಜ್ಞಾನಶಾಖೆಗಳ ಆಳವಾದ ತಿಳುವಳಿಕೆಯಿದ್ದ ಘನ ವಿದ್ವಾಂಸ ಬೇಂದ್ರೆ. ಹಾಗೆ ನೋಡಿದರೆ ಬೇಂದ್ರೆಯವರನ್ನು ಬಿಟ್ಟರೆ ಮಿಕ್ಕಾವ ನವೋದಯದ ಅಥವಾ ಒಟ್ಟಂದದಲ್ಲಿ ಕನ್ನಡದ ಲೇಖಕರಿಗೂ ಅನ್ಯಜ್ಞಾನ ಶಿಸ್ತುಗಳನ್ನು ಸಾಹಿತ್ಯದ ಪರಿಪಾಕವಾಗಿಸುವ ಮಾಂತ್ರಿಕಶಕ್ತಿ ಇಲ್ಲವೇನೋ. 'ಕಾವ್ಯ ಬಂದೀತು ವಿಮರ್ಶೆ ಹದಗೊಳ್ಳುವುದು ಬರಿಯ ಚಿನ್ನಾಟದ ಕೆಲಸವಲ್ಲ' ಎನ್ನುವ ಬೇಂದ್ರೆಯವರ ಮಾತು ವಿಮರ್ಶೆಯನ್ನು ಕುರಿತ ಅವರ ನಿಲುವನ್ನು ಹೇಳುತ್ತದೆ. **'ವಿಮರ್ಶೆಯ ಕಾರ್ಯ'** ಲೇಖನವು ಕನ್ನಡ ವಿಮರ್ಶೆಯ ಅಗತ್ಯ, ಅನಿವಾರ್ಯತೆಗಳು, ಅದರ ಮೂಲಸ್ವರೂಪ, ಅದರ ಕರ್ತವ್ಯ, ಅದು ಮಾಡಿಕೊಳ್ಳಬೇಕಾದ ಎಚ್ಚರ, ಕಾಪಾಡಿಕೊಳ್ಳಬೇಕಾದ ಆರೋಗ್ಯ, ಪ್ರಭಾವದ ಬಗೆಗಿನ ದೃಷ್ಟಿಕೋನ–ಈ ಎಲ್ಲವನ್ನು ಚರ್ಚಿಸುತ್ತದೆ. ಪ್ರಭಾವದ ಬಗ್ಗೆ ಬೇಂದ್ರೆಯವರು ತಳೆಯುವ ನಿಲುವು ಆಶ್ಚರ್ಯಕರವೆನಿಸುವಷ್ಟು ಪಕ್ವತೆ, ಸಂಯಮ ಮತ್ತು ಪ್ರಭುತ್ವದಿಂದ ಕೂಡಿದೆ. ಹೊಸ ಸಾಹಿತ್ಯ ಪ್ರಕಾರಗಳೂ ಸೇರಿದಂತೆ ವಿಮರ್ಶೆಯ ತಾತ್ವಿಕತೆಯ ಮಟ್ಟಿಗೂ ಕನ್ನಡವು ದಟ್ಟವಾದ ಪಾಶ್ಚಾತ್ಯ ಪ್ರಭಾವಕ್ಕೊಳಗಾಗಿದ್ದ ಘಟ್ಟ ಅದು. ಇಷ್ಟಿದ್ದು ಕೀಳರಿಮೆಯಿಲ್ಲದೆ ಸಹಜ ಆತ್ಮವಿಶ್ವಾಸದಲ್ಲಿ ಪ್ರಭಾವಕ್ಕೆ ಒಳಗಾಗುವ ನಿಲುವು, ಅದರ ಅಗತ್ಯ ಮತ್ತು ಮಹತ್ವವನ್ನು ಒಪ್ಪಿಕೊಳ್ಳುವ ಪರಿ, ಎಲ್ಲಕ್ಕಿಂತ ಹೆಚ್ಚಾಗಿ ಪ್ರಭಾವದ ಬಗ್ಗೆ ಬೇಂದ್ರೆ ಉಳಿಸಿಕೊಂಡಿರುವ ಎಚ್ಚರ, ಎಲ್ಲ ಕಾಲಕ್ಕೂ ಪ್ರಭಾವದ ಬಗ್ಗೆ ಕನ್ನಡ ಉಳಿಸಿಕೊಳ್ಳಬೇಕಾದ ಎಚ್ಚರವಾಗಿದೆಯೆಂದೇ ಈ ಲೇಖನ ಮತ್ತೆ ಮತ್ತೆ ಓದಿಸಿಕೊಳ್ಳುತ್ತದೆ.

ಕುವೆಂಪು ಅವರ **'ಹೊಸ ಕಾವ್ಯ ಹೊಸದೃಷ್ಟಿ'** ಲೇಖನವು ಕಾವ್ಯದ ಬಗ್ಗೆ ಇಲ್ಲಿಯತನಕ ಬಂದಿರುವ ಅತ್ಯುತ್ತಮ ಸೃಜನಶೀಲ ಲೇಖನ. ಕವಿಯ ವ್ಯಕ್ತಿತ್ವ, ಕಾವ್ಯದ ವಸ್ತು ಸ್ವರೂಪ, ಕಾವ್ಯದ ಲೌಕಿಕ ಮತ್ತು ಅಲೌಕಿಕ ಮುಖಗಳ ಅನಾವರಣಕ್ಕೆ ಹಂಬಲಿಸುವ ಲೇಖನ ಇದು. ಕುವೆಂಪು ಅವರ ನಾಟಕೀಯ ಭಾಷೆ (ಅನೇಕ ಸಂದರ್ಭಗಳಲ್ಲಿ ಅವರ ಸಮಸ್ಯೆ ಎಂದೇ ಅನ್ನಿಸುವ) ಈ ಲೇಖನದ ಮಟ್ಟಿಗೆ ಮಾತ್ರ ಸಂಪೂರ್ಣವಾಗಿ ಸಾರ್ಥಕವಾಗಿದೆ. ಕುವೆಂಪು ಅವರ 'ದಾರ್ಶನಿಕ ಕಾವ್ಯ ಮೀಮಾಂಸೆ' ಅಥವಾ ಅವರ ಕೃತಿ ವಿಮರ್ಶೆಗಳಲ್ಲಿ ಪ್ರಸಿದ್ಧವಾಗಿರುವ ಲೇಖನಗಳಿದ್ದು; ಈ ಲೇಖನ ಮುಖ್ಯ ಎನಿಸುವುದಕ್ಕೆ ಕಾರಣವೆಂದರೆ, ಕಾವ್ಯದ ನಿತ್ಯನೂತನ ವ್ಯಕ್ತಿತ್ವವನ್ನು ಅಷ್ಟೇ ನಿತ್ಯನೂತನವೆನಿಸುವ ಭಾಷೆಯಲ್ಲಿ ಕಟ್ಟಲಾಗಿದೆ ಎನ್ನುವುದು. ವರ್ತಮಾನದಲ್ಲಿ ನಿಂತು ಒಂದು ಕೈಯನ್ನು ಭೂತಕ್ಕೂ, ಒಂದು ಕೈಯನ್ನು ಭವಿಷ್ಯಕ್ಕೂ ಚಾಚಿರುವ ಕವಿಯ ಚಿತ್ರಣ ಕನ್ನಡದ ಅಜರಾಮರ ಚಿತ್ರಣಗಳಲ್ಲೊಂದು.

ಗೋಪಾಲಕೃಷ್ಣ ಅಡಿಗರ **'ಮಣ್ಣಿನ ವಾಸನೆ'** ಅನೇಕ ವಿದ್ವಾಂಸರು ಚರ್ಚಿಸುವಂತೆ ಆ ಕಾಲದ ಅಗತ್ಯವನ್ನು ಈಡೇರಿಸುವ ಆಶಯದ ಲೇಖನವೆಂದು ಮಾತ್ರ ನೋಡಲು ಸಾಧ್ಯವೇ

ಇಲ್ಲ. ನವ್ಯ ಸಾಹಿತ್ಯದ 'ವಕ್ತಾರ ಲೇಖನ'ವೆಂದೇ ಪ್ರಖ್ಯಾತವಾದ ಈ ಲೇಖನ, ನಂತರದ ದಿನಗಳಲ್ಲಿ ತೀವ್ರವಾದ ಚರ್ಚೆಗೊಳಗಾಯಿತು. ಕಾವ್ಯದ 'ಮೂಲಧಾತು'ಗಳನ್ನು, ಜೀವಂತ ಕಾವ್ಯದ 'ಭಾಷೆಯಲ್ಲಿ ಭಾವಾಭಿನಯ'ದ ಲಕ್ಷಣಗಳನ್ನು ಅನನ್ಯವಾಗಿ ವಿವರಿಸುವ ಬರವಣಿಗೆ ಇದು. ಕಾವ್ಯದ ಸೌಂದರ್ಯ ಮೀಮಾಂಸೆಯನ್ನು ಚರ್ಚಿಸುವಷ್ಟೇ ಗಂಭೀರವಾಗಿ ಈ ಲೇಖನ ಕಾವ್ಯದ ಸಾಮಾಜಿಕ ಹೊಣೆಗಾರಿಕೆಯನ್ನೂ ಚರ್ಚಿಸುತ್ತದೆ. ಸಮುದಾಯ ಮತ್ತು ಕಾವ್ಯದ ಪರಸ್ಪರ ಅವಲಂಬಿತನವನ್ನು, ಕರ್ತವ್ಯವನ್ನು ಸ್ಫಟಿಕ ಸ್ಪಷ್ಟತೆಯಲ್ಲಿ ಅಡಿಗರು ಗುರುತಿಸುತ್ತಾರೆ.

ನವ್ಯ ವಿಮರ್ಶೆಯು ಒಟ್ಟು ಕನ್ನಡ ವಿಮರ್ಶೆಗೆ ತಂದುಕೊಟ್ಟ ವಿಭಿನ್ನ ಆಯಾಮಗಳು, ವಿಮರ್ಶೆಯ ಶಿಸ್ತು, ಕನ್ನಡದ ಅನೇಕ ಮಹತ್ವದ ಕೃತಿಗಳನ್ನು 'ವಿಮರ್ಶೆಯ ನಿಕಷ'ಕ್ಕೆ ಒಡ್ಡಿ ವಿಮರ್ಶಾ ಪರಿಕರಗಳ ಹೊಸ ಬೆಳಕಿನಲ್ಲಿ ಪುನರ್‌ಶೋಧಿಸಿಕೊಟ್ಟ ಪರಿಯನ್ನು ವಿವರಿಸುವ ಅಗತ್ಯವಿಲ್ಲ. **ಪ್ರೊ॥ ಯು.ಆರ್.ಅನಂತಮೂರ್ತಿಯವರ 'ಗಾಳಿ ಕಡೆಯಲು ಸೆಟೆದ ಬೆಳ್ಳಿ ಮಂತು'** ಲೇಖನ ಕೃತಿನಿಷ್ಠ ವಿಮರ್ಶಾ ಮಾದರಿಯದು ಎನ್ನುವುದು ನಿಜ. ಅದರೆಲ್ಲ ಸಾಧ್ಯತೆಗಳನ್ನು ದುಡಿಸಿಕೊಂಡೂ, ಈ ಲೇಖನ ಅದರ ಚೌಕಟ್ಟನ್ನು ಲೀಲಾಜಾಲವಾಗಿ ದಾಟಿ ಹೊಸ ವಿಸ್ತಾರವನ್ನು ಪಡೆಯುತ್ತದೆ. ವಿಮರ್ಶಕನ ಪಾಂಡಿತ್ಯ ಮತ್ತು ಪ್ರತಿಭೆಯ ಉಜ್ವಲತೆಯಲ್ಲಿ ಕೃತಿಯೊಂದು ಪಡೆಯುವ 'ಹೊಸ ಹುಟ್ಟ'ನ್ನು ಓದುಗರ ಅನುಭವಕ್ಕೆ ಜೀವಂತವಾಗಿ ದಕ್ಕಿಸುವ ವಿಶಿಷ್ಟ ಲೇಖನ ಇದು. ದ್ರಷ್ಟಾರರಿಗೂ, ವಿಶ್ಲೇಷಕ ಪ್ರವೃತ್ತಿಯ ವಿಚಾರವಾದಿಗಳಿಗೂ ಆಜನ್ಮ ವೈರ ಎನ್ನುವ ಮಾತು ಈ ಲೇಖನದಲ್ಲಿ ಬರುತ್ತದೆ. ಆದರೆ ಮಹತ್ವದ ಮಾತೆಂದರೆ, ಈ ಲೇಖನವೇ ಆ ಎರಡರ ಬೆಸುಗೆಗಾಗಿ ತುಡಿಯುತ್ತದೆ ಎನ್ನುವುದು.

ಕೆ.ವಿ.ಸುಬ್ಬಣ್ಣನವರ ಲೇಖನ **'ಗೋಕುಲ ನಿರ್ಗಮನ'** ಅಸಾಧಾರಣ ಒಳನೋಟಗಳನ್ನೊಳಗೊಂಡಿದೆ. ಪು.ತಿ.ನ. ಅವರ 'ಗೋಕುಲ ನಿರ್ಗಮನ'ವನ್ನು ಆಧಾರವಾಗಿಟ್ಟುಕೊಂಡು ಇಡೀ ಆಧುನಿಕ ಭಾರತದ ಮುಖ್ಯ ಪಲ್ಲಟಗಳನ್ನು ಅವುಗಳ ಸಮಗ್ರತೆ ಮತ್ತು ಸೂಕ್ಷ್ಮತೆಯಲ್ಲಿ ಹಿಡಿಯಲು ಬಯಸುವ ಈ ಮಹತ್ವದ ಲೇಖನ, ಚರಿತ್ರೆ ಮತ್ತು ಸ್ಮೃತಿಗಳ ಲೋಕಗಳನ್ನು ಮುಖಾಮುಖಿಯಾಗಿಸಿ ಭಿನ್ನ ಲೋಕಗ್ರಹಿಕೆಯ ಕ್ರಮಗಳನ್ನು ಚರ್ಚಿಸುತ್ತದೆ. ಇನ್ನೊಂದು ನೆಲೆಯಲ್ಲಿ ಭಾರತದ ಅನೇಕ ಮಹತ್ವದ 'ನಿರ್ಗಮನ'ಗಳ ಬಗ್ಗೆಯೂ ಚರ್ಚಿಸುತ್ತದೆ. ಪು.ತಿ.ನ.ಗೆ ಸಾಧ್ಯವಾಗಿರುವ ಲೌಕಿಕ-ಅಲೌಕಿಕ, ರಾಜಕೀಯ, ಧಾರ್ಮಿಕ, ಸಾಮಾಜಿಕ, ಅಧ್ಯಾತ್ಮ.... ಈ ಎಲ್ಲವೂ ಒಗ್ಗೂಡಿದ 'ಸಂಕ್ರಮಣ ಸಂಭ್ರಮ'ವನ್ನು ವರ್ತಮಾನದ ಬೆಳಕಿನಲ್ಲಿ ಬಿಂಬಿಸುತ್ತದೆ. ನಿರ್ಗಮನಗಳ ಅಗತ್ಯ, ಮಹತ್ವ ಮತ್ತು ದುರಂತಗಳನ್ನು ಗೋಕುಲ ನಿರ್ಗಮನ ಎನ್ನುವ ಬಹುಮುಖಿ ರೂಪಕದ ಮೂಲಕ ಚರ್ಚಿಸುತ್ತದೆ.

ಪಿ. ಲಂಕೇಶ್ ಅವರ **'ರಮ್ಯಪ್ರಜ್ಞೆಯ ಉನ್ನತ ಶಿಖರ ಕುವೆಂಪು'** ಲೇಖನ, ಕುವೆಂಪು ಅವರನ್ನು ಆವರೆಗಿನ ಸ್ಥಾಪಿತನೆಲೆಗಳಲ್ಲಿ ಗುರುತಿಸುತ್ತಲೇ, ಅದರಾಚೆಗಿನ ಆಯಾಮಗಳಲ್ಲಿ ಚರ್ಚಿಸುವ ಪ್ರಯತ್ನ ಮಾಡುತ್ತದೆ. ಕುವೆಂಪು ಕಾವ್ಯದ ಜೀವಕೇಂದ್ರಗಳನ್ನು ಕಾಲ ಮತ್ತು ಪರಿಸರದ ಹಿನ್ನೆಲೆಯಲ್ಲಿಟ್ಟು ನೋಡುತ್ತದೆ. 'ರಮ್ಯಪ್ರಜ್ಞೆ'ಯೆನ್ನುವುದನ್ನೇ ಹೊಸದಾಗಿ ವಿವರಿಸಿಕೊಳ್ಳುವ ಮೂಲಕವೇ ಕುವೆಂಪು ಅವರನ್ನು ಹೊಸ ಬೆಳಕಿನಲ್ಲಿ ನೋಡಲು ಸಾಧ್ಯವಾಗಿದೆ. ವಿಮರ್ಶೆಯ ಹೊಸ ಪರಿಭಾಷೆ ಮತ್ತು ಮಾನದಂಡಗಳನ್ನು ಕಟ್ಟುವ ಪ್ರಯತ್ನವೂ ಇಲ್ಲಿ

ಕಾಣಿಸುತ್ತದೆ. ಲಂಕೇಶ್ ಇದನ್ನು ಮುಂದುವರಿಸಿದ್ದರೆ ಯಾವ ಹೊಸ ಆಯಾಮಗಳು ದಕ್ಕುತ್ತಿದ್ದವೋ ಎಂದು ಆಸೆ ಪಡುವಷ್ಟು ತನ್ಮಯತೆಯಲ್ಲಿ ಮತ್ತು ಒಳನೋಟಗಳಲ್ಲಿ ಈ ಬರವಣಿಗೆಯಿದೆ.

ಕೀರ್ತಿನಾಥ ಕುರ್ತಕೋಟಿಯವರ 'ಭಾಷಾಂತರ ಮತ್ತು ಪುನರ್‌ಲೇಖನ' ಕನ್ನಡದ ಇನ್ನೊಂದು ಮಹತ್ವದ ಲೇಖನ. ಭಾಷಾಂತರವನ್ನು ಸೃಜನಶೀಲತೆಯ ಮೂಲ ಆಯಾಮವೆಂದು ಗುರುತಿಸುವ ಈ ಲೇಖನದಲ್ಲಿ ಭಾಷಾಂತರದ ವಿಶಿಷ್ಟ ಅಂಶಗಳನ್ನು ಸೂಕ್ಷ್ಮವಿವರಗಳಲ್ಲಿ ಚರ್ಚಿಸಲಾಗಿದೆ. ಪುನರ್‌ಲೇಖನವು ಆಳದಲ್ಲಿ ಮರುಸೃಷ್ಟಿಯೂ, ಹೊಸ ಸೃಷ್ಟಿಯೂ ಆಗಬಹುದಾದ ಸಾಧ್ಯತೆಗಳನ್ನು ಹೇಳುವುದರ ಮೂಲಕ ಅದೂ ಒಂದು ಸೃಜನಶೀಲ ಸಾಹಿತ್ಯದ ಪ್ರಕಾರವೇ ಹೌದು ಎನ್ನುವುದನ್ನು ಇಲ್ಲಿ ಕುರ್ತಕೋಟಿ ಖಚಿತವಾಗಿ ಪ್ರತಿಪಾದಿಸುತ್ತಾರೆ. ಅನುವಾದಗಳ ಬಗೆಗಿನ ಆಳವಾದ ಚಿಂತನೆ ಮತ್ತು ವಿಸ್ತಾರವಾದ ಓದು ಮಾತ್ರವಲ್ಲದೆ ಸಾಹಿತ್ಯದ ಬಗೆಗಿನ ನಿತಾಂತವಾದ ಪ್ರೀತಿಯಿಂದ ಮಾತ್ರ ಈ ಬಗೆಯ ಲೇಖನಗಳು ಬರುವುದು ಸಾಧ್ಯವೇನೋ. ಯಾವ ಭಾಷೆಯಲ್ಲಿಯಾದರೂ ಇಂತಹ ಲೇಖನ ಅಪರೂಪವೆಂದೇ ಅನ್ನಿಸುತ್ತದೆ.

ಕೆ.ವಿ.ನಾರಾಯಣ ಅವರ **'ಕನ್ನಡಿಗಳು ಸಾಕು'** ಲೇಖನ ನಿರ್ದಿಷ್ಟವಾಗಿ ಕನ್ನಡ ವಿಮರ್ಶೆಯ ಹೊರಳು ಘಟ್ಟವನ್ನು ಮಾತ್ರ ಸೂಚಿಸುವುದಿಲ್ಲ. ಸಂಕ್ರಮಣ ಘಟ್ಟವೊಂದರಲ್ಲಿ ಸಂಸ್ಕೃತಿ ವಿಶಿಷ್ಟ ಅಥವಾ ಸಂಸ್ಕೃತಿ ಜನ್ಯ ಮೀಮಾಂಸೆಯೊಂದನ್ನು ಖಚಿತ ತಾತ್ವಿಕ ನಿಲುವುಗಳಲ್ಲಿ ಮಂಡಿಸುವ ಚಿಂತನೆ ಇಲ್ಲಿದೆ. ಅದರ ಅಗತ್ಯ ಮತ್ತು ಮಹತ್ವವನ್ನು ಕಾಲಘಟ್ಟದ ಅನಿವಾರ್ಯತೆಯಲ್ಲಿ ಕೆ.ವಿ.ನಾರಾಯಣ ಚರ್ಚಿಸುತ್ತಾರೆ. ಪಾಶ್ಚಾತ್ಯ ವಿಮರ್ಶೆಯ ತಾತ್ವಿಕ ಆಕೃತಿಗಳು ನವೋದಯದ ಸಂದರ್ಭದಲ್ಲಿ ಕನ್ನಡ ಸಂವೇದನೆಯ ಅವಿಭಾಜ್ಯ ಅಂಗವೇ ಆಗಿ ಮರುಹುಟ್ಟು ಪಡೆದವು, ಆದರೆ ನವ್ಯದ ಸಂದರ್ಭದಲ್ಲಿ ವಿಮರ್ಶಾ ಪರಿಕರಗಳೇ ಕನ್ನಡ ವಿಮರ್ಶೆಯನ್ನು ಆಕ್ರಮಿಸಿಬಿಟ್ಟ ಸಂದರ್ಭ ಸೃಷ್ಟಿಯಾಗಿದೆ ಎಂದು ಹೇಳುವ ಈ ಲೇಖನ ಪ್ರತಿಯೊಂದು ಸಂಸ್ಕೃತಿಗೂ ತನ್ನದೇ ಆದ ಕಾವ್ಯ ಮೀಮಾಂಸೆಯನ್ನು ಕಟ್ಟಿಕೊಳ್ಳಲು ಸಾಧ್ಯ ಮತ್ತು ಅದಕ್ಕಾಗಿ ಶ್ರಮಿಸಲೂ ಬೇಕಲ್ಲವೆ ಎನ್ನುವ ಪ್ರಶ್ನೆಯನ್ನು ಎತ್ತುತ್ತದೆ.

ಡಿ.ಆರ್.ನಾಗರಾಜ್ ಅವರ **'ಮಾಸ್ತಿಯವರ ಕೃತಿಗಳಲ್ಲಿ ಕೇಡಿನ ಕಲ್ಪನೆ'**–ಮಾಸ್ತಿಯವರಂತಹ ವಿಸ್ತಾರ ಹರಹಿನ ಲೇಖಕರ ಕೇಂದ್ರ ಕಾಳಜಿಯೊಂದನ್ನು ಗುರುತಿಸುತ್ತದೆ. ಈ ಕೇಂದ್ರ ಕಾಳಜಿಯು ಅವರ ಸಾಹಿತ್ಯಕ್ಕೆ ತಂದುಕೊಟ್ಟ ಆಳವನ್ನು, ಸೂಕ್ಷ್ಮತೆಯನ್ನು, ಅನನ್ಯತೆಯನ್ನು ಹೇಳುತ್ತಾ ಈ ಅಂಶವೇ ಮಾಸ್ತಿಯವರನ್ನು ನಮ್ಮ ಬಹುಮುಖ್ಯ ಲೇಖಕರಲ್ಲಿ ಒಬ್ಬರನ್ನಾಗಿಸಿದೆಯೆನ್ನುವುದನ್ನು ಈ ಲೇಖನ ವಿವರವಾಗಿ ಚರ್ಚಿಸುತ್ತದೆ. ಕೇಡಿನ ಮೂಲಕ ಮಾಸ್ತಿ ಮನುಷ್ಯನ ಮನೋ ವಿನ್ಯಾಸವನ್ನೇ ತೀವ್ರ ಶೋಧನೆಗೆ ಒಡ್ಡುತ್ತಾರೆ. ತೀರ್ಮಾನಗಳಿಲ್ಲದ, ಕಹಿಯಿಲ್ಲದ ಆರೋಗ್ಯಪೂರ್ಣ, ಪ್ರಬುದ್ಧ ದೃಷ್ಟಿಕೋನವೊಂದರ ಮೂಲಕ ಮಾಸ್ತಿ ಕಟ್ಟುವ ಸಾಹಿತ್ಯದ ಕ್ಯಾನ್‌ವಾಸ್ ಎಷ್ಟು ವಿಶಿಷ್ಟವಾದುದು ಎನ್ನುವುದನ್ನು ಈ ಲೇಖನ ಸಾಧಾರವಾಗಿ ಗುರುತಿಸುತ್ತದೆ.

ಬಿ.ಎಂ.ಶ್ರೀಯವರಿಂದ ಡಿ.ಆರ್.ನಾಗರಾಜ್ ತನಕದ ಈ ಹತ್ತು ಲೇಖನಗಳು ಕನ್ನಡ ವಿಮರ್ಶೆಯ ದಿಕ್ಸೂಚಿಗಳೆಂದೇ ನಾನು ತಿಳಿದಿದ್ದೇನೆ. ಕನ್ನಡ ಮೀಮಾಂಸೆ–ಕನ್ನಡ ಕಾವ್ಯ ಮೀಮಾಂಸೆಯಿಂದ ಹಿಡಿದು ಕಾವ್ಯ–ಕಾವ್ಯ ಸ್ವರೂಪವನ್ನು ಕುರಿತ ಚರ್ಚೆ, ಅತ್ಯುತ್ತಮ ಎನ್ನಬಹುದಾದ ಕೃತಿ ವಿಮರ್ಶೆ, ಸಮಕಾಲೀನ ಸಂದರ್ಭದ ಬಿಕ್ಕಟ್ಟುಗಳನ್ನು ಸಾಹಿತ್ಯದ ರೂಪಕದ ಮೂಲಕ ಅರ್ಥೈಸಿಕೊಳ್ಳುವ ಪ್ರಯತ್ನ, ಪ್ರಭಾವಗಳ ಬಗ್ಗೆ ಮೊದಲ ಘಟ್ಟದ ನಿಲುವು, ನಂತರದ ಘಟ್ಟದಲ್ಲಿ ಎದ್ದ ಪ್ರಶ್ನೆಗಳು, ಹುಡುಕಿದ ಪರಿಹಾರಗಳು ಇವೆಲ್ಲವನ್ನೂ ಇಲ್ಲಿನ ಲೇಖನಗಳು ಪ್ರಾಮಾಣಿಕತೆ, ಬದ್ಧತೆ ಮತ್ತು ಒಳನೋಟಗಳೊಂದಿಗೆ ಪರಿಶೀಲಿಸುತ್ತವೆ. ಕನ್ನಡ ಸಾಹಿತ್ಯ ಮತ್ತು ವಿಮರ್ಶೆಯನ್ನು ಕುರಿತ ನಮ್ಮ ಪ್ರೀತಿ ಮತ್ತು ಹೆಮ್ಮೆಗಳನ್ನು ಹೆಚ್ಚಿಸಬಲ್ಲ ಲೇಖನಗಳು ಇವು. ಕನ್ನಡದಲ್ಲಿ ಮೌಖಿಕ ಪರಂಪರೆಯ ಹರಿಕಾರರೆನ್ನಿಸಿರುವ , ಕಾವ್ಯಪ್ರೀತಿಯನ್ನು ತಲೆಮಾರಿನಿಂದ ತಲೆಮಾರಿಗೆ ದಾಟಿಸುತ್ತಿರುವ ಕಿ.ರಂ.ನಾಗರಾಜ್, ಇತ್ತೀಚಿನ ದಶಕಗಳ ಅತ್ಯುತ್ತಮ ಅಧ್ಯಯನಗಳನ್ನು, ಸೂಕ್ಷ್ಮ ಒಳನೋಟಗಳಿಂದ ಕನ್ನಡ ವಿಮರ್ಶೆಯನ್ನು ನಿಜವಾದ ಅರ್ಥದಲ್ಲಿ ಶ್ರೀಮಂತಗೊಳಿಸಿರುವ ರಾಜೇಂದ್ರ ಚೆನ್ನಿ ಮತ್ತು ರಹಮತ್ ತರೀಕೆರೆಯವರನ್ನು ಈ ಪಟ್ಟಿಯಲ್ಲಿ ಸೇರಿಸಲಾಗಿಲ್ಲ ಎನ್ನುವ ತೀವ್ರ ಅತೃಪ್ತಿಯೊಂದಿಗೇ ಈ ಟಿಪ್ಪಣಿಯನ್ನು ಮುಗಿಸುತ್ತಿದ್ದೇನೆ.

ಡಾ.ಎಂ.ಎಸ್. ಆಶಾದೇವಿ ಕನ್ನಡ ವಿಮರ್ಶಾ ಲೋಕದ ಹೊಸ ಪ್ರತಿಭೆಗಳೆಂದು ಇತ್ತೀಚೆಗೆ ಗುರುತಿಸಲ್ಪಟ್ಟಿರುವವರಲ್ಲಿ ಪ್ರಮುಖರು. ಇವರು ಬೆಂಗಳೂರು ವಿಶ್ವವಿದ್ಯಾಲಯದಿಂದ ಕನ್ನಡ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವಿ ಪಡೆದು, ಕನ್ನಡದ ಖ್ಯಾತ ವಿಮರ್ಶಕ, ಚಿಂತಕ ಡಾ॥ ಡಿ.ಆರ್.ನಾಗರಾಜ್ ಅವರ ಮಾರ್ಗದರ್ಶನದಲ್ಲಿ ಡಾಕ್ಟರೇಟ್ ಪದವಿ ಪಡೆದಿದ್ದಾರೆ.

'ಭಾರತದ ಬಂಗಾರ ಪಿ.ಟಿ.ಉಷಾ' ಹಾಗೂ 'ಸ್ತ್ರೀಮತವನುತ್ತರಿಸಲಾಗದೆ' ಇವರ ಕೃತಿಗಳು, ಡಿ.ಆರ್.ನಾಗರಾಜರ 'ಫ್ಲೇಮಿಂಗ್ ಫೀಟ್' ಇಂಗ್ಲಿಷ್ ಕೃತಿಯನ್ನು ಇವರು ಕನ್ನಡಕ್ಕೆ ಅನುವಾದಿಸಿದ್ದಾರೆ.

ಕನ್ನಡದ ಅಸ್ಮಿತೆಗೆ ಕಾರಣರಾದ ಸಂಶೋಧಕರು

– ಡಾ.ಬಸವರಾಜ ಕಲ್ಗುಡಿ

ಕನ್ನಡದ ಹತ್ತು ಅತ್ಯುತ್ತಮ ಸಂಶೋಧನೆಗಳು :

೧. ಬಿ.ಎಲ್.ರೈಸ್	–	ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳು
೨. ಎಫ್. ಕಿಟೆಲ್	–	ಕನ್ನಡ-ಇಂಗ್ಲಿಷ್ ನಿಘಂಟು
೩. ಶಂ.ಬಾ. ಜೋಷಿ	–	ಕರ್ನಾಟಕ ಸಂಸ್ಕೃತಿಯ ಪೂರ್ವ ಪೀಠಿಕೆ
೪. ಷ. ಶೆಟ್ಟರ್	–	'ಕವಿರಾಜಮಾರ್ಗ ಮಂಥನ' ಮಾಲಿಕೆಯ ಲೇಖನಗಳು
೫. ಆರ್.ನರಸಿಂಹಾಚಾರ್	–	ಕರ್ನಾಟಕ ಕವಿಚರಿತೆ ಸಂಪುಟಗಳು
೬. ಫ.ಗು. ಹಳಕಟ್ಟಿ	–	ವಚನ ಸಂಪುಟಗಳ ಸಂಪಾದನೆ
೭. ಎಂ.ಎಚ್.ಕೃಷ್ಣ	–	'ಅತ್ಯಂತ ಪ್ರಾಚೀನ ಕನ್ನಡ ಶಾಸನ'
೯. ಜಿ.ಶಂ.ಪರಮಶಿವಯ್ಯ	–	'ದಕ್ಷಿಣ ಕರ್ನಾಟಕ ಜನಪದ ಕಾವ್ಯ ಪ್ರಕಾರಗಳು'
೧೦. ಡಿ.ಎನ್.ಶಂಕರಭಟ್	–	'ಕನ್ನಡ ಬರಹವನ್ನು ಸರಿಪಡಿಸೋಣ'

ಕನ್ನಡ ಸಂಶೋಧನೆಯ ಆಳ ಮತ್ತು ವ್ಯಾಪ್ತಿಯ ಸ್ವರೂಪವನ್ನು ಪರಿಶೀಲಿಸಿ ನೋಡಿದಾಗ ಎದ್ದು ಕಾಣುವ ಪ್ರಮುಖ ಸಂಗತಿಯೆಂದರೆ, ಕನ್ನಡ ಸಂಸ್ಕೃತಿಯ ವಿಭಿನ್ನ ನೆಲೆಗಳನ್ನು ರೂಪಿಸಿದ ಆಕರಗಳ ಅನ್ವೇಷಣೆಯೇ. ಸಂಶೋಧನೆಯ ತಾತ್ವಿಕ ನೆಲೆಗಳ ಬಗ್ಗೆ ತಲೆಕೆಡಿಸಿಕೊಂಡಿದ್ದು ಇಲ್ಲಿ ಬಹಳ ಕಡಿಮೆ. ಆಧುನಿಕ ಯುಗದಲ್ಲಿ ಪಶ್ಚಿಮ ವಿದ್ವಾಂಸರ ಸಂಶೋಧನೆಯು ೧೯ನೆಯ ಶತಮಾನದ ಅಂತ್ಯದಲ್ಲಿ ಕನ್ನಡ ಸಂಸ್ಕೃತಿಯ ಪುನಾರಚನೆಗೆ ಬರಹ ಮೂಲ ಆಕರಗಳ ಅನ್ವೇಷಣೆಯ ಕಡೆಗೆ ಮುಖ ಮಾಡಿತು. ಆಧುನಿಕ ಶಿಕ್ಷಣ ಮತ್ತು ಚಿಂತನ ವಿಧಾನಗಳಿಂದಾಗಿ, ಕನ್ನಡ ಪರಂಪರೆಯ ಸ್ವರೂಪಗಳನ್ನೇ ಆಧುನಿಕ ಸೃಜನಶೀಲ ಬರಹ ಬಹುಪಾಲು ಕೈಬಿಟ್ಟಿತೆಂದೇ ಹೇಳಬೇಕು. ಹೀಗಾಗಿ ಕನ್ನಡ ಬದುಕು ತನ್ನನ್ನು ಕಟ್ಟಿಕೊಳ್ಳುತ್ತಾ ಬಂದ ಬದುಕಿನ ಕ್ರಮಗಳ ಅನ್ವೇಷಣೆ ಸಂಪೂರ್ಣವಾಗಿ ಇಲ್ಲವಾಯಿತೆಂದೇ ಅನ್ನಿಸುತ್ತದೆ.

ಹೀಗಾಗಿ ಸೃಜನಶೀಲ ಬರವಣಿಗೆ ಮತ್ತು ಅದಕ್ಕೆ ಸ್ಪಂದಿಸಿದ ಚಿಂತನೆಗಳಿಗೂ, 'ಸಂಶೋಧನೆ' ಎಂದು ಕರೆಯಲಾಗುತ್ತಿದ್ದ ಕೆಲಸಗಳಿಗೂ ನಡುವೆ ದೊಡ್ಡ ಗೋಡೆಯೊಂದು ನಿರ್ಮಾಣವಾಯಿತು. 'ಸಂಶೋಧನೆ'ಯ ವ್ಯಾಖ್ಯೆಯನ್ನು 'ಭೂತ'ವನ್ನು ಹೆಕ್ಕಿ ತೆಗೆಯುವ, ಪರಂಪರೆಯನ್ನು ಭೂತವೆಂದೇ ನೋಡುವ ಕ್ರಮವು ಸ್ಪಷ್ಟವಾಗಿ ಜಾರಿಗೆ ಬಂದಿತು. ಈಗಲೂ ಸಂಶೋಧನೆಯ ವಲಯದಲ್ಲಿ ಪ್ರಚಲಿತದಲ್ಲಿರುವ ವ್ಯಾಖ್ಯೆಯು ಇದೇ ರೀತಿಯದ್ದೇ ಆಗಿದೆ. ವರ್ತಮಾನದ ಅಪೇಕ್ಷೆಗಳಿಗೆ

ಪರಂಪರೆಯನ್ನು ನಿರ್ವಚಿಸುವ ಮಾದರಿಯನ್ನು ನಾವು 'ಸಂಶೋಧನೆ' ಎಂದು ಈಗಲೂ ಒಪ್ಪಿಕೊಳ್ಳುತ್ತಲಿಲ್ಲ.

ಕನ್ನಡ ಸಂಸ್ಕೃತಿಯ ಸಂಶೋಧನೆ ಎಂದರೆ ಈ ಭಾಷಾ ಭೌಗೋಳಿಕ ಜಗತ್ತಿನಲ್ಲಿ ವಿಭಿನ್ನ ಬದುಕಿನ ಕ್ರಮಗಳು ಪರಸ್ಪರ ಮುಖಾಮುಖಿಯಾಗುತ್ತಾ, ಸಂವಾದ ನಡೆಸಿ ಬದುಕಿಗೊಂದು ನಡಾವಳಿ(Ethics)ಯನ್ನು ರೂಪಿಸಲು ಪ್ರಯತ್ನಿಸಿದವಾ ಎಂದು ಅರಿಯುವುದೇ ಆಗಿದೆ. ಇದನ್ನು ಒಂದು ಅರಿಯುವ ಪ್ರಕ್ರಿಯೆ ಎಂದು ನಾವು ತಿಳಿಯದಿದ್ದರೆ, ಕಟ್ಟುವ ಪ್ರಕ್ರಿಯೆಯು ಸಾಧ್ಯವಾಗುವುದಿಲ್ಲ. ಜಾತಿ, ಉಪಜಾತಿ ಮತ್ತು ಶ್ರೇಣೀಕರಣ ಪ್ರಧಾನವಾದ ಸಾಂಪ್ರದಾಯಕ ಪರಂಪರೆಯ ಬದುಕಿನ ಕ್ರಮವು ಕೇವಲ ಒಡೆದು ಹೋದ, ಪ್ರತ್ಯೇಕಗೊಂಡ ಬದುಕಿನ ಚಿಂತನೆಯನ್ನೇ ಮತ್ತೆ ಮತ್ತೆ ರೂಪುಗೊಳಿಸಲು ಪ್ರಯತ್ನಿಸುತ್ತಿದೆಯೇ? ಎನ್ನುವ ಪ್ರಶ್ನೆಯನ್ನು ಕನ್ನಡವೆಂಬ ಮನಸ್ಸು ಹೇಗೆ ನೋಡಿದೆ ಮತ್ತು ನೋಡುತ್ತ ಇದೆ ಎನ್ನುವ ಚಿಂತನೆಯೇ ಬದುಕನ್ನು ರೂಪಿಸುವ ಸಂಶೋಧನೆಯೆಂಬ ಆತ್ಮ. ಆದರೆ ನಮ್ಮ ಸಂಶೋಧನೆಯ ಶಿಸ್ತು, ಅಂಥ ಪ್ರಶ್ನೆಗಳನ್ನು ಸಂಶೋಧನೆಯ ವ್ಯಾಪ್ತಿಯಲ್ಲಿ ಬರುವುದೆಂದು ತಿಳಿದಿಲ್ಲ. ಹಾಗೆ ನೋಡಿದರೆ, ಇಂಥ ಒಂದು ಪ್ರಶ್ನೆಯನ್ನು ಇಪ್ಪತ್ತನೇ ಶತಮಾನದ ಪ್ರಾರಂಭದಲ್ಲಿ ಬಿ.ಎಲ್.ರೈಸ್ ಅವರು ತಮ್ಮ 'ಹಿಸ್ಟರಿ ಆಫ್ ಕ್ಯಾನರೀಸ್ ಲಿಟರೇಚರ್' ಕೃತಿಯಲ್ಲಿ ಎತ್ತಿದ್ದರು. ಅದರ ಪ್ರಕಾರ ಹಳೆಗನ್ನಡ ಸಾಹಿತ್ಯದ ಬಹುಪಾಲು ಅಭಿವ್ಯಕ್ತಿಗಳು ಧರ್ಮ ಆಧಾರಿತ ಬರವಣಿಗೆಗಳೇ ಆದ್ದರಿಂದ, ಮಾನವ ಮೌಲ್ಯ ಪ್ರಜ್ಞೆಯ ಆವಿಷ್ಕಾರದ ದೃಷ್ಟಿಯಿಂದ ವಿಶ್ವ ಸಾಹಿತ್ಯಕ್ಕೆ ಇವುಗಳು ಕೊಡುವ ಕೊಡುಗೆ ಅತ್ಯಲ್ಪ. ಇಂಥದೊಂದು ಪ್ರಶ್ನೆಗೆ ಕನ್ನಡ ಪರಂಪರೆಯಲ್ಲಿ ಎಂಥ ಉತ್ತರಗಳಿವೆ ಎನ್ನುವುದನ್ನು ನಾವು ಇನ್ನೂ ಹುಡುಕುವ ನೆಲೆಯಲ್ಲಿಯೇ ಇದ್ದೇವೆ ಎಂದು ನನಗೆ ಅನ್ನಿಸುತ್ತಿದೆ.

ಈ ಹಿನ್ನೆಲೆಯಲ್ಲಿ ನೋಡಿದಾಗ ಕನ್ನಡ ಸಂಶೋಧನೆಯ ಅತ್ಯಂತ ಪ್ರಮುಖ ಹೆಸರುಗಳು ನಾನು ಮೊದಲೇ ಹೇಳಿದ ಹಾಗೆ ಆಕರಗಳ ಅನ್ವೇಷಣೆಯಲ್ಲಿಯೇ ಇವೆ ಎಂದು ಹೇಳಬಹುದು. ಈ ವಲಯದಲ್ಲಿ ಅಸಂಖ್ಯಾತ ಹೆಸರುಗಳು ನಮಗೆ ಸಿಗುತ್ತವೆ. ಇವುಗಳಲ್ಲದೇ ಆಕರಗಳ ವಿಶ್ಲೇಷಣೆಯಲ್ಲಿ ಪ್ರಮುಖ ಹೆಜ್ಜೆ ಗುರುತುಗಳನ್ನು ಮೂಡಿಸಿದ ಹಲವಾರು ಪ್ರಯತ್ನಗಳೂ ನಡೆದಿವೆ. ಕೆಲವು ವಿಭಿನ್ನ ಕ್ಷೇತ್ರಗಳ ಇಂಥ ಪ್ರಮುಖ ಪ್ರಯತ್ನಗಳನ್ನು ಇಲ್ಲಿ ಗಮನಾರ್ಹವಾದುದೆಂದು ಗುರುತಿಸಲಾಗಿದೆ.

ಹತ್ತು ಮಂದಿ ಸಂಶೋಧಕರನ್ನು ಗುರುತಿಸಿ ಇಲ್ಲಿ ಹೇಳಲಾಗುತ್ತಿರುವುದರಿಂದ, ಆ ಕ್ಷೇತ್ರದಲ್ಲಿ ಹತ್ತು ಹಲವು ಕೆಲಸ ಮಾಡಿ ಆ ವಲಯವನ್ನು ಪುಷ್ಟಿಗೊಳಿಸಿದ ಇನ್ನೂ ಅಸಂಖ್ಯಾತ ಸಂಶೋಧಕರಿಗೆ ಅನ್ಯಾಯವಾಗುತ್ತದೆ ಎನ್ನುವುದು ನನಗೆ ಗೊತ್ತಿದೆ. ಆದರೂ ಇಲ್ಲಿ ಗುರುತಿಸಲಾದ ಸಂಶೋಧಕರು ಮತ್ತು ಕೃತಿಗಳು ಕನ್ನಡ ಸಂಶೋಧನೆಯಲ್ಲಿ ಒಂದಿಲ್ಲೊಂದು ಬಗೆಯಲ್ಲಿ ಅನರ್ಘ್ಯವಾದ ಮಾದರಿ, ಬೆಲೆಯುಳ್ಳ ಜ್ಞಾನ ಭಂಡಾರ ಹಾಗೂ ಪರಂಪರೆಗೆ ಕಾರಣರಾಗಿದ್ದಾರೆ/ಕಾರಣವಾಗಿವೆ ಎಂದು ಹೇಳಬಹುದು.

ಕನ್ನಡದ ಸಂಸ್ಕೃತಿಯ ಅಧ್ಯಯನದಲ್ಲಿ ಬಹುಮುಖ್ಯ ಬರಹದ ದಾಖಲೆಗಳಾಗಿದ್ದ ಶಾಸನಗಳನ್ನು ಸಂಗ್ರಹಿಸಿ ಎಫಿಗ್ರಾಫಿಯಾ ಕರ್ನಾಟಕ ಸಂಪುಟಗಳನ್ನು ಪ್ರಕಟಿಸಿದ ಬಿ.ಎಲ್.ರೈಸ್

ಅವರ ಕಾರ್ಯ ಸಾಧನೆಯು ಅಗಾಧವಾದದ್ದು. ೧೮೮೫ರಿಂದ ೧೯೦೬ರವರೆಗೆ ಪ್ರಾಚ್ಯ ಸಂಶೋಧನಾ ಸಂಸ್ಥೆಯ ನಿರ್ದೇಶಕರಾಗಿ, ಹಳೆ ಮೈಸೂರು ಭಾಗದ ಸುಮಾರು ೯೦೦೦ ಶಾಸನಗಳನ್ನು ಹನ್ನೆರಡು ಸಂಪುಟಗಳಲ್ಲಿ ಇವರು ತಂದರು. ಮುಂದೆ ಮದ್ರಾಸ್ ಅಧಿಪತ್ಯ, ಮುಂಬಯಿ ಕರ್ನಾಟಕ, ನಿಜಾಂ ಕರ್ನಾಟಕದ ಶಾಸನಗಳ ಪ್ರಕಟಣೆಗೆ ಇದು ದಾರಿಯಾದಂತಾಯಿತು. ರೈಸ್ ರವರ ಅಗಾಧ ಪಾಂಡಿತ್ಯ, ಭಾಷೆ, ಲಿಪಿಗಳ ಸ್ವರೂಪವನ್ನು ಗುರುತಿಸುವಲ್ಲಿ ಅವರಿಗೆ ಇದ್ದ ಪ್ರತಿಭೆ ಪ್ರತಿ ಸಂಪುಟಗಳಲ್ಲಿ ಸೂಕ್ಷ್ಮವಾಗಿ ವ್ಯಕ್ತವಾಗುತ್ತದೆ.

ಭೌಗೋಳಿಕ ವರ್ಗೀಕರಣ, ಕಾಲಾನುಕ್ರಮಣಿಕೆ, ಶಾಸನಗಳ ಮೂಲಪಾಠ, ಇಂಗ್ಲಿಷ್ ಭಾಷಾಂತರ, ವಸ್ತುವಿನ ವಿವರಣೆ ಇವುಗಳೆಲ್ಲದರಿಂದ ಸಮಗ್ರವಾಗಿದ್ದು–ಮುಂದಿನ ಸಂಗ್ರಹ, ಸಂಪಾದನೆಗಳಿಗೆ ಇವು ಮಾದರಿಯಾದವು. ಕರ್ನಾಟಕ ಚರಿತ್ರೆಯ ಪುನಾರಚನೆಯಲ್ಲಿ ಮುಂದೆ ಈ ಆಕರಗಳೆ ಹೆಚ್ಚು ಪ್ರಧಾನವಾದ ಪಾತ್ರವನ್ನು ವಹಿಸಿದವು. ಈ ಆಕರಗಳನ್ನು ಮುಂದಿನ ಸಂಶೋಧಕರು ಎಷ್ಟರಮಟ್ಟಿಗೆ ನಿಖರವಾದವುಗಳು ಎಂದು ನಂಬಿದರು ಎಂದರೆ ಅನೇಕ ಶಾಸನಗಳಲ್ಲಿ ಕಾಣುವ ಉತ್ಪ್ರೇಕ್ಷೆಯ ಮಾತುಗಳನ್ನು ಹೇಗೆ ಗ್ರಹಿಸಬೇಕು ಎನ್ನುವ ತಾತ್ವಿಕತೆಯ ಆಯಾಮಗಳನ್ನು ಕೂಡ ಗ್ರಹಿಸಲಾಗದಂತಾಯಿತು. ಆದರೆ ಕನ್ನಡ ಭಾಷೆಯ ಬೆಳವಣಿಗೆ, ಇತಿಹಾಸದ ದೃಷ್ಟಿಯಿಂದ ಮುಖ್ಯವಾದ ಸಂಗತಿಗಳನ್ನು ಈ ಆಕರಗಳು ಒದಗಿಸಿದವು.

ರೆವರೆಂಡ್ ಎಫ್ ಕಿಟೆಲ್ ಅವರು ತಯಾರಿಸಿದ *'ಕನ್ನಡ–ಇಂಗ್ಲಿಷ್ ನಿಘಂಟು' (೧೮೯೪)* ಕನ್ನಡ ನಿಘಂಟು ರಚನೆಯಲ್ಲಿ ಪ್ರಾಚೀನ ಮತ್ತು ಮುಂದಿನ ರಚನೆಗಳಿಗೆ ಮಾರ್ಗವಾಯಿತು. ಆ ಕಾಲಕ್ಕೆ ಹದಿನೆಂಟು ಹಳೆಗನ್ನಡ ಗ್ರಂಥಗಳಲ್ಲಿ ಪ್ರಯೋಗಗೊಂಡ ಶಬ್ದಗಳು, ಹದಿನೆಂಟು ನಡುಗನ್ನಡ ಗ್ರಂಥಗಳ ಶಬ್ದಗಳು ಹಾಗೂ ನಾಲ್ಕು ಆಧುನಿಕ ಕನ್ನಡ ಕೃತಿಗಳ ಶಬ್ದಗಳನ್ನು ಉಪಯೋಗಿಸಿದ್ದಲ್ಲದೆ, ದ್ರಾವಿಡ ಭಾಷೆಗಳ ಐದು ನಿಘಂಟು ಹಾಗೂ ಸಂಸ್ಕೃತದ ನಾಲ್ಕು ನಿಘಂಟುಗಳನ್ನು ಆಧರಿಸಿ ಇದನ್ನು ರೂಪಿಸಲಾಗಿದೆ. ಕಿಟೆಲ್ ಈ ನಿಘಂಟು ರಚನೆ ಮಾಡುವಾಗ ಪಂಪಭಾರತ, ಕವಿರಾಜಮಾರ್ಗ, ವಡ್ಡಾರಾಧನೆ, ವಚನಗಳು ಇನ್ನೂ ಲಭ್ಯವಿರಲಿಲ್ಲ. ಮುಂದೆ ಮದ್ರಾಸ್ ವಿಶ್ವವಿದ್ಯಾಲಯದ ಮರಿಯಪ್ಪ ಭಟ್ಟರು ಸುಮಾರು ೭೮೦೦ ಶಬ್ದಗಳನ್ನು ಹೊಸದಾಗಿ ಸೇರಿಸಿ, ಪರಿಷ್ಕೃತ ಮುದ್ರಣವನ್ನು ೧೯೬೮ರಲ್ಲಿ ಮಾಡಿದರು.

ಕಿಟೆಲ್ ಅವರ ಈ ಮಾದರಿಯನ್ನು ಕನ್ನಡ ಸಾಹಿತ್ಯ ಪರಿಷತ್ತು ಒಂದು ರೀತಿಯಲ್ಲಿ ಮುಂದುವರಿಸಿತು. ಕನ್ನಡ ಭಾಷೆಯ ಪುನಾರಚನೆಯ ದೃಷ್ಟಿಯಿಂದ ಇದು ಮಹತ್ವದ ಸಾಧನೆ. ೧೯೪೩ರಲ್ಲಿ ಪ್ರಾರಂಭಿಸಿ ೧೯೯೫ರಲ್ಲಿ ಪೂರ್ಣವಾದ 'ಕನ್ನಡ–ಕನ್ನಡ ನಿಘಂಟು' ಒಂದು ಬೃಹತ್ ಕಾರ್ಯ. ಭಾರತದ ಇನ್ನಾವುದೇ ಭಾಷೆಗಳಲ್ಲೂ ಈ ಕಾರ್ಯ ನಡೆದಂತೆ ಕಾಣುವುದಿಲ್ಲ. ಹತ್ತು ಸಾವಿರ ಶಾಸನಗಳು, ಎರಡು ಸಾವಿರಕ್ಕೂ ಮಿಕ್ಕಿದ ಗ್ರಂಥಗಳು, ಹಸ್ತಪ್ರತಿಗಳು, ಹಳೆಯ ನಿಘಂಟುಗಳು, ಧಾರ್ಮಿಕ ಗ್ರಂಥಗಳು, ಸಂಗೀತ, ನೃತ್ಯ, ವೈದ್ಯ, ಜ್ಯೋತಿಷ್ಯ, ಕಾವ್ಯಮೀಮಾಂಸೆ ಮುಂತಾದ ಶಾಸ್ತ್ರಕ್ಷೇತ್ರಗಳನ್ನು ಒಳಗೊಂಡ ವ್ಯಾಪ್ತಿಯ ಸಾಹಿತ್ಯವನ್ನು ಪರಿಶೀಲಿಸಿ ಪದಗಳ ಆಯ್ಕೆ ಇಲ್ಲಿ ಆಗಿದೆ.

ಕಿಟೆಲ್‌ರವರ ನಿಘಂಟು ತಾತ್ವಿಕವಾಗಿ ಭಾಷೆಯ ಚಾರಿತ್ರಿಕವಾದ ಇತಿಹಾಸ ಮತ್ತು ಸ್ವರೂಪದ ಕಡೆಗೆ ಒತ್ತು ಕೊಟ್ಟು ಪದಗಳನ್ನು ಗಮನಿಸುತ್ತದೆ. ವರ್ತಮಾನದ ಭಾಷಾ

ಬಳಕೆಯ ದೃಷ್ಟಿ, ಸ್ವರೂಪಗಳ ಬಗ್ಗೆ ಒತ್ತು ಇಲ್ಲ. ಸಾಹಿತ್ಯ ಅಧ್ಯಯನಕ್ಕೆ ಈ ಮಾದರಿಯು ಸಾಕಷ್ಟು ಸಹಾಯ ಮಾಡುತ್ತದೆ ಮತ್ತು ಹಾಗೆ ಮಾಡಬೇಕೆನ್ನುವುದೇ ಇಲ್ಲಿಯ ಆಸಕ್ತಿಯಾಗಿದೆ. ಈ ಮಾದರಿಯೇ ಪರಿಷತ್ತಿನ ನಿಘಂಟು ರಚನೆಯಲ್ಲಿಯೂ ಎದ್ದು ಕಾಣುತ್ತದೆ. ಭಾಷೆಯ ಪ್ರಸ್ತುತ ಬಳಕೆ ಮತ್ತು ನಿಯೋಗದ ದೃಷ್ಟಿಯಿಂದ ನಿಘಂಟು ರಚನೆ ಇನ್ನೊಂದು ಆಯಾಮವನ್ನು ತಳೆಯಬೇಕಾದ ಅಗತ್ಯವನ್ನು ಈ ಮಾದರಿಗಳು ಸೂಚಿಸುತ್ತವೆ.

ಶಂ.ಬಾ. ಜೋಷಿಯವರು ಕನ್ನಡ ಸಂಸ್ಕೃತಿಯ ಪುನಾರಚನೆಯನ್ನು ಕುರಿತು ಮಾಡಿದ ಅನ್ವೇಷಣೆ ಅತ್ಯಂತ ಮಹತ್ವಪೂರ್ಣವಾದದ್ದು. ಸಂಸ್ಕೃತಿ ವಿಶ್ಲೇಷಣೆಗೆ–ಸಂಕೇತಶಾಸ್ತ್ರ, ಪದಗಳ ಬಳಕೆ, ಸ್ಥಳನಾಮಗಳು, ಪುರಾಣ, ಆಚರಣೆ–ಹೀಗೆ ಹಲವು ನಿಟ್ಟಿನಿಂದ ಆಕರಗಳನ್ನು ಮೊಟ್ಟ ಮೊದಲ ಬಾರಿಗೆ ಬಳಸಿದವರು ಇವರು. ವರ್ತಮಾನದ ರಿಕ್ತ ಸ್ಥಿತಿಗೆ ಕಾರಣಗಳೇನು ಎಂದು ಹುಡುಕ ಹೊರಟ ಇವರಿಗೆ–ಕನ್ನಡ ಸಂಸ್ಕೃತಿ ಎನ್ನುವುದು ಇದ್ದರೆ ಅದು ಎಂಥದ್ದು, ಎಷ್ಟು ಪ್ರಾಚೀನ, ಭೌಗೋಳಿಕವಾಗಿ ಎಷ್ಟು ವ್ಯಾಪ್ತಿಯದ್ದು–ಎಂಬ ಪ್ರಶ್ನೆಗಳ ಹುಡುಕಾಟಕ್ಕೆ ಕಾರಣವಾಗಿದೆ. ದಕ್ಷಿಣ ಮಹಾರಾಷ್ಟ್ರದವರೆಗೂ ಹಬ್ಬಿದ ಈ ಕನ್ನಡ ಭಾಷಿಕ ಸಮುದಾಯದ ಕುರುಹುಗಳನ್ನು ಹುಡುಕ ಹೊರಟ ಶಂ.ಬಾ. ಜೋಷಿಯವರು ಈ ಸಮುದಾಯದ ಬೇರನ್ನು 'ಹಾಲುಮತ' ಸಮುದಾಯದಲ್ಲಿ ಕಾಣುತ್ತಾರೆ.

ಕ್ರಮೇಣ ತನ್ನ ಭಾಷಿಕ ಅಸ್ತಿತ್ವಕ್ಕೆ ಎರವಾಗುವ ಪರಿಸ್ಥಿತಿಯ ಕಾರಣವನ್ನು ಶಂ.ಬಾ. ಜೋಷಿಯವರು ತಮ್ಮ ಸಂಶೋಧನಾ ಗ್ರಂಥಗಳಲ್ಲಿ ವಿವರಿಸಿಕೊಂಡಿದ್ದಾರೆ. ಅವರ ಪ್ರಕಾರ ಇದಕ್ಕೆ ಪ್ರಮುಖ ಕಾರಣ 'ಸಂಸ್ಕೃತೀಕರಣ'. ಸಂಸ್ಕೃತೀಕರಣದಿಂದಾಗಿ ಭಾಷಾ ವೈವಿಧ್ಯತೆ ಮತ್ತು ಸಂಸ್ಕೃತಿಯ ವಿಶಿಷ್ಟಾಂಶಗಳನ್ನೂ ಕನ್ನಡ ಭಾಷಾ ಸಮುದಾಯ ಕಳೆದುಕೊಳ್ಳತೊಡಗಿದ್ದುದರ ಬಗ್ಗೆ ಶಂ.ಬಾ. ಅವರು ತಮ್ಮ ಸಂಶೋಧನೆಯಲ್ಲಿ ಮುಖ್ಯವಾಗಿ ವಿಶ್ಲೇಷಿಸುತ್ತಾರೆ.

ಸಮಕಾಲೀನ ಕನ್ನಡ ಭಾಷೆಯ ಅಸ್ತಿತ್ವದ ಬಿಕ್ಕಟ್ಟಿನ ಸಂದರ್ಭದಲ್ಲಿ ಶಂ.ಬಾ.ಜೋಷಿ ಅವರ ಅನ್ವೇಷಣೆಯ ಅನೇಕ ಸೂಕ್ಷ್ಮ ವಿಚಾರಗಳನ್ನು ಮತ್ತೊಮ್ಮೆ ಪರಿಗಣನೆಗೆ ತೆಗೆದುಕೊಂಡು ಚಿಂತಿಸಬೇಕಾದ ಅಗತ್ಯವಿದೆ. ಕನ್ನಡ ಸಂದರ್ಭದಲ್ಲಿ ಭಾಷಾ ಬಳಕೆಯ ಯೋಜನೆಗಳು, ಕೌಶಲಗಳನ್ನು ನಿರ್ಮಾಣ ಮಾಡುವ ನೆಲೆಗಳನ್ನು ಕುರಿತಂತೆ ಮೂಲಭೂತವಾದ ಅರ್ಥಪೂರ್ಣ ಕೆಲಸ ನಡೆಯಬೇಕಾಗಿದೆ. ಭಾಷಾ ನೀತಿ ಮತ್ತು ಯೋಜನೆಗಳು, ಆಧುನೀಕರಣ ಸಂದರ್ಭದಲ್ಲಿ ಈ ಭಾಷೆಯನ್ನು ಕ್ರಿಯಾತ್ಮಕವಾಗಿ ಮಾಡುವ ನೆಲೆಗಳು–ಈ ಬಗ್ಗೆ ತೀವ್ರವಾಗಿ ಕ್ರಿಯಾಶೀಲವಾಗಬೇಕಾದ ಸಂದರ್ಭದಲ್ಲಿ ಶಂ.ಬಾ. ಜೋಷಿ ಅವರು ಭಾಷೆ ಮತ್ತು ಸಂಸ್ಕೃತಿ ಸಂದರ್ಭದಲ್ಲಿ ಎತ್ತಿದ್ದ ಸಮಸ್ಯೆಗಳು ಎಷ್ಟು ಪ್ರಮುಖವಾದವುಗಳು ಎನ್ನುವುದನ್ನು ಪರಿಶೀಲಿಸುವ ಅಗತ್ಯವಿದೆ.

ಷ. ಶೆಟ್ಟರ್ ಅವರ ಸಂಶೋಧನೆ ಪ್ರಾಚೀನ ಕರ್ನಾಟಕದ ಸಂಸ್ಕೃತಿ ಅನ್ವೇಷಣೆಯ ಸಂದರ್ಭವನ್ನು ಹೊಂದಿದ್ದರೂ, ಸಮಕಾಲೀನ ಬದುಕಿನ ಸಮಸ್ಯೆಯನ್ನು ಅರ್ಥಮಾಡಿಕೊಳ್ಳಲು ಎಷ್ಟು ಮಹತ್ವದ ಅಂಶಗಳನ್ನು ನೀಡಬಲ್ಲುದು ಎನ್ನುವ ತಾತ್ವಿಕ ತಳಹದಿಯ ಮೇಲೆ ರೂಪುಗೊಂಡಿರುತ್ತದೆ. ವರ್ತಮಾನದ ಸಂಸ್ಕೃತಿ ಕುರಿತು ಸಂಕುಚಿತ ವ್ಯಾಖ್ಯಾನಗಳು ರಾಜಕೀಯ ಪ್ರೇರಿತವೂ, ಅಸಹನೆಯ ಸ್ವರೂಪದವೂ ಆಗುತ್ತಿರುವ ಸಂದರ್ಭದಲ್ಲಿ ಮತ್ತು ಈ ವ್ಯಾಖ್ಯಾನಕ್ಕೆ

ಪ್ರಾಚೀನ ಸಂಸ್ಕೃತಿಯನ್ನು ತಿರುಚಿ ಬಳಸುತ್ತಿರುವ ಸಂದರ್ಭಗಳಲ್ಲಿ ಶೆಟ್ಟರ್ ಅವರ ಸಂಶೋಧನೆ ವಸ್ತುನಿಷ್ಠ ಪರಿಭಾವನೆಗೆ ಅವಕಾಶ ಮಾಡಿಕೊಡುತ್ತದೆ ಎನ್ನುವುದು ಪ್ರಮುಖವಾದ ಅಂಶವಾಗಿದೆ. ಇಂಗ್ಲಿಷ್‌ನಲ್ಲಿ ಕರ್ನಾಟಕ ಸಂಸ್ಕೃತಿ ಕುರಿತು ಅವರು ಬರೆದ ಗ್ರಂಥಗಳಲ್ಲಿ ಈ ಬಗ್ಗೆ ಅನೇಕ ಒಳನೋಟಗಳು ತಮಗೆ ಕಾಣಸಿಗುತ್ತವೆ. ಆಕರಗಳನ್ನು ಪರಸ್ಪರ ತುಲನೆ ಮಾಡುತ್ತ 'ಕನ್ನಡ ಸಂಸ್ಕೃತಿ' ಎಂಬ ವರ್ತಮಾನದ ಭಾವನಾತ್ಮಕ ಪರಿಕಲ್ಪನೆಯನ್ನು ನಿವಾರಿಸಿ, ಕರ್ನಾಟಕ ಸಂದರ್ಭದ ಒಳ ರಾಜಕೀಯಗಳು, ಸಂಘರ್ಷಗಳನ್ನು ವಿಶ್ಲೇಷಿಸುವ ಇವರ ಬರಹಗಳು ಸಂಸ್ಕೃತಿ ವಿಶ್ಲೇಷಣೆಗೆ ಸೂಕ್ಷ್ಮವಾದ ಒಳನೋಟಗಳನ್ನು ಕೊಡುತ್ತವೆ. 'ಕವಿರಾಜಮಾರ್ಗ ಮಂಥನ' ಲೇಖನ ಮಾಲಿಕೆಯ ಲೇಖನಗಳೂ* ಸಹ ಕನ್ನಡ-ತಮಿಳು ಸಂಬಂಧಗಳ ಬಗ್ಗೆ, ಕರ್ನಾಟಕದ ಗಡಿಯ ಬಗ್ಗೆ, ಕನ್ನಡ-ಸಂಸ್ಕೃತ ಸಂಬಂಧಗಳ ಬಗ್ಗೆ ಹೊಸ ನೋಟಗಳನ್ನು ಕೊಡುತ್ತವೆ. ಸಾಂಸ್ಕೃತಿಕ ಉತ್ಪ್ರೇಕ್ಷೆಗಳನ್ನು ನಿವಾರಿಸುವ ದಾರಿ ಎಂಥದ್ದು ಎನ್ನುವುದನ್ನು ಶೆಟ್ಟರ್ ಅವರ ಸಂಶೋಧನ ಮಾದರಿಯು ತೋರಿಸಿಕೊಡುತ್ತದೆ.

ಆರ್.ನರಸಿಂಹಾಚಾರ್ ಅವರ ಕರ್ನಾಟಕ ಕವಿಚರಿತೆಯ ಸಂಪುಟಗಳನ್ನು ಕನ್ನಡದ ಸಂಶೋಧನೆಯ ಅದ್ಭುತ ಸಾಧನೆ ಎಂದೇ ನಾನು ಭಾವಿಸಿದ್ದೇನೆ. ಮೂವತ್ತು ವರ್ಷಗಳ ಸತತ ಸಂಶೋಧನೆಯ ಫಲವಾಗಿ ಮೂರು ಸಂಪುಟಗಳು ಹೊರಬಂದಿವೆ. ಕನ್ನಡ ಸಾಹಿತ್ಯ ಪರಂಪರೆಯ ಅಗಾಧತೆಯನ್ನು, ವೈವಿಧ್ಯತೆಯನ್ನು ತೋರುವ ಮೊಟ್ಟ ಮೊದಲ ಪ್ರಮಾಣ ಗ್ರಂಥಗಳಿವು. ಸುಮಾರು ೧೧ಳಲ ಕವಿಗಳು, ಎರಡು ಸಾವಿರಕ್ಕೂ ಹೆಚ್ಚು ಸಾಹಿತ್ಯ ಕೃತಿಗಳು ಇಲ್ಲಿ ದಾಖಲಾಗಿವೆ. ಮುಂದೆ ಎಸ್.ಶಿವಣ್ಣನವರನ್ನು ಒಳಗೊಂಡು ಉಳಿದ ಅನೇಕರು ಮಾಡಿದ ಆಕರ ಗ್ರಂಥಗಳ ಅನ್ವೇಷಣೆಯ ಮಹತ್ವದ ಕೆಲಸಕ್ಕೆ ಆರ್.ನರಸಿಂಹಾಚಾರ್ಯರ ಈ ಕೃತಿ ಸಂಪುಟಗಳು ದಾರಿದೀಪದಂತಾದವು. ಶುದ್ಧ ಸಾಹಿತ್ಯ ಕೃತಿಗಳ ಆಚೆಗಿರುವ ಅನೇಕ ಜ್ಞಾನ ಶಾಖೆಗಳ ಸ್ವರೂಪವು ಕನ್ನಡದಲ್ಲಿ ತಳೆದ ಸ್ವರೂಪ ಯಾವುದು ಎನ್ನುವುದು ನಮಗೆ ಇನ್ನೂ ಸರಿಯಾಗಿ ದಕ್ಕದ ಸಂಗತಿಯಾಗಿದೆ. ಇಂಥ ಜ್ಞಾನ ಸೃಷ್ಟಿಯ ಸ್ವರೂಪ ಎಂಥದ್ದು ಎಂದು ತಿಳಿಯುವ ಅಧ್ಯಯನಗಳಿಗೆ ಈ ಸಂಪುಟಗಳು ಹಾಗೂ ಇಂಥ ಮಾದರಿಯ ಮುಂದಿನ ಪ್ರಯತ್ನಗಳು ಸಾಕಷ್ಟು ಸಾಮಗ್ರಿಗಳನ್ನು ಒದಗಿಸಬಲ್ಲುವು. ಆರ್.ನರಸಿಂಹಾಚಾರ್ ಅವರ ಸಂಶೋಧನೆಯ ವ್ಯಾಪ್ತಿಯು ಬಹು ಹರಹಾದದ್ದು. ಶಾಸನ, ಕಾವ್ಯಸಂಪಾದನೆ, ವ್ಯಾಖ್ಯಾನ ಗ್ರಂಥಸಂಪಾದನೆ, ಛಂದಸ್ಸು ಮೊದಲಾದ ವಿಷಯಗಳಲ್ಲಿ ಅಗಾಧ ಪಾಂಡಿತ್ಯವಿದ್ದ ಇವರು ಕನ್ನಡ ಜ್ಞಾನವನ್ನು ಹಾಗೂ ಅಗಾಧತೆಯನ್ನು ಪ್ರಮಾಣೀಕರಿಸುವಲ್ಲಿ ಇವೆಲ್ಲವನ್ನೂ ಬಳಸಿದರು.

ಆರ್.ನರಸಿಂಹಾಚಾರ್ ಅವರ ಈ ಅಗಾಧ ಪಾಂಡಿತ್ಯ ಮುಂದೆ ಕನ್ನಡ ಭಾಷೆ, ಸಾಹಿತ್ಯದ ಅಧ್ಯಯನಗಳಿಗೆ ವಿಭಿನ್ನ ಶಿಸ್ತುಗಳನ್ನು ರೂಪಿಸುವಲ್ಲಿ ಪ್ರಧಾನ ಪಾತ್ರವನ್ನು ವಹಿಸಿತು. ಮೈಸೂರು ವಿಶ್ವವಿದ್ಯಾಲಯದಲ್ಲಿ ಬಿ.ಎಂ.ಶ್ರೀ, ಎ.ಆರ್.ಕೃಷ್ಣಶಾಸ್ತ್ರಿ, ಟಿ.ಎಸ್.ವೆಂಕಣ್ಣಯ್ಯ, ಡಿ.ಎಲ್.ನರಸಿಂಹಾಚಾರ್, ತೀ.ನಂ.ಶ್ರೀ ಮೊದಲಾದ ಶಿಕ್ಷಕ-ಸಂಶೋಧಕರಿಂದ ಕನ್ನಡ ಅಧ್ಯಯನಕ್ಕೆ ಹೊಸ ಸೂಕ್ಷ್ಮಗಳು ರೂಪುಗೊಂಡವು. 'ಕನ್ನಡ ಕೈಪಿಡಿ'ಯ ಸಂಪುಟಗಳು ಆರ್.ನರಸಿಂಹಾಚಾರ್

---

* ಈಗ ಇವು 'ಶಂಗಂ ತಮಿಳಗಂ ಮತ್ತು ಕನ್ನಡ ನಾಡು ನುಡಿ' ಎಂಬ ಹೆಸರಿನಲ್ಲಿ ಪುಸ್ತಕ ರೂಪದಲ್ಲಿ ಸಂಕಲಿತವಾಗಿವೆ – ಸಂ.

ಅವರ ಸಂಶೋಧನೆಯ ಒಳನೋಟಗಳನ್ನು ವಿಭಿನ್ನವಾಗಿ ಮುಂದುವರಿಸಿರುವುದಕ್ಕೆ ಸಾಕ್ಷಿಯಾಗಿವೆ. ಕನ್ನಡ ಭಾಷೆ, ಅಲಂಕಾರ, ಛಂದಸ್ಸು ಇವುಗಳನ್ನು ಕುರಿತ ಹೊಸ ನೋಟಗಳು ಇಲ್ಲಿ ಪ್ರಾಪ್ತವಾದವು. ಗ್ರಂಥಸಂಪಾದನೆ, ಸಾಹಿತ್ಯ ಚರಿತ್ರೆ, ಭಾಷಾಚರಿತ್ರೆ, ಕಾವ್ಯ ಮೀಮಾಂಸೆಯಂಥ ಸಾಹಿತ್ಯ ಅಧ್ಯಯನಕ್ಕೆ ಪೂರಕವಾದ ಶಿಸ್ತುಗಳನ್ನು ಕ್ರಮಬದ್ಧವಾಗಿ ರೂಪಿಸುವ ಕೆಲಸ ಪ್ರಾರಂಭವಾಯಿತು. ಕನ್ನಡ ಸಾಹಿತ್ಯ ಸಂಸ್ಕೃತಿಗೆ ಒಂದು ದೇಶಕಾಲ ಬದ್ಧತೆಯನ್ನು ರೂಪಿಸುವ ದೃಷ್ಟಿಯಿಂದ ಈಗ ಕವಿಗಳ ದೇಶ, ಕಾಲ, ಮತಗಳ ನಿರ್ದಿಷ್ಟತೆಗಳನ್ನು ರೂಪಿಸುವ ಸಂಶೋಧನೆಗಳು ಮುಖ್ಯ ವಾಗ್ವಾದಗಳಾಗಿ ಪ್ರಕಟಗೊಂಡವು. ಗೋವಿಂದ ಪೈ, ಎ.ವೆಂಕಟಸುಬ್ಬಯ್ಯ, ರಾಜಪುರೋಹಿತ ಮುಂತಾದವರು ಮುಖ್ಯ ಪ್ರಯತ್ನಗಳಿಗೆ ಕೈಹಾಕಿದರು.

ಫ.ಗು.ಹಳಕಟ್ಟಿಯವರ *ವಚನ ಸಂಪುಟಗಳ* ಸಂಪಾದನೆ ಕನ್ನಡಕ್ಕೆ ವಚನಕಾರರನ್ನು ಪರಿಚಯಿಸಿದ ಮೊದಲ ಸಂಪಾದನ ಗ್ರಂಥಗಳು. ಜನಸಮುದಾಯದ ಬಾಯಿಯಲ್ಲಿ ಧಾರ್ಮಿಕ ಸಂವೇದನೆಯ ಭಾಗವಾಗಿ ಇದ್ದ ವಚನಗಳನ್ನು ಹಳ್ಳಿಹಳ್ಳಿಗೆ ಹೋಗಿ ತಾಳೆಗರಿಗಳನ್ನು ಸಂಪಾದಿಸಿ ಮುದ್ರಣದಲ್ಲಿ ವಚನಗಳನ್ನು ಸಾಹಿತ್ಯ ವಲಯದಲ್ಲಿ ಪ್ರತಿಷ್ಠಾಪಿಸಿದ ಕೆಲಸವನ್ನು ಹಳಕಟ್ಟಿಯವರು ಮಾಡಿದರು. ಬಸವ, ಅಲ್ಲಮ, ಸಿದ್ಧರಾಮ, ಚನ್ನಬಸವಣ್ಣ ಮುದ್ರಣದ ಮೂಲಕ ಕನ್ನಡಕ್ಕೆ ಪರಿಚಯವಾದದ್ದು ಇವರಿಂದ. ವಚನಶಾಸ್ತ್ರ ಸಾರ ಮತ್ತು ಶಿವಶರಣರ ಚರಿತ್ರೆಗಳ ಪ್ರಕಟಣೆಯ ಮೂಲಕ ನಡುಗನ್ನಡದ ಸಾಹಿತ್ಯ-ಸಂಸ್ಕೃತಿಯ ಸಂವೇದನೆಯು ಹೊಸಗಾಲಕ್ಕೆ ಪರಿಚಯವಾಗುವಂತೆ ಮಾಡಿದವರು ಹಳಕಟ್ಟಿಯವರು. ಆ ಕಾರಣದಿಂದ ಕನ್ನಡದ 'ವಚನ ಪಿತಾಮಹ' ಎನ್ನಿಸಿಕೊಂಡವರು. ಶಿ.ಶಿ.ಬಸವನಾಳ, ಎಲ್.ಬಸವರಾಜು ಅವರ ಮುಂದಿನ ವಚನ ಸಂಪಾದನೆಯ ಅರ್ಥಪೂರ್ಣ ಪ್ರಯತ್ನಗಳಿಗೆ ಬುನಾದಿ ಹಾಕಿದ ಘಟನೆ ಹಳಕಟ್ಟಿಯವರೆಂದೇ ಹೇಳಬೇಕು.

ಶಾಸನ ತಜ್ಞರಾದ **ಎಂ.ಎಚ್.ಕೃಷ್ಣ** ಅವರ '*ಅತ್ಯಂತ ಪ್ರಾಚೀನ ಕನ್ನಡ ಶಾಸನ*' ಲೇಖನವನ್ನು ಕನ್ನಡ ಸಂಶೋಧನೆಯ ಪ್ರಮುಖ ಘಟನೆಯೆಂದೇ ನಾನು ತಿಳಿದಿದ್ದೇನೆ. ಇಲ್ಲಿ ಸೂಚಿಸಲಾಗಿರುವ ಉಳಿದ ಒಂಭತ್ತು ಸಂಶೋಧಕರ ಕೃತಿಗಳನ್ನು ಪ್ರಾತಿನಿಧಿಕವಾಗಿ ಇಲ್ಲಿ ಸೂಚಿಸಲಾಗಿದ್ದರೂ, ಕೃಷ್ಣ ಅವರ ಲೇಖನವನ್ನು ಮಾತ್ರ ಇಲ್ಲಿ ಆಯ್ಕೆ ಮಾಡಿಕೊಂಡಿರುವುದಕ್ಕೆ ಕಾರಣಗಳು ಸ್ಪಷ್ಟವಾಗಿವೆ. 'ಹಲ್ಮಿಡಿ ಶಾಸನ'ವನ್ನು ಕುರಿತಂತೆ ಕೃಷ್ಣ ಅವರು ಬರೆದ ಈ ಲೇಖನ, ಕನ್ನಡ ಭಾಷೆಯ ಪ್ರಪ್ರಥಮ ಬರಹದ ದಾಖಲೆಯೆನ್ನುವ ಮಹತ್ವದ ಸಂಶೋಧನೆಯನ್ನು ಅನ್ವೇಷಿಸಿದೆ. ಇಷ್ಟೇ ಆಗಿದ್ದರೆ ಈ ಲೇಖನವು ಸೀಮಿತವಾದ ಕನ್ನಡ ಭಾಷೆಯ ಬರಹದ ಪ್ರಾಚೀನ ದಾಖಲೆಯ ಅನ್ವೇಷಣೆಯೆಂದು ಮಾತ್ರ ಗುರುತಿಸಲ್ಪಡುತ್ತಿತ್ತು. ಆದರೆ ಕೃಷ್ಣ ಅವರು ಈ ಶಾಸನದ ಅನ್ವೇಷಣೆ ಮತ್ತು ವಿಶ್ಲೇಷಣೆಯಲ್ಲಿ ಕನ್ನಡ ಭಾಷೆಯ ಸ್ವರೂಪದ ಬಗ್ಗೆ ಸೂಕ್ಷ್ಮ ಒಳನೋಟಗಳನ್ನು ನೀಡಿ. ಕನ್ನಡ ಭಾಷೆಯ ಸ್ಥಿತ್ಯಂತರ ಸ್ವರೂಪಗಳನ್ನು ಗುರುತಿಸುತ್ತಾರೆ. ಕನ್ನಡ ಭಾಷೆಯ ಒಂದು ಹಂತದ ಪದದ ಉಚ್ಚಾರದ ಸ್ವರೂಪವನ್ನೂ, ಉಚ್ಚಾರ ಮತ್ತು ಬರಹದ ನಡುವಣ ಸಂಬಂಧವನ್ನೂ ಇಲ್ಲಿ ಗುರುತಿಸಲಾಗಿದೆ. ಕನ್ನಡವು ಈ ಕಾಲಕ್ಕಾಗಲೇ ಬಲಿತ, ಬಲವಾಗಿ ರೂಢಿಯಲ್ಲಿದ್ದ ಭಾಷೆಯಾಗಿತ್ತು ಎನ್ನುವುದನ್ನು ಕೃಷ್ಣ ಅವರು ತೋರಿಸಿದ್ದಾರೆ. ಈ ಅಂಶಗಳು ವಾಸ್ತವವಾಗಿ ಗೋವಿಂದ ಪೈ ಅವರ ಗ್ರೀಕ್ ಪ್ರಹಸನದಲ್ಲಿ ಕನ್ನಡದ ಪದಗಳನ್ನು ಕುರಿತ ಸಂಶೋಧನೆಯ ಕಡೆಗೂ, ನರಸಿಂಹಾಚಾರ್ ಅವರು 'ಇಸಿಲ' ಪದದ

ಪ್ರಯೋಗದ ಕನ್ನಡತ್ವವನ್ನು ಹೇಳುವ ಅಂಶದ ಕಡೆಗೂ, ಹಾಗೂ ಇತ್ತೀಚೆಗೆ ಶೆಟ್ಟರ್ ಅವರು ಬರೆದ ಕನ್ನಡ ಪದ ಬಳಕೆಯ ಸ್ವರೂಪಗಳು, ತಮಿಳು–ಕನ್ನಡ ಗಡಿ ನಡುವಣ ಬುಡಕಟ್ಟುಗಳಲ್ಲಿ ನಿರ್ವಚಿತವಾದ ಬಗೆಯ ಸಂಶೋಧನೆಯ ಕಡೆಗೂ ಮತ್ತೊಮ್ಮೆ ಗಮನ ಹರಿಸುವಂತೆ ಮಾಡುತ್ತವೆ.

ಎಂ.ಚಿದಾನಂದಮೂರ್ತಿಯವರ *'ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ'* ಕನ್ನಡದ ಸಂಸ್ಕೃತಿ ಸಂಶೋಧನೆಯ ಸ್ವರೂಪದ ಮೇಲೆ ಅನೇಕ ದಶಕಗಳು ಗಾಢವಾಗಿ ಪ್ರಭಾವ ಬೀರಿದ ಸಂಶೋಧನೆ. ಶಾಸನಗಳನ್ನು ಅದುವರೆಗೆ ಕರ್ನಾಟಕದ ರಾಜಮನೆತನಗಳ ವಿವರಗಳ ಅಧ್ಯಯನಕ್ಕಾಗಿ ಬಳಸುತ್ತಿದ್ದ ಮಾರ್ಗವನ್ನು ಬಿಟ್ಟು ಸಾಂಸ್ಕೃತಿಕ ಅಧ್ಯಯನಕ್ಕೆ ಬಳಸಿಕೊಂಡ ಮೊದಲ ಪ್ರಮುಖ ಶೋಧನ ಗ್ರಂಥ ಇದು. 'ಸಂಸ್ಕೃತಿ' ಎನ್ನುವ ಪದಕ್ಕೆ ಈಗ ಇರುವ ಅರ್ಥವ್ಯಾಪ್ತಿ, ವ್ಯಾಖ್ಯಾನಗಳು ಭಿನ್ನವಾಗಿವೆ. ಆ ದೃಷ್ಟಿಯಿಂದ ಚಿದಾನಂದಮೂರ್ತಿಯವರ ಶೋಧವು ಸಾಂಪ್ರದಾಯಕ ನೆಲೆಯದ್ದು ಅನ್ನಿಸುವುದಾದರೂ, ಪ್ರಾಚೀನ ಕರ್ನಾಟಕದ ಬದುಕಿನ ವಿವಿಧ ನೆಲೆಗಳನ್ನು ಅನ್ವೇಷಿಸುವ ಮೊದಲ ಪ್ರಮುಖ ಗ್ರಂಥಗಳಲ್ಲಿ ಇದು ಮೊದಲನೆಯದಾಯಿತು. ಕನ್ನಡ ಸಂಸ್ಕೃತಿಯ ವಿವಿಧ ನೆಲೆಗಳ ಅಧ್ಯಯನ ಮಾಡಬಯಸುವ ಬಹುಪಾಲು ಸಂಶೋಧಕರು ಶಾಸನಗಳನ್ನು ಆಕರವನ್ನಾಗಿ ಮಾಡಿಕೊಂಡಾಗ ಚಿದಾನಂದಮೂರ್ತಿಯವರ ಸಂಶೋಧನಾ ವಿಧಾನದ ಮಾದರಿಯನ್ನು ಅನುಸರಿಸಿದರು. ಈ ಮಾದರಿಯ ಒಂದು ಗುಣಾತ್ಮಕ ಅಂಶವೆಂದರೆ, ಪ್ರಾಚೀನ ಕರ್ನಾಟಕದ ಅಸಂಖ್ಯ ಜೀವನ ಸ್ವರೂಪ, ಆಚರಣೆ, ಧಾರ್ಮಿಕ ಪರಿಕಲ್ಪನೆಗಳನ್ನು ಕುರಿತಂತೆ ಅಗಾಧ ಮಾಹಿತಿ, ವಿವರಗಳು ಲಭ್ಯವಾದದ್ದು. ಈ ವಿಧಾನದ ಒಂದು ಮಿತಿಯೆಂದರೆ ಶಾಸನಗಳನ್ನು ಕೇವಲ ಸ್ಥಿತ ದಾಖಲೆಗಳು ಎಂದು ತಿಳಿದಿದ್ದರಿಂದ, ಪರಸ್ಪರ ವಿವಿಧ ಶಾಸನಗಳು ಮತ್ತು ಉಳಿದ ಅಭಿವ್ಯಕ್ತಿ ಕ್ರಮಗಳ ನಡುವಣ ಸಂಬಂಧದಲ್ಲಿ ಜೀವನವನ್ನು ಒಂದು ಪ್ರಕ್ರಿಯೆಯ, ಚಲನಶೀಲ ಸ್ವರೂಪದ್ದೆಂದು ಭಾವಿಸದೇ ಹೋಗಿರುವುದು. ಹೀಗಾಗಿ ಲೋಕ ಬದುಕಿನ ಕ್ರಮಗಳು ಬದಲಾಯಿಸುತ್ತ, ಸಂಘರ್ಷಿಸುತ್ತ, ವರ್ತಮಾನಕ್ಕೆ ಬಂದು ನಿಲ್ಲುವ ಬಗೆಯನ್ನು ಈ ಮಾದರಿಯಲ್ಲಿ ಹಿಡಿಯಲಾಗಲಿಲ್ಲ. ಆದರೆ ಈ ಮಾದರಿ ಮೀರಿದ ಸಂಶೋಧನ ಬರವಣಿಗೆಗಳು ಇಲ್ಲವೇ ಇಲ್ಲವೆನ್ನುವಷ್ಟರ ಮಟ್ಟಿಗೆ ಚಿದಾನಂದಮೂರ್ತಿಯವರ ಕೃತಿ ಗಾಢ ಪ್ರಭಾವ ಬೀರಿತು.

ಜಿ.ಶಂ.ಪರಮಶಿವಯ್ಯ ಅವರ *'ದಕ್ಷಿಣ ಕರ್ನಾಟಕ ಜನಪದ ಕಾವ್ಯಪ್ರಕಾರಗಳು'*, ಚಿದಾನಂದಮೂರ್ತಿಯವರ ಸಂಶೋಧನೆಗೆ ಪರ್ಯಾಯ ಆಯಾಮವನ್ನು ತೋರುವ ಕೃತಿಯಾಗಿದೆ. ಕನ್ನಡದಲ್ಲಿ ಮೊದಲ ಬಾರಿಗೆ ಕನ್ನಡ ಜನಪದ ಪ್ರಪಂಚದ ಅನೇಕ ಜಾತಿ, ಉಪಜಾತಿಗಳ ವ್ಯಕ್ತಿ, ಅಭಿವ್ಯಕ್ತಿ, ಸಂಪ್ರದಾಯ, ಆಚರಣೆ, ಕಲೆ ಮುಂತಾದ ವಿಸ್ತಾರವಾದ ಪ್ರಪಂಚವನ್ನು ತಮ್ಮ ಸಂಶೋಧನೆಯಲ್ಲಿ ಜೀಶಂಪ ಅವರು ಗುರುತಿಸಿದ್ದಾರೆ. ದಕ್ಷಿಣ ಕರ್ನಾಟಕದ ಕರಪಾಲದವರು, ಕಂಸಾಳೆ, ನೀಲಗಾರರು, ಚೌಡಿಕೆಯವರು, ಗಣೆಯವರು, ಕಿನ್ನರಿಜೋಗಿಗಳು, ಹೆಳವರು, ಗೊಂದಲಿಗರು, ತಂಬೂರಿಯವರು, ಗೊರವರು, ತೆಲುಗು ಜಂಗಮರು, ದೊಂಬಿದಾಸರು–ಹೀಗೆ ಅನೇಕ ಜಾತಿ ಸಮುದಾಯಗಳು ಹೊಂದಿದ್ದ ಸಾಂಸ್ಕೃತಿಕ ಅನನ್ಯತೆಯನ್ನು ಬೆಳಕಿಗೆ ತಂದವರು ಜೀಶಂಪ. ಮಲೆಯ ಮಾದೇಶ, ಮಂಟೇಸ್ವಾಮಿ

ಪರಂಪರೆಯ ಬಗ್ಗೆ, ಚೌಡಿಕೆ ಸಂಪ್ರದಾಯ, ಕಾಡು ಗೊಲ್ಲರ ಜುಂಜಪ್ಪನ-ಸಂಪ್ರದಾಯಗಳನ್ನು ದೀರ್ಘವಾಗಿ ಪರಿಚಯಿಸಿದ್ದಲ್ಲದೇ, ಜನಪದದ ಲೌಕಿಕ ಕಾವ್ಯ ಪರಂಪರೆಯಲ್ಲಿ ಐತಿಹಾಸಿಕ, ಪೌರಾಣಿಕ, ಅಭಿವ್ಯಕ್ತಿಗಳನ್ನು ಗುರುತಿಸಿದ್ದಾರೆ. ಜನಪದವು ಇತಿಹಾಸ ಮತ್ತು ಪುರಾಣ ಕಲ್ಪನೆಗಳನ್ನು ಪರಿಭಾವಿಸುವ ಪರಿ ಹೇಗೆ ಭಿನ್ನ ಎನ್ನುವುದು ಇಲ್ಲಿ ಸೂಕ್ಷ್ಮವಾಗಿ ವ್ಯಕ್ತವಾಗುತ್ತದೆ. ಕನ್ನಡ ಸಂಶೋಧನೆಯಲ್ಲಿ ಶಿಷ್ಟ ಪರಿಕಲ್ಪನೆಗೆ ಪರ್ಯಾಯವಾದ ಸ್ವರೂಪ ಏನಿರಬಹುದು. ಎನ್ನುವುದರ ಹುಡುಕಾಟಗಳು ಅನೇಕ ಬಗೆಯಲ್ಲಿ ಮುಂದೆ ನಡೆದವು. ಉಪ ಸಂಸ್ಕೃತಿಯ ಪರಿಕಲ್ಪನೆಗಳಾಗಲೀ, ಜನಪದ ರಾಮಾಯಣ, ಭಾರತ ಪರಂಪರೆಗಳಾಗಲೀ-ಕನ್ನಡದ ಚಿಂತನೆಗೆ ದಕ್ಕಿರುವುದರ ಹಿಂದೆ ಜೀಶಂಪ ಅವರ ಸಂಶೋಧನೆಯ ಸ್ವರೂಪವು ಸೂಕ್ಷ್ಮವಾಗಿ ಕೆಲಸ ಮಾಡಿದೆ ಎಂದೇ ನನ್ನ ಭಾವನೆ. ಮಂಟೇಸ್ವಾಮಿ ಕಾವ್ಯವಾಗಲೀ, ಮಾದೇಶ್ವರನ ಕಾವ್ಯವಾಗಲೀ-ಜುಂಜಪ್ಪನ ಕಥೆಯಾಗಲೀ-ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆಯಲ್ಲಿ ಮುಂದೆ ಗಮನಾರ್ಹ ಪಾತ್ರ ವಹಿಸಿದವು ಎನ್ನುವುದನ್ನು ಗುರುತಿಸಿದಾಗ, ಜೀಶಂಪ ಅವರ ಸಂಶೋಧನೆಯು ಇಟ್ಟ ಹೆಜ್ಜೆ ಎಷ್ಟು ಮುಖ್ಯವಾದದ್ದು ಎನ್ನುವುದು ಗೊತ್ತಾಗುತ್ತದೆ.

ಡಿ.ಎನ್.ಶಂಕರಭಟ್ ಅವರ ಸಂಶೋಧನೆಯು ಕನ್ನಡ ಭಾಷೆಯ ಪ್ರಸ್ತುತತೆಯನ್ನು ಪರಿಣಾಮಕಾರಿಯಾಗಿ ರೂಪುಗೊಳಿಸುವುದು ಹೇಗೆ ಎನ್ನುವುದರ ಕಡೆಗೆ ಮಹತ್ವದ ಕೆಲವು ಅಂಶಗಳನ್ನು ಪ್ರತಿಪಾದಿಸುತ್ತದೆ. *'ಕನ್ನಡಕ್ಕೆ ಬೇಕು ಕನ್ನಡದ್ದೇ ವ್ಯಾಕರಣ'* ಎನ್ನುವ ಕೃತಿಯ ಮೂಲಕ ಕನ್ನಡ ಭಾಷೆ, ವ್ಯಾಕರಣ ನಿಯಮಗಳು ಆ ಭಾಷೆಯದ್ದಲ್ಲದ ಪರ ನಿಯಮಗಳಿಗೆ ತುತ್ತಾಗಿ ತನ್ನ ಪ್ರಸ್ತುತತೆಯನ್ನು ಕಳೆದುಕೊಳ್ಳುತ್ತಿರುವುದರ ಬಗ್ಗೆ ಗಾಢವಾಗಿ ಚಿಂತಿಸಿದ್ದಾರೆ. ಕನ್ನಡ ಭಾಷೆಯ ಅಧ್ಯಯನ ಮತ್ತು ಗ್ರಹಿಕೆಗಳಲ್ಲಿ ಹೊಸ ತಾತ್ವಿಕತೆಯನ್ನು ಮಂಡಿಸುವಲ್ಲಿ ತೊಡಗಿರುವ ಏಕಮೇವ ಸಂಶೋಧಕರಾಗಿ ಇವರು ಕಾಣುತ್ತಿದ್ದಾರೆ. ಸಂಸ್ಕೃತಭಾಷೆಯ ರಚನೆಗೆ ಅನುಗುಣವಾಗಿ ಇರುವ ವ್ಯಾಕರಣದ ನಿಯಮಗಳನ್ನು ಕನ್ನಡಕ್ಕೆ ಅನ್ವಯಿಸಿ ವಿಶಾಲ ಸಮುದಾಯದ ಬಳಕೆಯಲ್ಲಿನ ಭಾಷೆಯ ಪ್ರಸ್ತುತತೆಯನ್ನು ಇಲ್ಲದಂತೆ ಮಾಡಿದ್ದೇವೆ ಎನ್ನುವುದು ಶಂಕರಭಟ್ಟರ ಮುಖ್ಯ ಚಿಂತನೆ. ಕನ್ನಡ ಭಾಷೆಯ ಸ್ವರೂಪವನ್ನು ಕುರಿತ ಇವರ ವಿಶ್ಲೇಷಣೆ ಭಾಷೆಯ ಸ್ವರೂಪವನ್ನು ತೆರೆದುಕೊಂಡು ಹೋಗುತ್ತದೆ. ಇಪ್ಪತ್ತನೇ ಶತಮಾನದ ಮೊದಲ ಭಾಗದ ವಿದ್ವತ್ ಪರಂಪರೆಯು ಭಾಷೆ, ವ್ಯಾಕರಣ ಅಧ್ಯಯನದಲ್ಲಿ ಸಂಸ್ಕೃತವನ್ನು ಅನುಸರಿಸಿದ ಮಾದರಿಯನ್ನು ಶಂಕರಭಟ್‌ರವರು ಪ್ರಶ್ನಿಸುತ್ತಾರೆ.

'ಕನ್ನಡ ಬರಹವನ್ನು ಸರಿಪಡಿಸೋಣ' ಎಂಬ ಸಂಶೋಧನ ಗ್ರಂಥವು, ಇಂದಿನ ಇವರ ಆಲೋಚನೆಗಳನ್ನೇ ಮುಂದುವರಿಸಿ, ಕನ್ನಡ ಭಾಷೆಯ ಮೇಲಿರುವ ಸಂಸ್ಕೃತ ನಿಯಂತ್ರಣವನ್ನು ತಪ್ಪಿಸಬೇಕಾದರೆ ಮಾಡಬೇಕಾದ ಕೆಲಸವೇನು ಎನ್ನುವುದನ್ನು ಚಿಂತಿಸಿದ್ದಾರೆ. ಮಾತು ಮತ್ತು ಬರಹದ ನಡುವೆ ಕಂದರವನ್ನು ತಪ್ಪಿಸಬೇಕು ಎನ್ನುವುದು ಇವರ ಮುಖ್ಯ ವಾದ. ಮಾತಿನ ಹಾಗೆ ಬರಹವೂ ಇರಬೇಕು ಎನ್ನುವ ಚಿಂತನೆಯನ್ನು ಇವರು ಈ ಕೃತಿಯಲ್ಲಿ ಮಾಡಿದ್ದಾರೆ. ಶಂಕರಭಟ್ಟರ ಈ ಸಂಶೋಧನ ಕೃತಿಗಳಲ್ಲಿ, ಬಳಕೆಯಿಂದ ದೂರವಾದ ಕನ್ನಡವನ್ನು ಬಳಸುವುದರ ಬಗ್ಗೆ ಇರುವ ವಿರೋಧಕ್ಕೆ ಇರುವ ತಾತ್ವಿಕ ಕಾರಣಗಳು ಬಹಳ ದೊಡ್ಡವು. ವರ್ತಮಾನದಲ್ಲಿ ಕನ್ನಡವು ಕ್ರಿಯಾಶೀಲವಾಗಬೇಕಾದ ಅನೇಕ ತಾತ್ವಿಕ ಹುನ್ನಾರಗಳನ್ನು ಇದು ಮಾಡುತ್ತಲಿದೆ.

ಇಂಥ ಪ್ರಯತ್ನದ ಅನೇಕ ನೆಲೆಗಳು ಕೆ.ವಿ.ನಾರಾಯಣ ಅವರ ಭಾಷೆಯನ್ನು ಕುರಿತ ಲೇಖನಗಳಲ್ಲಿ ಮುಖ್ಯವಾಗಿ ಸಂವಾದಕ್ಕೆ ಗುರಿಯಾಗಿರುವುದನ್ನು ಗಮನಿಸಬೇಕು. ಕೆ.ವಿ.ನಾರಾಯಣ ಅವರ 'ಕನ್ನಡ ಜಗತ್ತು: ಅರ್ಧ ಶತಮಾನ' ಕೃತಿಯು ಶಂಕರಭಟ್ಟರ ತಾತ್ವಿಕತೆಯನ್ನು ಭಿನ್ನ ಆಯಾಮಗಳಲ್ಲಿ ಮುಂದುವರಿಸಿದೆ; ಅದಕ್ಕೊಂದು ವಿಶಾಲ ಭಿತ್ತಿಯನ್ನು ನಿರ್ಮಾಣ ಮಾಡಿದೆ. ಸಂಸ್ಕೃತ-ಇಂಗ್ಲಿಷ್-ಕನ್ನಡ ಸಂಬಂಧಗಳಲ್ಲಿ ಕನ್ನಡ ಭಾಷೆ ಕ್ರಿಯಾಶೀಲಗೊಳ್ಳಲು ಮಾಡಬೇಕಾದ ಪ್ರಯತ್ನಗಳೇನು ಎನ್ನುವುದು ಇಲ್ಲಿ ಚಿಂತನೆಗೆ ಗುರಿಯಾಗಿದೆ. ಶಿಕ್ಷಣ ನೀತಿ ಮತ್ತು ಯೋಜನೆಗಳು ಇದುವರೆಗೆ ಹೇಗೆ ನಿಷ್ಫಲವಾಗಿವೆ ಮತ್ತು ಮುಂದೆ ಅವು ಹಿಡಿಯಬೇಕಾದ ನೆಲೆಗಳೇನು ಎನ್ನುವುದು ಚರ್ಚೆಗೊಂಡಿದೆ.

ಒಟ್ಟಾರೆ ಇಲ್ಲಿ ಗುರುತಿಸಲಾದ ಹತ್ತು ಸಂಶೋಧನೆ, ಸಂಶೋಧಕರಲ್ಲಿ ಬಹುಪಾಲು ಇಪ್ಪತ್ತನೇ ಶತಮಾನದ ಪ್ರಾರಂಭ ಮತ್ತು ಮಧ್ಯಭಾಗಕ್ಕೆ ಸೇರಿದವು/ಸೇರಿದವರು. ಇಂದಿಗೂ ನಮ್ಮ ಸಂಶೋಧನೆಯು ಆಗ ರೂಪಿಸಿದ ಅನೇಕ ತಾತ್ವಿಕತೆಯನ್ನು ಬಿಟ್ಟುಕೊಡಲಾಗದಷ್ಟು ಪ್ರಭಾವವನ್ನು ಬೀರಿರುವಂಥವು. ಈ ಪರಂಪರೆಯನ್ನು ಹಾಗೆ ಮುಂದುವರಿಸಿದ ಅಸಂಖ್ಯಾತ ಸಂಶೋಧಕ, ವಿದ್ವಾಂಸರನ್ನು ಹೆಸರಿಸಿದರೆ ಅದು ಒಂದೆರಡು ಪುಟಗಳಷ್ಟಾಗುತ್ತದೆ. ಗಮನೀಯ ಕೆಲಸ ಮಾಡಿದವರಲ್ಲಿ ಬಸವನಾಳ, ಟಿ.ಎಸ್.ವೆಂಕಣ್ಣಯ್ಯ, ಕಲಬುರ್ಗಿ, ಗೋವಿಂದ ಪೈ, ಎಲ್.ಬಸವರಾಜು, ಡಿ.ಎಲ್.ಎನ್, ಎ.ಆರ್.ಕೃಷ್ಣಶಾಸ್ತ್ರಿ, ಕಪಟರಾಳ ಕೃಷ್ಣರಾವ್, ಮುಳಿಯ ತಿಮ್ಮಪ್ಪಯ್ಯ, ಶ್ರೀನಿವಾಸ ಹಾವನೂರು, ಹಂಪ ನಾಗರಾಜಯ್ಯ, ಶಿವಣ್ಣ, ವೆಂಕಟಾಚಲಶಾಸ್ತ್ರಿ- ಹೀಗೆ ಹತ್ತು ಹಲವು ಜನ ಕನ್ನಡ ಸಂಸ್ಕೃತಿ, ಪರಂಪರೆಯನ್ನು ಇಪ್ಪತ್ತನೆಯ ಶತಮಾನದ ಸಂಶೋಧನೆಯ ಮಾರ್ಗದಲ್ಲಿ ವಿವಿಧ ವಿಭಾಗಗಳಲ್ಲಿ ಕಟ್ಟಿಕೊಟ್ಟಿದ್ದಾರೆ. ಹೊಸ ಅರ್ಥಗಳನ್ನೂ, ವಿಚಾರಗಳನ್ನೂ ಬಿಂಬಿಸಿದ್ದಾರೆ.

ಈಗ ಕನ್ನಡ ಸಂಶೋಧನೆಯ ತಾತ್ವಿಕ ನೆಲೆಗಳು ಸಂಪೂರ್ಣವಾಗಿ ಭಿನ್ನವಾದ ನೆಲೆಯನ್ನು ಹುಡುಕಹತ್ತಿವೆ. ಸಂಸ್ಕೃತ ಕಾವ್ಯ ಮೀಮಾಂಸೆಯ ಪ್ರಭುತ್ವವನ್ನು ನಿಶ್ಚಯವಾಗಿ ಈಗ ಪ್ರಶ್ನಿಸಲಾಗುತ್ತಿದೆ. ಕನ್ನಡ ಕಾವ್ಯ ಮೀಮಾಂಸೆಗೆ ದತ್ತವಾದ ಲಕ್ಷಣಗಳು ಯಾವುವು? ದೇಶಿ ಭಾಷಾ ಮೀಮಾಂಸೆಯ ನೆಲೆಯಲ್ಲಿ ಅರ್ಥಪೂರ್ಣ ಸಂಬಂಧಗಳನ್ನು ಹುಡುಕಲು ಸಾಧ್ಯವೇ? ಈ ಬಗೆಯ ಚಿಂತನೆಗಳು ರೂಪುಗೊಳ್ಳುತ್ತಿವೆ.

'ಸಾಹಿತ್ಯ ಚರಿತ್ರೆ' ಎಂಬ ಇಪ್ಪತ್ತನೆಯ ಶತಮಾನದ ಪ್ರಮುಖ ಪರಿಕಲ್ಪನೆಯನ್ನು ಈಗ ಪ್ರಶ್ನಿಸಲಾಗುತ್ತಿದೆ. ಸಾಹಿತ್ಯವನ್ನು ವರ್ತಮಾನದ ತುರ್ತಿನಲ್ಲೇ ಎಲ್ಲ ಕಾಲದಲ್ಲೂ ಗಮನಿಸುವುದರಿಂದ 'ಚರಿತ್ರೆ' ಎಂಬ ಪರಿಕಲ್ಪನೆಯೇ 'ಸುಳ್ಳು' ಎನ್ನುವುದು ಹೊಸ ಗ್ರಹಿಕೆ. ಸಾಹಿತ್ಯ, ಸಂಸ್ಕೃತಿಯ ಗ್ರಹಿಕೆಯಲ್ಲಿ ಪ್ರಧಾನ ಮತ್ತು ಕೇಂದ್ರ ಪರಿಕಲ್ಪನೆಗಳು, ಉಳಿದ ಅತ್ಯಂತ ಮುಖ್ಯವಾದವುಗಳನ್ನು ಪರಿಧಿಗೆ ಸರಿಸಿವೆ ಎನ್ನುವುದೂ ಹೊಸ ಚಿಂತನೆಯ ಮುಖ್ಯ ಲಕ್ಷಣ. ಹೀಗಾಗಿ ಅನೇಕ ಸಾಹಿತ್ಯಕ, ಸಾಂಸ್ಕೃತಿಕ ನಾಯಕರುಗಳು ಎಂದು ಭಾವಿಸಿದ ಪರಿಕಲ್ಪನೆ 'ಹುಸಿ' ಎಂದು ಗ್ರಹಿಸಲಾಗುತ್ತಿದೆ.

'ಸಂಸ್ಕೃತಿ' ವ್ಯಾಖ್ಯೆಯಲ್ಲಿಯೂ ಅಗಾಧ ಪರಿವರ್ತನೆಗಳು ಕನ್ನಡ ಚಿಂತನೆಯಲ್ಲಿ ರೂಪುಗೊಳ್ಳುತ್ತಿವೆ. ಪ್ರಧಾನಕ್ಕೆ ವಿರುದ್ಧವಾಗಿ 'ಅಧೀನ' ಸಂಸ್ಕೃತಿಯನ್ನು ಅರಿಯುವ ಕಲ್ಪನೆಯಿಂದ

ಹಿಡಿದು, ಸಂಸ್ಕೃತಿಯು ಏಕಘನಾಕೃತಿಯ ಸ್ವರೂಪದ್ದಲ್ಲ;ಅನೇಕ ವೈವಿಧ್ಯತೆ ಮತ್ತು ಶ್ರೇಣೀಕರಣಗೊಂಡಿರುವಂಥದ್ದು ಎನ್ನುವುದು ಈಗ ಸಂಶೋಧನೆ ಮತ್ತು ಚಿಂತನೆಯಲ್ಲಿ ಕಂಡುಬರುತ್ತಿದೆ. ಈ ಹಿನ್ನೆಲೆಯಲ್ಲಿಯೇ ಕನ್ನಡ ಸಮುದಾಯದ ವಿವಿಧ ನೆಲೆಗಳನ್ನು ಸಂಶೋಧನೆಯ empirical ಮಾದರಿಯಲ್ಲಿ ತರಲಾಗುತ್ತಿದೆ.

ಈ ಶತಮಾನದ ಪ್ರಾರಂಭದಲ್ಲಿ ಸಾಹಿತ್ಯಕ್ಕೆ ಹಿಂದಿನ ಶತಮಾನದಲ್ಲಿ ಸಿಕ್ಕ ಪ್ರಾಶಸ್ತ್ಯ ಇಲ್ಲದಂತಾಗಿದೆ. ಹೀಗಾಗಿ ಭಾಷಾ ವೈವಿಧ್ಯತೆ ಮತ್ತು ಸಮಾಜಕ್ಕೆ ಸಿಕ್ಕ ಪ್ರಾಮುಖ್ಯತೆ ಭಾಷಾ ಬಳಕೆಯಲ್ಲಿ ಹೊಸ ನಿರ್ಮಾಣಕ್ಕೆ ದಾರಿ ಮಾಡಿದೆ. ಹೀಗಾಗಿ ಸಾಹಿತ್ಯವನ್ನು ನೋಡುವ ದೃಷ್ಟಿಕೋನ ಬದಲಾಯಿಸ ಬೇಕೆನ್ನುವುದಕ್ಕೆ ಒತ್ತಾಯವಿದೆ.

ಆದರೂ ಕನ್ನಡ ಸಂಸ್ಕೃತಿಯ ಅಭಿವ್ಯಕ್ತಿಯ ಮಾದರಿಗಳನ್ನು ಹೋದ ಶತಮಾನದಲ್ಲಿ ಹೊರತೆಗೆದು ಕನ್ನಡದ ಅಸ್ಮಿತೆಗೆ ಕಾರಣರಾದ ಸಂಶೋಧಕರು ಹೆಕ್ಕಿ ತೆಗೆದ ಆಕರಗಳು ಇನ್ನೂ ನಮ್ಮ ತೆಕ್ಕೆಗೆ ಹೊಸದಾಗಿ ಸಂಯೋಗಗೊಳ್ಳುವ ಬಗೆ ಹೇಗೆ ಎನ್ನುವುದು ಚಿಂತನೆಗೆ ಕಾರಣವಾಗುತ್ತಲೇ ಇರುವುದರಿಂದ ಆ ಸಂಶೋಧನೆಗೆ ತನ್ನದೇ ಆದ ಮೌಲ್ಯ ಮತ್ತು ಸಾಂದ್ರತೆ ಇದೆ.

ಡಾ.ಬಸವರಾಜ ಕಲ್ಗುಡಿ, ಜಿ.ಎಸ್.ಶಿವರುದ್ರಪ್ಪನವರಿಂದ ಸಾಹಿತ್ಯ ಸಂಶೋಧನೆ, ಚಿದಾನಂದಮೂರ್ತಿಯವರಿಂದ ಇತಿಹಾಸ ಸಂಶೋಧನೆ, ಚಂದ್ರಶೇಖರ ಕಂಬಾರರಿಂದ ಜಾನಪದ ಸಂಶೋಧನೆಯ ಪಾಠಗಳನ್ನು ಕಲಿತಿರುವ ಬಹುಮುಖಿ ಸಂಸ್ಕೃತಿ ಸಂಶೋಧನೆಯ ಸಂಶೋಧಕರಲ್ಲಿ ಬಹುಮುಖ್ಯವಾದವರು. ಕರ್ನಾಟಕದ ಅನುಭಾವಿ ಪರಂಪರೆ ಹಾಗೂ ವಚನ ಸಾಹಿತ್ಯವನ್ನು ಕುರಿತು ವಿಶೇಷ ಅಧ್ಯಯನ ಮಾಡಿರುವ ಮತ್ತು ಈ ವಿಷಯಗಳ ಬಗ್ಗೆ ಕೃತಿಗಳನ್ನು ಪ್ರಕಟಿಸಿರುವ ಇವರು ಸದ್ಯಕ್ಕೆ ಬೆಂಗಳೂರು ವಿಶ್ವವಿದ್ಯಾಲಯದ ಕನ್ನಡ ಅಧ್ಯಯನ ಕೇಂದ್ರದ ನಿರ್ದೇಶಕರಾಗಿದ್ದಾರೆ.

ಆತ್ಮ ಮಿಡಿದರೆ...ಕೊರಳು ನುಡಿದರೆ...ಅದುವೆ ಭಾವಗೀತ...

– ಸವಿತಾ ನಾಗಭೂಷಣ

ಕನ್ನಡದ ಹತ್ತು ಅತ್ಯುತ್ತಮ ಭಾವಗೀತೆಗಳು :

೧. ಆನಂದಮಯ ಈ ಜಗಹೃದಯ– ಕುವೆಂಪು
೨. ಬಂಗಾರ ನೀರ ಕಡಲಾಚೆಗೀಚೆಗಿದೆ – ಬೇಂದ್ರೆ
೩. ದೀಪವೂ ನಿನ್ನದೆ, ಗಾಳಿಯೂ ನಿನ್ನದೆ – ಕೆ.ಎಸ್.ನರಸಿಂಹಸ್ವಾಮಿ
೪. ಹೂವು ಹೊರಳುವವು ಸೂರ್ಯನ ಕಡೆಗೆ – ಚೆನ್ನವೀರ ಕಣವಿ
೫. ಉಡುಗಣವೇಷ್ಟಿತ ಚಂದ್ರಸುಶೋಭಿತ – ಜಿ.ಎಸ್.ಶಿವರುದ್ರಪ್ಪ
೬. ಅಳುವ ಕಡಲೊಳು ತೇಲಿ ಬರುತಲಿದೆ – ಗೋಪಾಲಕೃಷ್ಣ ಅಡಿಗ
೭. ಜೋಗದ ಸಿರಿ ಬೆಳಕಿನಲ್ಲಿ – ನಿಸಾರ್ ಅಹಮದ್
೮. ನಿಲ್ಲಿಸದಿರು ವನಮಾಲಿ – ಪು.ತಿನ
೯. ಹಚ್ಚೇವು ಕನ್ನಡದ ದೀಪ – ಡಿ.ಎಸ್.ಕರ್ಕಿ
೧೦. ಹುಣ್ಣಿಮೆ ಆಗಸದ ಬಣ್ಣದ ಛತ್ರಿಯು – ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ಏನದು ಭಾವಗೀತೆ?

ತುಂಬೆದೆಗೆ ಸೋತು ಕೂತು
ತಂಬೂರಿ ಹಾಗೆ ಆತು
ಬರತಾವ ತಾನೆ ತಾನಾ
ಹರದಾಡತಾವ ಗಾನಾ

ಇದೇ ಏನು ಭಾವಗೀತೆ?

ಹೂತ ಚೈತ್ರದ ಮಾತು
ಕೋಗಿಲೆಯ
ಎದೆಯಲಿ ಕೂತು
ಸರ್ವರೂಪ ತಾ... ತೋರಿತು
ಪಾಡು ಹಾಡಾಯಿತು

ಇದಲ್ಲವೆ ಭಾವಗೀತೆ?

ಜೀವ ಮಿಡಿದ ಸದ್ದು
ನಾಲಗೆ
ನುಡಿಯಿತು ಕದ್ದು!
ಇದೇ ಇದೇ.....

ಥಳುಕಿಲ್ಲದೆ, ಬಳುಕಿಲ್ಲದೆ....
ಅಳುಕಿಲ್ಲದೆ....
ತುಂಬಿ ತುಳುಕಿದೆ ಭಾವ
ನಂಬಿ ದಾಟಿದೆ ನೋವ

ಅದೇ ಅದೇ...

ಮೌನದಲಿ ಮೊಗ್ಗೊಂದು
ಬಿರಿದು ಸುರಿದ
ಪರಿಮಳದ ಜಾಡ ಹಿಡಿದು
ಬಂತು ದುಂಬಿ ಮೈದುಂಬಿ
ಝೇಂ.. ಝೇಂಕರಿಸಿ
ಹೂಂ.... ಹೂಂಕರಿಸಿ.....

ಏನಿದು ಭಾವಗೀತೆ? 'ತನ್ನಿಂದ ತಾನೇ ಹುಟ್ಟಿ, ತಾನೆ ಬೆಳೆದು ತನ್ನ ಹಿಗ್ಗಿನಿಂದಲೇ ಎಲ್ಲವನ್ನೂ ಹಿಗ್ಗಿಸಿ ಪರಾರ್ಥವನ್ನು ಅಪೇಕ್ಷಿಸದೆ ಆತ್ಮ ತೃಪ್ತಿಯನ್ನು ಕಾಣುವ ಭೃಂಗ ಮಾರ್ಗವೆ?

ಹಲವು ವರುಷಗಳಿಂದ ಕನ್ನಡದ ಭಾವಗೀತೆಗಳನ್ನು ಕೇಳುತ್ತಾ, ಹಾಡುತ್ತಾ ಬೆಳೆದಿರುವೆನಾದರೂ, ನಿಜಾರ್ಥದಲಿ ಭಾವಗೀತೆ ಎಂದರೇನು ಅರಿಯಲಾರದವಳಾಗಿದ್ದೇನೆ. ಕವಿತೆ ಎಂಬುದೇ ತೀವ್ರವಾದ ಭಾವನೆ, ಸಂವೇದನೆ. ಹಾಗಾಗಿ ಕಾವ್ಯವೆಲ್ಲವೂ ವಿಶಾಲಾರ್ಥದಲ್ಲಿ ಭಾವಗೀತೆಯೇ... ಇರಬಹುದೆ?

ನಿಜ. 'ಹೊಳೆದದ್ದೆಲ್ಲ ವಜ್ರವಲ್ಲ' ಎನ್ನುವಂತೆ, ಹಾಡಲು ಸಾಧ್ಯವಾಗುವ ಸರಿಗಮದ.... ಅಂದಾಜು ಸ್ಕೇಲಿಗೆ ಹೊಸೆದದ್ದು ಎಲ್ಲವೂ ಭಾವಗೀತೆಯಲ್ಲ. 'ಆತ್ಮದ ತುಣುಕು, ಕೊರಳಿನ ಪಲುಕು', ಸತ್ವ ತತ್ವ ತುಂಬಿದ ಕಾವ್ಯ ನಿವೇದನೆಗೆ ಸಂಗೀತ ಸಾಥಿಯಾಗಿ ಭಾವ ಇಮ್ಮಡಿಯಾಗುವುದಾದರೆ... ಅದೂ ಸೊಗಸೇ...

ಪ್ರತಿಯೊಂದು ಜೀವಿಗೂ ತನ್ನಿಷ್ಟ, ತನ್ನಿಚ್ಛೆ ಎಂಬುದು ಇದ್ದೇ ಇರುವುದರಿಂದ, ಎಲ್ಲವೂ ಆಪ್ತ ಎನಿಸಿದಾಗ್ಯೂ ಪರಮಾಪ್ತ ಎಂಬುದೂ ಇರುವುದರಿಂದ, ನನ್ನಿಷ್ಟದ ಹತ್ತು ಆಯ್ಕೆಗಳನ್ನು ನಿಮ್ಮ ಮುಂದೆ ಇರಿಸುತ್ತಿದ್ದೇನೆ. ಆಯುವವನು ಬದುಕಿ ಬಾಳಿದ ಕಾಲ-ದೇಶ, ಅವನೊಳಗೆ ರೂಪುಗೊಂಡ ಭಾವಕೋಶ, ಸುತ್ತಣ ದಿಗಿಣ ಹಾಕಿದ ವೇಷ, ಆವೇಶ ಎಲ್ಲವೂ ಅವನ/ಅವಳ ಆಯ್ಕೆಯನ್ನು ಪ್ರಭಾವಿಸುತ್ತದೆಯಾದರೂ, ಆಯ್ದವನಿಗೆ/ಳಿಗೆ, ಕಾವ್ಯಪ್ರೇಮಿಗಳ ಸಹಮತ

ದೊರಕಿದ್ದಾದರೆ 'ಲಿಂಗಮೆಚ್ಚಿ ಅಹುದಹುದೆಂತಂತೆ' ಸಂತಸವಾಗುತ್ತದೆ. ನಾನು ಆಯ್ದ ಕವಿತೆಗಳ ಬಗ್ಗೆ ಅಷ್ಟಿಷ್ಟು ಭಿನ್ನಮತ ಇರಬಹುದು ಆದರೆ ಕವಿಗಳ ಬಗ್ಗೆ ಅಷ್ಟೇನೂ ತಕರಾರು ಇಲ್ಲದೆ ಕಾವ್ಯರಸಿಕರು ಬೆಂಬಲ ಸೂಚಿಸಬಹುದು ಎಂಬ ನಂಬಿಕೆಯಿಂದ ಈ ಕೆಳಗಿನ ಹತ್ತು ಅತ್ಯುತ್ತಮ ಭಾವಗೀತೆಗಳನ್ನು ಕಾವ್ಯ-ಪ್ರೇಮಿಗಳ ಮುಂದೆ ಇಡಬಯಸುವೆ.

೧. ಆನಂದಮಯ ಈ ಜಗಹೃದಯ -ಕುವೆಂಪು

ಅಗಣಿತ ತಾರಾಗಣಗಳಂತೆ ಕಿಕ್ಕಿರಿದಿರುವ ಕುವೆಂಪು ಕಾವ್ಯ ಭಂಡಾರದಿಂದ ಒಂದು ಭಾವಗೀತೆಯನ್ನು ಆಯುವುದು ಕಷ್ಟದ ಕೆಲಸವೇ. ಆದಾಗ್ಯೂ.... 'ಆನಂದಮಯ ಈ ಜಗಹೃದಯ' ನನ್ನ ಫೇವರಿಟ್. ಸೃಷ್ಟಿಕರ್ತನ ವಿರಾಟ್ ಸ್ವರೂಪವನ್ನು ಕೆಲವೇ ಶಬ್ದಗಳಲ್ಲಿ ಕವಿ ಬಣ್ಣಿಸುವ ಬಗೆ, ಶಬ್ದರೂಪಿ ಬೀಜದಲ್ಲಿ ಅಡಗಿರುವ ಹೆಮ್ಮರವನ್ನು ಬಣ್ಣಿಸಿದಂತಿದೆ. ಕುವೆಂಪು ಅವರ ಗೀತೆಗಳು ದಾಸವಾಳ, ಕಣಗಿಲ ರೀತಿಯವು. ಕಿಕ್ಕಿರಿದು ಮರದಲ್ಲಿ ನಿತ್ಯವೂ ಅರಳಿ ಕಣ್ಮನ ಸೆಳೆಯುವಂತಹವು. ನಿತ್ಯ ಪೂಜೆಗೆ ಸಲ್ಲುವಂತಹವುಗಳು. ಶ್ರೀಸಾಮಾನ್ಯನಿಗೂ ಎಟಕುವಂತಹವು. ಸಹೃದಯನ ಕಣ್ಣಳತೆಯಲ್ಲೇ ಇರುವ ಇವುಗಳನ್ನು ಮುಟ್ಟಬಹುದು, ಮೂಸಬಹುದು. ಗಾಢ ಬಣ್ಣ.... ತುಸುವೇ.... ಇದೆಯಾ ಇಲ್ಲವೋ ಎಂಬಂತಹ ಆಹ್ಲಾದಕರ ಪರಿಮಳ. ಮೃದು-ಮಂದಸ್ಮಿತ-ಜತೆಜತೆಯಲ್ಲೇ ಬಾಳಿ ಬದುಕಿ ಬೆಳಗಿ ಇಲ್ಲವಾಗುವುದು.... ಅಲ್ಲಲ್ಲ...ಪುನರಪಿಜನನಂ.... ಮತ್ತೆ ಅರಳುವುದು.... ಕತ್ತಲ ಜತೆ ಹೊರಳುವುದು....

'ಶಿವ ಕಾಣದೆ ಕವಿ ಕುರುಡನೊ
ಶಿವ ಕಾವ್ಯದ ಕಣ್ಣೊ'

ಶಿವಮೊಗ್ಗ ಸುಬ್ಬಣ್ಣ ಅವರ ಭೋರ್ಗರೆವ ದನಿಯಲ್ಲಿ ಈ ಭಾವಗೀತೆ ಕೇಳಿದ ಮೇಲೆ ಅದು ಅಲ್ಲಿಗೇ ಮುಗಿಯುವುದೇ ಇಲ್ಲ.... ಕವಿತೆ ಅಲ್ಲೇ ಅಲ್ಲೇ ಸುಳಿದಾಡಿದಂತೆ.... ಮತ್ತೊಮ್ಮೆ ಮಗದೊಮ್ಮೆ ಕೇಳಿದಾಗಲೂ ಹೊಚ್ಚ ಹೊಸದೆಂಬಂತೆ ಎದುರುಗೊಳ್ಳುವುದು ಈ ಕವಿತೆ.

೨. ಬಂಗಾರ ನೀರ ಕಡಲಾಚೆಗೀಚೆಗಿದೆ ನೀಲ ನೀಲ ತೀರ – *ಬೇಂದ್ರೆ*

ಮುಟ್ಟಿದ ಅಕ್ಷರಗಳನ್ನೆಲ್ಲ ಕಾವ್ಯವಾಗಿಸಿದ್ದು ಬೇಂದ್ರೆ, ಬೇಂದ್ರೆ ಮಾತ್ರವೇ. ಶಬ್ದಗಾರುಡಿಗ, ಶಬ್ದ ಮಾಂತ್ರಿಕ. ಹೀಗೆ ಕವಿಯನ್ನು ಬಣ್ಣಿಸುವವರಾದರೂ ಕೇವಲ ಶಬ್ದಗಳಿಂದ ಬೇಂದ್ರೆಯನ್ನು ಹಿಡಿಯುವುದು ಅಸಾಧ್ಯ. ಸಿದ್ಧನೋ, ಬುದ್ಧನೋ... ತಂತ್ರವೋ, ಮಂತ್ರವೋ... ಬಿಡಿಸಲಾಗದ ಒಗಟು. ಬಿಡಿಸ ಹೋದಷ್ಟೂ ಜಿಗುಟು! ಬೇಂದ್ರೆ ಮರವಲ್ಲ ಬಳ್ಳಿ. ಬರೇ ಬಳ್ಳಿಯಲ್ಲ... ಸಡಗರದಿಂದ ಸಂಭ್ರಮಿಸಿ ಅತ್ತಲೋ, ಇತ್ತಲೋ ಎತ್ತೆತ್ತಲೋ ಎಗ್ಗಿಲ್ಲದೆ ಹಬ್ಬಿರುವ ಬಳ್ಳಿ. ತುದಿಯೆಲ್ಲಿ ಮೊದಲೆಲ್ಲಿ ತಿಳಿಯದಂತಹ ಮಾಯಾಜಾಲ. ಇನ್ನು ಕವಿತೆಗಳೋ ಗಮಗಮ-ಮಲ್ಲಿಗೆ ಹೂವು. ಕೊಯ್ದಷ್ಟೂ ಬುಟ್ಟಿ ತುಂಬುವುದು. ಬಿಡಿಸಿ ಬಿಡಿಸಿ ಕೈಸೋಲುವುದು. ಬಿಡಿಸ ಹೋದವನು ಬಿರಿದ ಹೂವಿಗೆ ಸೋತು, ಬಳ್ಳಿಗಾತು ಕುಳಿತು ಸಂಭ್ರಮಿತನಾಗಿ ಅಲ್ಲೇ ಸುತ್ತಿ ಸುಳಿದು ಘಮದೊಳಗೆ ಲಯವಾಗಬಲ್ಲ!

ಇದೆ ಸಮಯವಣ್ಣಾ ಇದೆ ಸಮಯ ತಮ್ಮ
ನಂ ನಿಮ್ಮ ಆತ್ಮಗಳಿಗೆ

ಅಂಬಿಗನು ಬಂದ ನಂಬಿಗನು ಬಂದ
ಬಂದಾಥ ದಿವ್ಯಗಳಿಗೆ

ಸಿಕ್ಕಲ್ಲಿ ಅಲ್ಲ ಸಿಕ್ಕಲ್ಲೆ ಮಾತ್ರ
ಒಡೆಯುವುದು ಇದರ ಸೆಲೆಯು
ಭಾವ–ಅನುಭಾವ ಸಮನಾಗಿ ಬೆರೆತ ಈ ಕವಿತೆ ನನ್ನ ಎರಡನೆಯ ಆಯ್ಕೆ.

೩. **ದೀಪವೂ ನಿನ್ನದೆ, ಗಾಳಿಯೂ ನಿನ್ನದೆ ಆರದಿರಲಿ ಬೆಳಕು – ಕೆ.ಎಸ್.ನ**

ಕಡಲೂ ನಿನ್ನದೆ, ಹಡಗೂ ನಿನ್ನದೆ
ಮುಳುಗದಿರಲಿ ಬದುಕು!
ನಿನ್ನಂಥ ರಾಜ ಒಳಗಿದ್ದೂ ದೂರ;
ಇನ್ನೆಲ್ಲೋ ನೀನು!
ರಾಜರಹಿತ ರಾಜ್ಯಾಂಗ ಶಾಸನದ
ಪ್ರಾಣಶಕ್ತಿಯೇ ನೀನು!

ಗುರಿಯಿಟ್ಟು ಬಾಣ ಬಿಟ್ಟು ನಿರಾಯಾಸವಾಗಿ ಸಹೃದಯನಲ್ಲಿ ನೆಲೆಸಿದ ಕವಿ ಕೆ.ಎಸ್.ನ. ನೆಟ್ಟ ಹೂ–ಬಾಣವನ್ನು ಕಾಪಿಟ್ಟುಕೊಂಡ ಹಿರಿಮೆ ಕನ್ನಡ ಕಾವ್ಯ ರಸಿಕರದ್ದು. ಕೆ.ಎಸ್.ನ. ಭಾವಗೀತೆಗಳು ಸಿಹಿಯಾದ ರಸದುಂಬಿದ ದ್ರಾಕ್ಷಿಯ ಗೊಂಚಲಿನಂತೆ, ಬಿಡಿಯಾಗಿ, ಇಡಿಯಾಗಿ ಹೇಗೆ ಆಸ್ವಾದಿಸಿದರೂ ಮಧುರ, ಅತಿ ಮಧುರ. 'ಪ್ರಥಮ ರಾಜನಿಗೆ' ಈ ಮಧುರ ಭಾವಗೀತೆ–ನನ್ನ ಮೂರನೆಯ ಆಯ್ಕೆ.

೪. **ಹೂವು ಹೊರಳುವವು ಸೂರ್ಯನ ಕಡೆಗೆ –ಚೆನ್ನವೀರ ಕಣವಿ**

ಹೂವು ಹೊರಳುವವು ಸೂರ್ಯನ ಕಡೆಗೆ
ನಮ್ಮ ದಾರಿ ಬರೆ ಚಂದ್ರನವರೆಗೆ– ಚೆನ್ನವೀರ ಕಣವಿ
ಬಿಸಿಲ ಧಗೆಯ ಬಸಿರಿಂದಲೆ ಸುಳಿವುದು
ಮೆಲು ತಂಗಾಳಿಯು ಬಳಿಗೆ
ಸಹಿಸಿಕೊಂಡ ಸಂಕಟವನು ಸೋಸಲು
ಬಂದೆ ಬರುವುದಾ ಗಳಿಗೆ

ಕಣವಿಯವರ ಕವಿತೆಗಳೆಂದರೆ ಯಾವತ್ತೂ 'ಮುಂಜಾವದಲಿ ಹಸಿರು ಹುಲ್ಲು ಮಕಮಲ್ಲಿನಲಿ ಪಾರಿಜಾತದ ಹೂವು ಸುರಿಸಿದಂತೆ' ಮೃದುವಚನ, ಮೃದುಭಾವ, ಮೌನ ಮೊಗ್ಗೆಯನೊಡೆದು ಮಾತರಳಿ ಬಂದಂತೆ; 'ಸುಳಿಗಾಳಿಯೊಂದಿನಿತು ಸೂಸಿ ಬಂದರು ಸಾಕು ಮರವನಪ್ಪಿದ ಬಳ್ಳಿ ಬಳುಕಿದಂತೆ.....'

ವೈಣಿಕ ಮಾತ್ರ ವೀಣೆ ನುಡಿಸಬಲ್ಲ... ಮಿಕ್ಕವರು ಮೀಟುವರು, ನಾದವಿಲ್ಲ! ಅಕ್ಷರಗಳನು ನುಡಿಸಿ ಭಾವ ಮಿಡಿಯುವಂತೆ ಮಾಡಲು ಯಶಸ್ವಿಯಾಗಿರುವ ಕವಿ ಕಣವಿಯವರ ಈ ಕವಿತೆ ನನ್ನ ನಾಲ್ಕನೆಯ ಆಯ್ಕೆ.

೫. **ಉಡುಗಣವೇಷ್ಟಿತ ಚಂದ್ರ ಸುಶೋಭಿತ – ಜಿ.ಎಸ್.ಶಿವರುದ್ರಪ್ಪ**

ಬಾಲ್ಯಕಾಲದ ಸ್ಮೃತಿಕೋಶದಲ್ಲಿ ಭದ್ರವಾಗಿ ಬೇರುಬಿಟ್ಟಿರುವ ಜಿ.ಎಸ್.ಎಸ್.ರವರ

ಉಡುಗಣವೇಷ್ಟಿತ.... ನನ್ನ ಐದನೆಯ ಆಯ್ಕೆ. ಚಿತ್ರಗೀತೆ-ಭಾವಗೀತೆ-ಜನಪದಗೀತೆ ಎಂದು ಭೇದ ಮಾಡದೆ ಎಲ್ಲ ಹಾಡುಗಳನ್ನು ಒಂದೇ ಎಂದು ತಿಳಿದು ಹಾಡುತ್ತಿದ್ದ ಕಾಲವದು. ಉಡುಗಣವೇಷ್ಟಿತ.... ನಮ್ಮ ಪಾಲಿಗೆ ಎಚ್.ಆರ್.ಲೀಲಾವತಿಯವರ ಹಾಡಾಗಿತ್ತು! ಶಾಲೆಯ ಆ ದಿನಗಳಲ್ಲಿ ಆ ಹಾಡು ಹಾಡದ ಹೆಣ್ಣುಮಕ್ಕಳೇ ಇಲ್ಲ ಎಂದು ಹೇಳಿದರೆ ಅದು ಅತಿಶಯೋಕ್ತಿಯೇನೂ ಅಲ್ಲ. ಈ ಭಾವಗೀತೆ ನನ್ನ ಪಾಲಿಗೆ ಕೇವಲ ಒಂದು ಕವಿತೆ, ಗೀತೆ.... ಅಲ್ಲ. ಬದಲು ಒಂದು ಚಿರಂತನ ಮಧುರ ಸ್ಮೃತಿ:

ಉಡುಗಣವೇಷ್ಟಿತ ಚಂದ್ರಸುಶೋಭಿತ ದಿವ್ಯಾಂಬರ ಸಂಚಾರಿ
ಕಣ್ಣ ನೀರಿನಲಿಮಣ್ಣ ಧೂಳಿನಲಿ
ಹೊರಳುತ್ತಿರುವ ಸಹಚಾರಿ!
ಬಾಂದಳ ಚುಂಬಿತ ಶುಭ್ರ ಹಿಮಾವೃತ
ತುಂಗಶೃಂಗದಲಿ ಗೃಹವಾಸಿ
ದೀನ ಅನಾಥರದುಃಖಿ ದರಿದ್ರರ
ಮುರುಕು ಗುಡಿಸಿಲಲಿ ಉಪವಾಸಿ! (ಅಲ್ಲಿ-ಇಲ್ಲಿ)

೬. ಅಳುವ ಕಡಲೊಳು – *ಗೋಪಾಲಕೃಷ್ಣ ಅಡಿಗ*

ಅಳುವ ಕಡಲೊಳು ತೇಲಿ ಬರುತಲಿದೆ
ನಗೆಯ ಹಾಯಿದೋಣಿ...
ಬಾಳಗಂಗೆಯ ಮಹಾಪೂರದೊಳು
ಸಾವಿನೊಂದು ವೇಣಿ.....

ಭಾವಗೀತೆಯೋ, ಪ್ರಗಾಥವೋ.. ಛಂದೋಬದ್ಧವೋ.... ಮುಕ್ತ ಬಂಧವೋ ಅದು ಎಲ್ಲಕ್ಕಿಂತ ಕಾವ್ಯವಾಗುವುದು ಅಗತ್ಯ. ನಿಜವಾದ ಕವಿ ಏನ... ನುಡಿಯಲಿ, ಅದು ಕಾವ್ಯವಾಗಿ ಸಂಭವಿಸುವುದು. ಅಡಿಗರ ಪುಟ್ಟ ಪದ್ಯವನ್ನು ಆತ್ಮಗೀತದಂತೆ ಹಾಡಿ ಅದನ್ನು ಯಶಸ್ವಿ ಭಾವಗೀತೆಯನ್ನಾಗಿಸಿದ ಕೀರ್ತಿ ಪಿ.ಕಾಳಿಂಗರಾವ್ ಅವರಿಗೆ ಸಲ್ಲುತ್ತದೆ.

೭. ಜೋಗದ ಸಿರಿ ಬೆಳಕಿನಲ್ಲಿ – *ಕೆ.ಎಸ್.ನಿಸಾರ್ ಅಹಮದ್*

ಜೋಗದ ಸಿರಿ ಬೆಳಕಿನಲ್ಲಿ....
ತುಂಗೆಯ ತೆನೆ ಬಳುಕಿನಲ್ಲಿ....
ಸಹ್ಯಾದ್ರಿಯ ಲೋಹದದಿರ ಉತ್ತುಂಗದ ನಿಲುಕಿನಲ್ಲಿ
ನಿತ್ಯ ಹರಿದ್ವರ್ಣವನದ ತೇಗ ಗಂಧತರುಗಳಲ್ಲಿ
ನಿತ್ಯೋತ್ಸವ ತಾಯಿ, ನಿತ್ಯೋತ್ಸವ ನಿನಗೆ.....

'ನಿತ್ಯೋತ್ಸವ' ಕನ್ನಡದ ಮೊದಲ ಭಾವಗೀತೆಗಳ ಕ್ಯಾಸೆಟ್. ಭಾರತೀಯ ಭಾಷೆಯಲ್ಲಿಯೇ ಭಾವಗೀತೆಗಳ ಮೊದಲ ಕ್ಯಾಸೆಟ್ ಎನ್ನುವ ಗರಿಮೆ ಇದರದ್ದು. ೧೯೭೮ರಲ್ಲಿ ಹೊರಬಂದ ಈ ಕ್ಯಾಸೆಟ್‌ನ ರೂವಾರಿಗಳು ಸಂಗೀತ ಸಂಯೋಜಕ ಮೈಸೂರು ಅನಂತಸ್ವಾಮಿ-ಕವಿ ನಿಸಾರ್ ಅಹಮದ್. ಕನ್ನಡದ ಎಲ್ಲ ಕಾವ್ಯ ಪ್ರಿಯರ ಮನಸ್ಸಿನಲ್ಲಿ 'ನಿತ್ಯೋತ್ಸವ'ಕ್ಕೆ ಒಂದು ಪ್ರತ್ಯೇಕ ಸ್ಥಾನ ಇದ್ದೇ ಇದೆ. ಕನ್ನಡದ ಐಡೆಂಟಿಟಿಯನ್ನು ಪ್ರತಿಷ್ಠಾಪಿಸಿದ ಕನ್ನಡ-ಭಾವಗೀತೆ ಇದೆಂದು ಹೇಳಿದರೆ ತಪ್ಪಾಗಲಾರದು. ಇದು ಏಕಕಾಲಕ್ಕೆ ಕನ್ನಡ ಗೀತೆಯೂ ಹೌದು,

ಭಾವಗೀತೆಯೂ ಹೌದು. ಕನ್ನಡ ನೆಲ, ಜಲ, ಭಾಷೆ, ಆಶೆ ಪ್ರತಿನಿಧಿಸುವ ಈ ಗೀತೆ ನನಗೆ ಯಾವತ್ತೂ ಪ್ರಿಯವಾದುದು.

೮. ನಿಲ್ಲಿಸದಿರು ವನಮಾಲಿ ನೀ ಕೊಳಲಗಾನವ – ಪು.ತಿ.ನ.

'ಕಲೆಯೋ ನಿಡಿದು, ಕಾಲವೋ ಕಿರಿದು' 'ನಡೆದಷ್ಟೇ ದಾರಿ, ಪಡೆದಷ್ಟೇ ಭಾಗ್ಯ'. ನಾನು ಕಾವ್ಯ ಪಕ್ಷಪಾತಿ, ಪಂಥಾಭಿಮಾನಿಯಲ್ಲ, ಎಂದ ಹಿರಿಯ ಕವಿ ಪುತಿನ ಅವರ 'ನಿಲ್ಲಿಸದಿರು ವನಮಾಲಿ.....' ನನ್ನ ಎಂಟನೆಯ ಆಯ್ಕೆ. ಪ್ರೇಮ, ಕಾಮ, ವಿದ್ರೋಹ ಎಲ್ಲವನೂ ಹದವಾಗಿ ಬೆರೆಸಿ ದೈವವನ್ನು ನಿಮಿತ್ತವಾಗಿಟ್ಟುಕೊಂಡು ಮನುಷ್ಯನ ತೊಳಲಾಟ–ತಲ್ಲಣವನ್ನು ಸರಿಸಾಟಿಯಿಲ್ಲದಂತೆ ಬಣ್ಣಿಸಿದವರು ಪುತಿನ:

ಹಾ ನಲವೆ, ನಿನ್ನ ತಡೆದಿಡಲೆನ್ನ ಜಾಗರದೊಳಿಲ್ಲ ಜಾಗ
ಕಂಡ ಜಡಜಂಗಮಕೆ ಕೈಯ ಜೋಡಿಸುವುದೇ ಕುಶಲವೀಗ.

ಒಳ್ಳೆಯ ಕವಿತೆಯನ್ನು, ಕವಿ–ಸಹೃದಯರನ್ನು ಮಮತೆಯಿಂದ ಬಂಧಿಸುವ 'ಆನಂದಗ್ರಂಥಿ' ಎಂದು ಕರೆದಿರುವುದು ಪುತಿನ. 'ನಿಲ್ಲಿಸದಿರು ನೀ...ವನಮಾಲಿ' ಅಂತಹ ಆನಂದಗ್ರಂಥಿ ಎಂದಷ್ಟೇ ಹೇಳಬಲ್ಲೆ.

೯. ಹಚ್ಚೇವು ಕನ್ನಡದ ದೀಪ... –ಡಿ.ಎಸ್.ಕರ್ಕಿ

ಹಚ್ಚೇವು ಕನ್ನಡದ ದೀಪ...
ತೊರೆದೇವು ಮರುಳ ತಡೆದೇವು ಇರುಳ
ಪಡೆದೇವು ತಿರುಳ ಹಿಡಿ ನೆನಪ
ಕರುಳೆಂಬ ಕುಡಿಗೆ ಮಿಂಚನ್ನೆ ಮುಡಿಸಿ
ಹಚ್ಚೇವು ಕನ್ನಡದ ದೀಪ
ಕರುನಾಡ ದೀಪ ಸಿರಿನುಡಿಯ ದೀಪ
ಒಲವೆತ್ತಿ ತೋರುವಾ ದೀಪ

ಅದೆಷ್ಟೋ ವರುಷಗಳಿಂದ ಈ ಕವಿತೆ ನನ್ನ ಮನಸ್ಸಿನಲ್ಲಿ ನಿಂತಿದೆ. ಪ್ರತಿ ಬಾರಿ ಆಲಿಸಿದಾಗಲೂ ಎಂತಹ ಭವ್ಯ ಕನ್ನಡ ಪರಂಪರೆ ನನ್ನ ಬೆನ್ನಿಗಿದೆ ಎಂಬ ಹೆಮ್ಮೆ ನನ್ನದಾಗುತ್ತದೆ. ಭಾವ ಉಕ್ಕಿಸುವ ಗುಣ ಈ ಕನ್ನಡ ಗೀತೆಗಿದೆ.

೧೦. ಹುಣ್ಣಿಮೆ ಆಗಸದ ಬಣ್ಣದ ಛತ್ರಿಯು– ಎನ್.ಎಸ್.ಲಕ್ಷ್ಮೀನಾರಾಯಣ ಭಟ್ಟ

ಹುಣ್ಣಿಮೆ ಆಗಸದ
ಬಣ್ಣದ ಛತ್ರಿಯು
ಮೆಲ್ಲಗೆ ತಾನಾಗಿ ಬಿಚ್ಚಿದೆ!
ದಿನವೆಲ್ಲ ಧಗೆಯಲ್ಲಿ
ಹೊರಳಿದ ಭೂಮಿಯ
ತಂಪಾಗಿ ಕನಸಾಗಿ ಹೊಚ್ಚಿದೆ.

ಕನ್ನಡ ಭಾವಗೀತೆಗಳಿಗೆ ಪುನಃಶ್ಚೇತನ ನೀಡಿದವರಲ್ಲಿ ಭಟ್ಟರು ಅಗ್ರಗಣ್ಯರು. ಕಾವ್ಯಸತ್ವದ ದೃಷ್ಟಿಯಿಂದ ಮೇಲೆ ಕಾಣಿಸಿದ ಕನ್ನಡ ಕವಿಗಳಿಗೆ ಹೋಲಿಸಿದರೆ ಭಟ್ಟರ ಭಾವಗೀತೆಗಳಲ್ಲಿ

ಭಾವಚಂದಿರ ಕೊಂಚ ಪೇಲವವಾಗಿ; ತದಿಗೆ, ಬಿದಿಗೆಯ ಚಂದಿರನಂತೆ ಗೋಚರಿಸಿದಾಗ್ಯೂ.... ಚಂದ್ರಮನ ಹಾಜರಿಯಂತು ಇದ್ದೇ ಇದೆ ಎಂಬ ಸಮಾಧಾನ. ಕನ್ನಡ ಜನಮಾನಸದಲ್ಲಿ ಭದ್ರವಾಗಿ ನೆಲೆಸಿರುವ ಭಟ್ಟರು ಬಹುಸಂಖ್ಯೆಯಲ್ಲಿ ಚೆಲುವಾದ ಭಾವಗೀತೆಗಳನ್ನು ಬರೆದಿರುವುದನ್ನು ಮರೆಯುವಂತಿಲ್ಲ.

ಎಸ್.ವಿ.ಪರಮೇಶ್ವರ ಭಟ್ಟರ 'ಪ್ರೀತಿಯ ಕರೆಕೇಳಿ', ತೀನಂಶ್ರೀ ಅವರ 'ಒಲವೊ ಹಗೆಯೊ', ಎಚ್.ಎಸ್.ವೆಂಕಟೇಶ್‌ಮೂರ್ತಿಯವರ 'ಲೋಕದ ಕಣ್ಣಿಗೆ', ಸಿದ್ಧಲಿಂಗಯ್ಯ ಅವರ 'ಗುಡಿಸಿಲಿನಲ್ಲಿ ಅರಳಿದ ಗುಲಾಬಿ' ಮೇಲಿನ ಹತ್ತು ಭಾವಗೀತೆಗಳಷ್ಟೇ ನನಗೆ ಪ್ರಿಯವಾದವುಗಳು. ಹತ್ತು ಎಂದು ಗೆರೆ ಹಾಕಿರುವುದರಿಂದ ಇದನ್ನು ಸೇರಿಸಲಾಗಿಲ್ಲ ಅಷ್ಟೇ.

ಆಯ್ಕೆಯ ಮಾನದಂಡ: ಕವಿಯ/ಕವಿತೆಯ ಸ್ವಾನುಭೂತಿ, ಸ್ವದರ್ಶನ, ಸ್ವರೂಪ ದರ್ಶನ ಎಂದಷ್ಟೇ ನನ್ನ ನಮ್ರ ಅರಿಕೆ.

ಕವಿಯ ಪಾಡನ್ನು ಭಾವಕ್ಕೆ ತಕ್ಕುದಾಗಿ ಹಾಡಿ ಕವಿ ಮತ್ತು ಸಹೃದಯನನ್ನು ಬೆಸೆದವರು ಸುಗಮ ಸಂಗೀತ ಸಂಯೋಜಕರು ಮತ್ತು ಗಾಯಕರು. ಇಪ್ಪತ್ತನೆಯ ಶತಮಾನದಲ್ಲಿ ಕನ್ನಡ ಕಾವ್ಯದಲ್ಲಿ ಭಾವಗೀತೆಗಳ ಯುಗ ಆರಂಭವಾದಾಗ ಈ ಹೊಸ ಯುಗದ ಕವಿತೆಯನ್ನು ಸಂಗೀತ ಆಸರೆಯಲ್ಲಿ ಪ್ರಸ್ತುತಪಡಿಸುವ ಹೊಸ ಶೈಲಿ ಬಾಳಪ್ಪ ಹುಕ್ಕೇರಿ, ಕಾಳಿಂಗರಾವ್, ಎಚ್.ಆರ್. ಲೀಲಾವತಿ ಇವರ ಮೂಲಕ ಅನಾವರಣಗೊಂಡಿತು. ಕವಿತೆ ತನಗೆ ತಾನೇ ಸತ್ವಶಾಲಿ ಅಹುದು, ಆದರೆ ಸಂಗೀತ ನಿಸ್ಸಂಶಯವಾಗಿ ಅದನ್ನು ಬೆಳಗುವುದು. ಮೇಲೆ ನಾನು ಉಲ್ಲೇಖಿಸಿರುವ ಹತ್ತು ಕವಿತೆಗಳನ್ನು ಆಯುವಾಗ, ಅದರ ಹಿಂದೆ ಅದಕೆ ಜೀವ ತುಂಬಿದ ಗಾಯಕ, ಸಂಗೀತ ಸಂಯೋಜಕ ಇದರಿಂದ ಬೇರ್ಪಡಿಸಿ ನೋಡಲಾಗದು. ಕನ್ನಡದ ಭಾವಲೋಕವನ್ನು ಉಜ್ವಲವಾಗಿ ಬೆಳಗಿದ ಪಿ.ಕಾಳಿಂಗರಾವ್, ಮೈಸೂರು ಅನಂತಸ್ವಾಮಿ, ರತ್ನಮಾಲ, ಸಿ.ಅಶ್ವಥ್, ಎಚ್.ಕೆ.ನಾರಾಯಣ, ಶಿವಮೊಗ್ಗ ಸುಬ್ಬಣ್ಣ, ಎಚ್.ಆರ್.ಲೀಲಾವತಿ, ಪದ್ಮಚರಣ್, ಜಯಶ್ರೀ ಅರವಿಂದ್, ಬಿ.ಆರ್.ಛಾಯ ಇವರು ನಾನು ಆಯ್ದ ಕವಿತೆಯ ಹಿಂದೆ ಇರುವ ಇವರನ್ನು ನೆನೆದು ಈ ಲೇಖನ ಮುಗಿಸುವೆ.

ಸವಿತಾ ನಾಗಭೂಷಣ, 'ಲೇಖಕಿ' ಎಂಬ ಯಾವುದೇ ರಿಯಾಯಿತಿ ಬಯಸದ ಕವಯತ್ರಿ ಹಾಗೂ ಕಾದಂಬರಿಗಾರ್ತಿ. ಹೆಣ್ಣಿನ ಸ್ವಮರುಕದ ಘಟ್ಟವನ್ನು ಮೀರಿರುವ ಇವರ ಕಾವ್ಯ, ಅವಳ ಸಹಜ ನೆಲೆಗಳನ್ನು ಹುಡುಕುವುದರಲ್ಲಿ ಆಸಕ್ತವಾದುದು. ಹೀಗಾಗಿಯೇ ಇವರ ಕಾವ್ಯದ ಭಿತ್ತಿ ಬದುಕನ್ನು ಕುರಿತ ನಿತಾಂತವಾದ ಶ್ರದ್ಧೆ ಮತ್ತು ಇದನ್ನೇ ಇವರ ಕಾವ್ಯದ ಸ್ಥಾಯೀಭಾವ ಎನ್ನಬಹುದು. 'ನಾನು ಬರುತ್ತೇನೆ ಕೇಳು', ಚಂದ್ರನನನ್ನು ಕರೆಯಿರಿ ಭೂಮಿಗೆ', 'ಹೊಳೆ ಮಗಳು' ಮತ್ತು 'ಜಾತ್ರೆಯಲ್ಲಿ ಶಿವ' ಎಂಬ ನಾಲ್ಕು ಕವನ ಸಂಕಲನಗಳನ್ನೂ 'ಸ್ತ್ರೀಲೋಕ' ಎಂಬ ಒಂದು ವಿನೂತನ ಶೈಲಿಯ ಕಾದಂಬರಿಯನ್ನೂ ಪ್ರಕಟಿಸಿರುವ ಸವಿತಾ ಈ ಪೀಳಿಗೆಯ ಕಾವ್ಯವನ್ನು ಪೊರೆಯುವ ಮಹತ್ವದ ಕೆಲಸದಲ್ಲೂ ಭಾಗಿಯಾಗಿದ್ದಾರೆ.

*

ಯುಗಧರ್ಮಕ್ಕೆ ಸ್ಪಂದಿಸಿದ ಚಿತ್ರಗಳು

– ಡಾ. ಕೆ.ಪುಟ್ಟಸ್ವಾಮಿ

ಕನ್ನಡದ ಹತ್ತು ಶ್ರೇಷ್ಠ ಚಿತ್ರಗಳು :

೧. ಬೇಡರ ಕಣ್ಣಪ್ಪ (೧೯೫೪)	–	ಎಚ್.ಎಲ್.ಎನ್.ಸಿಂಹ
೨. ಸ್ಕೂಲ್ ಮಾಸ್ಟರ್ (೧೯೫೮)	–	ಬಿ.ಆರ್.ಪಂತುಲು
೩. ನಾಂದಿ (೧೯೬೪)	–	ಎನ್.ಲಕ್ಷ್ಮಿನಾರಾಯಣ್
೪. ಗೆಜ್ಜೆ ಪೂಜೆ (೧೯೭೦)	–	ಪುಟ್ಟಣ್ಣ ಕಣಗಾಲ್
೫. ಸಂಸ್ಕಾರ (೧೯೭೦)	–	ಪಟ್ಟಾಭಿರಾಮರೆಡ್ಡಿ
೬. ಭೂತಯ್ಯನ ಮಗ ಅಯ್ಯು(೧೯೭೪)	–	ಸಿದ್ಧಲಿಂಗಯ್ಯ
೭. ಚೋಮನ ದುಡಿ (೧೯೭೫)	–	ಬಿ.ವಿ.ಕಾರಂತ
೮. ಹಂಸಗೀತೆ (೧೯೭೫)	–	ಜಿ.ವಿ.ಅಯ್ಯರ್
೯. ಘಟಶ್ರಾದ್ಧ (೧೯೭೭)	–	ಗಿರೀಶ್ ಕಾಸರವಳ್ಳಿ
೧೦. ಜನುಮದ ಜೋಡಿ (೧೯೯೬)	–	ಟಿ.ಎಸ್.ನಾಗಾಭರಣ

ಯಾವುದೇ ಪ್ರಕಾರದ ಎಲ್ಲ ಕಾಲಕ್ಕೂ ಸಲ್ಲುವ ಹತ್ತು ಶ್ರೇಷ್ಠ ಕಲಾಕೃತಿಗಳನ್ನು ಆಯ್ಕೆ ಮಾಡುವುದು ಎಂದಿಗೂ ಅಸಂಭವ. ಅದರಲ್ಲೂ ಸಿನಿಮಾದಂಥ ಜನಪ್ರಿಯ ಮಾಧ್ಯಮದ ಹತ್ತು ಅತ್ಯುತ್ತಮಗಳನ್ನು ಆಯ್ಕೆ ಮಾಡುವುದೆಂದರೆ ಅಸಾಧ್ಯದ ಮಾತು. ವಿದೇಶದಲ್ಲಿರುವಂತೆ–ವಿಶೇಷವಾಗಿ ಹಾಲಿವುಡ್ಡಿನಲ್ಲಿ–ಆಗಾಗ್ಗೆ ಸರ್ವಶ್ರೇಷ್ಠ ಸಿನಿಮಾಗಳ ಆಯ್ಕೆಗೆ ಸಂಬಂಧಿಸಿದಂತೆ ನಡೆಯುವ ಸಮೀಕ್ಷೆಗಳು ಕನ್ನಡದ ಸಂದರ್ಭದಲ್ಲಿ ನಡೆಯುವುದಿಲ್ಲ. ಈಗಾಗಲೇ ಅಲ್ಲಿ ವಿಮರ್ಶಕರ ಸಮೀಕ್ಷೆ, ವೀಕ್ಷಕರ ಸಮೀಕ್ಷೆ, ಸಾಮಾಜಿಕ ಚಿತ್ರಗಳ ಸಮೀಕ್ಷೆ, ಕಲಾತ್ಮಕ ಚಿತ್ರಗಳ ಸಮೀಕ್ಷೆ ಇತ್ಯಾದಿ ಸಮೀಕ್ಷೆಗಳು ನಡೆದಿವೆ, ನಡೆಯುತ್ತಲೇ ಇವೆ. ಅಲ್ಲಿಯ ಸಮೀಕ್ಷೆಗಳು ಸಹ ಒಂದು ಒಮ್ಮತಕ್ಕೆ ಬಂದು ಸರ್ವೋತ್ತಮ ಚಿತ್ರಗಳನ್ನು ಆಯ್ಕೆ ಮಾಡಿಲ್ಲ. ಅಮೆರಿಕದ 'ಸೈಟ್ ಅಂಡ್ ಸೌಂಡ್' ಸಂಸ್ಥೆಯು ೧೯೫೨ರಿಂದ ಪ್ರತಿ ಹತ್ತು ವರ್ಷಕ್ಕೊಮ್ಮೆ ಪ್ರಪಂಚದ ಸರ್ವಶ್ರೇಷ್ಠ ಸಿನಿಮಾಗಳ ಬಗ್ಗೆ ನಡೆಸಿರುವ ಇದುವರೆಗಿನ ಐದು ಸಮೀಕ್ಷೆಗಳಲ್ಲೂ ಆರ್ಸನ್ ವೆಲ್ಲೆಸ್‌ನ "ಸಿಟಿಜನ್ ಕೇನ್" ಚಿತ್ರಕ್ಕೆ 'ಮತದಾರರು' ನಿರಂತರವಾಗಿ ಪ್ರಪಂಚದ ಸರ್ವಶ್ರೇಷ್ಠ ಚಿತ್ರಗಳಲ್ಲಿ ಪ್ರಥಮಸ್ಥಾನ ನೀಡಿದ್ದಾರೆ. ಉಳಿದಂತೆ ಇಟಲಿಯ ಫ್ರೆಡ್ರಿಕೋ ಫೆಲಿನಿಯ $8^1/_2$ ಮತ್ತು ಅಕೀರ

ಕುರಸೋವನ 'ಸೆವೆನ್ ಸಮುರಾಯ್' (ಜಪಾನ್) ಪ್ರಥಮ ಹತ್ತು ಚಿತ್ರಗಳಲ್ಲಿ ಸ್ಥಾನ ಪಡೆದಿವೆ. ನೂರು ಚಿತ್ರಗಳ ಪಟ್ಟಿಯಲ್ಲಿ ಭಾರತದ 'ಪಥೇರ್ ಪಾಂಚಾಲಿ' (ನಿರ್ದೇಶನ: ಸತ್ಯಜಿತ್ ರೇ) ಮಾತ್ರ ೧೯೬೨ರ ಸಮೀಕ್ಷೆಯಲ್ಲಿ ಹತ್ತು ಚಿತ್ರಗಳ ಪಟ್ಟಿಯಲ್ಲಿ ಒಮ್ಮೆ ಬಂದಿತ್ತು. ಚಿತ್ರ ಸಮೀಕ್ಷೆಗಳಲ್ಲೆಲ್ಲ 'ಸೈಟ್ ಅಂಡ್ ಸೌಂಡ್' ಸಂಸ್ಥೆ ನಡೆಸುವ ಸಮೀಕ್ಷೆಯೇ ಅತ್ಯಂತ ವಿಶ್ವಾಸಾರ್ಹವೆಂದು ಭಾವಿಸಲಾಗಿದೆ. ಉಳಿದಂತೆ ಅಮೆರಿಕದ 'ಟೈಮ್ಸ್' ಪತ್ರಿಕೆಯು ಮಾಡಿದ 'ಸಾರ್ವಕಾಲಿಕ ನೂರು ಶ್ರೇಷ್ಠ ಚಿತ್ರಗಳು' ಪಟ್ಟಿಯಲ್ಲಿ ಭಾರತದ ಸತ್ಯಜಿತ್ ರೇ ನಿರ್ದೇಶಿಸಿದ 'ಪಥೇರ್ ಪಾಂಚಾಲಿ', 'ಅಪರಾಜಿತೋ', 'ಅಪೂರ್ ಸಂಸಾರ್', ಮಣಿರತ್ನಂ ನಿರ್ದೇಶನದ 'ನಾಯಗನ್' ಮತ್ತು ಗುರುದತ್ ನಿರ್ದೇಶನದ 'ಪ್ಯಾಸಾ' ಚಿತ್ರಗಳು ಸ್ಥಾನ ಪಡೆದಿದ್ದವು.

ಯಾವ ಸಮೀಕ್ಷೆಗಳ ಪಟ್ಟಿಗೂ ಜಗತ್ತಿನ ವೀಕ್ಷಕರು ಒಮ್ಮತದ ಸಮ್ಮತಿ ನೀಡಿಲ್ಲ ಎನ್ನುವುದು ಬೇರೆ ಮಾತು. ಆದರೆ ಇಂಥ ಯಾವ ಸಮೀಕ್ಷೆಗಳಲ್ಲೂ; ಎಪ್ಪತ್ತಮೂರು ವರ್ಷ ಚಿತ್ರ ನಿರ್ಮಾಣದ ಇತಿಹಾಸವಿದ್ದು; ಸುಮಾರು ಮೂರು ಸಾವಿರ ಚಿತ್ರಗಳ ಬಿಡುಗಡೆ ಕಂಡಿರುವ ಕನ್ನಡ ಚಿತ್ರರಂಗದ ಒಂದು ಕೃತಿಯೂ ಕಾಣಿಸಿಕೊಂಡಿಲ್ಲ. ಇದಕ್ಕೆ ಹಲವಾರು ಕಾರಣಗಳಿರಬಹುದು. ಆದರೆ ಈ ಎಲ್ಲ ಹಿನ್ನೆಲೆಗಳನ್ನು ನೋಡಿದಾಗ, ವಿಶೇಷವಾಗಿ, ಕಾಲಕಾಲಕ್ಕೆ ಆಗಬೇಕಾದ ಸಮೀಕ್ಷೆಗಳ ಅಭಾವದ ಹಿನ್ನೆಲೆಯಲ್ಲಿ, ಕನ್ನಡದ ಹತ್ತು ಸಾರ್ವಕಾಲಿಕ ಶ್ರೇಷ್ಠ ಚಿತ್ರಗಳನ್ನು ಆಯ್ದು ಪಟ್ಟಿ ಮಾಡುವುದು ಜಗಳಕ್ಕೆ ಆಹ್ವಾನ ನೀಡಿದಂತೆ! ಆದುದರಿಂದ ಸುಮಾರು ಮೂವತ್ತೈದು ವರ್ಷಗಳಿಂದ ಕನ್ನಡ ಚಿತ್ರಗಳನ್ನು ಅಭ್ಯಾಸಪೂರ್ಣವಾಗಿ ನೋಡುತ್ತಾ ಬಂದಿರುವ ನಾನು ಆಯ್ಕೆ ಮಾಡಿರುವ ಈ ಹತ್ತು ಚಿತ್ರಗಳು ನನ್ನ ವೈಯಕ್ತಿಕ ಆಯ್ಕೆಯೇ ಹೊರತು ಸಾರ್ವತ್ರಿಕ ಆಯ್ಕೆಯಲ್ಲ. ಇಲ್ಲಿನ ಆಯ್ಕೆಗೆ ಜನಪ್ರಿಯತೆ ಮಾನದಂಡವಲ್ಲ. ಅಥವಾ ಕನ್ನಡ ಚಿತ್ರರಂಗಕ್ಕೆ ನೀಡಿರಬಹುದಾದ ತಿರುವುಗಳೂ ಕಾರಣವಲ್ಲ. ಆರಂಭದಲ್ಲಿ ನಾಟಕದ ವಿಸ್ತರಣೆಯಾಗಿ ರೂಪುಗೊಂಡ ಸಿನಿಮಾ ಕಲಾಪ್ರಕಾರ, ಕ್ರಮೇಣ ತನ್ನದೇ ಆದ ಕಲಾತ್ಮಕತೆ, ವ್ಯಾಕರಣ ಮತ್ತು ವಿಭಿನ್ನ ವಸ್ತುಗಳನ್ನು ನಿರೂಪಿಸಲು ಬಳಸಿಕೊಂಡ ಸಿನಿಮಾ ಸಾಧ್ಯತೆ, ತಾಂತ್ರಿಕತೆಯ ಪರಿಣಾಮ ಬಳಕೆ ಹಾಗೂ ಯುಗಧರ್ಮಕ್ಕೆ ಸ್ಪಂದಿಸಿದ ರೀತಿಯನ್ನು ಆಧಾರವಾಗಿಟ್ಟುಕೊಂಡು ಆಯ್ಕೆ ಮಾಡಿದ್ದೇನೆ. ಇಲ್ಲಿನ ಅನುಕ್ರಮಣಿಕೆ ಕನ್ನಡ ಚಿತ್ರರಂಗದ ಇತಿಹಾಸದ ಕಾಲಾನುಕ್ರಮಣಿಕೆಯನ್ನು ಅನುಸರಿಸಿದೆಯೇ ಹೊರತು, ಪ್ರಥಮ, ದ್ವಿತೀಯ.... ಇತ್ಯಾದಿ ಶ್ರೇಯಾಂಕವನ್ನು ನೀಡಲು ಬಳಸಿಲ್ಲ.

೧. ಬೇಡರ ಕಣ್ಣಪ್ಪ (೧೯೫೪)

ಕನ್ನಡ ಚಿತ್ರರಂಗಕ್ಕೆ ಒಳ ಬಲವನ್ನು ತಂದುಕೊಟ್ಟ ಕಾರಣಕ್ಕಾಗಿ ಮಾತ್ರ ಈ ಚಿತ್ರವನ್ನು ಸರ್ವಶ್ರೇಷ್ಠ ಪಟ್ಟಿಯಲ್ಲಿ ಸೇರಿಸಿಲ್ಲ. ಕನ್ನಡ ಸಂಸ್ಕೃತಿಯ ಭಾಗವಾದ ಭಕ್ತಿ ಪರಂಪರೆಯನ್ನು ತೆರೆಯ ಮೇಲೆ ಪರಿಣಾಮಕಾರಿಯಾಗಿ ಮೂಡಿಸಿ, ಆ ಮೂಲಕ ಅಂಥ ಚಿತ್ರಗಳ ಸರಣಿಯನ್ನು 'ಬೇಡರಕಣ್ಣಪ್ಪ' ಉದ್ಘಾಟಿಸಿತು. ಚಲನಚಿತ್ರಗಳು, ವಿಶೇಷವಾಗಿ ಭಕ್ತಿ ಮತ್ತು ಪೌರಾಣಿಕ ಕಥಾವಸ್ತುವನ್ನು ಆಧರಿಸಿದಂಥವು, ರಂಗಭೂಮಿಯ ವಿಸ್ತೃತ ತಾಂತ್ರಿಕ ನಿರೂಪಣೆ ಎಂದು

ಪರಿಭಾವಿಸಿದ್ದ ಮತ್ತು ಈ ಪರಿಭಾವನೆಗೆ ಪುರಾವೆಗಳು ಸಿಗುತ್ತಿದ್ದ ಕಾಲದಲ್ಲಿ ಸಿನಿಮಾದ ಭಾಷೆ, ಅದರ ವ್ಯಾಕರಣ ಮತ್ತು ತಂತ್ರಜ್ಞಾನವನ್ನು ಆ ಕಾಲದಲ್ಲಿ ಸಮರ್ಥವಾಗಿ ಅರಗಿಸಿಕೊಂಡು ತಯಾರಾದ ಚಿತ್ರವಿದು. ಈ ಚಿತ್ರದ ಸಂಕಲನ ಕಾರ್ಯ ಇಂದಿಗೂ ಅಭ್ಯಾಸಯೋಗ್ಯ. ಒಂದೇ ದೃಶ್ಯವನ್ನು ಅನೇಕ ಕೋನಗಳಿಂದ ಚಿತ್ರಿಸಿ, ವೈಪಿಂಗ್‌ನಂಥ ಸಂಕಲನ ತಂತ್ರವನ್ನು ಬಳಸಿ ಸಂಕಲನಗೊಂಡಿರುವ ಈ ಚಿತ್ರ ಬೀರುವ ದೃಶ್ಯಪರಿಣಾಮ ಇಂದಿಗೂ ಅಚ್ಚರಿಯುಂಟು ಮಾಡುತ್ತದೆ. ಕೇವಲ ಚರ್ಮವಾದ್ಯಗಳನ್ನೇ ಬಳಸಿ ಆರಂಭದಲ್ಲಿ ಸಂಯೋಜಿಸಿರುವ ಬೇಡರನೃತ್ಯ, ದೇವರ ಮೇಲೆ ಮುನಿಸಿಕೊಂಡು ವ್ಯಗ್ರನಾಗುವ ದಿಣ್ಣನ (ಕಣ್ಣಪ್ಪ) ಅಸಹಾಯಕತೆಯನ್ನು ಬಿಂಬಿಸಲು ಬಳಸಿರುವ ನಿಸರ್ಗದ ದೃಶ್ಯಾವಳಿ, ಭಕ್ತಿಯ ಭಾವೋತ್ಕರ್ಷ ಅಭಿವ್ಯಕ್ತಿಗೆ ಬಳಸಿರುವ ಹಾಡುಗಳು ಚಿತ್ರದ ಪರಿಣಾಮವನ್ನು ವಿಸ್ತರಿಸುವಲ್ಲಿ ಯಶಸ್ವಿಯಾಗಿವೆ.

ಹೀನ ಕುಲದಲ್ಲಿ ಹುಟ್ಟಿದ ಭಕ್ತನೊಬ್ಬನ ಸರಳತೆ, ಉಚ್ಚಕುಲದವರ ದೇವರ ಆರಾಧನೆಯ ಸಂಕೀರ್ಣತೆ, ಅರಣ್ಯ-ನಗರ ಸಂಸ್ಕೃತಿಗಳ ತಾಕಲಾಟ ಇತ್ಯಾದಿಗಳೆಲ್ಲವನ್ನೂ ಈ ಚಿತ್ರ ಆ ಕಾಲಕ್ಕೆ ಹೊಸದೆನ್ನುವ ರೀತಿಯಲ್ಲಿ ಪ್ರಸ್ತುತಪಡಿಸುತ್ತದೆ. ಡಾ. ರಾಜ್‌ಕುಮಾರ್ ಅವರ ಜೊತೆಗೆ ಟಿ.ಆರ್. ನರಸಿಂಹರಾಜು, ಜಿ.ವಿ.ಅಯ್ಯರ್ ಅವರನ್ನು ಪರಿಚಯಿಸಿದ ಈ ಚಿತ್ರದ ನಿರ್ದೇಶಕ ಎಚ್.ಎಲ್.ಎನ್. ಸಿಂಹರವರು ಮತ್ತೆ ಅದೇ ಮಟ್ಟದ ಚಿತ್ರವನ್ನು ನೀಡಲು ವಿಫಲರಾದರು.

೨. ಸ್ಕೂಲ್ ಮಾಸ್ಟರ್ (೧೯೫೮)

ಕನ್ನಡದ ಸಾಮಾಜಿಕ ಚಿತ್ರಗಳ ಚರ್ಚೆ ಬಂದಾಗ ಅನಿವಾರ್ಯವಾಗಿ ಪ್ರಸ್ತಾಪಿಸಲೇ ಬೇಕಾದ ಚಿತ್ರವಿದು. ಇಡೀ ಭಾರತದಲ್ಲೇ ಮೊದಲ ಬಾರಿಗೆ ಸಾಮಾಜಿಕ ಚಿತ್ರವನ್ನು ನಿರ್ಮಿಸಿದ್ದು ಕನ್ನಡ ಚಿತ್ರರಂಗ (ಚಿತ್ರ: ಸಂಸಾರ ನೌಕ-೧೯೩೬, ನಿರ್ದೇಶನ:ಎಚ್.ಎಲ್.ಎನ್.ಸಿಂಹ). 'ಸಂಸಾರ ನೌಕ' ಚಿತ್ರದಲ್ಲಿ ನಾಯಕನ ಪಾತ್ರ ವಹಿಸಿದ್ದ ಬಿ.ಆರ್.ಪಂತುಲು ತಮ್ಮ ಪದ್ಮಿನಿ ಪಿಕ್ಚರ್ಸ್ ಲಾಂಛನದಡಿ ತಯಾರಿಸಿದ ಚಿತ್ರಗಳಲ್ಲೇ ಅತ್ಯುತ್ತಮ ಚಿತ್ರವಿದು. ಇದಕ್ಕಿಂತಲೂ ದೃಶ್ಯ ಶ್ರೀಮಂತಿಕೆಯ ಶ್ರೀ ಕೃಷ್ಣ ದೇವರಾಯ ಚಿತ್ರವನ್ನು ಅವರು ನಿರ್ಮಿಸಿ ನಿರ್ದೇಶಿಸಿದ್ದರೂ, 'ಸ್ಕೂಲ್ ಮಾಸ್ಟರ್' ನೀಡುವ ಸಿನಿಮಾ ಅನುಭವವೇ ವಿನೂತನವಾದದ್ದು.

ಮರಾಠೀ ಸಣ್ಣ ಕತೆಯೊಂದನ್ನು ಆಧರಿಸಿದ ಈ ಚಿತ್ರವು ಒಬ್ಬ ಆದರ್ಶ ಗುರುವಿನ ಬದುಕು, ಸರ್ಕಾರಿ ನೌಕರರು ಮುಪ್ಪಿನಲ್ಲಿ ಪಡಬೇಕಾದ ಬವಣೆ, ಕೌಟುಂಬಿಕ ವಿಘಟನೆಯ ದಾರುಣತೆ, ವರದಕ್ಷಿಣೆಯ ವಿಕಾರರೂಪದ ಹಂದರವನ್ನೊಳಗೊಂಡಿದೆ. ಇಷ್ಟೊಂದು ಭಾವೋತ್ಕರ್ಷದ ವಸ್ತುಗಳಿದ್ದರೂ, ಪಂತುಲು ಅವರು ಅದನ್ನು ಮೆಲೋಡ್ರಾಮ ಮಾಡದೆ, ಸಂಯಮಪೂರ್ಣದಿಂದ ನಿರ್ವಹಿಸಿರುವ ರೀತಿ ಅಚ್ಚರಿ ಹುಟ್ಟಿಸುತ್ತದೆ. ಮುಪ್ಪಿನ ತಂದೆತಾಯಿಯರನ್ನು ಸಾಕಲು ಮಕ್ಕಳು ಪಾಲುಮಾಡಿಕೊಳ್ಳುವ ದೃಶ್ಯ; ಹೆಂಡತಿಯಿಂದ ಅಪರೂಪವಾಗಿ ಬಂದ ಕಾಗದವನ್ನು ಓದುವ ಅವಸರದಲ್ಲಿ ಕನ್ನಡಕವನ್ನು ಬೀಳಿಸಿಕೊಂಡು, ಓದಲು ತನ್ನ ಬೀಗನೇ ಕನ್ನಡಕವನ್ನು ಎರವಲು ಕೊಡದಿರುವಾಗ ಒಡೆದ ಕನ್ನಡಕದ ಗಾಜನ್ನು ಹಿಡಿದು ಪತ್ರವನ್ನು ಸ್ಕೂಲ್ ಮಾಸ್ಟರ್ ಓದುವಾಗಿನ ದೃಶ್ಯಗಳು ಇಂದಿಗೂ ಕಣ್ಣಿಗೆ ಕಟ್ಟಿದಂತಿವೆ. ಹಳ್ಳಿಗಾಡಿನಲ್ಲಿ ಅಂದಿನ ಕಾಲದ ಶಿಕ್ಷಣ ಸಮಸ್ಯೆ, ಅದಕ್ಕೆ ಬರುವ ಪ್ರತಿರೋಧ,

ಕುಟುಂಬದ ವಿಘಟನೆಯ ಸ್ವರೂಪ ಇತ್ಯಾದಿಗಳನ್ನು ಸಂಯಮಪೂರ್ಣವಾಗಿ ನಿರೂಪಿಸಿರುವ ಈ ಚಿತ್ರ, ಆ ಕಾಲಕ್ಕೆ ಬೆಂಗಳೂರಿನ ಅಂದಿನ ಗೀತಾ ಚಿತ್ರಮಂದಿರದಲ್ಲಿ ಸತತ ಮೂವತ್ತೆರಡು ವಾರ ನಡೆದು ದಾಖಲೆ ಮಾಡಿತ್ತು.

೩. ನಾಂದಿ (೧೯೬೪)

ಭಾರತೀಯ ಚಿತ್ರರಂಗ ಅದುವರೆವಿಗೂ ಕೈಹಾಕದ ಕಿವುಡು-ಮೂಗರ ಸಮಸ್ಯೆಯಂಥ 'ನೀರಸ' ವಸ್ತುವನ್ನು ಕೈಗೆತ್ತಿಕೊಂಡು ಸಮರ್ಥವಾಗಿ ನಿರೂಪಿಸಿದ ಚಿತ್ರವಿದು. 'ಹತ್ತು ಕಟ್ಟುವ ಬದಲು ಒಂದು ಮುತ್ತು ಕಟ್ಟುವ' ತತ್ವಕ್ಕೆ ಜೋತುಬಿದ್ದ ನಿರ್ದೇಶಕ ಎನ್.ಲಕ್ಷ್ಮಿನಾರಾಯಣರ ಮೊದಲ ನಿರ್ದೇಶನದ ಚಿತ್ರ. ಸದ್ಯದ ಆಯ್ಕೆಯಲ್ಲಿ ಅವರು ನಿರ್ದೇಶಿಸಿದ 'ಉಯ್ಯಾಲೆ' ಮತ್ತು 'ಮುಕ್ತಿ' ಚಿತ್ರಗಳು ಸ್ಪರ್ಧೆ ಹೂಡಿದ್ದವು. ಅವುಗಳನ್ನು ಪ್ರಯಾಸಪಟ್ಟು ಹೊರಗಿಡಬೇಕಾಯಿತು. ಅದಾಗಲೇ ಪ್ರಸಿದ್ಧಿಯನ್ನು ಪಡೆದಿದ್ದ ರಾಜ್‌ಕುಮಾರ್ ಅವರಿಗೆ ಡೀಗ್ಲಾಮರಸ್ ಪಾತ್ರವೊಂದನ್ನು ಸೃಷ್ಟಿಸುವುದರ ಜೊತೆಗೆ ಸ್ಥಳೀಯ ಸಂಸ್ಕೃತಿಯನ್ನು ಚಿತ್ರ ನಿರೂಪಣೆಯಲ್ಲಿ ಅಡಕ ಮಾಡಿದ ಖ್ಯಾತಿ ಲಕ್ಷ್ಮಿನಾರಾಯಣರವರಿಗೆ ಸಲ್ಲಬೇಕು. ವಿಶಾಲವಾದ ಪಾತ್ರದಲ್ಲಿ ನದಿಯೊಂದು ಗಂಭೀರವಾಗಿ ಹರಿಯುವಂತೆ ಈ ಚಿತ್ರವನ್ನು ನಿರ್ದೇಶಕರು ರೂಪಿಸಿದ್ದಾರೆ. ಇಲ್ಲಿ ಬಳಸಿರುವ ಹಾಡುಗಳು ಹಿತಮಿತವಾದ ಸಂಗೀತದಿಂದ ರಂಜಿಸುವ ಜೊತೆಗೆ ಅವೆಲ್ಲವೂ ಚಿತ್ರದ ಚೌಕಟ್ಟಿನೊಳಗೆ ಕತೆಗೆ ಪೂರಕವಾಗಿ ಬಂದಿವೆ. ಇಂಥ ಅದ್ಭುತ ಚಿತ್ರಕ್ಕೆ ರಾಷ್ಟ್ರಮನ್ನಣೆ ಸಿಗದಿದ್ದಾಗ ಕನ್ನಡ ರಸಿಕರು ಬೀದಿಗಿಳಿದು ಪ್ರತಿಭಟಿಸಿದ ಇತಿಹಾಸವು ಈ ಚಿತ್ರಕ್ಕಿದೆ.

೪. ಗೆಜ್ಜೆಪೂಜೆ (೧೯೭೦)

ಕನ್ನಡ ಚಿತ್ರರಂಗದಲ್ಲಿ ನಿರ್ದೇಶಕನಿಗೆ ಗುರುಸ್ಥಾನವೊಂದನ್ನು ಕಲ್ಪಿಸಿಕೊಟ್ಟವರು ಪುಟ್ಟಣ್ಣ ಕಣಗಾಲರು. ತಮ್ಮೆಲ್ಲ ವೈಚಾರಿಕ ಗೊಂದಲಗಳ ನಡುವೆಯೂ ಕನ್ನಡಕ್ಕೆ 'ಫ್ರೆಶ್' ಎನಿಸುವ ಚಿತ್ರಗಳನ್ನು ನೀಡಿದ ಪ್ರತಿಭಾವಂತರು. ಸಿನಿಮಾ ವ್ಯಾಕರಣ ಮತ್ತು ಭಾಷೆಯನ್ನು ಕಲಿತಿದ್ದ ಕೆಲವೇ ನಿರ್ದೇಶಕರಲ್ಲೊಬ್ಬರು. 'ಬೆಳ್ಳಿ ಮೋಡ' ಚಿತ್ರದಂತಹ ತಣ್ಣನೆಯ ದ್ರೋಹದ ಕಥಾವಸ್ತುವಿಗೆ ಭಾವಗೀತಾತ್ಮಕ ಸ್ಪರ್ಶ ನೀಡಿದ್ದ ಕಣಗಾಲರು, 'ಗೆಜ್ಜೆಪೂಜೆ'ಯ ಮೂಲಕ ನಿರೂಪಣೆಗೆ ಹೊಸ ಭಾಷ್ಯ ಬರೆದರು. ಇಂದಿಗೂ ಈ ಚಿತ್ರದ ಚಿತ್ರಕತೆ ಗಂಭೀರ ಸಿನಿಮಾ ಅಧ್ಯಯನಕಾರರಿಗೆ ಒಂದು ಸುಂದರ ಪಠ್ಯದಂತಿದೆ.

ವೇಶ್ಯೆಯರ ಪರಿವಾರದಲ್ಲಿ ಹುಟ್ಟಿದ ಹೆಣ್ಣುಮಗಳೊಬ್ಬಳು ಗಣ್ಯ ಸಮಾಜದ ಇತರ ಸದಸ್ಯರಂತೆ ಬದುಕುವ ಹಂಬಲದಿಂದ ಮಾಡುವ ಪ್ರಯತ್ನಗಳು ವಿಫಲವಾದಾಗ ಸಾವಿಗೆ ಮೊರೆಹೋಗುವ ದುರಂತ ಕತೆಯ ಈ ಚಿತ್ರ, ಎಂ.ಕೆ. ಇಂದಿರಾರವರು ಬರೆದ ಅದೇ ಹೆಸರಿನ ಕಾದಂಬರಿಯನ್ನು ಆಧರಿಸಿದೆ. ವಸ್ತು ಮೆಲೋಡ್ರಾಮಾಟಿಕ್ ಆಗಿದೆ. ಭಾವಪೂರ್ಣ ಸನ್ನಿವೇಶಗಳಿಗೆ ಅವಕಾಶ ಕಲ್ಪಿಸಿದೆ. ಆದರೆ ಪುಟ್ಟಣ್ಣನವರು ಈ ಕತೆಯನ್ನು ಒಂದು ಸಾಂಸ್ಕೃತಿಕ ಪರಿಸರದಲ್ಲಿ ಕಟ್ಟಿಕೊಟ್ಟಿದ್ದಾರೆ.

ಬಿಗಿಯಾದ ಚಿತ್ರಕತೆ, ಪ್ರಚೋದನಾತ್ಮಕ ದೃಶ್ಯಗಳಿಗೆ ಅವಕಾಶವಿದ್ದರೂ, ಅವುಗಳನ್ನು ಸಂಪೂರ್ಣವಾಗಿ ತ್ಯಜಿಸಿ ಒಂದು ಸಾಂಸ್ಕೃತಿಕ ಸನ್ನಿವೇಶದಲ್ಲಿ ಜ್ವಲಂತ ಸಮಸ್ಯೆಯೊಂದನ್ನು ಪರಿಣಾಮಕಾರಿಯಾಗಿ ನಿರೂಪಿಸಿರುವುದು ಈ ಚಿತ್ರದ ಹೆಗ್ಗಳಿಕೆ. ಸರ್ವಶ್ರೇಷ್ಠ ಚಿತ್ರಗಳ ಪಟ್ಟಿಗೆ ಪುಟ್ಟಣ್ಣನವರ 'ಬೆಳ್ಳಿಮೋಡ', 'ರಂಗನಾಯಕಿ' ಮತ್ತು 'ಕಥಾಸಂಗಮ' ಸ್ಪರ್ಧೆ ಹೂಡಿದರೂ, 'ಗೆಜ್ಜೆಪೂಜೆ' ಅವರ ನಿರ್ದೇಶನದ ಪ್ರಾತಿನಿಧಿಕ ಚಿತ್ರ ಎನ್ನುವ ಕಾರಣಕ್ಕಾಗಿ ಆರಿಸಲಾಗಿದೆ.

೫. ಸಂಸ್ಕಾರ (೧೯೭೦)

ಕನ್ನಡದ ಹೊಸ ಅಲೆಯ ಚಿತ್ರಸರಣಿಯನ್ನು ಮೆಲುದನಿಯಲ್ಲಿ 'ನಾಂದಿ' ಚಿತ್ರ ಉದ್ಘಾಟಿಸಿದರೂ, ಅದಕ್ಕೆ ಸೂಕ್ಷ್ಮತೆಯನ್ನು ತಂದುಕೊಟ್ಟ ಚಿತ್ರ 'ಸಂಸ್ಕಾರ'. 'ಸಂಸ್ಕಾರ'ದ ನಂತರ ಆ ಮಟ್ಟದ ಕಲಾತ್ಮಕ ಚಿತ್ರ ಕನ್ನಡದಲ್ಲಿ ಮೂಡಿ ಬರಲಿಲ್ಲ. ('ಘಟಶ್ರಾದ್ಧ' ಸ್ವಲ್ಪ ಮಟ್ಟಿಗೆ ಇದರ ಹತ್ತಿರ ಬಂತೆನ್ನಬಹುದು). ಅತ್ಯಂತ ವಿವಾದಾತ್ಮಕವಾದ ಈ ಚಿತ್ರ ಸೆನ್ಸಾರ್ ಬೋರ್ಡ್‌ನ ತೊಂದರೆಯನ್ನು ಎದುರಿಸಿತು. ಬಹಿಷ್ಕಾರದ ಬೆದರಿಕೆಯನ್ನು ಹಾಯ್ದು ಬಂತು. ಕೊನೆಗೆ ಕನ್ನಡಕ್ಕೆ ಮೊದಲ ರಾಷ್ಟ್ರಪತಿ ಚಿನ್ನದ ಪದಕವನ್ನು ಗಳಿಸಿಕೊಟ್ಟಿತು.

ಪ್ರೊ. ಯು.ಆರ್.ಅನಂತಮೂರ್ತಿಯವರ ಬಹುಚರ್ಚಿತ, ವಿವಾದಾತ್ಮಕ ಕಾದಂಬರಿಯನ್ನು ಆಧರಿಸಿ ನಿರ್ಮಿಸಲಾದ ಈ ಚಿತ್ರದ ಜೊತೆ ಸಿನಿಮಾ ಆಚೆಗಿನ ಕ್ಷೇತ್ರದ ಹಲವಾರು ಪ್ರತಿಭಾವಂತರು ದುಡಿದಿದ್ದಾರೆ. ನಾಟಕಕಾರ ಗಿರೀಶ್‌ಕಾರ್ನಾಡ್, ಸಂಗೀತಗಾರ ರಾಜೀವ್ ತಾರಾನಾಥ್, ಕಲಾವಿದ ಎಸ್.ಜಿ. ವಾಸುದೇವ್, ನಿರ್ದೇಶಕ ಪಟ್ಟಾಭಿರಾಮರೆಡ್ಡಿ, ಸಾಹಿತಿಗಳಾದ ಪಿ.ಲಂಕೇಶ್, ಸ್ನೇಹಲತಾರೆಡ್ಡಿ ಮುಂತಾದವರಿಗೆಲ್ಲ ಇದು ಹೊಸ ಅನುಭವ. ಆದರೆ ನಿರ್ದೇಶಕ ಪಟ್ಟಾಭಿರಾಮರೆಡ್ಡಿ ಅವರು ಈ ಚಿತ್ರವನ್ನು ರೂಪಿಸಿರುವ ಪರಿಯೇ ಅಚ್ಚರಿ ತರುತ್ತದೆ. ಬ್ರಾಹ್ಮಣ ಸಂಪ್ರದಾಯಗಳನ್ನು ಉಲ್ಲಂಘಿಸಿ ಬಹಿಷ್ಕಾರಕ್ಕೊಳಗಾದ ನಾರಾಣಪ್ಪನು ಸತ್ತ ನಂತರ ಎದುರಾಗುವ 'ಸಂಸ್ಕಾರ'ದ ಸಮಸ್ಯೆ ಈ ಚಿತ್ರದ ಕಥಾವಸ್ತು. ಅನಂತರ ನಡೆಯುವ ಘಟನೆಗಳು 'ತಾಂತ್ರಿಕ' ಸಂಘರ್ಷಗಳಿಗೆ ಎಡೆ ಮಾಡಿಕೊಡುತ್ತವೆ. ಇಂಥ ಅಮೂರ್ತ ತಾಂತ್ರಿಕ ತಲ್ಲಣಗಳನ್ನು ದೃಶ್ಯಕಾವ್ಯವಾಗಿ ಮೂಡಿಸಿರುವುದು ಈ ಚಿತ್ರದ ಹೆಗ್ಗಳಿಕೆ. ಟಾಂಕೋವನ್‌ರವರ ಛಾಯಾಗ್ರಹಣದಿಂದ ಹಿಡಿದು, ನೈಜ ಪರಿಸರದಲ್ಲಿ ಮಾಡಿರುವ ಚಿತ್ರೀಕರಣ, ಸಂಗೀತ, ಕಲಾ ನಿರ್ದೇಶನ, ನಟ-ನಟಿಯರ ಅಭಿನಯ, ಭಾರತೀಯ ಚಿತ್ರರಂಗದ ಸಂದರ್ಭದಲ್ಲಿ 'ಬೋಲ್ಡ್' ಎನ್ನಬಹುದಾದ ದೃಶ್ಯಗಳಿಂದ 'ಸಂಸ್ಕಾರ' ಇಂದಿಗೂ ಅಭ್ಯಾಸಪೂರ್ಣ ಚಿತ್ರವಾಗಿಯೇ ಉಳಿದಿದೆ.

೬. ಬೂತಯ್ಯನ ಮಗ ಅಯ್ಯು(೧೯೭೪)

ಎಷ್ಟೆ ಸಮೀಕ್ಷೆಗಳು ನಡೆದರೂ ಕನ್ನಡದ ಸರ್ವಶ್ರೇಷ್ಠ ಚಿತ್ರಗಳಲ್ಲಿ 'ಬೂತಯ್ಯನ ಮಗ ಅಯ್ಯು'ವಿಗೆ ಖಾಯಂ ಸ್ಥಾನ ಇದ್ದೇ ಇರುತ್ತದೆ. ಅಪಾರ ಜನಪ್ರಿಯತೆಯನ್ನು ಗಳಿಸಿದರೂ, ಈ ಚಿತ್ರ ಹೆಚ್ಚು ಚರ್ಚೆಗೆ ಬಾರಲಿಲ್ಲ. ಗ್ರಾಮೀಣ ಸಂಸ್ಕೃತಿಯನ್ನು ಅದರ ಎಲ್ಲ ಸೊಬಗು,

ವೈವಿಧ್ಯ ಮತ್ತು ತಾಕಲಾಟಗಳೊಡನೆ ಕಟ್ಟಿಕೊಡುವ ನಿರ್ದೇಶಕರಲ್ಲಿ ಸಿದ್ಧಲಿಂಗಯ್ಯ ಅಗ್ರಗಣ್ಯರು. ಗ್ರಾಮೀಣ ಬದುಕನ್ನು ಆಧರಿಸಿ ನಿರ್ಮಿಸಿದ ಅವರ ಚಿತ್ರಗಳಲ್ಲಿ ಗ್ರಾಮ ಪರಿಸರ ಕೇವಲ ಹಿನ್ನೆಲೆಯಾಗಿ ಬರುವುದಿಲ್ಲ. ಒಂದು ಸಾವಯವ ಘಟಕವಾಗಿ ಮೈದಾಳುತ್ತದೆ. ಗ್ರಾಮೀಣ ಬದುಕಲ್ಲಿ ಹಾಸುಹೊಕ್ಕಾಗಿರುವ ಚಮ್ಮಾರ, ಕ್ಷೌರಿಕ, ಜಟಕಾ ರಿಪೇರಿಯ ಸಾಬರು, ಬ್ರಾಹ್ಮಣರು, ಗಾಣಿಗರು, ಕುಂಬಾರರು ಇತ್ಯಾದಿ ಎಲ್ಲ ಜನಾಂಗದವರೂ ಅವರ ಚಿತ್ರಗಳಲ್ಲಿ ಪ್ರಾತಿನಿಧ್ಯ ಪಡೆಯುವುದರ ಜೊತೆಗೆ ಒಂದು ಸಾವಯವ ಸಂಬಂಧದ ಜಾಲವನ್ನೆ ಹೆಣೆಯುತ್ತಾರೆ. ಇದು 'ಬೂತಯ್ಯನ ಮಗ ಅಯ್ಯು' ಚಿತ್ರದಲ್ಲಿ ಪರಾಕಾಷ್ಠೆ ಕಂಡಿದೆ. ಈ ಚಿತ್ರವು ಮೇಲ್ನೋಟಕ್ಕೆ ಒಳಿತು–ಕೆಡುಕುಗಳ ಘರ್ಷಣೆಯಂತೆ ಕಂಡರೂ ಅವುಗಳನ್ನು ಪ್ರತಿನಿಧಿಸುವ ಬೂತಯ್ಯ, ಅಯ್ಯು, ದೇವಯ್ಯ ಮತ್ತು ಗುಳ್ಳ ಪಾತ್ರಗಳು ಕಪ್ಪು–ಬಿಳುಪಿನ ಪಾತ್ರಗಳಲ್ಲ (ಬೂತಯ್ಯ ಸ್ವಲ್ಪ ಹೊರತು, ಈ ಮಾತಿಗೆ). ಗ್ರಾಮೀಣ ಬದುಕಿನ ರೂಕ್ಷತೆ, ಸೊಬಗು, ಸಹಬಾಳ್ವೆ ಮತ್ತು ಪುರುಷಪ್ರಧಾನ ಸಮಾಜದಲ್ಲಿ ನಲುಗುವ ಹೆಣ್ಣಿನ ಬದುಕು–ಇವೆಲ್ಲವನ್ನು ಕಟ್ಟಿಕೊಡುವ ಈ ಚಿತ್ರ, ಕೂಡಿಬಾಳಿದರೆ ಸ್ವರ್ಗ ಸುಖ ಎನ್ನುವ ಆದರ್ಶದ ಪರಿಕಲ್ಪನೆಯಲ್ಲಿ ಮುಕ್ತಾಯಗೊಳ್ಳುತ್ತದೆ. ಗಾಂಧೀಜಿ ಕನಸಿದ ಗ್ರಾಮಸ್ವರೂಪದ ಎಳೆಯೊಂದನ್ನು ಈ ಚಿತ್ರವು ಮಾರ್ಗದರ್ಶಿ ಸೂತ್ರ ರೂಪದಲ್ಲಿ ಪಡಿಮೂಡಿಸಿದೆ. ಕಥೆಯನ್ನು ಬರೆದ ಗೊರೂರರ ಆಶಯಕ್ಕೆ ಇಲ್ಲಿ ಭಂಗ ಬಂದಿಲ್ಲ.

ಕೇವಲ ತತ್ವ, ಆದರ್ಶಗಳೇ ಈ ಚಿತ್ರದ ಮೇಲುಗೈ ಅಲ್ಲ. ತಾಂತ್ರಿಕವಾಗಿ ಈ ಚಿತ್ರದ್ದು ಒಂದು ದೊಡ್ಡ ಯಶಸ್ಸು. ಸಂಗೀತ, ಛಾಯಾಗ್ರಹಣ, ಸಂಕಲನ ಇವೆಲ್ಲವುಗಳ ಸಮುಚಿತ ಕಾಣಿಕೆ 'ಬೂತಯ್ಯನ ಮಗ ಅಯ್ಯು' ಚಿತ್ರವನ್ನು ಶ್ರೇಷ್ಠ ಚಿತ್ರವಾಗಿಸಿದೆ.

೭. ಚೋಮನ ದುಡಿ (೧೯೭೫)

ಒಂದು ಸ್ವಂತ ನೆಲದ ಕನಸು ಕಂಡ ಚೋಮನ ಕತೆಯನ್ನು ಕಾದಂಬರಿಯಾಗಿಸಿ ಗೆದ್ದ ಕಾರಂತರ ಯಶಸ್ಸನ್ನು ಬಿ.ವಿ.ಕಾರಂತರು ಸಿನಿಮಾದಲ್ಲಿ ಮುಂದುವರೆಸಿದ್ದಾರೆ. ಕಾದಂಬರಿಯ ಆಶಯಗಳಿಗೆ ಕಿಂಚಿತ್ತೂ ಲೋಪವಾಗದಂತೆ ದೃಶ್ಯ ಮಾಧ್ಯಮದಲ್ಲಿ ವಿಸ್ತರಿಸಿರುವ ಬಿ.ವಿ.ಕಾರಂತರು, ಎಂ.ವಿ. ವಾಸುದೇವರಾವ್ ಅವರ ದೇಹದಲ್ಲಿ ಚೋಮನನ್ನು ಪರಕಾಯ ಪ್ರವೇಶ ಮಾಡಿಸಿ ಬಿಟ್ಟಿದ್ದಾರೆ. ಕೆಳವರ್ಗದವರ ನೆಲದ ಹಂಬಲ, ಊಳಿಗಮಾನ್ಯ ಪದ್ಧತಿಯ ತಣ್ಣನೆಯ ಕ್ರೌರ್ಯ. ಬದುಕನ್ನರಸಿ ಘಟ್ಟದ ಮೇಲೆ ಹೋಗುವ ದುರ್ಬಲರ ಅಸಹಾಯಕತೆಯ ದುರ್ಬಳಕೆ, ಮತಾಂತರದ ಹುನ್ನಾರ.... ಹೀಗೆ ಒಂದು ಕಾಲಘಟ್ಟದ ಚರಿತ್ರೆಯನ್ನೇ ಕಾರಂತರು ಕಟ್ಟಿದ್ದಾರೆ. ಇದೆಲ್ಲಕ್ಕಿಂತ ಮುಖ್ಯವಾಗಿ ಇಡೀ ಕತೆಯ ತವಕ, ತಲ್ಲಣ, ಅಳುಕು, ಸಂಭ್ರಮ, ಸಂತೋಷ, ದುಃಖವೆಲ್ಲವನ್ನೂ ಚೋಮನ 'ದುಡಿ'ಯಿಂದ ಹೊರಡುವ ನಾದವು ಹಿಡಿದಿಡುವ ಕ್ರಮ, ಭಾರತೀಯ ಸಿನಿಮಾ ಚರಿತ್ರೆಯಲ್ಲೇ ಹೊಸದು. ಎಲ್ಲೂ ಕ್ರೌರ್ಯದ ಹಸಿಹಸಿತನವನ್ನು ತೋರಿಸದೆ, ಕಲಾತ್ಮಕ ಮಟ್ಟದಲ್ಲಿ ಹೃದಯವನ್ನು ತಟ್ಟಿರುವ ರೀತಿಯಲ್ಲಿ ಹೇಳಿರುವ ಈ ಚಿತ್ರ ಸಾಮಾನ್ಯ ಜನರನ್ನೂ ಮುಟ್ಟಿತೆನ್ನುವುದು ಅದರ ಶಕ್ತಿಶಾಲಿ ನಿರೂಪಣೆಗೆ ಪುರಾವೆಯೊದಗಿಸಿದೆ.

೮. ಹಂಸಗೀತೆ (೧೯೭೫)

ಕನ್ನಡದ ಕ್ರಿಯಾಶೀಲತೆ ತನ್ನ ಅತ್ಯುನ್ನತ ಸಂತಸದ ಕ್ಷಣಗಳನ್ನು ಅನುಭವಿಸಿದ್ದು ೧೯೭೪,೭೫ರಲ್ಲಿ. ೧೯೭೪ರಲ್ಲಿ 'ಭೂತಯ್ಯನ ಮಗ ಅಯ್ಯು' ಹೊಸ ಅಧ್ಯಾಯ ಬರೆದರೆ, ೧೯೭೫ರಲ್ಲಿ ಬಿಡುಗಡೆಯಾದ 'ಚೋಮನದುಡಿ' ಮತ್ತು 'ಹಂಸಗೀತೆ' ಸಿನಿಮಾ ಸಾಧ್ಯತೆಗಳ ಎರಡು ವಿಭಿನ್ನ ಮಾರ್ಗಗಳನ್ನು ತೋರಿದವು. ಇದೇ ವರ್ಷ ಪುಟ್ಟಣ್ಣನವರ 'ಕಥಾ ಸಂಗಮ' ಮತ್ತೊಂದು ಮಾರ್ಗವನ್ನು ತೆರೆದು ತೋರಿಸಿತು.

ಒಬ್ಬ ಉತ್ತಮ ನಟನಾದರೂ ನಟನೆಯನ್ನು ತೊರೆದ; ಸರಳ ಮತ್ತು ಅರ್ಥಪೂರ್ಣ ಗೀತೆ ಮತ್ತು ಸಂಭಾಷಣೆಗಳನ್ನು ಬರೆದು ಯಶಸ್ವಿಯಾದರೂ ಅದನ್ನು ಮುಂದುವರಿಸದ; ಅನೇಕ ವ್ಯಾಪಾರಿ ಚಿತ್ರಗಳನ್ನು ತೆಗೆದರೂ ಅವುಗಳಲ್ಲಿ ಕೊರತೆ ಕಂಡ ಜಿ.ವಿ.ಅಯ್ಯರ್, ಕೊನೆಗೆ ತಮ್ಮ ನೆಲೆಯನ್ನು ಕಂಡುಕೊಂಡಿದ್ದು 'ಹಂಸಗೀತೆ'ಯಲ್ಲಿ. ತ.ರಾ.ಸು. ಅವರ ಇದೇ ಕಾದಂಬರಿಯನ್ನು ಆಧರಿಸಿ ಹಿಂದಿಯಲ್ಲಿ ತಯಾರಾದ 'ಬಸಂತ್‌ಬಹಾರ್' ಚಿತ್ರದ ಮಾದರಿ ಎದುರಿಗಿದ್ದರೂ, ಅದನ್ನು ಸಂಪೂರ್ಣ ಉಪೇಕ್ಷಿಸಿ ಕಥಾವಸ್ತುವಿಗೆ ನವನವೀನವಾದ ನಿರೂಪಣೆಯ ಕ್ರಮವನ್ನು ಅಳವಡಿಸಿದವರು ಜಿ.ವಿ.ಅಯ್ಯರ್.

ಚಿತ್ರದುರ್ಗದ ಪರಿಸರದಲ್ಲಿ ಹುಟ್ಟಿದ ಅಮೋಘ ಪ್ರತಿಭಾವಂತ ಸಂಗೀತಗಾರನೆಂದು ಹೇಳುಲಾಗುವ ಭೈರವಿ ವೆಂಕಟಸುಬ್ಬಯ್ಯನ ಬದುಕಿನ ಏಳು-ಬೀಳುಗಳನ್ನು ಈ ಚಿತ್ರದಲ್ಲಿ ಹೇಳಿರುವ ರೀತಿ ಬೆರಗುಗೊಳಿಸುವಂಥದು. ಆರಂಭದಲ್ಲೇ ಇದೊಂದು ಸತ್ಯಕತೆ ಎಂದು ಪ್ರೇಕ್ಷಕರಿಗೆ ಮನದಟ್ಟು ಮಾಡಿಸುವ ದೃಶ್ಯದಿಂದ ಹಿಡಿದು, ಅಂತ್ಯದಲ್ಲಿ ವೆಂಕಟಸುಬ್ಬಯ್ಯ ತನ್ನ ನಾಲಗೆಯನ್ನು ಕತ್ತರಿಸಿಕೊಳ್ಳುವವರೆಗೆ ಈ ಚಿತ್ರ ಎಲ್ಲಿಯೂ ಹದ ತಪ್ಪುವುದಿಲ್ಲ. ತನ್ನ ನಿರ್ದಿಷ್ಟ ಗತಿಯನ್ನು ಬದಲಿಸುವುದಿಲ್ಲ. ಒಂದು 'ಪೀರಿಯಡ್' ಅನ್ನು ಕಟ್ಟಿಕೊಡಲು ಬೇಕಾಗುವ ಸಾಂಸ್ಕೃತಿಕ ಪರಿಕರಗಳನ್ನೆಲ್ಲ ಅಯ್ಯರ್‌ರವರು ತಮ್ಮ ಅಮೋಘ ಪ್ರತಿಭೆಯಿಂದ ಇಲ್ಲಿ ಬಳಸಿದ್ದಾರೆ. ಸಂಗೀತಗಾರನ ಭಾವಗಳು, ಅಸಹಾಯಕತೆಗಳು ಅವನ ಹುಡುಕಾಟ ಇವೆಲ್ಲವುಗಳನ್ನು ಬಿಂಬಿಸಲು ಸಂಗೀತವನ್ನೇ ಸಮರ್ಥವಾಗಿ ಬಳಸಿ ದೃಶ್ಯಪರಿಣಾಮವನ್ನು ಸೃಷ್ಟಿಸಿದ್ದಾರೆ. ಇದು ಭಾರತೀಯ ಚಿತ್ರರಂಗದಲ್ಲೇ ಅಪೂರ್ವವೆನಿಸಿದ ನಿರೂಪಣೆ.

೯. ಘಟಶ್ರಾದ್ಧ (೧೯೭೭)

ಸಿನಿಮಾ ನಿರೂಪಣೆಯಲ್ಲಿ ಬೌದ್ಧಿಕತೆಯನ್ನೆ ಪ್ರಧಾನವಾಗಿ ಬಳಸಿಕೊಂಡು ಬಂದಂತಹ ಚಿತ್ರಗಳಲ್ಲಿ ಘಟಶ್ರಾದ್ಧವನ್ನು ಮೀರಿಸುವ ಚಿತ್ರಗಳಿಲ್ಲ. ಇದು ಮೇಲ್ನೋಟಕ್ಕೆ ಎಳೆಯ ವಯಸ್ಸಿನಲ್ಲಿ ವಿಧವೆಯಾದ ಸಾಂಪ್ರದಾಯಿಕ ಕುಟುಂಬದ ಹೆಣ್ಣುಮಗಳು ಅನುಭವಿಸುವ ಯಾತನೆ, ಸಂಪ್ರದಾಯ ವಿಧಿಸುವ ಶಿಕ್ಷೆಯ ಕ್ರೌರ್ಯವನ್ನು ಕುರಿತ ಚಿತ್ರದಂತೆ ಕಂಡರೂ, ಆಳದಲ್ಲಿ ಒಂದು ಸಂಸ್ಕೃತಿಯ ಅವನತಿಯ ಮಾರ್ಗಗಳನ್ನು ಹಿಡಿದಿಡುವ ಪ್ರಯತ್ನವಾಗಿದೆ. ಕತೆಯ ಸಂಕೀರ್ಣತೆಯನ್ನು ಹಿಡಿದಿಡಲು ನಿರ್ದೇಶಕರು ಬಳಸಿರುವ ಪರಿಸರದ ಭಾಷೆ, ಸಂಕೇತ, ಪ್ರತಿಮೆಗಳೆಲ್ಲ ಚಿತ್ರಕ್ಕೆ ಸಂಕೀರ್ಣತೆಯನ್ನು ತಂದಿವೆ. ಸಾಮಾನ್ಯ ವೀಕ್ಷಕರಿಗೆ ಕ್ಲಿಷ್ಟವೆನಿಸುವ ಈ

ಚಿತ್ರ, ಸಿನಿಮಾದ ವ್ಯಾಕರಣ ಮತ್ತು ಅದರ ವಿವಿಧ ಸಾಧ್ಯತೆಗಳನ್ನು ಸಮರ್ಥವಾಗಿ ದುಡಿಸಿಕೊಂಡಿದೆ. 'ಘಟಶ್ರಾದ್ಧ' ಇಂದಿಗೂ ಅದು ಹಿಡಿದಿಡುವ ವಿವರಗಳಿಂದ ಅಚ್ಚರಿಗೊಳಿಸುತ್ತದೆ. ಸದ್ಯದ ಪಟ್ಟಿಯಲ್ಲಿ ನಿರ್ದೇಶಕ ಗಿರೀಶ್ ಕಾಸರವಳ್ಳಿಯವರ 'ಕ್ರೌರ್ಯ', 'ತಾಯಿ ಸಾಹೇಬ','ದ್ವೀಪ' ಚಿತ್ರಗಳು ಸ್ಥಾನ ಗಿಟ್ಟಿಸಲು ಪೈಪೋಟಿ ನೀಡಿದರೂ, ಅವರ ಈ ಕಪ್ಪು-ಬಿಳಿಪು ಮಾಸ್ಟರ್‌ಪೀಸ್ ನನ್ನ ಆಲ್‌ಟೈಂ ಗ್ರೇಟ್ ಆಗಿದೆ. ಚಿತ್ರವೆಂದರೆ ಕಲಾವಿದರ ಅಭಿನಯ ಮಾತ್ರವಲ್ಲ, ಸಂಭಾಷಣೆಯಲ್ಲ, ಕತೆಯೂ ಅಲ್ಲ; ಅವುಗಳನ್ನು ಬಳಸಿಕೊಂಡೂ ಅದನ್ನು ಮೀರಿ ಕಲಾಕೃತಿಯನ್ನು ರೂಪಿಸಬಹುದೆಂಬ ಮಾತಿಗೆ ಈ ಚಿತ್ರ ಸಾಕ್ಷಿಯಾಗಿದೆ.

೧೦. ಜನುಮದ ಜೋಡಿ (೧೯೯೬)

ಗುಜರಾತಿನ ಖ್ಯಾತ ಕಾದಂಬರಿಕಾರ ಪನ್ನಾಲಾಲ್ ಪಟೇಲ್ ಅವರ ಪ್ರಶಸ್ತಿ ವಿಜೇತ ಕಾದಂಬರಿಯನ್ನು ಆಧರಿಸಿದ ಚಿತ್ರವಾದರೂ, ಕನ್ನಡದ ಜಾಯಮಾನಕ್ಕೆ ಸಮರ್ಥವಾಗಿ ಒಗ್ಗಿಸಲಾದ ಚಿತ್ರವಿದು. ಇದು ಒಂದು ಸಾಧಾರಣ ಪ್ರೇಮದ ಕತೆಯೆಂದು ಮೇಲ್ನೋಟಕ್ಕೆ ಅನಿಸಿದರೂ, ಅದರ ನಿರೂಪಣೆಗೆ ಸ್ಥಳೀಯ ಸಂಸ್ಕೃತಿಯ ವರ್ಣ ವೈವಿಧ್ಯವನ್ನು ಹಿನ್ನೆಲೆಯಲ್ಲಿ ಬಳಸಿಕೊಳ್ಳುವಲ್ಲಿ ನಿರ್ದೇಶಕ ನಾಗಭರಣ ತೋರಿರುವ ಜಾಣ್ಮೆ ಅಸಾಧಾರಣ. ಇಲ್ಲಿಯ ಹಬ್ಬ ಹರಿದಿನಗಳು-ಜಾತ್ರೆಗಳು-ಸಂಪ್ರದಾಯ ಆಚರಣೆಗಳೆಲ್ಲವನ್ನೂ ಕತೆಯ ಭಾವಕ್ಕೆ ಪೂರಕವಾಗಿ ಅಳವಡಿಸಲಾಗಿದೆ. ಇಲ್ಲಿಯ ಸಂಗೀತಕ್ಕೂ ಸ್ಥಳೀಯ ಜಾನಪದದ ಜನಪ್ರಿಯ ಧಾಟಿಗಳನ್ನೆ ಬಳಸಿಕೊಳ್ಳಲಾಗಿದೆ. ಈ ಚಿತ್ರ ಪಡೆದ ಅಭೂತಪೂರ್ವ ಯಶಸ್ಸಿಗೆ ಅನೇಕ ಕಾರಣಗಳಿವೆ. ಆದರೆ ಕೆಳಜಾತಿಯ ಹೆಣ್ಣುಮಗಳೊಬ್ಬಳು ತನ್ನ ನಿಲುವಿಗೆ ಗಟ್ಟಿಯಾಗಿ ಅಂಟಿಕೊಂಡು ಸಂಪ್ರದಾಯವನ್ನು ಎದುರಿಸಿದ ರೀತಿ ಈ ಚಿತ್ರದ ಹೆಗ್ಗಳಿಕೆ. ಗ್ರಾಮೀಣ ಪರಿಸರದ ಸಾಧಾರಣ ಕುಟುಂಬಗಳ ತುಮುಲಗಳನ್ನೆ ಈ ಚಿತ್ರ ವಿಭಿನ್ನ ರೀತಿಯಲ್ಲಿ ಪ್ರಸ್ತುತ ಪಡಿಸುತ್ತದೆ.

***

ಈ ಪಟ್ಟಿಯನ್ನು ಮಾಡುವಾಗ ಅದೆಷ್ಟು ನನ್ನ ಮೆಚ್ಚಿನ ಚಿತ್ರಗಳು ಬಿಟ್ಟು ಹೋಗಿವೆ! ಯಾವುದೇ ಅನ್ಯಾಯವನ್ನು ಮಾಡದಿದ್ದರೂ ತಮಗೆ ಸಂಬಂಧಿಸದ ಅನೇಕ ಕಾರಣಗಳಿಗಾಗಿ ಕಷ್ಟಗಳ ಸರಮಾಲೆಯನ್ನೆ ಅನುಭವಿಸುವ ಪಾತ್ರಗಳಿಂದಲೇ ತುಂಬಿರುವ 'ಕಸ್ತೂರಿ ನಿವಾಸ' ಅಂಥ ಚಿತ್ರಗಳಲ್ಲೊಂದು. ಇಲ್ಲಿನ ದುರಂತ ಗ್ರೀಕ್ ನಾಟಕಗಳ ದುರಂತವನ್ನು ನೆನಪಿಗೆ ತರುತ್ತದೆ. ಸಾಮಾಜಿಕ ಚಿತ್ರಗಳಿಗೆ, ವಿಶೇಷವಾಗಿ ಗ್ರಾಮೀಣ ಬದುಕನ್ನಾಧರಿಸಿದ ಚಿತ್ರಗಳಲ್ಲೇ ವಿಶಿಷ್ಟವೆನಿಸುವ ಕು.ರಾ.ಸೀ.ಅವರ 'ಅಣ್ಣತಂಗಿ'; ವಿಭಿನ್ನ ಕಥಾವಸ್ತುವನ್ನೊಳಗೊಂಡ 'ನಕ್ಕರೆ ಅದೇ ಸ್ವರ್ಗ', 'ನಂದಾದೀಪ'; ಅಭೂತಪೂರ್ವ ಜನಪ್ರಿಯತೆ ಪಡೆದ 'ಬಂಗಾರದ ಮನುಷ್ಯ', ಅಭಿನಯವನ್ನು ಪರಾಕಾಷ್ಠೆ ಮುಟ್ಟಿಸಿದ ರಾಜ್‌ರವರ 'ಬಂಗಾರದ ಪಂಜರ', 'ಸಂಧ್ಯಾರಾಗ', 'ಚಂದವಳ್ಳಿಯ ತೋಟ', 'ಸತ್ಯಹರಿಶ್ಚಂದ್ರ', 'ಸನಾದಿ ಅಪ್ಪಣ್ಣ'; ಬಾಕ್ಸ್‌ಆಫೀಸ್ ಕೊಳ್ಳೆ ಹೊಡೆದ 'ಶಂಕರ್‌ಗುರು', 'ಪ್ರೇಮಲೋಕ'; ಕಲಾತ್ಮಕ ಚಿತ್ರಗಳು ಬಂದ ಕಾಲದಲ್ಲಿ ನಮ್ಮನ್ನು

ಕೆರಳಿಸಿದ 'ಕಾಡು', 'ಬ್ಯಾಂಕರ್ ಮಾರ್ಗಯ್ಯ', 'ಪರಸಂಗದ ಗೆಂಡೆತಿಮ್ಮ'; ಹೊಸಬಗೆಯ 'ಕೋಕಿಲ', 'ಮಿಂಚಿನ ಓಟ', 'ಆಕ್ಸಿಡೆಂಟ್'; ಪತ್ತೇದಾರಿ ಚಿತ್ರಗಳಿಗೆ ಹೊಸ ಭಾಷ್ಯ ಬರೆದ 'ಅಪರಿಚಿತ'; ಮೊಲಿಯರ್ ನಾಟಕವನ್ನಾಧರಿಸಿದ 'ಸುಬ್ಬಾ ಶಾಸ್ತ್ರೀ', ಮೈನವಿರೇಳಿಸುತ್ತಿದ್ದ 'ಶ್ರೀ ಕೃಷ್ಣದೇವರಾಯ', 'ಸತ್ಯಹರಿಶ್ಚಂದ್ರ', 'ಬಬ್ರುವಾಹನ', 'ಸಂಪತ್ತಿಗೆ ಸವಾಲ್'; ಭಕ್ತಿಯನ್ನು ಬಿಂಬಿಸಿದ 'ಭಕ್ತ ಕನಕದಾಸ', 'ಭಕ್ತ ಕುಂಬಾರ', 'ಸಂತ ತುಕಾರಾಂ'; ಎಂ.ಆರ್. ವಿಠ್ಠಲ್‌ರವರ 'ನಮ್ಮ ಮಕ್ಕಳು', 'ನವಜೀವನ'; ವಿಷ್ಣುವರ್ಧನರ 'ನಾಗರಹಾವು'; ದೊರೆ ಭಗವಾನರ 'ಚಂದನದ ಗೊಂಬೆ', 'ಬಯಲುದಾರಿ'; ರಾಜಕೀಯ-ಭೂಗತದೊರೆಗಳ ಸಂಪರ್ಕವನ್ನು ಮೊದಲಬಾರಿಗೆ ತೆರೆಯ ಮೇಲೆ ಮೂಡಿಸಿದ 'ಅಂತ'..... ಹೀಗೆ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ. ಆಗ ಕನ್ನಡ ಚಿತ್ರರಂಗ ಎಷ್ಟೊಂದು ಶ್ರೀಮಂತ ಎಂಬ ಭಾವ ಅಂಕುರ ವಾಗುತ್ತದೆ.

ಡಾ.ಕೆ.ಪುಟ್ಟಸ್ವಾಮಿ ತಮ್ಮ ವೃತ್ತಿಜೀವನವನ್ನು ಪತ್ರಕರ್ತರಾಗಿ ಆರಂಭಿಸಿದರಾದರೂ, ಈಗ ಕರ್ನಾಟಕ ಸರ್ಕಾರದ ವಾರ್ತಾ ಸೇವಾ ವಿಭಾಗದಲ್ಲಿ ಅಧಿಕಾರಿಯಾಗಿ ಕೆಲಸ ಮಾಡುತ್ತಿದ್ದಾರೆ. ಸುಮಾರು ಮೂವತ್ತೈದು ವರ್ಷಗಳಿಂದ ಕನ್ನಡ ಚಿತ್ರಗಳನ್ನು ಅಭ್ಯಾಸಪೂರ್ಣವಾಗಿ ನೋಡುತ್ತಾ ಬಂದಿರುವ ಇವರು, ಕನ್ನಡಕ್ಕೆ ಅಪರೂಪದ ವೈಜ್ಞಾನಿಕ ಮತ್ತು ವೈಚಾರಿಕ ಕೃತಿಗಳನ್ನೂ ಅನುವಾದಿಸಿ ಕೊಡುವ ಕೆಲಸದಲ್ಲೂ ತೊಡಗಿದ್ದಾರೆ.

※

ಅತಿರಥ ಮಹಾರಥರು...

– ರವೀಂದ್ರ ರೇಷ್ಮೆ

ಕರ್ನಾಟಕದ ಹತ್ತು ಅತ್ಯುತ್ತಮ ರಾಜಕಾರಣಿಗಳು :

೧. ದೇವರಾಜ ಅರಸು
೨. ನಜೀರ್ ಸಾಬ್
೩. ಬಿ.ಬಸವಲಿಂಗಪ್ಪ
೪. ಶಾಂತವೇರಿ ಗೋಪಾಲಗೌಡರು
೫. ಎಸ್.ನಿಜಲಿಂಗಪ್ಪ
೬. ಕೆಂಗಲ್ ಹನುಮಂತಯ್ಯ
೭. ಜಾಫರ್ ಶರೀಫ್
೮. ಕೆ.ಎಚ್.ಪಾಟೀಲ
೯. ಸಿದ್ಧರಾಮಯ್ಯ
೧೦. ರಮೇಶ್‌ಕುಮಾರ್

"ಅತ್ಯುತ್ತಮ" ಎಂಬ ಮಾನ್ಯತೆಗೆ ಭಾಜನರಾಗಬಲ್ಲ ರಾಜಕಾರಣಿ ಯಾರೆಂದು ತೀರ್ಮಾನಿಸಲು ಬಳಸುವ ಮಾನದಂಡವಾದರೂ ಏನಿರಬೇಕು? ಈ ಬಗ್ಗೆ ಸಾಕಷ್ಟು ಅಭಿಪ್ರಾಯಭೇದ, ಭಿನ್ನಮತವಿರುವುದು ಸಹಜವೇ. ಆದರೆ ಅಧಿಕಾರ ರಾಜಕಾರಣದ ಬಹುರೂಪಿ ಒತ್ತಡಗಳಿಂದಾಗಿ ಒಂದಷ್ಟು ರಾಜಿಮಾಡಿಕೊಂಡರೂ ಸಹ, ತಮ್ಮ ಜನಪರ ಕಾಳಜಿ, ವ್ಯಕ್ತಿಗತ ನಿಯತ್ತು ಹಾಗೂ ಕ್ರಿಯಾಶೀಲತೆಯಿಂದಾಗಿ ದಕ್ಷ ಆಡಳಿತಗಾರರು ಎನಿಸಿಕೊಂಡವರು; ಅಥವಾ ಎಂದೆಂದಿಗೂ ಮಂತ್ರಿ ಅಥವಾ ಮುಖ್ಯಮಂತ್ರಿ ಪದವಿಗೇರದೇ ಹೋದರೂ, ಕೇವಲ ತಮ್ಮ ತತ್ವನಿಷ್ಠತೆ, ಸೈದ್ಧಾಂತಿಕ ಬದ್ಧತೆ ಮತ್ತು ಹೋರಾಟ ಮನೋಧರ್ಮದಿಂದಾಗಿಯೆ ಜನಪ್ರಿಯತೆಯ ಶಿಖರಕ್ಕೇರಿದವರು– ಹೀಗೆ ಎರಡು ವಿಧದ ಅಳತೆ ಗೋಲುಗಳಿಂದ ಆ ಹತ್ತು ಅತ್ಯುತ್ತಮ ಜನ ನಾಯಕರು ಗಳನ್ನಾರಿಸುವ ಪ್ರಯತ್ನವಿಲ್ಲಿದೆ.

ಕಳೆದ ಮೂರು ದಶಕಗಳಿಂದೀಚೆಗಿಂತಲೂ ಚುನಾವಣೆಯಿಂದ ಚುನಾವಣೆಗೆ ಸರಕಾರಗಳನ್ನು, ಪಕ್ಷಗಳನ್ನು ದುಂಡಾವರ್ತಿ ಬದಲಾಯಿಸುತ್ತಲೇ ಬಂದಿರುವ ಕರ್ನಾಟಕದ ಮತದಾರನ ರಾಜಕೀಯ ಪ್ರಬುದ್ಧತೆಯ ಕಾರಣದಿಂದಲೋ ಅಥವಾ ನೈತಿಕ ಜಾಗೃತಿಯಿಂದಾಗಿಯೋ ಏನೋ, ಇಲ್ಲಿ ಒಂದೇ ಒಂದು ಪಾರ್ಟಿ ಅಥವಾ ಒಬ್ಬನೇ ಒಬ್ಬ

ನಾಯಕನ ಏಕಾಧಿಪತ್ಯ ಸುದೀರ್ಘಕಾಲ ಹೆಪ್ಪುಗಟ್ಟಿದ ಸ್ಥಿತಿಯಲ್ಲಿ ಮುಂದುವರಿಯುವುದು ಸಾಧ್ಯವೇ ಇಲ್ಲವೆಂಬಂತಹ ಚಂಚಲತೆ; ಇಂತಹ ಅನಿಶ್ಚಿತತೆ ಹಾಗೂ ಅಸ್ಪಷ್ಟತೆಯೆ ಒಂದು ರೀತಿಯಲ್ಲಿ ಇಲ್ಲಿನ ಪ್ರಜಾತಂತ್ರದ ಜೀವಂತಿಕೆಯ ಲಕ್ಷಣವಾಗಿದೆ!

ಕರ್ನಾಟಕದ ಬಹುತೇಕ ಜನನಾಯಕರುಗಳು ಪಶ್ಚಿಮ ಬಂಗಾಲದ ಕಮ್ಯುನಿಸ್ಟ್ ಮುಂದಾಳು ಗಳಂತೆ ಆಕ್ಸ್‌ಫರ್ಡ್–ಕೇಂಬ್ರಿಜ್–ಹಾರ್ವರ್ಡ್‌ಗಳಂತಹ ಪ್ರತಿಷ್ಠಿತ ವಿಶ್ವವಿದ್ಯಾಲಯ ಗಳಲ್ಲಿ ವ್ಯಾಸಂಗ ಮಾಡಿದ ಮೇಧಾವಿಗಳಲ್ಲ. ಅವರಂತೆ ಕಠೋರ ಸಿದ್ಧಾಂತನಿಷ್ಠರೂ ಅಲ್ಲ. ಹಾಗೆಯೆ ಉತ್ತರ ಭಾರತದ ಠಾಕೂರ್–ಯಾದವ್‌ಗಳಂತೆ ಪೈಲ್ವಾನ್‌ಗಿರಿಯ ದರ್ಪ–ದಾರ್ಷ್ಟ್ಯ ಪ್ರದರ್ಶಿಸುವವರೂ ಅಲ್ಲ. ಮಹಾರಾಷ್ಟ್ರದ ಮರಾಠಾ ಸರದಾರರುಗಳಂತೆ ಒಣದೌಲತ್ತು ತೋರುವವರೂ ಅಲ್ಲ, ಹಾಗೆಯೆ ಗುಜರಾತಿನ ಪಟೇಲ್–ಬನಿಯಾಗಳಂತೆ ಕೇವಲ ವ್ಯಾಪಾರಿ ಮನೋಧರ್ಮದವರೂ ಅಲ್ಲ.

ಹಾಗಾದರೆ ಕರ್ನಾಟಕದ ರಾಜಕಾರಣಿಯ ಪ್ರಮುಖ ಗುಣಲಕ್ಷಣವೇನು? ಖಂಡಿತವಾಗ್ಯೂ ಆತ ಸಂತನಾಗಿರಬೇಕಿಲ್ಲ, ಗಾಂಧೀಜಿಯಂತೆ; ತೀರಾ ರಾಕ್ಷಸನೂ ಆಗಲಿಲ್ಲ, ನರೇಂದ್ರ ಮೋದಿಯಂತೆ. ಆದರೆ ಗಾಂಧೀ ಕಾಲದ ಆದರ್ಶಗಳನ್ನು ಉದ್ಧರಿಸುತ್ತಲೇ, ಲೋಹಿಯಾ ಸಮಾಜವಾದದ ಸಾಕಾರಕ್ಕಾಗಿ ಹಂಬಲಿಸಿದವರು. ಇಂದಿರಾ ಗಾಂಧಿ ಕಾಲದ 'ಗರೀಬಿ ಹಟಾವ್' ಘೋಷಣೆಯಿಂದ ಸ್ಫೂರ್ತಿಗೊಂಡು, ಭೂಸುಧಾರಣೆ ಮತ್ತು ಸಾಮಾಜಿಕ ನ್ಯಾಯದ ರಾಜಕೀಯವನ್ನು ಲಾಭದಾಯಕ ಮಂತ್ರವಾಗಿ ಬಳಸಿಕೊಂಡವರು. ಅಂತೆಯೆ ಸೆಕ್ಯುಲರಿಸಮ್ಮಿನ ಸ್ಲೋಗನನ್ನು ಕೂಗುತ್ತಲೆ, ಜಾತಿವಾದ, ಕುಟುಂಬವಾದ ಹಾಗೂ ಹಸಿಹಸಿ ಕೋಮುವಾದ ವನ್ನಾಧರಿಸಿದ ಓಟ್‌ಬ್ಯಾಂಕ್ ರಾಜಕಾರಣದ ಯಶಸ್ವಿ ಕಸುಬುದಾರರಾದವರು.

ಇಷ್ಟೆಲ್ಲ ವೈರುಧ್ಯಗಳ ನಡುವೆಯೂ ನೆಹರೂ ಕಾಲದ ಅಖಿಲ ಭಾರತ ಕಾಂಗ್ರೆಸ್ಸಿನ ಅಧ್ಯಕ್ಷತೆಗೇರಿ ೧೯೬೯ರ ಪಕ್ಷ ವಿಭಜನೆಯ ದುರಂತವನ್ನು ನಿಭಾಯಿಸಿದ ಎಸ್.ನಿಜಲಿಂಗಪ್ಪ; ರಾಜಕೀಯ ವನವಾಸದಲ್ಲಿದ್ದ ಇಂದಿರಾ ಗಾಂಧಿಗೆ ಪುನರ್ಜನ್ಮ ಕಲ್ಪಿಸಿದ ದೇವರಾಜ ಅರಸು; ಜನತಾಪಕ್ಷವನ್ನು ಜನತಾದಳವನ್ನಾಗಿ ಪುನರ್ರೂಪಿಸಿ ರಾಷ್ಟ್ರರಾಜಕಾರಣಕ್ಕೆ ನಿರ್ಣಾಯಕ ತಿರುವು ನೀಡಿದ ರಾಮಕೃಷ್ಣ ಹೆಗಡೆ; ಹರದನಳ್ಳಿ ಹೈದನಾಗಿ ರಾಜಕೀಯವನ್ನು ಪ್ರವೇಶಿಸಿ, ಸುದೀರ್ಘ ಕಾಲದ ಸಿಟ್ಟು–ರೋಷ–ಸೇಡಿನ ಸೆಣಸಾಟದ ಮೂಲಕವೇ ದಿಲ್ಲಿಯ ಪ್ರಧಾನಮಂತ್ರಿಯ ಗದ್ದುಗೆಯವರೆಗೂ ಸಾಗಿದ ಎಚ್.ಡಿ.ದೇವೇಗೌಡ– ಇವರುಗಳೆಲ್ಲ ಕರ್ನಾಟಕದ ಅಪ್ಪಟ ದೇಶೀ ಸಂಸ್ಕೃತಿಯಲ್ಲಿಯೆ ಅರಳಿ, ಅಖಿಲ ಭಾರತ ಮಟ್ಟದ ರಾಜಕೀಯ ಚರಿತ್ರೆಯಲ್ಲಿ ತಮ್ಮ ಛಾಪನ್ನು ಮೂಡಿಸಿದ ದಿಗ್ಗಜರು ನಿಜ... ಆದರೆ ಕಳೆದ ಐವತ್ತು ವರ್ಷಗಳಲ್ಲಿ ಕಂಡ ಹತ್ತು ಅತ್ತ್ಯುತ್ತಮ ರಾಜಕಾರಣಿಗಳ ಪಟ್ಟಿಯಲ್ಲಿ ಇವರುಗಳನ್ನೆಲ್ಲ ಸಾರಾಸಗಟಾಗಿ ಸೇರಿಸಲಿಕ್ಕಾಗುತ್ತ?

ಇದು ನನ್ನ ವೈಯಕ್ತಿಕ ಆಯ್ಕೆ ಎಂದು ಅರಿಕೆ ಮಾಡಿಕೊಳ್ಳುತ್ತಲೆ, "ವಿಕ್ರಾಂತ"ದ ವಾಚಕರ ಸಾರ್ವತ್ರಿಕ ಆಶಯಗಳನ್ನಾಧರಿಸಿಯೆ ಮಾಡಿದ ಆಯ್ಕೆ ಇದಾಗಿದೆ ಎಂಬ ವಿನಯ, ಆತ್ಮವಿಶ್ವಾಸಗಳೊಂದಿಗೆ ತಮ್ಮೆದುರು ಮಂಡಿಸುತ್ತಿದ್ದೇನೆ.

ಕರ್ನಾಟಕ ಏಕೀಕರಣದ ನಂತರದ ಐದು ದಶಕಗಳ ರಾಜಕಾರಣಿಗಳ ಪೈಕಿ ಗತಿಸಿದ ತಲೆಮಾರು, ಮಧ್ಯಮ ತಲೆಮಾರು ಹಾಗೂ ಯುವ ತಲೆಮಾರು ಎಂಬ ಮೂರು ಪೀಳಿಗೆಗಳ

ಪ್ರಾತಿನಿಧಿಕವೆನಿಸಬಲ್ಲ ಹೆಸರುಗಳನ್ನು ಪಟ್ಟಿಮಾಡಲು ಹೊರಟರೂ, ಇವುಗಳಲ್ಲಿ ಉಲ್ಲೇಖನೀಯವೆನಿಸುವ ಮಹಿಳಾ ನಾಯಕಿ ಅಥವಾ ಯುವನಾಯಕರು ಯಾರೂ ದೊರಕಲೆಯಿಲ್ಲವಲ್ಲ ಎಂಬ ವಿಷಾದವೂ ಈ ಆಯ್ಕೆದಾರನನ್ನು ಬಾಧಿಸಿದೆ.

೧. ದೇವರಾಜ ಅರಸು – ಸರ್ವರಿಗೂ ಸಮಪಾಲು.....

ನೆಹರೂ ಕಾಲದ ಅವಿಭಜಿತ ಕಾಂಗ್ರೆಸ್ಸಿನ ಆಳ್ವಿಕೆಯಲ್ಲಿ ಕೇವಲ ಲಿಂಗಾಯತರು ಮತ್ತು ಒಕ್ಕಲಿಗರು ಎಂಬ ಎರಡೇ ಎರಡು ಬಹುಸಂಖ್ಯಾತ ಜನಾಂಗಗಳ ಜಾತಿ–ತಲೆಯೆಣಿಕೆ ಲೆಕ್ಕಾಚಾರವಾಗಿದ್ದ ಕರ್ನಾಟಕದ ಡೆಮಾಕ್ರಸಿಯನ್ನು, ಅಸಂಖ್ಯಾತ ದುರ್ಬಲ ಜಾತಿ–ವರ್ಗಗಳ ಪಾಲುದಾರಿಕೆಯ ಪ್ರಜಾಪ್ರಭುತ್ವವನ್ನಾಗಿ ಮಾರ್ಪಡಿಸಿದ ಧೀಮಂತ ನಾಯಕತ್ವ ದೇವರಾಜ ಅರಸರದ್ದು.

೧೯೬೯ರ ಕಾಂಗ್ರೆಸ್ ವಿಭಜನೆಯ ನಂತರ ದೇಶಾದ್ಯಂತ ರೋಮಾಂಚನವನ್ನುಂಟು ಮಾಡಿದ ಇಂದಿರಾ ಗಾಂಧಿಯವರ 'ಗರೀಬಿ ಹಟಾವ್' ರಾಜಕಾರಣಕ್ಕೆ ಇಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿ ನಿರ್ದಿಷ್ಟ ಜನಕಲ್ಯಾಣ ಯೋಜನೆಗಳು ಮತ್ತು ಪ್ರಗತಿಪರ ಅಭಿವೃದ್ಧಿ ಕಾರ್ಯಕ್ರಮಗಳ ಮೂಲಕ ಖಚಿತತೆಯನ್ನು ತಂದುಕೊಟ್ಟ ಅರಸು, ರಾಜ್ಯ ಕಂಡ ಅತ್ಯಂತ ಪ್ರತಿಭಾಶಾಲಿ ಆಡಳಿತಗಾರ ಕೂಡ.

ಇಂದಿರಾಗಾಂಧಿಯ ನಾಮಬಲದಿಂದಲೇ ದಕ್ಕಿದ ಅಧಿಕಾರವನ್ನು ದಲಿತರು, ಅಲ್ಪಸಂಖ್ಯಾತರು ಮತ್ತು ಹಿಂದುಳಿದ ವರ್ಗಗಳ ರಾಜಕೀಯ ಶಕ್ತಿಯನ್ನು ಕ್ರೋಢೀಕರಿಸುವ ಮೂಲಕ ತಮ್ಮ ಮುಖ್ಯಮಂತ್ರಿ ಪದವಿಗೆ ಸಿಂಧುತ್ವ ತಂದುಕೊಂಡರು ದೇವರಾಜ ಅರಸರು. ೧೯೪೫ರ ಅಂದಿನ ಮೈಸೂರು ಪ್ರಾಂತ್ಯದ ಪ್ರಜಾಪ್ರತಿನಿಧಿ ಸಭೆಯ ಕಾಲದಿಂದಾರಂಭಿಸಿ ೧೯೮೨ರ ಜೂನ್ ೬ ರಂದು ಕಾಲವಶರಾಗುವವರೆಗೂ ರಾಜ್ಯ ವಿಧಾನಸಭೆಯಲ್ಲಿ ಅರಸು ಜಾತಿಯ ಪ್ರತಿನಿಧಿ ತಾವೊಬ್ಬರೆ ಆಗಿದ್ದರೂ, ಧೃತಿಗೆಟ್ಟವರಲ್ಲ.

ವ್ಯಕ್ತಿಪೂಜೆ, ಭಟ್ಟಂಗಿತನ ಹಾಗೂ ಸ್ವಚ್ಛಂದ ಭ್ರಷ್ಟತೆಯಲ್ಲಿಯೆ ಕ್ರಮೇಣ ಕೃಶಗೊಳ್ಳುತ್ತ ಬಂದ ಇಂದಿರಾ ಕಾಂಗ್ರೆಸ್ಸಿನಲ್ಲಿಯೆ ಅರಸು, ಲೋಹಿಯಾ ಸಮಾಜವಾದಿಗಳು ಬಯಸಿ ಹೋರಾಡಿದ ಭೂಸುಧಾರಣೆ ಹಾಗೂ ಸಾಮಾಜಿಕ ನ್ಯಾಯದ ಮೀಸಲಾತಿಯಂತಹ ತೀವ್ರಗಾಮಿ ಕನಸುಗಳನ್ನು ಸಾಕಾರಗೊಳಿಸಿಬಿಟ್ಟರು.

ಇಂದಿರಾಗಾಂಧಿ ೧೯೭೫ರಿಂದ ೭೭ರ ಅವಧಿಯಲ್ಲಿ ತುರ್ತುಪರಿಸ್ಥಿತಿ ಹೇರಿ ಸರ್ವಾಧಿಕಾರ ನಡೆಸಿದಾಗಲೂ, ಇಲ್ಲಿ ಕರ್ನಾಟಕದ ಮುಖ್ಯಮಂತ್ರಿಯಾಗಿ ಅರಸು ಆ ಅವಧಿಯನ್ನು ಹಲವಾರು ಒಡತನ ನಿರ್ಮೂಲನಾ ಕಾರ್ಯಕ್ರಮಗಳ ಅನುಷ್ಠಾನಕ್ಕಾಗಿ ಸದ್ಬಳಕೆ ಮಾಡಿ ಕೊಂಡರು. ದೌರ್ಜನ್ಯದ ಬದಲು, ಬಂಧಿಖಾನೆಯಲ್ಲಿದ್ದ ರಾಜಕೀಯ ವಿರೋಧಿಗಳನ್ನು ಗೌರವದಿಂದ, ಮಾನವೀಯತೆಯಿಂದ ನಡೆಸಿಕೊಂಡರು.

ಸಮರ್ಥ ಆಡಳಿತಗಾರನಾಗಿ ಡಾ॥ ಡಿ.ಎಂ.ನಂಜುಂಡಪ್ಪನವರಂತಹ ಯೋಜನಾ ತಜ್ಞರನ್ನು, ಜೆ.ಸಿ.ಲಿನ್ ಹಾಗೂ ಚಿರಂಜೀವಿಸಿಂಗ್‌ರಂತಹ ಶ್ರದ್ಧಾವಂತ ಐಎಎಸ್ ಅಧಿಕಾರಿಗಳನ್ನು, ಅಡ್ವೊಕೇಟ್ ಜನರಲ್ ಭೈರಾರೆಡ್ಡಿಯವರಂತಹ ಪ್ರಚಂಡ ನ್ಯಾಯವಾದಿಗಳನ್ನು, ಬಿ.ಡಿ.ಎ

ಯಂತಹ ಸಂಸ್ಥೆಗೆ ಜನಪರ ಸ್ಪರ್ಶ ನೀಡಿದ ಬಿ.ಟಿ.ಸೋಮಣ್ಣನಂತಹ ಕಕ್ಕುಲತೆಯ ಜನಸೇವಕರನ್ನು ಅರಸು ಬೆಳೆಸಿದರು.

ಹಾಗೆಯೆ ಇವತ್ತಿಗೂ ಚಾಲ್ತಿಯಲ್ಲಿರುವ ಈ ಧರಂಸಿಂಗ್, ಖರ್ಗೆ, ಮೊಯ್ಲಿ, ಜಾಫರ್‌ಶರೀಫ್, ಪೂಜಾರಿ ಮುಂತಾದ ನೂರಾರು, ಸಾವಿರಾರು ರಾಜಕಾರಣಿಗಳನ್ನು ರೂಪಿಸಿದ್ದೂ ಅರಸುವೇ. ಆದರೆ ಅವರಿಗೆಲ್ಲ ಅರಸು ನೇರವಾಗಿ ಅಧಿಕಾರ ರಾಜಕೀಯದ ಸುಖ-ಭೋಗಗಳಿಗೆ ಪರಿಚಯಿಸಿದರೇ ಹೊರತು, ಹೋರಾಟ ರಾಜಕಾರಣದ ಪರಿತಾಪಕ್ಕಲ್ಲ. ಹಾಗಾಗಿಯೆ ದುರ್ಬಲ ವರ್ಗಗಳ ಮುಂದಾಳುಗಳಾಗಿ ಸಲೀಸಾಗಿ ಅಧಿಕಾರ ಪಡಕೊಂಡ ಇವರೆಲ್ಲ ಕ್ರಮೇಣ ರಾಜಮಹಾರಾಜರುಗಳ ವೈಭವಕ್ಕೆ ಶರಣಾದರೇ ಹೊರತು, ತಾವು ಪ್ರತಿನಿಧಿಸುವ ವರ್ಗಗಳ ದನಿಯಾಗುಳಿಯಲೇ ಇಲ್ಲ. ಅದೊಂದೆ ಅರಸು ವಿರುದ್ಧ ಆರೋಪಿಸ ಬಹುದಾದ ಅತಿದೊಡ್ಡ ಪ್ರಮಾದವೆನ್ನಿ!

-

೨. ನಜೀರ್ ಸಾಬ್ - "ಪವರ್-ಟು-ದಿ-ಪೀಪಲ್..."

"ಜನತೆಗೇ ಅಧಿಕಾರ" ಎಂಬುದು ಗುಂಡ್ಲುಪೇಟೆಯ ಮಾಜಿ ಕಾಂಗ್ರೆಸ್ಸಿಗ ನಜೀರ್ ಸಾಬರಿಗೆ ಕೇವಲ ಒಂದು ಚುನಾವಣಾ ಘೋಷಣೆಯಾಗಿರಲಿಲ್ಲ. ಅದು ಅವರ ಗಾಂಧಿವಾದಿ ರಾಜಕೀಯ ಚಿಂತನೆಯ ಅತ್ಯಂತ ಕ್ರಿಯಾಶೀಲ ಸಾಧನವಾಗಿತ್ತು.

೧೯೮೩ರ ಜನವರಿಯಲ್ಲಿ ಅಸ್ತಿತ್ವಕ್ಕೆ ಬಂದ ಕರ್ನಾಟಕದ ಪ್ರಪ್ರಥಮ ಕಾಂಗ್ರೇಸ್ಸೇತರ ಸರಕಾರದಲ್ಲಿ ಗ್ರಾಮೀಣಾಭಿವೃದ್ಧಿ ಹಾಗೂ ಪಂಚಾಯಿತಿ ರಾಜ್ಯ ಸಚಿವರಾಗಿ ತಮ್ಮ ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆಯವರ ನಾಯಕತ್ವಕ್ಕೂ ಹಾಗೂ ತಾವಿದ್ದ ಜನತಾ-ರಂಗ ಎಂಬ ಹೊಸ ರಾಜಕೀಯ ವೇದಿಕೆಗೂ ಸಿಂಧುತ್ವ ತಂದುಕೊಟ್ಟ ನಜೀರ್‌ಸಾಬರಿಗೆ, ಅಧಿಕಾರ ವಿಕೇಂದ್ರೀಕರಣ ವೆಂಬುದು ಅವರ ಸಾರ್ವಜನಿಕ ಬದುಕಿನ ನಿತ್ಯಜಪವಾಗಿತ್ತು; ಅವರ ಐದು ವರುಷಗಳ ಮಂತ್ರಿಗಿರಿಯುದ್ದಕ್ಕೂ ಪ್ರತಿಯೊಂದು ನೀತಿ, ನಿರ್ಧಾರ ಮತ್ತು ಅಭಿವೃದ್ಧಿ ಚಟುವಟಿಕೆಗಳಿಗೆ ಸ್ಪೂರ್ತಿ ನೀಡುತ್ತ ಬಂದ ಅಮೋಘ ಆದರ್ಶವಾಗಿತ್ತು.

ಅಧಿಕಾರ ರಾಜಕಾರಣವೇ ಬೇರೆ, ಆದರ್ಶಗಳೇ ಬೇರೆ ಎನ್ನುವ ವೃತ್ತಿರಾಜಕಾರಣದ ಕಸುಬುದಾರರೆದುರು, ಆದರ್ಶವೇ ಅಧಿಕಾರ ರಾಜಕಾರಣದ ಬೀಜಮಂತ್ರವೆಂದು ತಮ್ಮ ಜೀವಿತಾವಧಿಯಲ್ಲಿಯೇ ಪ್ರತ್ಯಕ್ಷವಾಗಿ ಸಾಬೀತು ಮಾಡಿ ತೋರಿಸಿದ ಅಗಾಧ ಕರ್ಮಯೋಗಿ ಯಾಗಿದ್ದರು ನಜೀರ್ ಸಾಬ್.

ಕೇವಲ ಒಂಬತ್ತು ತಿಂಗಳಲ್ಲಿಯೆ ೪೩ ಸಾವಿರ ಕೊಳವೆ ಬಾವಿಗಳನ್ನು ನಿರ್ಮಿಸಿ, ರಾಜ್ಯದ ಎಲ್ಲ ೨೬ ಸಾವಿರ ಗ್ರಾಮಗಳಲ್ಲೂ ಪ್ರತಿಯೊಂದಕ್ಕೆ ಕನಿಷ್ಠ ಎರಡಾದರೂ ಸ್ವಚ್ಛ, ಸುರಕ್ಷಿತ ಕುಡಿಯುವ ನೀರಿನ ಸವಲತ್ತುಗಳಿರಬೇಕೆಂಬ ಕನಸನ್ನು ನನಸಾಗಿಸಿದಾಗಲೇ; ಇಡೀ ಗ್ರಾಮೀಣ ಕರ್ನಾಟಕವೇ ನಜೀರ್ ಎಂಬ ಅಷ್ಟಾಗಿ ಪ್ರಸಿದ್ಧನಲ್ಲದ, ಪ್ರಚಾರಪ್ರಿಯನಲ್ಲದ ಮಂತ್ರಿಯ ಬಗ್ಗೆ ಎಚ್ಚೆತ್ತುಕೊಂಡು ಆತನಿಂದ ಹೊಸ ಬಗೆಯ ನಿರೀಕ್ಷೆಗಳನ್ನಿಟ್ಟುಕೊಳ್ಳು ವಂತಾಗಿತ್ತು.

ಮುಂದೆ ಜಿಲ್ಲಾ ಪರಿಷತ್ತು ಹಾಗೂ ಮಂಡಲಪಂಚಾಯಿತಿಗಳೆಂಬ ಎರಡು ಸದೃಢವಾದ, ಸಶಕ್ತವಾದ ಆಡಳಿತ ಘಟಕಗಳುಳ್ಳ ಪಂಚಾಯಿತಿ ರಾಜ್ಯ ವ್ಯವಸ್ಥೆಯನ್ನು ಸ್ಥಾಪಿಸಲು ತಮ್ಮ ಸಮಗ್ರ ಚಿಂತನೆ, ಪರಿಶ್ರಮ ಹಾಗೂ ಜೀವನಾನುಭವವನ್ನೇ ಧಾರೆಯೆರೆದು ಯಶಸ್ವಿಯಾದಾಗ ಬರೀ ಕರ್ನಾಟಕವಷ್ಟೇ ಅಲ್ಲ, ಇಡೀ ಭಾರತವೇ ಕರ್ನಾಟಕದ ಈ ಅಪರೂಪದ ಸಾಧಕನತ್ತ ಮೆಚ್ಚುಗೆಯಿಂದ ನೋಡುವಂತಾಯಿತು.

ದೇವರಾಜು ಅರಸು ತರಹವೇ ಸ್ವತಃ ಸಮಾಜವಾದಿ ಪಾರ್ಟಿಯವರಲ್ಲದಿದ್ದರೂ ಸಮಾಜವಾದಿಗಳ ಜನಪರ ಕಾಳಜಿ, ಹೋರಾಟದ ಕನಸುಗಳಿಗೆಲ್ಲ ಸಾಕಾರಗೊಳಿಸಿ ಅಮರತ್ವ ಪಡೆದುಕೊಂಡ ನಜೀರ್‌ಸಾಬ್, ತಮ್ಮ ಅಕಾಲಿಕ ಸಾವಿನ ಮುಂಚಿನ ಅಂತಿಮ ಕ್ಷಣಗಳಲ್ಲೂ "ಬಡವರಿಗೋಸ್ಕರ ಸಾವಿರ ಮನೆಗಳು" ಎಂದು ಪವಡಿಸುತ್ತಲೇ ಕಣ್ಣುಮುಚ್ಚಿದ ಅಪ್ರತಿಮ ಜನಸೇವಕನಾಗಿದ್ದರು.

೩. ಬಿ.ಬಸವಲಿಂಗಪ್ಪ – ದಲಿತರ ದೈತ್ಯಶಕ್ತಿ

ದೇವರಾಜ ಅರಸರ ಅಂದಿನ ಇಂದಿರಾ ಕಾಂಗ್ರೆಸ್ ಸರಕಾರದಲ್ಲಿ ಮುನಿಸಿಪಲ್ ಆಡಳಿತದ ಮಂತ್ರಿಯಾಗಿ, ಭಂಗಿಗಳು ತಲೆಯ ಮೇಲೆ ಮಲ ಹೊರುವ ಪರಂಪರಾನುಗತ ಅನಿಷ್ಟ ಪದ್ಧತಿಯನ್ನು ಶಾಶ್ವತವಾಗಿ ರದ್ದುಗೊಳಿಸುವ ಮೂಲಕ ಬಿ.ಬಸವಲಿಂಗಪ್ಪ ಎಂಬ ವರ್ಣರಂಜಿತ ವ್ಯಕ್ತಿತ್ವದ, ಆದರೆ ಕ್ರಾಂತಿಕಾರಿ ಮನೋಧರ್ಮದ ನಾಯಕ ಕರ್ನಾಟಕದ ದಲಿತವರ್ಗದಲ್ಲಿ ಅಭೂತಪೂರ್ವ ಜಾಗೃತಿಯನ್ನು ಮೂಡಿಸಿದರು.

ಅಸ್ಪೃಶ್ಯತೆಯ ಕಳಂಕ ಹೋಗಲಾಡಿಸುವಲ್ಲಿ ಇದೊಂದು ಅತ್ಯಂತ ದಿಟ್ಟ, ನಿರ್ಣಾಯಕ, ಆಡಳಿತಾತ್ಮಕ ಕ್ರಮವಾಗಿತ್ತು. ಜಾತಿ ಅಸಮಾನತೆಯ ವಿರೋಧಿ ಹೋರಾಟಕ್ಕೆ ಹರಿತವಾದ ತಿರುವು ನೀಡಿದ ರಾಜಕೀಯ ಇಚ್ಛಾಶಕ್ತಿಯ ಸಂಕೇತವಾಗಿತ್ತು.

ಬಸವಲಿಂಗಪ್ಪ ಯಾವತ್ತೂ ಬೀದಿಗಿಳಿದು ಪ್ರಭುತ್ವವಿರೋಧಿ ಹೋರಾಟಕ್ಕಿಳಿದು ಗುರಿ ಸಾಧಿಸಬಹುದೆನ್ನುವ ಕನಸುಗಾರನಾಗಲೇ ಇಲ್ಲ. ಆದರೆ ನೊಂದವರ, ತುಳಿತಕ್ಕೊಳಗಾದವರ, ಶತಶತಮಾನಗಳಿಂದ ಆರ್ಥಿಕ ಶೋಷಣೆ ಹಾಗೂ ಸಾಮಾಜಿಕ ಅಪಮಾನಕ್ಕೊಳಗಾದ ವರ್ಗಕ್ಕೆ ಅಧಿಕಾರವೇ ತಾರಕಮಂತ್ರವೆಂದು ನಂಬಿದ್ದ ಅಪ್ಪಟ ಕಾಂಗ್ರೆಸ್ ರಾಜಕಾರಣಿಯಾಗಿದ್ದರು. ಆದರೆ ತಮ್ಮ ಬಹುಪಾಲು ಕಾಂಗ್ರೆಸ್ ಸಹೋದ್ಯೋಗಿಗಳಂತೆ ಬಸವಲಿಂಗಪ್ಪ ಭಟ್ಟಂಗಿಯಾಗಲಿಲ್ಲ. ಕೇವಲ ಮಂತ್ರಿ ಪದವಿಯ ಸುಖ, ಸವಲತ್ತು ಹಾಗೂ ದೌಲತ್ತುಗಳಿಗಾಗಿಯೆ ಹಾತೊರೆಯುವ ಪುಢಾರಿಯಾಗಲಿಲ್ಲ.

ಬಸವಲಿಂಗಪ್ಪ ಅಂದು ಎಪ್ಪತ್ತರ ದಶಕದಲ್ಲಿಯೇ ಬೌದ್ಧಮತದ ಅನುಯಾಯಿಯಾಗಿ, ಉಗ್ರ ಅಂಬೇಡ್ಕರ್‌ವಾದಿಯಾಗಿ ತಮ್ಮ ರಾಜಕೀಯ ಬದುಕು ಮತ್ತು ವೈಯಕ್ತಿಕ ಖಾಸಗಿ ಬದುಕುಗಳೆರಡರಲ್ಲೂ ಸವರ್ಣೀಯರು ಹಾಗೂ ಪುರೋಹಿತಶಾಹಿವರ್ಗದ ಅಟ್ಟಹಾಸ, ಸ್ವಪ್ರತಿಷ್ಠೆಗಳ ವಿರುದ್ಧ ಸದಾ ಸೆಟೆದು ನಿಲ್ಲುವ ಆತ್ಮಾಭಿಮಾನ ರೂಢಿಸಿಕೊಂಡರು.

ಕೇವಲ ಮೇಲ್ಜಾತಿ ಮನೋಧರ್ಮದ ಪ್ರತೀಕದಂತಾಗಿದ್ದ ಸಾಂಪ್ರದಾಯಿಕ ಕನ್ನಡ ಸಾಹಿತ್ಯವನ್ನು "ಬೂಸಾ... ಬರೀ ಬೂಸಾ" ಎಂದು ಸಾರ್ವಜನಿಕ ವೇದಿಕೆಯಿಂದಲೇ ಲೇವಡಿ ಮಾಡಿದ ಬಸವಲಿಂಗಪ್ಪ, ಭಾರೀ ಪ್ರತಿಭಟನೆಯನ್ನೇ ಆಹ್ವಾನಿಸಿಕೊಂಡರು. ತಮ್ಮ ಮಂತ್ರಿ ಪದವಿಗೇ ಸಂಚಕಾರ ತಂದುಕೊಂಡರು. ಆದರೆ ಕಡೆಯವರೆಗೂ ಸ್ವಾಭಿಮಾನಿಯಾಗಿ ಬಾಳಿದರು!

೪. ಶಾಂತವೇರಿ ಗೋಪಾಲಗೌಡರು–ಲೋಹಿಯಾ ಸಮಾಜವಾದದ ಸಾಕ್ಷಿಪ್ರಜ್ಞೆ...

ನಾವೆಲ್ಲಾ ಸಾರ್ವಜನಿಕ ಬದುಕಿನ ವಿವರಗಳ ಬಗ್ಗೆ ಎಚ್ಚೆತ್ತುಕೊಳ್ಳುವಷ್ಟರಲ್ಲಿ ಶಾಂತವೇರಿ ಗೋಪಾಲಗೌಡರ ಹೋರಾಟ ರಾಜಕಾರಣದ ಜೀವನಯಾತ್ರೆ ಮುಗಿದೇಹೋಗಿತ್ತು. ಅವರ ನಾಯಕತ್ವದ ಸಮಾಜವಾದಿ ಚಳವಳಿಯ ಬಹುತೇಕ ಸೇನಾನಿಗಳು ೧೯೭೧ರ ನಂತರದ ಇಂದಿರಾ ಕಾಂಗ್ರೆಸ್ಸಿನ ಪ್ರಚಂಡ ಚುನಾವಣಾ ಯಶಸ್ಸಿನ ಚಂಡಮಾರುತದಿಂದಾಗಿ ತತ್ತರಿಸಿಹೋಗಿದ್ದರು. ಕರ್ನಾಟಕದ ಮಟ್ಟಿಗೆ ಗೋಪಾಲಗೌಡರ ಪಾರ್ಟಿಯ ರಾಜಕೀಯ ಪ್ರಣಾಳಿಕೆಯನ್ನೇ ೧೯೭೨ರಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿಯಾಗಿ ಅವತರಿಸಿದ ದೇವರಾಜ ಅರಸರೇ ಅದರ ಸಮಸ್ತ ಆಶಯಗಳ ಸಮೇತ 'ಲಪಟಾಯಿಸಿ' ಬಿಟ್ಟಿದ್ದರು!

ಆದರೂ ನೋಡಿ, ಇವತ್ತು ವಿಧಾನಸೌಧ ಎಂಬ ಭವ್ಯ ಕಟ್ಟಡ ಸರಕಾರಿ ಪ್ರಭುತ್ವದ ಸಂಕೇತವಾಗಿ ಕೆಂಗಲ್ ಹನುಮಂತಯ್ಯನವರ ಕೊಡುಗೆ ಎಂದು ಗುರುತಿಸಲ್ಪಡುತ್ತಿದ್ದರೆ, ಅದರ ಎದುರಿಗೇ ಇರುವ 'ದಿ। ಶಾಂತವೇರಿ ಗೋಪಾಲಗೌಡರ ವೃತ್ತ' ಎಂಬ ನಾಮಫಲಕವಿರುವ ಸ್ಥಳ ಎಲ್ಲಾ ಪ್ರಗತಿಪರ ಚಿಂತಕರ, ಹೋರಾಟಗಾರರ ಪ್ರಭುತ್ವವಿರೋಧಿ ಸೆಣಸಾಟದ ಧೀಮಂತಿಕೆಯ ಪ್ರತೀಕವಾಗಿ ಕಂಗೊಳಿಸುತ್ತಿದೆ.

ಹೌದು, ಗೋಪಾಲಗೌಡರೆಂಬ ಧೀರೋದಾತ್ತ ರಾಜಕೀಯ ನಾಯಕನ ಬದುಕೇ ಒಂದು 'ಜೀವಂತ ಜ್ವಾಲೆ'ಯಂತಿತ್ತು. ಅವರೆಂದೂ ಮಂತ್ರಿಯಾಗಲೂ ಇಲ್ಲ, ಮಂತ್ರಿಗಿರಿಗಾಗಿ ಹಾತೊರೆದವರೂ ಅಲ್ಲ. ಅವರಿದ್ದ ಸಂಯುಕ್ತ ಸಮಾಜವಾದಿ ಪಾರ್ಟಿ ಸಹ ಎಂದೂ ಆಡಳಿತಪಕ್ಷವಾಗಲೂ ಇಲ್ಲ; ಅಧಿಕಾರ ಗದ್ದುಗೆಯ ಸಮೀಪ ನುಸುಳಲೂ ಇಲ್ಲ! ಆದರೆ ೧೯೭೦ರ ಕಾಂಗ್ರೆಸ್ ವಿಭಜನೆಯ ಸಂದರ್ಭದಲ್ಲೊಮ್ಮೆ ಇಲ್ಲಿದ್ದ ವೀರೇಂದ್ರ ಪಾಟೀಲರ ನೇತೃತ್ವದ ಸರಕಾರ ಪತನಗೊಂಡಾಗ, ಇದ್ದಬದ್ದ ಪ್ರತಿಪಕ್ಷಗಳೆಲ್ಲ ಸೇರಿ ಗೋಪಾಲಗೌಡರನ್ನೇ ಮುಖ್ಯಮಂತ್ರಿ ಮಾಡಿ ಮೈತ್ರಿಕೂಟ ಸರಕಾರ ರಚಿಸಿಕೊಳ್ಳಲು ಮಾಡಿದ ಪ್ರಯತ್ನ ಫಲದಾಯಕ ವಾಗಲಿಲ್ಲ.

ಹೀಗೆ ಯಾವತ್ತೂ ಅಧಿಕಾರ ಪೀಠದಲ್ಲಿ ಕೂತು ಹುಕುಂ ಚಲಾಯಿಸದೆಯೆ ಹೋದರೂ ತಾವು ನಡೆಸಿದ ಗೇಣಿದಾರರ ಪರ ಚಳವಳಿ, ಹಿಂದುಳಿದ ವರ್ಗಗಳ ಮೀಸಲಾತಿ ಪರ ಹೋರಾಟ, ಕನ್ನಡ ಭಾಷೆ–ಸಂಸ್ಕೃತಿ–ಕಲೆ–ಸಾಹಿತ್ಯಗಳ ಉಳಿವಿಗಾಗಿ ನಡೆಸಿದ ವೈಚಾರಿಕ ಸಂಗ್ರಾಮ ಹಾಗೂ ತಮ್ಮ ಸೈದ್ಧಾಂತಿಕ ಗುರು ರಾಮಮನೋಹರ ಲೋಹಿಯಾರ ಚಿಂತನೆ–ಆದರ್ಶಗಳನ್ನು ಇಲ್ಲಿ ಕರ್ನಾಟಕದ ಮಣ್ಣಿನಲ್ಲಿ ಬಿತ್ತಿ, ಬೆಳೆದು ಅವುಗಳಿಂದ ಸ್ಫೂರ್ತಿ ಪಡೆದು ಅರಳಿದ ಸಾವಿರಾರು "ಹೂಗಳಿಗೆ" ನೀಡಿದ ನೈತಿಕ ಸಿಂಚನ–ಇವೆಲ್ಲವುಗಳಿಂದಾಗಿ ಶಾಂತವೇರಿ

ಗೋಪಾಲಗೌಡರು ಇಂದಿನ ೨೧ನೇ ಶತಮಾನದ ಯುವಜನಾಂಗಕ್ಕೂ ಅನುಕರಣೀಯ ಮಾದರಿಯಾಗಬಲ್ಲ ಸರ್ವಶ್ರೇಷ್ಠ ರಾಜಕಾರಣಿ.

ಕೇವಲ ತಮ್ಮ ರಾಜಕೀಯ ಒಡನಾಡಿಗಳಾದ ಜೆ.ಎಚ್.ಪಟೇಲ್, ಕಾಗೋಡು ತಿಮ್ಮಪ್ಪ, ಬಂಗಾರಪ್ಪ ಮುಂತಾದ ಜನನಾಯಕರುಗಳಿಗಷ್ಟೇ ಅಲ್ಲ, ವರ್ತಮಾನದ ಸಾಂಸ್ಕೃತಿಕ ಬದುಕನ್ನು ಶ್ರೀಮಂತಗೊಳಿಸಿದ ಲಂಕೇಶ್, ಪೂರ್ಣಚಂದ್ರ ತೇಜಸ್ವಿ, ಯು.ಆರ್.ಅನಂತಮೂರ್ತಿ, ಎಂ.ಡಿ. ನಂಜುಂಡಸ್ವಾಮಿಗಳಂತಹ ಕ್ರಿಯಾಶೀಲ ಬುದ್ಧಿಜೀವಿಗಳಿಗೂ ನಿತ್ಯ ಸ್ಮರಣೀಯರೆನಿಸಿದ್ದರು ಗೋಪಾಲಗೌಡರು.

ಅವರು ಬಿಟ್ಟು ಹೋದ ಅತ್ಯಂತ ಅಮೂಲ್ಯ ಸಾಮಾಜಿಕ ಬಳುವಳಿಯೆಂದರೆ ತತ್ವ-ಸಿದ್ಧಾಂತಗಳ ಜೊತೆಗೆಯೇ ಕಲೆ, ಸಂಸ್ಕೃತಿ, ಸಾಹಿತ್ಯ, ಸಿನಿಮಾ, ನಾಟಕ ಮತ್ತಿತರ ಎಲ್ಲ ಜೀವನೋತ್ಸಾಹದ ಚಟುವಟಿಕೆಗಳನ್ನೂ ಒಳಗೊಂಡ ಮುಕ್ತ ಪ್ರಜಾಸತ್ತಾತ್ಮಕ ಉದಾರವಾದಿ ಜಾಯಮಾನದ ರಾಜಕೀಯ ಸಂಸ್ಕೃತಿ !!

೫. ನಿಜಲಿಂಗಪ್ಪ – ಏಕೀಕರಣದ ರೂವಾರಿ.. ಸರಳಜೀವಿ

ಕರ್ನಾಟಕದ ರಾಜಕೀಯ ಚರಿತ್ರೆಯಲ್ಲಿಯೆ ಬಹುಶಃ ನಿಜಲಿಂಗಪ್ಪನವರಷ್ಟು ಅಪಾರ್ಥಕ್ಕೊಳಗಾದ, ಅಪಪ್ರಚಾರಕ್ಕೆ ಬಲಿಯಾದ ಮತ್ತೊಬ್ಬ ನಾಯಕನಿರಲಾರರು.

ಸ್ವಾತಂತ್ರ್ಯ ಹೋರಾಟಗಾರನಾಗಿ ಜೈಲುವಾಸದ ನೋವು ಹಾಗೂ ಕೌಟುಂಬಿಕ ಬವಣೆಗಳ ಪರಿತಾಪ ಅನುಭವಿಸುತ್ತಲೇ ಸಾರ್ವಜನಿಕ ಬದುಕಿಗೆ ಕಾಲಿಟ್ಟ ನಿಜಲಿಂಗಪ್ಪನವರು ಹಳೆಯ ಮೈಸೂರು ಪ್ರಾಂತ್ಯದ ಕಾಂಗ್ರೆಸ್ ರಾಜಕಾರಣದ ಮುಂದಾಳತ್ವ ಪಡಕೊಂಡದ್ದು, ತಮ್ಮ ಪಾರದರ್ಶಕ ವ್ಯಕ್ತಿತ್ವ ಹಾಗೂ ಸರಳ, ದಿಟ್ಟ ನಡೆನುಡಿ, ಜೀವನಶೈಲಿಯಿಂದ. ಆದರೆ ಏಕೀಕೃತ ಕರ್ನಾಟಕದ ಪ್ರಪ್ರಥಮ ಮುಖ್ಯಮಂತ್ರಿಯಾಗಿ ಮುಂದೆ ತಮ್ಮ ಜೀವನದುದ್ದಕ್ಕೂ ಅಂಟಿಸಿಕೊಂಡಿದ್ದು, ಕೇವಲ ಒಬ್ಬ ಲಿಂಗಾಯತ ಮುಖಂಡ ಎಂಬ ಹಣೆಪಟ್ಟಿಯನ್ನು.

ಹಳೆಯ ಮೈಸೂರು ಕಡೆಯ ಲಿಂಗಾಯತರ ಬಣಜಿಗ-ಸಾದರ ಒಳಪಂಗಡಗಳ ಆತ್ಮಘಾತುಕ ರಾಜಕೀಯ ಸಂಘರ್ಷದ ಪರಿಣಾಮವಾಗಿ ರಾಜ್ಯದ ಮುಖ್ಯಮಂತ್ರಿ ಹಾಗೂ ಅವಿಭಜಿತ ಕಾಂಗ್ರೆಸ್ಸಿನ ಪ್ರಶ್ನಾತೀತ ನಾಯಕನಾಗಿದ್ದುಕೊಂಡೇ ೧೯೬೨ರಲ್ಲೊಮ್ಮೆ ಅಸೆಂಬ್ಲಿ ಚುನಾವಣೆಯಲ್ಲಿ ಅನಾಮಧೇಯನೊಬ್ಬನ ಕೈಯಲ್ಲಿ ಸೋಲನುಭವಿಸಿದ್ದರು ನಿಜಲಿಂಗಪ್ಪ. ಆಗ ಅವರ ರಾಜಕೀಯ ಪುನಶ್ಚೇತನಕ್ಕೆಂದು ಮುಂದಾದ ಮುಂಬೈ ಕರ್ನಾಟಕದ ಲಿಂಗಾಯತ ರಾಜಕಾರಣಿಗಳ ಅತಿರೇಕದ ಜಾತಿಬಲ ಪ್ರದರ್ಶನದಿಂದಾಗಿ ಈ ಅಪ್ಪಟ ಗಾಂಧಿವಾದಿ ನಿಜಲಿಂಗಪ್ಪ ಜಾತಿವಾದಿ ಎಂಬ ಕಳಂಕ ಹೊತ್ತುಕೊಂಡೇ ಸಾಗಬೇಕಾಗಿ ಬಂತು.

ದೂರದರ್ಶಿತ್ವವುಳ್ಳ ಆಡಳಿತಗಾರನಾಗಿ ಏಕೀಕರಣಗೊಂಡ ನವಮೈಸೂರು ರಾಜ್ಯದಲ್ಲಿ ನೀರಾವರಿ ಯೋಜನೆಗಳು ಮತ್ತು ಕೃಷಿ ಅಭಿವೃದ್ಧಿಗೆ ಆದ್ಯತೆ ಕೊಟ್ಟು ನಾಡಿನ ಸರ್ವಾಂಗೀಣ ಪ್ರಗತಿಗೆ ಅಡಿಪಾಯ ಹಾಕಿದ ನಿಜಲಿಂಗಪ್ಪ, ಕೇವಲ ತಮ್ಮ ವಿಶಿಷ್ಟ ಪ್ರತಿಭೆಯಿಂದಾಗಿಯೆ ರಾಷ್ಟ್ರ ರಾಜಕಾರಣದ ಉತ್ತುಂಗದತ್ತ ನಡೆದರು. ನೆಹರೂ ಕಾಂಗ್ರೆಸ್ಸಿನ ಒಡನಾಡಿಗಳಾದ

ಲಾಲ್‌ಬಹದ್ದೂರ್ ಶಾಸ್ತ್ರಿ, ಕಾಮರಾಜ್ ನಾಡಾರ್, ಮುರಾರ್ಜಿ ದೇಸಾಯಿ, ನೀಲಂ ಸಂಜೀವರೆಡ್ಡಿಯವರಂತಹ ದಿಗ್ಗಜರ ಸಾಲಿನಲ್ಲಿ ನಿಂತು ಆ ಪಾರ್ಟಿಗೊಂದಷ್ಟು ಸಭ್ಯತೆ, ಸಜ್ಜನಿಕೆ ತರಲೆತ್ನಿಸಿದರು.

ಮುಂದೆ ೧೯೬೯ರ ಕೋಲಾಹಲಕಾರಿ ಘಟನಾವಳಿಗಳಲ್ಲಿ ಅಖಿಲ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ನಿಜಲಿಂಗಪ್ಪ ತಮ್ಮನ್ನು ಧಿಕ್ಕರಿಸಿ ನಿಂತ ಅಂದಿನ ಪ್ರಧಾನಿ ಇಂದಿರಾಗಾಂಧಿಯವರ ಪ್ರಚಂಡ ಜನಪ್ರಿಯತೆಯ ಚಂಡಮಾರುತಕ್ಕೆ ಸಿಕ್ಕು ನಲುಗಿಹೋದರು.

ಸಕ್ರಿಯ ರಾಜಕಾರಣದಿಂದ ನೇಪಥ್ಯಕ್ಕೆ ಸರಿದ ನಿಜಲಿಂಗಪ್ಪನವರಿಗೆ ತಮ್ಮ ಚಿತ್ರದುರ್ಗದ ಸ್ವ–ಅರ್ಜಿತ ಹಳೆಯ ಮನೆಯೊಂದನ್ನು ಬಿಟ್ಟು ಇನ್ನಾವ ಆಸ್ತಿ–ಐಶ್ವರ್ಯಗಳೂ ಇರಲಿಲ್ಲ. ಆದರೂ ಬೆಂಗಳೂರಿನ ರಾಜಾಜಿನಗರ ಎಂಟ್ರೆನ್ಸ್‌ನ ರಾಜಕುಮಾರ್ ರಸ್ತೆಯ ಸಾಲುಮನೆಗಳೆಲ್ಲವೂ ನಿಜಲಿಂಗಪ್ಪನವರ ಕುಟುಂಬದ ಆಸ್ತಿಗಳೇ ಎಂದು ಕಿಡಿಗೇಡಿ ಪತ್ರಕರ್ತರುಗಳು ಹಬ್ಬಿಸುತ್ತ ಬಂದ ಅಪವಾದಕ್ಕೆ ಶಿಕಾರಿಯಾದರು ನಿಜಲಿಂಗಪ್ಪ.

ತಮ್ಮ ಸರಳತೆ, ಪ್ರಾಮಾಣಿಕತೆ ಹಾಗೂ ನಿಷ್ಠುರತೆಗಳಿಂದಾಗಿಯೇ ದೇಹ–ಮನಸ್ಸುಗಳನ್ನು ಶುದ್ಧವಾಗಿಟ್ಟುಕೊಂಡು ಶತಾಯುಷಿಯಾಗಿ ಬಾಳಿದ ಈ ಜನನಾಯಕ ನಿಜಲಿಂಗಪ್ಪ, ತಮ್ಮ ಅವಸಾನದ ದೈಹಿಕ ಯಾತನೆಗಳೊಂದಿಗೆ ಚಿಕಿತ್ಸೆ ಪಡೆಯಲು ಪ್ರಜ್ಞಾಪೂರ್ವಕವಾಗಿ ಆರಿಸಿಕೊಂಡಿದ್ದೂ ಬೆಂಗಳೂರಿನ ಸರಕಾರಿ ಬೌರಿಂಗ್ ಆಸ್ಪತ್ರೆಯನ್ನೇ. ಇದು ಅವರ ಸಾರ್ವಜನಿಕ ಬದುಕಿನ ಕಾಳಜಿಗೆ ಕನ್ನಡಿ ಹಿಡಿದ ಕಟ್ಟಕಡೆಯ ಉದಾಹರಣೆಯಂತಿತ್ತು!

೬. ಕೆಂಗಲ್ ಹನುಮಂತಯ್ಯ – ಬರೀ ವಿಧಾನಸೌಧದ ಶಿಲ್ಪಿ ಮಾತ್ರವಲ್ಲ ಈ ಶಿಸ್ತುಗಾರ...

ಹಳೆಯ ಮೈಸೂರು ಪ್ರಾಂತ್ಯದ ಜನಪ್ರಿಯ ಮುಂದಾಳುವಾಗಿ ಇಲ್ಲಿನ ರಾಜತ್ವದ ವಿರುದ್ಧ ಚಳವಳಿ ಮಾಡಿದರು. ಕಾಂಗ್ರೆಸ್ ಪಾರ್ಟಿಯ ಮುಂಚೂಣಿ ನಾಯಕನಾಗಿದ್ದುಕೊಂಡೂ ಸ್ವತಂತ್ರ ಭಾರತದ ಪ್ರಪ್ರಥಮ ಪ್ರಧಾನಮಂತ್ರಿ ಹಾಗೂ ರಾಷ್ಟ್ರದ ಅತ್ಯಂತ ಜನಪ್ರಿಯ ನಾಯಕ ಜವಾಹರಲಾಲ್ ನೆಹರೂರ ವಿರುದ್ಧವೇ ಎದ್ದು ನಿಂತು ಅವರ ಧೋರಣೆ, ಕಾರ್ಯಶೈಲಿಯನ್ನು ಟೀಕಿಸುವ ಎದೆಗಾರಿಕೆ ತೋರಿದರು.

ಒಕ್ಕಲಿಗ ಜನಾಂಗದ ಅತ್ಯಂತ ಶ್ರೇಷ್ಠ ಮುತ್ಸದ್ದಿಯೆನಿಸಿಕೊಂಡೂ, ಸ್ವಜಾತಿ ಬಾಂಧವರ ವಿರೋಧವನ್ನು ಮೆಟ್ಟಿನಿಂತು ಕರ್ನಾಟಕದ ಏಕೀಕರಣಕ್ಕಾಗಿ ಹೋರಾಡಿದರು. ಹಳೆಯ ಮೈಸೂರು ಪ್ರಾಂತ್ಯದ ಮುಖ್ಯಮಂತ್ರಿಯಾಗಿ 'ವಿಧಾನಸೌಧ'ದಂತಹ ಅಮೋಘ ವಾಸ್ತುಶಿಲ್ಪದ ಆಡಳಿತಭವನದ ಸೃಷ್ಟಿಕರ್ತನೆಂಬ ಹೆಗ್ಗಳಿಕೆ ಪಡೆದುಕೊಂಡೂ, ಏಕೀಕೃತ ಕರ್ನಾಟಕದ ಕನಸಿನ ಸಾಕಾರಕ್ಕೋಸ್ಕರ ತಮ್ಮ ಮುಖ್ಯಮಂತ್ರಿ ಪದವಿಯನ್ನೇ ತ್ಯಾಗಮಾಡಿದರು. ಹೀಗೆ ಉದ್ದಕ್ಕೂ ಪ್ರವಾಹದ ವಿರುದ್ಧ ಈಜುತ್ತಲೇ ತಮ್ಮ ಸಾರ್ವಜನಿಕ ಬದುಕನ್ನು ಶ್ರೀಮಂತಗೊಳಿಸಿಕೊಳ್ಳುತ್ತ ಸಾಗಿದ ಈ ಪ್ರಚಂಡ ಮುತ್ಸದ್ದಿ ಕೆಂಗಲ್ ಹನುಮಂತಯ್ಯ ಬಿಟ್ಟುಹೋದ ರಾಜಕೀಯ ಬಳುವಳಿ ಕೇವಲ ವಿಧಾನಸೌಧವೆಂಬ ಕಟ್ಟಡವೊಂದೇ ಅಲ್ಲ. ಅಥವಾ ಅದರ ಪಶ್ಚಿಮ ದ್ವಾರದೆದುರು ನಿಲ್ಲಿಸಲಾದ ಅವರ ಕಂಚಿನ ಪ್ರತಿಮೆಯೊಂದೇ ಅಲ್ಲ. ಹನುಮಂತಯ್ಯನವರದ್ದು

ಪ್ರಾಮಾಣಿಕತೆ, ದಕ್ಷತೆ, ಶಿಸ್ತುಗಾರಿಕೆ ಹಾಗೂ ಕಠೋರ ಮೌಲ್ಯ ನಿಷ್ಠುರತೆಗಳ ಜತೆಗೆಯೆ ಒಂದಷ್ಟು ರಸಿಕತೆ, ಕಲಾಪ್ರಿಯತೆ ಹಾಗೂ ಸದಭಿರುಚಿಗಳ ಸಂಗಮದಂತಿದ್ದ ವ್ಯಕ್ತಿತ್ವ, ಅದು ಇಂದಿನ ಪೀಳಿಗೆಯ ರಾಜಕಾರಣಿಗಳಲ್ಲಿ ಕಾಣಸಿಗದ ಅಪರೂಪದ ಗುಣಲಕ್ಷಣಗಳ ಪ್ರತಿಮೆಯಂತಿತ್ತು.

ಭಾರತದ ಸರಕಾರದ ರೇಲ್ವೆ ಸಚಿವರಾಗಿಯೂ ತಮ್ಮ ಅಚ್ಚುಕಟ್ಟುತನ ಮತ್ತು ಪ್ರತಿಭೆಯನ್ನು ಮೆರೆದ ಹನುಮಂತಯ್ಯ, ಮುಂದೆ ಆಡಳಿತ ಸುಧಾರಣಾ ಆಯೋಗದ ಅಧ್ಯಕ್ಷರಾಗಿ ಮಾಡಿದ ಶಿಫಾರಸುಗಳೂ ಇಡೀ ರಾಷ್ಟ್ರರಾಜಕಾರಣಕ್ಕೆ ಕನ್ನಡಿಗ ಮೇಧಾವಿಯೊಬ್ಬ ನೀಡಿದ ಅಮೂಲ್ಯ ಕಾಣ್ಕೆಗಳಂತಿದ್ದವು.

೭. ಜಾಫರ್ ಶರೀಫ್ – ದಿವಾನನಾದ ಜವಾನ !

ಹಳೆಯ ಅವಿಭಜಿತ ಕಾಂಗ್ರೆಸ್ಸಿನ ಮುತ್ಸದ್ದಿ ಎಸ್.ನಿಜಲಿಂಗಪ್ಪನವರ ಗರಡಿಯಲ್ಲಿ ಒಬ್ಬ ಸಾಧಾರಣ ಕಚೇರಿ ಪರಿಚಾರಕನಾಗಿ ಪಳಗಿ, ಮುಂದೆ ೧೯೬೯ರಲ್ಲಿ ವಿಭಜನೆಗೊಂಡ ಕಾಂಗ್ರೆಸ್ಸಿನ ಅಪ್ರತಿಮ ನಾಯಕಿ ಇಂದಿರಾ ಗಾಂಧಿಯವರ ಆಶ್ರಯದಲ್ಲಿ ಚತುರ ರಾಜಕಾರಣಿ ಹಾಗೂ ದಕ್ಷ ಆಡಳಿತಗಾರನಾಗಿ ಅರಳಿದ ಜನಾಬ್ ಜಾಫರ್ ಶರೀಫರ ಜೀವನಗಾಥೆಯೆ, ನಮ್ಮ ಪ್ರಜಾಪ್ರಭುತ್ವದ ವ್ಯವಸ್ಥೆಯ ಅತ್ಯಂತ ಕೌತುಕಮಯ ಅಧ್ಯಾಯಗಳಲ್ಲೊಂದರಂತಿದೆ!

ಎಲ್ಲವೂ ಪ್ರಕೃತಿ ಸಹಜ ನಿಯಮದಂತೆ ಜರುಗಿದ್ದಲ್ಲಿ ಕನಿಷ್ಠಪಕ್ಷ ೧೯೯೯ರಲ್ಲಾದರೂ ಎಸ್ಸೆಮ್ ಕೃಷ್ಣರ ಬದಲು ಜಾಫರ್ ಶರೀಫರೇ ಕಾಂಗ್ರೆಸ್ ಸರಕಾರದ ಮುಖ್ಯಮಂತ್ರಿ ಪದವಿಗೆ ಅತ್ಯಂತ ಅರ್ಹ ಆಯ್ಕೆ ಎನಿಸಬೇಕಿತ್ತು. ಆದರೇನಂತೆ, ಕರ್ನಾಟಕದ ಕಾಂಗ್ರೆಸ್ಸಿಗರ ಅವಕಾಶವಾದಿ ರಾಜಕಾರಣ ಹಾಗೂ ಜಾತಿಬಲ ಮತ್ತು ಧನಬಲದ ಅಟ್ಟಹಾಸವನ್ನು ಧಿಕ್ಕರಿಸಲಿಕ್ಕಾಗದ ಅಂಜುಕುಳಿ ಜಾಯಮಾನದಿಂದಾಗಿ, ಜಾಫರ್ ಶರೀಫ್ ಎಂಬ ಗ್ರಾಸ್‌ರೂಟ್ಸ್ ಗ್ರಹಿಕೆಯ ಜನನಾಯಕನ ಬದಲಿಗೆ ಕೃಷ್ಣ ಎಂಬ ಕೃತಕ ಕೇಶಲಂಕಾರ ಹಾಗೂ ಥಳುಕು–ಬಳುಕಿನ ಸೋಗಲಾಡಿ ನಾಯಕನಿಗೇ ಆ ಪಟ್ಟ ಕಟ್ಟಿದರು.

ಇಂದಿರಾ ಗಾಂಧಿಯ ೧೯೮೦ರ ನಂತರದ ಸರಕಾರದಲ್ಲಿ ರೇಲ್ವೆ ಮಂತ್ರಿಯಾಗಿ ಚಮತ್ಕಾರಿಕ ರೀತಿಯಲ್ಲಿ ಕೆಲಸ ಮಾಡಿದ ಜಾಫರ್ ಶರೀಫ್ ಕಾಶ್ಮೀರದಿಂದ ಕನ್ಯಾಕುಮಾರಿಯವರೆಗೆ ಏಕರೂಪ ಬ್ರಾಡ್‌ಗೇಜ್ ಮಾರ್ಗ ನಿರ್ಮಾಣದ 'ಯೂನಿಗೇಜ್' ಯೋಜನೆಯ ಬೃಹತ್ ಕನಸನ್ನು ಮಿಂಚಿನ ವೇಗದಲ್ಲಿ ಅನುಷ್ಠಾನಗೊಳಿಸಿದರು. ಇಂದಿನ ರಾಮ ವಿಲಾಸ್ ಪಾಸ್ವಾನ್ ಅಥವಾ ಲಾಲೂ ಯಾದವ್‌ಗಳಂತೆ ಕೇವಲ ತಮ್ಮ ಸ್ವಂತ ರಾಜ್ಯವೊಂದಕ್ಕೇ ಪಕ್ಷಪಾತ ತೋರುವ ಬದಲು, ಇಡೀ ರಾಷ್ಟ್ರದುದ್ದಗಲಕ್ಕೂ ವೇಗದ ರೈಲುಗಳ ವ್ಯವಸ್ಥೆ, ರೈಲು ನಿಲ್ದಾಣಗಳ ಆಧುನೀಕರಣ; ಹಾಗೂ ಆಗಿನ್ನೂ ಖಾಸಗೀಕರಣದ ಅಬ್ಬರವಿಲ್ಲದಿದ್ದಾಗ್ಯೂ, ರೇಲ್ವೆ ಇಲಾಖೆಯ ವರಮಾನ ಹೆಚ್ಚಿಸುವ ಹಲವು ಹತ್ತು ಕ್ರಮಗಳಿಂದಾಗಿ ಜನಪ್ರಿಯರಾದರು ಜಾಫರ್ ಶರೀಫ್.

ಮುಂದೆ ರಾಜೀವ್ ಗಾಂಧಿ ಹಾಗೂ ಪಿ.ವಿ.ನರಸಿಂಹರಾವ್ ಸರಕಾರಗಳಲ್ಲೂ ಕಲ್ಲಿದ್ದಲು ಹಾಗೂ ಗಣಿ ಖಾತೆ ಸಚಿವರಾಗಿಯೂ ಶರೀಫ್ ಮುಂದುವರಿಸಿದ್ದು ಇದೇ ಬಗೆಯ ಆಡಳಿತ ದಕ್ಷತೆ ಮತ್ತು ಕ್ರಿಯಾಶೀಲತೆಯನ್ನೇ.

ಯಾವುದೇ ವಿಶ್ವವಿದ್ಯಾಲಯದ ಪದವಿ ಪಡೆಯದೆ ಇದ್ದರೂ ಸೊಗಸಾದ ಕನ್ನಡ, ಸುಲಲಿತವಾದ ಇಂಗ್ಲಿಷ್ ಮತ್ತು ಹಿಂದಿ ಮಾತುಗಾರಿಕೆಯನ್ನು ರೂಢಿಸಿಕೊಂಡ ಶರೀಫರು ಭಾರತದ ಆರ್ಥಿಕ ನೀತಿ, ವಿದೇಶಾಂಗ ನೀತಿಗಳ ಬಗ್ಗೆಯೂ ಅಧಿಕಾರಯುತವಾಗಿ ಚರ್ಚಿಸಬಲ್ಲ ಪಾಂಡಿತ್ಯವನ್ನು ಪಡೆದುಕೊಂಡಿದ್ದಾರೆಂದು ಬಹುಜನಕ್ಕೆ ಗೊತ್ತಿರಲಾರದು.

ಆದರೇನಂತೆ, ಬದುಕಿನ ಸಂಧ್ಯಾಕಾಲದಲ್ಲಿ ಭ್ರಷ್ಟಾಚಾರ ಆರೋಪ ಹಾಗೂ ಪುತ್ರವ್ಯಾಮೋಹದ ಅಪವಾದಕ್ಕೆ ಗುರಿಯಾದ ಜಾಫರ್ ಶರೀಫರು, ಕರ್ನಾಟಕದ ಮುಸಲ್ಮಾನ ಜನಾಂಗದ ಅತ್ಯಂತ ಸಮರ್ಥ ನಾಯಕನೆಂಬ ಪ್ರತೀತಿಯನ್ನಂತೂ ಸುಲಭವಾಗಿ ಅಲ್ಲಗಳೆಯಲಾಗದು.

೮. ಕೆ.ಎಚ್.ಪಾಟೀಲ – ಹುಲಕೋಟಿ ಹುಲಿ

ಹತ್ತು ಮಂದಿ ಅತ್ಯುತ್ತಮ ರಾಜಕಾರಣಿಗಳ ಪಟ್ಟಿಯಲ್ಲಿ ಉತ್ತರ ಕರ್ನಾಟಕದಿಂದ ಸಹಜ ಆಯ್ಕೆ ಎನಿಸಿಕೊಳ್ಳುವುದು ಹಳೆಯ ಮೈಸೂರಿನ ರಾಜಕಾರಣಿಗಳ ಜೊತೆ ಸರಿಸಾಟಿಯಾಗಿ ವ್ಯವಹರಿಸಿದ, ಅವರೆಲ್ಲರಿಗಿಂತ ವಿಶಿಷ್ಟವಾದ, ವಿಭಿನ್ನವಾದ ಸಂಘಟನಾತ್ಮಕ ಶೈಲಿ ಹಾಗೂ ರಾಜಕೀಯ ಜಾಯಮಾನದೊಂದಿಗೆ ಛಾಪು ಮೂಡಿಸಿ ಹೋದ ಗದುಗಿನ ನಾಯಕ ಕೆ.ಎಚ್.ಪಾಟೀಲರೊಬ್ಬರೆ.

ಎರಡು ಬಾರಿ ಮುಖ್ಯಮಂತ್ರಿಯಾಗಿದ್ದ ಹೈದ್ರಾಬಾದ್ ಕರ್ನಾಟಕದ ವೀರೇಂದ್ರ ಪಾಟೀಲರು ಎಷ್ಟೇ ಪ್ರಸಿದ್ಧರಾದರೂ, ಕೆ.ಎಚ್.ಪಾಟೀಲರಂತೆ ಎದುರಾಳಿಗಳ ಜಾತಿಬಲ–ಅಧಿಕಾರಬಲವನ್ನು ಧಿಕ್ಕರಿಸಿ ನಿಂತು ಪರ್ಯಾಯ ಶಕ್ತಿಕೇಂದ್ರವಾಗಬಲ್ಲಂತಹ ಛಾತಿ ಪ್ರದರ್ಶಿಸಿದವರಲ್ಲ.

ಗದಗ–ಹುಬ್ಬಳ್ಳಿ ಕಡೆಯ ಲಿಂಗಾಯತರ ಅಗಾಧ ಸಂಖ್ಯಾಬಲದ ಸವಾಲನ್ನು ಮೆಟ್ಟಿನಿಂತು ೧೯೬೭ರ ಅಸೆಂಬ್ಲಿ ಚುನಾವಣೆಯಲ್ಲಿ ಪ್ರಥಮ ಬಾರಿಗೆ ಜನತಾಪಕ್ಷವೆಂಬ ಕಾಂಗ್ರೆಸ್ ವಿರೋಧಿ ಪ್ರಾದೇಶಿಕ ಪಕ್ಷದಿಂದ ಅಸೆಂಬ್ಲಿಗೆ ಆರಿಸಿಬಂದ ಕೃಷ್ಣಗೌಡ ಹನುಮಗೌಡ ಪಾಟೀಲರು, ನಿಜಲಿಂಗಪ್ಪನವರಂತಹ ಕಾಂಗ್ರೆಸ್ ದಿಗ್ಗಜನ ವಿರುದ್ಧವೇ ಸೆಡ್ಡು ಹೊಡೆದು ನಿಂತರು.

೧೯೭೧ರ ಐತಿಹಾಸಿಕ ಲೋಕಸಭಾ ಚುನಾವಣೆಯಲ್ಲಿ ದೇವರಾಜ ಅರಸರೊಂದಿಗೆ ಕೈಜೋಡಿಸಿ ಇಂದಿರಾ ಕಾಂಗ್ರೆಸ್ಸಿನ ಜಯಭೇರಿಗೆ ಸಮಾನ ಕಾರಣಕರ್ತರೆನಿಸಿದ ಪಾಟೀಲರು ಮುಂದೆ ಅರಸು ಸರಕಾರದಲ್ಲಿ ಅರಣ್ಯ, ಸಹಕಾರ, ಕೃಷಿ ಹೀಗೆ ವಿವಿಧ ಇಲಾಖೆಗಳ ಸಚಿವರಾಗಿ ಅಪ್ರತಿಮ ದಕ್ಷತೆ, ಚುರುಕುತನ ಹಾಗೂ ಅಪಾರ ವ್ಯವಹಾರ ಜ್ಞಾನದೊಂದಿಗೆ ಆಡಳಿತ ನಿರ್ವಹಿಸಿ, ತಾವಿದ್ದ ಮಂತ್ರಿಮಂಡಲಕ್ಕೆ ಅನಿವಾರ್ಯ ಆಸ್ತಿಯೆನಿಸಿಬಿಟ್ಟರು.

ಮುಂದೆ ೧೯೭೭ರಲ್ಲಿ ಅರಸು ವಿರುದ್ಧವೇ ಸಿಡಿದೆದ್ದು, ಇಂದಿರಾ ಕಾಂಗ್ರೆಸ್ಸಿನ ದೈತ್ಯಶಕ್ತಿಯೆದುರು ಬ್ರಹ್ಮಾನಂದರೆಡ್ಡಿ ಕಾಂಗ್ರೆಸ್ ಎಂಬ ಪರ್ಯಾಯ ಶಕ್ತಿಯ ರಾಜ್ಯ ನಾಯಕರಾಗಿ ಹೋರಾಡಿದ ಕೆ.ಎಚ್.ಪಾಟೀಲರು; ಪ್ರಚಂಡ ಪರಾಭವ ಅನುಭವಿಸಿಯೂ ಎದೆಗುಂದದೆ ತಮ್ಮ ಹೋರಾಟಗಾರನ ಛಲವನ್ನು ಜೋಪಾನವಾಗಿಟ್ಟುಕೊಂಡೇ, ಮತ್ತೆ ೧೯೮೦ರಿಂದ ರಾಜಕೀಯ ಪುನರ್ಜನ್ಮ ಪಡೆದುಕೊಂಡರು.

ಅಧಿಕಾರ ರಾಜಕಾರಣಕ್ಕೆ ಪೂರಕವಾಗಿ ತಮ್ಮ ಸ್ವಗ್ರಾಮ ಹುಲಕೋಟಿಯನ್ನು ಹಲವು ಹತ್ತು ಬಗೆಯ ಕೃಷಿ ಆಧಾರಿತ ಸಹಕಾರಿ ಉದ್ದಿಮೆಗಳ ಕೇಂದ್ರ ಸ್ಥಾನವಾಗಿ ಬೆಳೆಸಿ ಅಖಿಲ ಭಾರತ ಮಟ್ಟದ ಸಹಕಾರಿ ಚಳವಳಿಯ ನೇತಾರರಾಗಿ ಹೊರಹೊಮ್ಮಿದ್ದು, ಈ 'ಹುಲಕೋಟಿ ಹುಲಿ'ಯ ಧೀಮಂತ ಬದುಕಿನ ಸಾರ್ಥಕತೆಯ ಸಂಕೇತವಾಗಿತ್ತು.

ಕರ್ನಾಟಕದ ವಿಧಾನ ಮಂಡಲ ಕಲಾಪದಲ್ಲಿ ತಮ್ಮ ಭಾಗದ ದೇಶೀ ಕನ್ನಡವನ್ನು ಅನೇಕ ರಚನಾತ್ಮಕ ಅಭಿವೃದ್ಧಿ ಕನಸುಗಳ ಮತ್ತು ಸಮೃದ್ಧ ವಿಚಾರಧಾರೆಗಳ ಮಂಡನೆಗೆ ಸಮರ್ಥವಾಗಿ ಬಳಸಿ ಅದಕ್ಕೊಂದು ರಾಜ್ಯಮಟ್ಟದ ಜನಪ್ರಿಯತೆಯನ್ನು ತಂದುಕೊಟ್ಟದ್ದು ಕೆ.ಎಚ್.ಪಾಟೀಲರೆ!

೯. ಸಿದ್ಧರಾಮಯ್ಯ – 'ಅಹಿಂದ'ದ ಅಧಿನಾಯಕ....

ಸಿಟ್ಟು, ಸೆಡುವು, ಠೇಂಕಾರ, ಗತ್ತುಗಾರಿಕೆ ಇವೆಲ್ಲವುಗಳ ಸಮೇತ 'ಜನನಾಯಕ'ನಾಗಿ ವಿಜೃಂಭಿಸಬಲ್ಲ ಸಿದ್ಧರಾಮಯ್ಯ ತಮ್ಮ ಖಾಸಾ ಮಿತ್ರರುಗಳಿಗೆ ತಮ್ಮ ಮೂಲಭೂತ ಮುಗ್ಧತೆ, ಪ್ರಾಮಾಣಿಕತೆ ಹಾಗೂ ನಿಯತ್ತುಗಳಿಂದಾಗಿ ಇಷ್ಟವಾಗುತ್ತಾರೆ. ಹಿಂದುಳಿದ ವರ್ಗಗಳ ತಮ್ಮ ಅಖಂಡ ಅಭಿಮಾನಿಗಳಿಗೆ ಸಿದ್ಧರಾಮಯ್ಯ, ಸ್ವಾಭಿಮಾನದ ಸಂಕೇತವಾಗಿ, ತಮ್ಮ ರಾಜಕೀಯ ಅಸ್ತಿತ್ವ ಮತ್ತು ಆತ್ಮಗೌರವವನ್ನು ಎತ್ತಿ ಹಿಡಿಯಬಲ್ಲ ಏಕಾಂಗಿ ನಾಯಕನಾಗಿ ಕಂಗೊಳಿಸುತ್ತಾರೆ.

ಆದರೆ ದೇವೇಗೌಡರ ರಾಜಪರಿವಾರಕ್ಕೆ ಮಾತ್ರ ಇವತ್ತು ಸಿದ್ಧರಾಮಯ್ಯ ತಮ್ಮ ಕೌಟುಂಬಿಕ ಪಾಳೇಗಾರಿಕೆಗೆ ಕಂಟಕವಾಗಬಲ್ಲ ಕೆಟ್ಟ ಕನಸಾಗಿ ಕಾಡುತ್ತಿದ್ದಾರೆ! ಒಂದು ದಶಕಕ್ಕೂ ಹೆಚ್ಚು ಕಾಲ ಜನತಾದಳದ ರಾಜಕೀಯ ಶೋಕೇಸಿನಲ್ಲಿ ಹಿಂದುಳಿದ ವರ್ಗಗಳ ಪ್ರದರ್ಶನ-ಗೊಂಬೆಯಂತೆ ಸಿದ್ಧರಾಮಯ್ಯನವರನ್ನು ಬಳಸಿಕೊಂಡ ಗೌಡರು, ತಮ್ಮ ಮಕ್ಕಳ ಉದ್ಧಾರಕ್ಕೆಂದು ಕಂಕಣತೊಟ್ಟ ಘಳಿಗೆಯಿಂದಲೇ ಸಿದ್ಧುವನ್ನು ಹೊರಗಟ್ಟುವ ಸಂಚು ರೂಪಿಸಿ, ಅದನ್ನು ೨೦೦೫ರ ಜುಲೈನಲ್ಲಿ ಅನುಷ್ಠಾನಗೊಳಿಸಿಯೂ ಆಯಿತು.

ದೇವೇಗೌಡರ ಅಂತರಂಗವನ್ನರಿತ ಸಿದ್ಧರಾಮಯ್ಯ, ಪಕ್ಷ ರಾಜಕಾರಣದ ಇಂತಹ ಒಳಸಂಚಿನಿಂದ ಬೆಚ್ಚಿಬಿದ್ದು ಅಲ್ಪಸಂಖ್ಯಾತರು, ಹಿಂದುಳಿದವರು ಹಾಗೂ ದಲಿತ ಸಮುದಾಯ ಗಳನ್ನು ಪ್ರತಿನಿಧಿಸಬಲ್ಲ "ಅಹಿಂದ" ಎಂಬ ಪಕ್ಷಾತೀತ ವೇದಿಕೆಯನ್ನೇರಿ ಹೋರಾಡುತ್ತಾ ಬಂದರು. ಆ ಹೋರಾಟವೇ ಅವರನ್ನಿಂದು ಕಾಂಗ್ರೆಸ್ ವಠಾರದಲ್ಲಿ ತಂದು ನಿಲ್ಲಿಸಿಬಿಟ್ಟಿದೆ. ಅಲ್ಲಿನ "ಮೂಲನಿವಾಸಿ"ಗಳಾದ ಧರಂಸಿಂಗ್, ಖರ್ಗೆ, ಪೂಜಾರಿ, ಮೊಯ್ಲಿ ಮುಂತಾದವ ರೊಂದಿಗೆ, ಹಿಂದುಳಿದ ವರ್ಗಗಳ ನಾಯಕ ಪಟ್ಟಕ್ಕಾಗಿ ಮತ್ತೊಮ್ಮೆ ಸ್ಪರ್ಧೆಗಿಳಿಯುವಂತಾಗಿದೆ.

ತಮಗಿಂತ ಹೆಚ್ಚು ರಾಜಕೀಯ ಅನುಭವ ಮತ್ತು ಆಡಳಿತಾತ್ಮಕ ಪರಿಣತಿ ಪಡೆದಿರಬಹುದಾದ ಈ ಹಿರಿಯ ಕಾಂಗ್ರೆಸ್ ಸಹೋದ್ಯೋಗಿಗಳಿಗಿಂತ ಸಿದ್ಧರಾಮಯ್ಯ ಮೇಲು ಎನಿಸುವುದು, ತಮ್ಮ ಸ್ವಂತಿಕೆ, ಸ್ವಂತ ವಿಚಾರ, ಸ್ವಯಂಪ್ರೇರಿತ ನಡವಳಿಕೆ ಹಾಗೂ ಸ್ವತಂತ್ರ ಮನೋಧರ್ಮದಿಂದಾಗಿ.

ಮಧ್ಯಮ ತಲೆಮಾರಿನ ರಾಜಕಾರಣಿಗಳ ಪೈಕಿ ತಮ್ಮದೇ ಆದ ರಾಜಕೀಯ, ಸಾಮಾಜಿಕ ನೆಲೆಗಟ್ಟನ್ನು ನಿರ್ಮಿಸಿಕೊಂಡ ಏಕೈಕ ನಾಯಕನೆನಿಸಿರುವ ಸಿದ್ಧರಾಮಯ್ಯ; ಕೇವಲ ಕುರುಬರ ನಾಯಕನಾಗಲು ಹವಣಿಸದೆಯೆ, ಕರ್ನಾಟಕದ ಸರ್ವ ಜಾತಿ–ಜನಾಂಗಗಳ ಪ್ರಜ್ಞಾವಂತ ಜನರ ದನಿಯಾಗಲು ಹೊರಟಲ್ಲಿ ಖಂಡಿತವಾಗಿಯೂ ಯಶಸ್ವಿಯಾಗಬಲ್ಲರು. ತಮ್ಮ ವಿಶ್ವಾಸಾರ್ಹತೆಯನ್ನು ಇಮ್ಮಡಿಗೊಳಿಸಿಕೊಳ್ಳಬಲ್ಲರು. ನಮ್ಮ ಸಾರ್ವಜನಿಕ ಬದುಕಿಗೆ ಅರ್ಥ ಪೂರ್ಣ ತಿರುವು ನೀಡಬಲ್ಲರು.

೧೦. ರಮೇಶ್‌ಕುಮಾರ್ – ತೆರೆಮರೆಯ ಜ್ವಾಲಾಮುಖಿ!

ಕೋಲಾರ ಜಿಲ್ಲೆಯ ಆಂಧ್ರ ಗಡಿಯ ಶ್ರೀನಿವಾಸಪುರ ತಾಲೂಕು ಮತ್ತು ಅಸೆಂಬ್ಲಿ ಕ್ಷೇತ್ರದಲ್ಲಿ ಏಳು ಬಾರಿ ಚುನಾವಣಾ ಕಾಳಗಗಳನ್ನು ನಿಭಾಯಿಸಿರುವ, ನಾಲ್ಕು ಬಾರಿ ವಿಧಾನಸಭೆಗೆ ಆಯ್ಕೆಗೊಳ್ಳುತ್ತ ಬಂದಿರುವ ರಮೇಶ್‌ಕುಮಾರ್ ರಾಜ್ಯಮಟ್ಟದ ರಾಜಕೀಯ ಅನುಭವದಲ್ಲಿ ಎಂ.ಪಿ.ಪ್ರಕಾಶ್ ಮತ್ತು ಸಿದ್ಧರಾಮಯ್ಯನವರಿಗಿಂತ ಸೀನಿಯರ್, ಆದರೆ ಮಂತ್ರಿಗಿರಿಯ ಅನುಭವದಲ್ಲಿ ಸಬ್ ಜೂನಿಯರ್! ಯಾಕೆಂದರೆ, ಪ್ರತಿ ಸಾರಿ ಗೆದ್ದಾಗಲೂ ಆಳುವ ಪಕ್ಷದಲ್ಲೇ ಇದ್ದರೂ ಒಮ್ಮೆಯೂ ಮಂತ್ರಿಯಾದವರಲ್ಲ. ಆದರೆ ದೇವರಾಜ ಅರಸು ಎಂಬ ಪ್ರಗತಿಪರ ರಾಜಕೀಯ ನೇತಾರನ ಶಿಷ್ಯನಾಗಿ ದೀಕ್ಷೆ ಪಡೆದ ರಮೇಶ್‌ಕುಮಾರ್, ಐದು ವರ್ಷಗಳ ಪೂರ್ಣಾವಧಿಗೆ ಅಸೆಂಬ್ಲಿಯ ಸ್ಪೀಕರ್‌ರಾಗಿ ವಿಜೃಂಭಿಸಿದ್ದು ಪಾಳೇಗಾರಿಕೆ ರಾಜಕಾರಣದ ಪಿತಾಮಹ ದೇವೇಗೌಡರ ದರಬಾರಿನಲ್ಲಿ!

೧೯೭೦ರ ದಶಕದ ಆರಂಭದಿಂದಲೇ ಇಂದಿರಾ ಗಾಂಧಿ ಕಾಂಗ್ರೆಸ್ಸಿನ ವಿದ್ಯಾರ್ಥಿ ನಾಯಕ ಗಣದಲ್ಲಿ ಗುರುತಿಸಿಕೊಂಡರೂ, ಎಡಪಂಥೀಯ ವಿಚಾರಧಾರೆಗಳನ್ನು ಸತತ ಅಧ್ಯಯನ, ಆತ್ಮವಿಮರ್ಶೆಗಳ ಮೂಲಕ ಮೈಗೂಡಿಸಿಕೊಂಡು ಬಂದ ರಮೇಶ್‌ಕುಮಾರ್ ಎಂದೆಂದೂ ಅಲ್ಲಿನ ಯೂತ್ ಕಾಂಗ್ರೆಸ್ಸಿನ ಹುಂಡಾ ಸಂಸ್ಕೃತಿಗೆ ಶರಣಾದವರಲ್ಲ. ತಮ್ಮ ವಯಸ್ಸಿಗೆ ಮೀರಿದ ರಾಜಕೀಯ ಜಾಣ್ಮೆ, ಪ್ರಬುದ್ಧತೆ ಮತ್ತು ಪ್ರಚಂಡ ಧೈರ್ಯಗಳಿಂದಾಗಿ ತಮ್ಮದೇ ಆದ ಅಸ್ತಿತ್ವವನ್ನು ರೂಪಿಸಿಕೊಂಡು, ಪಾಳೇಗಾರಿಕೆ ಅಟ್ಟಹಾಸವಿದ್ದ ಶ್ರೀನಿವಾಸಪುರ ಕ್ಷೇತ್ರದಲ್ಲಿ ಎಲ್ಲ ಜಾತಿಗಳ, ಬಡವರ ಪರ್ಯಾಯ ರಾಜಕೀಯ ಶಕ್ತಿಯನ್ನು ಪ್ರತಿಷ್ಠಾಪಿಸಿದರು.

ಸ್ವಜಾತಿ ಬಾಂಧವರಾದ ಬ್ರಾಹ್ಮಣ ಮತದಾರರು ಬೆರಳೆಣಿಕೆಯಷ್ಟು ಮಾತ್ರವೇ ಇದ್ದರೂ; ಅಲ್ಲಿನ ಪಟ್ಟಭದ್ರರ ಜಾತಿಬಲ, ಧನಬಲ ಹಾಗೂ ಬಾಹುಬಲವನ್ನು ಧಿಕ್ಕರಿಸುತ್ತಲೇ ಗೆದ್ದು ಬರುತ್ತಿರುವ ರಮೇಶ್‌ಕುಮಾರ್, ೧೯೮೩ರಲ್ಲಿ ಕರ್ನಾಟಕದಲ್ಲಿ ಪ್ರಪ್ರಥಮ ಕಾಂಗ್ರೇಸ್ಸೇತರ ಸರಕಾರದ ಸ್ಥಾಪನೆಯಲ್ಲಿ ನಿರ್ಣಾಯಕ ಪಾತ್ರ ವಹಿಸಿದ ಲಂಕೇಶರ ಹಾಗೂ ಅವರ

'ಪತ್ರಿಕೆ'ಯ ಆಶಯಗಳಿಗೆ ಪೂರಕವಾಗಿ ಸ್ಪಂದಿಸುತ್ತಾ ಬಂದು ಆ ಪ್ರಯೋಗದ ಯಶಸ್ಸಿಗೆ ತನ್ನದೇ ರೀತಿಯಲ್ಲಿ ಕಾಣ್ಕೆ ನೀಡಿದ್ದೀಗ ಇತಿಹಾಸ.

ಎಲ್ಲ ಬಗೆಯ ಆರೋಗ್ಯಕರ ರಾಜಕೀಯ, ಸಾಮಾಜಿಕ ಆಶಯಗಳಿಗೆ ತೆರೆ ಮರೆಯಲ್ಲಿದ್ದುಕೊಂಡೇ ಸಕ್ರಿಯವಾಗಿ ಇಂಬುಕೊಡುತ್ತಲೇ ಬಂದಿರುವ ರಮೇಶ್‌ಕುಮಾರ್ ಪ್ರಚಾರದ ಪ್ರಖರತೆಗೆ ಅಂಜುವ, ಅಧಿಕಾರ ಪ್ರದರ್ಶನಕ್ಕೆ ಹಿಂಜರಿಯುವ ಸಂಕೋಚದ ಪ್ರವೃತ್ತಿಯ ವಿಶಿಷ್ಟ ರಾಜಕಾರಣಿ.

ರವೀಂದ್ರ ರೇಷ್ಮೆಯವರು ವೃತ್ತಿಯಿಂದ ಸಸ್ಯಶಾಸ್ತ್ರ ಪ್ರಾಧ್ಯಾಪಕರು. ಪ್ರವೃತ್ತಿಯಿಂದ ರಾಜಕೀಯ ವರದಿಗಾರರು. ಎಂಭತ್ತರ ದಶಕದಲ್ಲಿ 'ಲಂಕೇಶ್ ಪತ್ರಿಕೆ'ಯ ರಾಜಕೀಯ ವರದಿಗಾರರಾಗಿ ಇವರು ಬರೆದ ಅನೇಕ ತನಿಖಾ ವರದಿಗಳು ಹಲವು ಸರ್ಕಾರಗಳ ಬುಡಗಳನ್ನೇ ಅಲ್ಲಾಡಿಸುವಷ್ಟು ಸುಸಂಶೋಧಿತವೂ, ಪ್ರಖರವೂ ಆಗಿದ್ದವು. ಕರ್ನಾಟಕದ ಪ್ರಮುಖ ರಾಜಕೀಯ ವಿಶ್ಲೇಷಕರಲೊಬ್ಬರಾದ ರೇಷ್ಮೆಯವರ ಈಗ 'ವಿಕ್ರಾಂತ ಕರ್ನಾಟಕ'ದ ಗೌರವ ಸಂಪಾದಕ ರಾಗಿದ್ದಾರೆ.

*

ಸೋಲದೇ ಹೋದ ಹತ್ತು ಸ್ಥಾನಗಳು...

– ಡಾ|| ಕೆ.ಎಂ. ಶ್ರೀನಿವಾಸಗೌಡ

ಕರ್ನಾಟಕದ ಹತ್ತು ಅತ್ಯುತ್ತಮ ಕ್ರೀಡಾಪಟುಗಳು :

೧. ಸಿ.ಎಂ.ಮುತ್ತಯ್ಯ (ಅಥ್ಲೆಟಿಕ್ಸ್)

೨. ಪ್ರಕಾಶ್ ಪಡುಕೋಣೆ (ಬ್ಯಾಡ್ಮಿಂಟನ್)

೩. ನರಸಿಂಹರಾಜನ್ (ಬಾಸ್ಕೆಟ್ ಬಾಲ್)

೪. ಅರ್ವಿಂದ್ ಸವುರ್ (ಸ್ನೂಕರ್/ಬಿಲಿಯರ್ಡ್ಸ್)

೫. ಪಂಕಜ್ ಅಡ್ವಾಣಿ (ಬಿಲಿಯರ್ಡ್ಸ್)

೬. ಜಿ.ಆರ್.ವಿಶ್ವನಾಥ್ (ಕ್ರಿಕೆಟ್)

೭. ಯರಪಲ್ಲಿ ಪ್ರಸನ್ನ (ಕ್ರಿಕೆಟ್)

೮. ಬಿ.ಎಸ್.ಚಂದ್ರಶೇಖರ್ (ಕ್ರಿಕೆಟ್)

೯. ಉಳಗನಾಥನ್ (ಫುಟ್‌ಬಾಲ್),
ಕಬಾಡ್ ಜಯಂತ್ (ಟೇಬಲ್ ಟೆನ್ನಿಸ್)

೧೦. ಶಿಖಾ ಟಂಡನ್, ನಿಶಾ ಮಿಲೆಟ್ (ಈಜು),
ರಾಬಿನ್ ಕಾರ್ನರ್ (ಕುದುರೆ ರೇಸು)

ಕರ್ನಾಟಕದ ಹತ್ತು ಅತ್ಯುತ್ತಮ ಕ್ರೀಡಾಪಟುಗಳನ್ನು ಆಯ್ದು ವಿಶ್ಲೇಷಣೆ ಮಾಡಲು ಮಿತ್ರ ರವೀಂದ್ರ ರೇಷ್ಮೆ ಹೇಳಿದಾಗ, ನನಗಿದೊಂದು ಹಗುರವಾದ ಸರಳ ಕೆಲಸ ಎನಿಸಿತ್ತು. ಆದರೆ ಅದು ಹಾಗಾಗಲಿಲ್ಲ. ನಾನು ನಮ್ಮ ಕ್ರೀಡಾ ಇತಿಹಾಸವನ್ನು ಮೆಲುಕು ಹಾಕುತ್ತಾ, ದಿಗ್ಗಜರನ್ನು ನೆನಪು ಮಾಡಿಕೊಳ್ಳುತ್ತಿದ್ದಂತೆ ಇದೊಂದು ಕಷ್ಟದ ಕೆಲಸ ಎಂಬುದು ಖಾತ್ರಿಯಾಯಿತು. ಹತ್ತೇ ಜನರನ್ನು ಆಯ್ಕೆ ಮಾಡಬೇಕಾಗಿರುವುದರಿಂದ ನಾನು ನನ್ನ ಶಕ್ತಿ ಮೀರಿ ಪ್ರಾಮಾಣಿಕ ಪ್ರಯತ್ನ ಮಾಡಿದ್ದೇನೆ. ಇಂತಹ ಪಟ್ಟಿಯನ್ನು ತಯಾರಿಸುವುದು ಎಂದಿಗೂ ಸಲೀಸಲ್ಲ ಮತ್ತು ಇದು ಎಲ್ಲರನ್ನೂ ತೃಪ್ತಿಗೊಳಿಸಲು ಸಾಧ್ಯವಿಲ್ಲ. ನಾನು ಬಹುತೇಕ ಆಟಗಳನ್ನು ಪರಿಶೀಲಿಸಿರುವೆನಾದರೂ, ಎಲ್ಲ ವಿಧದ ಕ್ರೀಡೆಗಳನ್ನು ಅವುಗಳ ವಿವರಗಳೊಂದಿಗೆ ಚರ್ಚಿಸುವುದು ಅಸಾಧ್ಯ ಎಂಬುದನ್ನು ನಾನು ಒಪ್ಪಿಕೊಳ್ಳುತ್ತೇನೆ. ಏನೇ ಇರಲಿ, ನನ್ನ ಆಯ್ಕೆ ಹೀಗಿದೆ.

ಮೊದಲಿಗೆ ಇಂಗ್ಲಿಷ್ ವರ್ಣಮಾಲೆಯ A for Athletics ನಿಂದ ಆರಂಭಿಸೋಣ. ಅಥ್ಲೆಟಿಕ್ಸ್‌ನಲ್ಲಿ ೧೯೫೦ ದಶಕದಿಂದ ೭೦ರ ದಶಕದವರೆಗೂ, ಅಷ್ಟೇಕೆ ೮೦ರ ದಶಕದವರೆಗೂ ನಾವು ಹಲವು ಅತ್ಯುತ್ತಮ ಅಥ್ಲಿಟ್‌ಗಳನ್ನು ಸೃಷ್ಟಿಸಿದ್ದೇವೆ. ಆದರೆ ನಿರಂತರ ಸ್ಥಿರತೆ ಕಾಪಾಡಿಕೊಳ್ಳುವಿಕೆ ಮತ್ತು ಸಾಧನೆ ಇವುಗಳ ಆಧಾರದಲ್ಲಿ ನನ್ನ ಆಯ್ಕೆ ಸಿ.ಎಂ.ಮುತ್ತಯ್ಯ.

ಸಿ.ಎಂ. ಮುತ್ತಯ್ಯ ಒಬ್ಬ ಡೆಕಾಥ್ಲಿಟ್ ಆಗಿದ್ದರು. ಅಥ್ಲೆಟಿಕ್ಸ್‌ನಲ್ಲಿ ಅತಿ ಕಷ್ಟದ ಇವೆಂಟ್ ಎಂದರೆ ಅದು ಡೆಕಾಥ್ಲಾನ್. ಈ ಡೆಕಾಥ್ಲಾನ್‌ನಲ್ಲಿ ಒಬ್ಬ ಕ್ರೀಡಾಪಟು ಟ್ರ್ಯಾಕ್ ಮತ್ತು ಫೀಲ್ಡ್- ಈ ಎರಡೂ ಈ ಇವೆಂಟ್‌ಗಳಲ್ಲೂ ಭಾಗವಹಿಸಬೇಕಾಗುತ್ತದೆ. ಮೊದಲು ಟ್ರ್ಯಾಕ್ ನಂತರ ಫೀಲ್ಡ್ ಇವೆಂಟ್ಸ್. ಈ ಇವೆಂಟ್ ಎರಡು ದಿನ ಜರುಗುತ್ತದೆ; ಮೊದಲ ದಿನ ಕ್ರೀಡಾಳುಗಳು ಐದು ಇವೆಂಟ್‌ಗಳಲ್ಲಿ, ಎರಡನೇ ದಿನ ಮತ್ತೈದು ಇವೆಂಟ್‌ಗಳಲ್ಲಿ ಸ್ಪರ್ಧಿಸಬೇಕಾಗುತ್ತದೆ. ಶಕ್ತಿಯ ಸಾರವನ್ನೆಲ್ಲ ಹೀರಿಕೊಂಡು ಬಿಡುವುದರಿಂದ ಇದು ತುಂಬ ಬಳಲಿಕೆ ತರುವ ಇವೆಂಟ್ ಆಗಿದೆ. ಎರಡನೇ ದಿನದಂದು ಅವರು ೧೫೦೦ ಮೀ. ಓಟದಲ್ಲಿ ಸ್ಪರ್ಧಿಸುವಾಗ ಹೆಚ್ಚು ಕಡಿಮೆ ಕುಸಿದು ಬೀಳುವ ಹಂತ ತಲುಪಿರುತ್ತಾರೆ. ಈ ಕಾರಣಕ್ಕಾಗಿಯೇ ನಾನು ಕೆನೆತ್ ಪಾವೆಲ್ ಮತ್ತು ಅಶ್ವಿನಿ ನಾಚಪ್ಪರವರ ಬದಲಿಗೆ ಸಿ.ಎಂ.ಮುತ್ತಯ್ಯರನ್ನು ಆರಿಸಿದ್ದು. ಸಿ.ಎಂ.ಮುತ್ತಯ್ಯ ಸತತವಾಗಿ ನಾಲ್ಕು ಸಲ ರಾಷ್ಟ್ರೀಯ ಡೆಕಾಥ್ಲಾನ್ ಚಾಂಪಿಯನ್‌ಶಿಪ್ ಗೆದ್ದಿದ್ದರು. ಮತ್ತು ಈ ಸಾಧನೆಯನ್ನು ಬೇರ್‍ಯಾರು ಮಾಡಲಿಲ್ಲ. ಅದಕ್ಕೇ ಅಥ್ಲೆಟಿಕ್ಸ್‌ನಲ್ಲಿ ನನ್ನ ಆಯ್ಕೆ ಸಿ.ಎಂ.ಮುತ್ತಯ್ಯ.

ಇಂಗ್ಲಿಷ್ ವರ್ಣಮಾಲೆಯ ಎರಡನೆ ಅಕ್ಷರ B ಗೆ ಹೋಗೋಣ; ಇಲ್ಲಿ ನಮ್ಮೆದುರು ಬ್ಯಾಡ್ಮಿಂಟನ್ ಮತ್ತು ಬಾಸ್ಕೆಟ್ ಬಾಲ್‌ಗಳಿವೆ. ನಾವು ಹಿಂದೆ ಬಾಲ್ ಬ್ಯಾಡ್ಮಿಂಟನ್‌ನಲ್ಲಿ ತುಂಬಾ ಚೆನ್ನಾಗಿ ಆಡುತ್ತಿದ್ದೆವು. ಈ ಆಟವನ್ನು ಹುಡುಗಿಯರ ಆಟ ಎಂದು ಕರೆಯಲಾಗುತ್ತಿತ್ತಾದರೂ, ಬಹುತೇಕ ಪುರುಷರು ಈ ಆಟವನ್ನು ಆಡುತ್ತಿದ್ದರು. ಇಲ್ಲಿ ದಾಖಲಿಸಬೇಕಾದ ಅಂಶವೆಂದರೆ, ನಮ್ಮ ತಂಡಗಳು ಸತತವಾಗಿ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆಲ್ಲುತ್ತಿದ್ದುದು; ಅದರಲ್ಲೂ ದಶಕಗಳ ಕಾಲ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆಲ್ಲುತ್ತಲೇ ಬಂದ ನಮ್ಮ ಮಹಿಳಾ ಬಾಲ್ ಬ್ಯಾಡ್ಮಿಂಟನ್ ತಂಡದ ಸಾಧನೆಯನ್ನು ಕರ್ನಾಟಕದ ಅತ್ಯುತ್ತಮ ಪ್ರದರ್ಶನಗಳ ಪಟ್ಟಿಗೆ ಸೇರಿಸಲೇಬೇಕು.

ಬ್ಯಾಡ್ಮಿಂಟನ್ ಎಂದರೆ ಅದು ಸಹಜವಾಗಿ ಶಟಲ್ ಬ್ಯಾಡ್ಮಿಂಟನ್ ಎಂಬುದರಲ್ಲಿ ಎರಡು ಮಾತಿಲ್ಲ. ಇಲ್ಲಿ **ಪ್ರಕಾಶ್ ಪಡುಕೋಣೆ** ಎಲ್ಲರಿಗಿಂತ ಎತ್ತರದಲ್ಲಿ ನಿಲ್ಲುತ್ತಾರೆ. ರಾಷ್ಟ್ರ ಸೃಷ್ಟಿಸಿದ ಅತ್ಯುತ್ತಮ ಕ್ರೀಡಾಪಟು ಆಯ್ಕೆಗೆ ನಾನು ಸೂಚಿಸುವ ಸ್ಪರ್ಧಿಗಳಲ್ಲಿ ಪ್ರಕಾಶ್ ಪಡುಕೋಣೆ ಇದ್ದೇ ಇರುತ್ತಾರೆ. ತುಂಬಾ ಚಿಕ್ಕವರಿದ್ದಾಗಲೇ ಆಡಲು ಆರಂಭಿಸಿದ ಪ್ರಕಾಶ್, ಇನ್ನು ಜೂನಿಯರ್ ಆಟಗಾರನಾಗಿದ್ದಾಗಲೇ ರಾಷ್ಟ್ರೀಯ ಜೂನಿಯರ್ ಮತ್ತು ಸೀನಿಯರ್ ಬ್ಯಾಡ್ಮಿಂಟನ್ ಚಾಂಪಿಯನ್‌ಶಿಪ್‌ಗಳನ್ನು ಗೆದ್ದುಬಿಟ್ಟಿದ್ದರು. ಆಗವರಿಗೆ ೧೬-೧೭ರ ವಯಸ್ಸು.

ಪ್ರಕಾಶ್ ವರ್ಷ ವರ್ಷವೂ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆಲ್ಲುತ್ತಲೇ ಬಂದರು; ಆದರೆ ಅವರ ಸರ್ವೋತ್ಕೃಷ್ಟ ಸಾಧನೆಯೆಂದರೆ, ಆ ಕಾಲದ ಟಾಪ್‌ಒನ್ ಆಟಗಾರನೆನಿಸಿದ್ದ ಲಿಮ್ ಸ್ವಿ ಕಿಂಗ್‌ನನ್ನು ಸೋಲಿಸಿ, 'ಆಲ್ ಇಂಗ್ಲೆಂಡ್ ಚಾಂಪಿಯನ್‌ಶಿಪ್'ಗಳನ್ನು ಗೆದ್ದದ್ದು.

ಪ್ರಕಾಶ್ ಆಯ್ಕೆಗೆ ಅವರು ಬ್ಯಾಡ್ಮಿಂಟನ್ ಕೋರ್ಟುಗಳಲ್ಲಿ ಮಾಡಿದ ಸಾಧನೆ ಮೊದಲ ಕಾರಣವಾದರೆ, ನಿವೃತ್ತಿಯ ನಂತರ ಬ್ಯಾಡ್ಮಿಂಟನ್ ಬೆಳವಣಿಗೆಗೆ ಶ್ರಮಿಸುತ್ತಿರುವುದು ಎರಡನೆಯ ಕಾರಣ. ಆದ್ದರಿಂದ ಈ ಪಟ್ಟಿಯಲ್ಲಿ ಪ್ರಕಾಶ್ ಎರಡನೇ ಸ್ಥಾನದಲ್ಲಿದ್ದಾರೆ.

ಹಲವಾರು ಸಲ ರಾಷ್ಟ್ರೀಯ ಚಾಂಪಿಯನ್‌ಶಿಪ್ ಗೆದ್ದ ಕರ್ನಾಟಕ ಬಾಸ್ಕೆಟ್‌ಬಾಲ್ ತಂಡದ ಸಾಧನೆ ಗಮನಾರ್ಹವೆ. ಆದರೆ ಈ ಬಹುತೇಕ ಸಾಧನೆಯ ಶ್ರೇಯಸ್ಸು **ನರಸಿಂಹರಾಜನ್**‌ಗೆ ಸಲ್ಲಬೇಕು. ಆತ ಎಂತಹ ಗುರಿಕಾರನಾಗಿದ್ದನೆಂದರೆ, ಗೆಲ್ಲಲೇಬೇಕೆಂದರೆ ತಂಡದ ಇತರ ಆಟಗಾರರು ಆತನಿಗೆ ಬಾಲ್ ಪಾಸ್ ಮಾಡಲೇಬೇಕಿತ್ತು; ಇದು ಎದುರಾಳಿ ತಂಡದ ಪಾಲಿಗೆ ಕಂಟಕವಾಗಿ ಬಿಡುತ್ತಿತ್ತು. ಸರ್ವಿಸಸ್ ತಂಡಕ್ಕೆ ಆಡಲು ಹೋಗಿದ್ದ ಅಬ್ಬಾಸ್ ಮುನ್ಸಾಸಿರ್ ಮತ್ತು ಸರಬ್ಜಿತ್ ಸಿಂಗ್ ಮರಳಿ ಬರುವವರೆಗೂ, ನರಸಿಂಹರಾಜನ್ ಮತ್ತು ಮೈಸೂರ್ ನಿರ್ವಿವಾದಿತ ಚಾಂಪಿಯನ್‌ಗಳಾಗಿದ್ದರು. ಅದಕ್ಕಾಗಿಯೇ ನನ್ನ ಮೂರನೆಯ ಆಯ್ಕೆ ನರಸಿಂಹರಾಜನ್.

ಈಗ ಬಿಲಿಯರ್ಡ್ಸ್ ಮತ್ತು ಸ್ನೂಕರ್‌ಗಳನ್ನು ಪರಿಶೀಲಿಸೋಣ. ಈ ಆಟಗಳಿಂದ ಆಯ್ಕೆ ಮಾಡುವುದು ತುಂಬಾ ಸುಲಭವಾಗಿದೆ. ಈ ಕ್ರೀಡೆಗಳು ಜನಪ್ರಿಯತೆ ಪಡೆಯುವಲ್ಲಿ ತುಂಬಾ ಹಾದಿ ಕ್ರಮಿಸಿವೆ. ಭಾರತ ಹಲವಾರು ವಿಶ್ವಚಾಂಪಿಯನ್‌ಗಳನ್ನು ಸೃಷ್ಟಿಸಿದೆ. ಇದರಲ್ಲಿ ಕರ್ನಾಟಕದ ಪಾಲು ದೊಡ್ಡದಿದೆ. ಆದ್ದರಿಂದ ಪಟ್ಟಿಯ ನಾಲ್ಕು ಮತ್ತು ಐದನೇ ಸ್ಥಾನಗಳಿಗೆ ನನ್ನ ಆಯ್ಕೆ **ಅರ್ವಿಂದ್ ಸವುರ್** ಮತ್ತು **ಪಂಕಜ್ ಅಡ್ವಾಣಿ**. ಅರ್ವಿಂದ್ ಸವುರ್, ಮಾಜಿ ರಾಷ್ಟ್ರೀಯ ಚಾಂಪಿಯನ್; ತಮ್ಮ ಬಿರುಸಾದ ಆಟದ ಪ್ರದರ್ಶನದಿಂದಾಗಿ ಇಂದಿಗೂ 'ಟೊರ್ನಾಡೊ' ಎಂದು ಕರೆಯಲ್ಪಡುತ್ತಾರೆ. ಈಗ ಸವುರ್ ಕೋಚ್ ಆಗಿದ್ದಾರೆ. ಪಂಕಜ್ ಅಡ್ವಾಣಿಗೆ ಕೋಚಿಂಗ್ ಮಾಡಿದ್ದೂ ಸವುರ್ ಅವರೇ.

ಕರ್ನಾಟಕ ಸೃಷ್ಟಿಸಿರುವ ಉತ್ತಮ, ಅತ್ಯುತ್ತಮ ಮತ್ತು ಮಹೋನ್ನತ ಕ್ರಿಕೆಟಿಗರು ಹಾಗೂ ಅವರ ಹಲವು ಅತ್ಯದ್ಭುತವಾದ ಸಾಧನೆಗಳು ಎಲ್ಲರಿಗೂ ಪರಿಚಿತವೆ. ಅವರೆಲ್ಲರ ಹೆಸರನ್ನು ದಾಖಲಿಸಲು ಇಲ್ಲಿ ಜಾಗ ಸಾಲದು; ಆದರೆ ಅವರ ಪೈಕಿ ನಾನು ಆಯ್ಕೆ ಮಾಡಿದ ಮೂವರು ಹೆಸರುಗಳನ್ನು ೬, ೭, ೮ನೇ ಸ್ಥಾನದಲ್ಲಿಟ್ಟಿರುವುದಕ್ಕೆ ಯಾರದೂ ತಕರಾರಿರಲಾರದು ಎಂದೆನಿಸುತ್ತದೆ. ಏಕೆಂದರೆ ಇದು ಇಂಗ್ಲಿಷ್ ವರ್ಣಮಾಲೆಯನ್ನಾಧರಿಸಿದ ಕ್ರಮಾನುಕ್ರಮವಷ್ಟೇ: **ಜಿ.ಆರ್.ವಿಶ್ವನಾಥ್, ಯರಪಲ್ಲಿ ಪ್ರಸನ್ನ** ಮತ್ತು **ಬಿ.ಎಸ್.ಚಂದ್ರಶೇಖರ್**. ನಾನು ಇವರ ಕುರಿತು ಹೆಚ್ಚೇನು ವಿವರಿಸಲು ಹೋಗುವುದಿಲ್ಲ. ಜಿ.ಆರ್.ವಿಶ್ವನಾಥ್ ಅತ್ಯಂತ ಸೊಬಗಿನ ಭಾರತೀಯ ಬ್ಯಾಟ್ಸ್‌ಮನ್ ಎಂಬುದನ್ನು ನಾನು ಸೇರಿದಂತೆ ಬಹುತೇಕರು ಒಪ್ಪುತ್ತಾರೆ (ಸುನೀಲ್ ಗವಾಸ್ಕರ್ ಸಹ ಇದನ್ನು ಒಪ್ಪುತ್ತಾರೆ). ನನ್ನ ಪ್ರಕಾರ ಯರಪಲ್ಲಿ ಪ್ರಸನ್ನ ದಿ ಬೆಸ್ಟ್ ಸ್ಪಿನ್ನರ್ (ವೆಸ್ಟ್ ಇಂಡೀಸ್‌ನ ಲ್ಯಾನ್ಸ್ ಗಿಬ್ಸ್ ಅಲ್ಲ!) ಬಿ.ಎಸ್.ಚಂದ್ರಶೇಖರ್ ಬಗ್ಗೆ ಹೆಚ್ಚು ಹೇಳುವ ಅವಶ್ಯವಿಲ್ಲ. ಆದರೆ ಮತ್ತೆ ಈ ಮೂವರಿಗೆ ಸಮನಾದ ಆಟಗಾರರನ್ನು ನಾವು ಸೃಷ್ಟಿಸಲೇ ಇಲ್ಲ ಎಂಬುದು ಸತ್ಯವೇ.

ಕ್ರಿಕೆಟ್‌ನಿಂದಲೇ ಮೂವರನ್ನು ಆಯ್ಕೆ ಮಾಡಿದ್ದರಿಂದ, ದುರದೃಷ್ಟವಶಾತ್ ಪಟ್ಟಿಯಲ್ಲೀಗ ಎರಡೇ ಸ್ಥಾನಗಳು ಖಾಲಿ ಉಳಿದುಕೊಂಡಿವೆ. ಕರ್ನಾಟಕ ಚಾಂಪಿಯನ್‌ಗಳನ್ನು ಸೃಷ್ಟಿಸಿದ

ಬಹಳ ಆಟಗಳಿವೆ. ನಾನು ಅವುಗಳ ಪೈಕಿ ಜನಪ್ರಿಯ ಕ್ರೀಡೆ ಫುಟ್‌ಬಾಲ್ ಕುರಿತು ವಿಶೇಷವಾಗಿ ಪ್ರಸ್ತಾಪಿಸುತ್ತೇನೆ. ಬೆಂಗಳೂರಲ್ಲಿ ಫುಟ್‌ಬಾಲ್ ಅತ್ಯಂತ ಜನಪ್ರಿಯ ಆಟವೆನಿಸಿಕೊಂಡಿತ್ತು ಮತ್ತು ಅತ್ಯಂತ ಶಿಸ್ತುಬದ್ಧವಾಗಿ ಸ್ಪರ್ಧೆಗಳು ಸಂಘಟಿಸಲ್ಪಡುತ್ತಿದ್ದವು. ಜಾರ್ಜ್ ಹೂವರ್ ಟೂರ್ನಮೆಂಟ್‌ನಂತಹ ಸೀನಿಯರ್ ಲೀಗ್ ಪಂದ್ಯಗಳನ್ನು ಬೆಂಗಳೂರಿನಲ್ಲಿ ನಡೆಸಲಾಗುತ್ತಿತ್ತು. ಮತ್ತು ಈ ಲೀಗ್ ಪಂದ್ಯಗಳು ತುಂಬಾ ಜನಪ್ರಿಯವಾಗಿದ್ದವು-ಕ್ರಿಕೆಟ್ ಆ ಸ್ಥಾನವನ್ನು ಆಕ್ರಮಿಸುವುದಕ್ಕೂ ಮೊದಲು.

ಜೂನಿಯರ್ ಮತ್ತು ಸೀನಿಯರ್ ಮಟ್ಟದಲ್ಲಿ ಅಚ್ಚುಕಟ್ಟಾಗಿ ಸಂಘಟಿಸಲ್ಪಡುತ್ತಿದ್ದ ಇನ್ನೊಂದು ಆಟವೆಂದರೆ ಟೇಬಲ್ ಟೆನ್ನಿಸ್. ಕರ್ನಾಟಕ ಹಲವಾರು ಅತ್ಯುತ್ತಮ ಟೇಬಲ್ ಟೆನ್ನಿಸ್ ಪಟುಗಳನ್ನು ಸೃಷ್ಟಿಸಿದೆ.

ಇಲ್ಲಿ ಕೇವಲ ಹತ್ತೇ ಹತ್ತು ಆಟಗಾರರನ್ನು ಆಯ್ಕೆ ಮಾಡಬೇಕಾಗಿರುವುದರಿಂದ ನಾನು ಒಬ್ಬ ಫುಟ್‌ಬಾಲ್ ಆಟಗಾರ ಮತ್ತು ಒಬ್ಬ ಟೇಬಲ್ ಟೆನ್ನಿಸ್ ಪಟುವನ್ನು ಆಯ್ಕೆ ಮಾಡಿದ್ದೇನೆ. ಅವರು **ಉಳಗನಾಥನ್**(ಫುಟ್‌ಬಾಲ್) ಮತ್ತು **ಕಬಾಡ್ ಜಯಂತ್**(ಟೇಬಲ್ ಟೆನ್ನಿಸ್).

ಆ ಕಾಲದಲ್ಲಿ ಫುಟ್‌ಬಾಲ್ ಆಟಗಾರರು ಬೆಂಗಳೂರಿನಲ್ಲಿ ಆಟದ ಪಟ್ಟುಗಳನ್ನು ಕಲಿಯುವುದು ಮತ್ತು ನಂತರ ಅಪಾರ ಹಣ ಮತ್ತು ಖ್ಯಾತಿ ತರುವ ಕಲ್ಕತ್ತಾ ಕ್ಲಬ್‌ಗಳಿಗೆ ವಲಸೆ ಹೋಗುವುದು ಸಾಮಾನ್ಯವಾಗಿತ್ತು. ಅಂತಹವರಲ್ಲಿ ಪ್ರಮುಖನಾದ ಉಳಗನಾಥನ್ ಕಲ್ಕತ್ತಾದ ಮೋಹನ್‌ಬಗಾನ್ ತಂಡಕ್ಕೆ, ನಂತರ ಭಾರತ ತಂಡಕ್ಕೆ ಆಟವಾಡಿದ.

ಕಬಾಡ್ ಜಯಂತ್ ತನ್ನ ಚಿಕ್ಕವಯಸ್ಸಿನಲ್ಲಿಯೇ ಅದ್ಭುತ ಪ್ರತಿಭೆಯುಳ್ಳ ಟೇಬಲ್ ಟೆನ್ನಿಸ್ ಪಟುವಾಗಿದ್ದ. ನನಗೆ ನೆನಪಿರುವಂತೆ, ಆತ ತನ್ನ ಇಪ್ಪತ್ತರ ವಯಸ್ಸಿನಲ್ಲೇ ರಾಷ್ಟ್ರೀಯ ಚಾಂಪಿಯನ್‌ಶಿಪ್‌ಗಳನ್ನು ಗೆದ್ದಿದ್ದ.

ಕೊನೆಯ ಹತ್ತನೇ ಸ್ಥಾನಕ್ಕೆ ನಾನು ಒಬ್ಬರಿಗಿಂತ ಹೆಚ್ಚು ಆಟಗಾರರನ್ನು ಆಯ್ಕೆ ಮಾಡಲು ಇಚ್ಛಿಸುತ್ತೇನೆ; ಇಬ್ಬರನ್ನಲ್ಲ ಮೂವರನ್ನು! ಕ್ರಿಕೆಟ್‌ನ ಅತಿ ಜನಪ್ರಿಯತೆ ಮತ್ತು ಅಸೋಸಿಯೇಷನ್‌ನ ಅತಿ ಶ್ರೀಮಂತಿಕೆಯಿಂದಾಗಿ, ಇತರ ಆಟಗಳ ಕ್ರೀಡಾಳುಗಳು ಏನಾದರೂ ಸಾಧಿಸಲು ಮತ್ತು ಗೌರವ ಪಡೆಯಲು ಸಾಕಷ್ಟು ಶ್ರಮಿಸಬೇಕಾಗುತ್ತದೆ. ಅಂತಹ ಆಟಗಳಲ್ಲಿ ಈಜು ಸಹ ಒಂದು. ಈಜಿನಲ್ಲಿ ಹಲವಾರು ಆಟಗಾರರು ದಿನವಿಡೀ ಈಜುಕೊಳದಲ್ಲೇ ಸೆಣಸುತ್ತಾ, ಯಾವುದೇ ಪ್ರೋತ್ಸಾಹ, ಸಹಾಯಗಳಿಲ್ಲದೆ ಉನ್ನತ ಮಟ್ಟ ತಲುಪಲು ಹೋರಾಡುತ್ತಿರುತ್ತಾರೆ.

ನಾನು ಆಯ್ಕೆ ಮಾಡಿಕೊಂಡಿರುವ ಇನ್ನೊಂದು ಆಟದ ಬಗ್ಗೆ ವಿವಾದಾತ್ಮಕ ಅಭಿಪ್ರಾಯಗಳು ಬರಬಹುದು. ಏಕೆಂದರೆ ಬಹುತೇಕರು ಅದನ್ನು ಕ್ರೀಡೆಯೆಂದು ಒಪ್ಪುವುದಿಲ್ಲ; ಮತ್ತು ಅದನ್ನು ಜೂಜು ಎಂದೇ ಪರಿಗಣಿಸುತ್ತಾರೆ. ಹೀಗೆ ನಾನು ನನ್ನ ತಿಳಿವಳಿಕೆಯ ಮಟ್ಟದಲ್ಲಿ ಕುದುರೆ ರೇಸಿಂಗ್‌ನ್ನು ಕ್ರೀಡೆ ಅಂದುಕೊಂಡಿದ್ದೇನೆ. ನಾನು ಈ ವಿಷಯದಲ್ಲಿ ಯಾವುದೇ ವಾದ ಮಾಡಲು ಬಯಸುವುದಿಲ್ಲ. ಆದರೆ ನಮ್ಮ ಗೌರವಾನ್ವಿತ ಸರ್ವೋಚ್ಚ ನ್ಯಾಯಾಲಯವೇ, ಕುದುರೆ ರೇಸಿಂಗ್‌ನ್ನು ಕೌಶಲ್ಯಯುಕ್ತ ಆಟವೆಂದು ಘೋಷಿಸಿಬಿಟ್ಟಿದೆ! ೫೦೦ರಿಂದ ೬೦೦ ಕೆ.ಜಿ. ತೂಕದ ಪ್ರಾಣಿಗಳ ಮೇಲೆ ಕುಳಿತುಕೊಳ್ಳುವುದಕ್ಕೆ ಮತ್ತು ನಂತರ

ಅವುಗಳ ಸವಾರಿ ಮಾಡುವುದಕ್ಕೆ ಸಾಕಷ್ಟು ಕೌಶಲ್ಯ ಮತ್ತು ಧೈರ್ಯ ಬೇಕು. ಕರ್ನಾಟಕದಲ್ಲಿ ಕುದುರೆ ಜೂಜಿಗೆ ನೂರಾರು ವರ್ಷಗಳ ಇತಿಹಾಸವಿದೆ. ಬೆಂಗಳೂರು ಕಂಟೋನ್ಮೆಂಟ್ ನಗರವಾಗಿತ್ತಾದ್ದರಿಂದ ಕುದುರೆ ಸವಾರಿಯೂ ಇಲ್ಲಿ ಜನಪ್ರಿಯವಾಗಿತ್ತು.

ಈ ಮೇಲಿನೆಲ್ಲಾ ವಿಷಯಗಳನ್ನು ಅವಗಣನೆಗೆ ತೆಗೆದುಕೊಂಡು ನಾನು ಹತ್ತನೇ ಸ್ಥಾನದಲ್ಲಿ ಇಬ್ಬರು ಈಜುಗಾರ್ತಿಯರು ಮತ್ತು ಒಬ್ಬ ಜಾಕಿಯನ್ನು ಆಯ್ಕೆ ಮಾಡುತ್ತಿದ್ದೇನೆ. ಅವರು ಶಿಖಾ ಟಂಡನ್ ಮತ್ತು ನಿಶಾ ಮಿಲೆಟ್ (ಈಜುಗಾರ್ತಿಯರು) ಹಾಗೂ **ರಾಬಿನ್ ಕಾರ್ನರ್**(ಜಾಕಿ). ಸ್ವದೇಶ ಮತ್ತು ಹೊರದೇಶಗಳಲ್ಲಿ ಈಜುಕೊಳಗಳಲ್ಲಿ ಯಾರೂ ಮಾಡದಂತಹ ಸಾಧನೆ ಮಾಡಿದ ಹುಡುಗಿಯರು ಈ **ಶಿಖಾ ಟಂಡನ್** ಮತ್ತು **ನಿಶಾ ಮಿಲೆಟ್**. ಅವರು ಒಲಂಪಿಕ್ ಪದಕಗಳನ್ನು ಗೆದ್ದಿಲ್ಲವಾದರೂ, ಈಜುಕೊಳದಲ್ಲಿ ಅವರ ಪ್ರಶ್ನಾತೀತ ಸಾಧನೆ ಅವರಿಬ್ಬರಿಗೆ ವಿಶಿಷ್ಟ ಸ್ಥಾನ ತಂದುಕೊಟ್ಟಿದೆ.

ಇನ್ನು ಜಾಕಿ ರಾಬಿನ್ ಕಾರ್ನರ್ ನಮ್ಮದೇ ಬೆಂಗಳೂರು ಹುಡುಗ. ಆರಂಭದಲ್ಲಿ ಆತ BARI (Bangalore Amaeteur Racing Institute) ಅಡಿಯಲ್ಲಿ ಕುದುರೆ ಸವಾರಿ ಆರಂಭಿಸಿ, ನಂತರ ಚಾಂಪಿಯನ್ `Gentleman' ಸವಾರನಾದ; ಅಂದರೆ ಆಗ ಗೆಲುವಿಗೆ ಹಣ ಸಂದಾಯವಾಗುತ್ತಿರಲಿಲ್ಲ. ನಂತರ ವೃತ್ತಿಪರನಾದ ಆತ ತನ್ನ ರೋಚಕತೆಯಿಂದ ತುಂಬಿದ ಕೆರಿಯರ್‌ನಲ್ಲಿ ಸಾವಿರಕ್ಕಿಂತಲೂ ಹೆಚ್ಚು ಜಯಶಾಲಿಗಳನ್ನು ಸವಾರಿ ಮಾಡಿದ.

ಡಾ॥ ಕೆ.ಎಂ.ಶ್ರೀನಿವಾಸ ಗೌಡರು ವೃತ್ತಿಯಿಂದ ವೈದ್ಯರು. ಪ್ರವೃತ್ತಿಯಿಂದ ಕ್ರೀಡಾ ಕ್ಷೇತ್ರದಲ್ಲಿ ಆಸಕ್ತಿ ಹೊಂದಿ, 'ಲಂಕೇಶ್ ಪತ್ರಿಕೆ'ಯ ಆರಂಭದ ದಿನಗಳಿಂದಲೂ ಕ್ರೀಡಾ ವಿಷಯಗಳ ಬಗ್ಗೆ ವಿಶೇಷ ಲೇಖನಗಳನ್ನು ಬರೆದು ಹೆಸರು ಮಾಡಿರುವವರು. ಬೆಂಗಳೂರಿನಲ್ಲಿನ ಇಂಗ್ಲಿಷ್ ರಂಗಭೂಮಿಯ ಜೊತೆಗೂ ನಿಕಟ ಸಂಪರ್ಕವಿರಿಸಿಕೊಂಡಿರುವ ಇವರು, ಸದ್ಯಕ್ಕೆ 'ವಿಕ್ರಾಂತ ಕರ್ನಾಟಕ'ದಲ್ಲಿ ಕ್ರೀಡಾ ಅಂಕಣ ಬರೆಯುತ್ತಿದ್ದಾರೆ.

❊

'-ಸುವರ್ಣ ಪುಟಗಳು': ಒಂದು ಹಿನ್ನೋಟ

– ಡಿ.ಎಸ್.ನಾಗಭೂಷಣ

'ವಿಕ್ರಾಂತ ಕರ್ನಾಟಕ'ದ ದೀಪಾವಳಿ ಸಂಚಿಕೆ ಕುರಿತಂತೆ ಪ್ರತಿಕ್ರಿಯೆಗಳ ಮಹಾಪೂರವೇ ಹರಿದು ಬಂದಿದೆ. ಡಾ॥ ಯು.ಆರ್.ಅನಂತಮೂರ್ತಿಯವರಿಂದ ಹಿಡಿದು ಸಾಮಾನ್ಯ ಓದುಗನವರೆಗೆ, ಎಲ್ಲರಿಂದ ಮೆಚ್ಚುಗೆ ಹಾಗೂ ವಿಮರ್ಶೆಗಳೆರಡೂ ಬಂದಿವೆ. ಇದರಲ್ಲಿ ಹೆಚ್ಚಿನ ಪಾಲು ಸಂಪಾದಕರ ಬಳಿಗೆ ಬಂದಿದ್ದರೆ, ಒಂದಷ್ಟು ಪಾಲು 'ಸುವರ್ಣ ಕರ್ನಾಟಕದ ಸುವರ್ಣ ಪುಟಗಳು' ಲೇಖನ ಮಾಲಿಕೆಯ ಸಂಪಾದಕನಾದ ನನ್ನೆಡೆಗೂ ಹರಿದು ಬಂದಿದೆ. ಇಡೀ ಲೇಖನ ಮಾಲೆಯನ್ನು ಒಂದು ಪುಸ್ತಕವಾಗಿ ಪ್ರಕಟಿಸಿದರೆ ಕನ್ನಡ ಸಾಹಿತ್ಯ ಅಧ್ಯಯನಕ್ಕೆ ಒಂದು ಒಳ್ಳೆಯ ಆಕರ ಗ್ರಂಥವಾಗಬಲ್ಲುದೆಂದು ಕೆ.ಸತ್ಯನಾರಾಯಣ ಅವರು ಅಭಿಪ್ರಾಯ ಪಟ್ಟರೆ, 'ಆಧುನಿಕ ಕರ್ನಾಟಕ ಕಟ್ಟಿದ ಐವತ್ತು ಮಂದಿ ಮಹನೀಯರು' ಲೇಖನ ಒಂದೆರಡು ಸಣ್ಣ ತಿದ್ದುಪಡಿಗಳೊಂದಿಗೆ ಕರ್ನಾಟಕದಲ್ಲಿ ಶಾಲಾ ಶಿಕ್ಷಣಕ್ಕೆ ಒಂದು ಒಳ್ಳೆಯ ಪಠ್ಯವಾಗಬಲ್ಲುದು ಎಂದು ಅನಂತಮೂರ್ತಿಯವರು ಸೂಚಿಸುತ್ತಾರೆ. ಹೀಗೆ ಹಲವಾರು ಜನ ಓದುಗ ಗೆಳೆಯರು ದೂರವಾಣಿ ಮೂಲಕ ಹಾಗೂ ಕೆಲವರು ಒಂದೆರಡು ಸಾಲುಗಳ ಪತ್ರಗಳ ಮೂಲಕ ತಮ್ಮ ಪ್ರತಿಕ್ರಿಯೆ ವ್ಯಕ್ತಪಡಿಸಿದ್ದಾರೆ. ಸಂತೋಷದ ಸಂಗತಿಯೆಂದರೆ, ಈ ಪ್ರತಿಕ್ರಿಯೆಗಳಲ್ಲಿ ಟೀಕೆಗಳು ಇಲ್ಲವೇ ಇಲ್ಲ ಎನ್ನುವಷ್ಟು ಕಡಿಮೆ. ಅರ್ಧ ಪಾಲು ಮೆಚ್ಚುಗೆಯಾದರೆ, ಇನ್ನರ್ಧ ಪಾಲು ವಿಮರ್ಶೆಯ ರೂಪದ್ದು–ಚೆನ್ನಾಗಿದೆ;ಆದರೆ ಹೀಗಿದ್ದಿದ್ದರೆ ಇನ್ನೂ ಚೆನ್ನಾಗಿರುತ್ತಿತ್ತು ಎಂಬಂತಹ ಅಭಿಪ್ರಾಯಗಳು.

ಇದನ್ನೆಲ್ಲ ನಾನು ಇಲ್ಲಿ ಏಕೆ ಹೇಳುತ್ತಿದ್ದೇನೆಂದರೆ, ಒಂದು ಕಾಲಘಟ್ಟದ ಸಾಹಿತ್ಯವನ್ನು ಹತ್ತು ಅತ್ಯುತ್ತಮಗಳ ಆಯ್ಕೆ ಎಂಬ ತುಂಬ ಕಡಿಮೆ ಕಣ್ಣುಗಳುಳ್ಳ ಜಾಲರಿಯ ಮೂಲಕ ಶೋಧಿಸಿದ ಪ್ರಯತ್ನ ಹಾಗೂ ಅದರ ಫಲಿತಗಳು ಆಧುನಿಕ ಕನ್ನಡ ಸಾಹಿತ್ಯ ಕುರಿತಂತೆ ಒಂದು ಉನ್ನತ ಮಟ್ಟದ ಚರ್ಚೆಯನ್ನೇ ಆಹ್ವಾನಿಸುವಂತಹವು ಎಂಬುದಕ್ಕಾಗಿ. ಈ ಆಯ್ಕೆ ಮಾಡಿದವರೆಲ್ಲರೂ ಸಮಕಾಲೀನ ಕನ್ನಡ ಸಾಹಿತ್ಯ–ಸಂಸ್ಕೃತಿ ಕ್ಷೇತ್ರಗಳಲ್ಲಿನ ಗಣನೀಯ ಹೆಸರುಗಳೇ ಆಗಿರುವುದರಿಂದ; ಇವರು ಮಾಡಿದ ಆಯ್ಕೆಗಳು ಪರೋಕ್ಷವಾಗಿಯಾದರೂ, ಸಮಕಾಲೀನ ಸಾಹಿತ್ಯ–ಸಂಸ್ಕೃತಿ ವಿಮರ್ಶೆಯ ಒಂದು ದೊಡ್ಡ ಪ್ರಯೋಗದಂತೆಯೇ ಪರಿಗಣಿತವಾಗಿ, ಪರಿಶೀಲನೆಗೆ ಒಳಗಾಗಬೇಕಾದಂತಹವು. ಹಾಗಾಗಿ ಲೇಖನ ಮಾಲೆಯ ಸಂಪಾದಕನಾಗಿ ನಾನು ನನ್ನ ಕೆಲವು ಹಿನ್ನೋಟದ ಮಾತುಗಳನ್ನು ದಾಖಲಿಸುವ ಮೂಲಕ ನನ್ನ ಸಂಪಾದಕತ್ವದ ಜವಾಬ್ದಾರಿಯನ್ನು ಈ ಮೂಲಕ ಮುಕ್ತಾಯಗೊಳಿಸಿಕೊಂಡು, ಇತರರು ಈ ಬಗ್ಗೆ ಮಾಡಬಹುದಾದ ಚರ್ಚೆಗೆ ವೇದಿಕೆಯನ್ನು ಬಿಟ್ಟುಕೊಡಬೇಕಾಗಿದೆ. ಏಕೆಂದರೆ, ಲೇಖನ ಮಾಲೆ ಆರಂಭವಾಗುವ ಮುನ್ನ ನಾನು ಈ ಮಾಲೆಯ ಬಗ್ಗೆ ಕುತೂಹಲ ಹುಟ್ಟಿಸಲು ಆಡಿದ ಕೆಲವು ಪ್ರಾಸ್ತಾವಿಕ ಮಾತುಗಳ ಹೊರತಾಗಿ, ನಿರ್ದಿಷ್ಟವಾಗಿ ಯಾವುದೇ ಆಯ್ಕೆಯ ಬಗ್ಗೆ ಮಾತಾಡಿಲ್ಲ. ಮಾತಾಡುವುದು ಉಚಿತವೂ ಆಗಿರಲಿಲ್ಲ. ಅದೇನೇ ಇರಲಿ, ನನ್ನ

ಕೋರಿಕೆಯನ್ನು ಮನ್ನಿಸಿ ಈ ಪ್ರಯೋಗದಲ್ಲಿ ಭಾಗವಹಿಸಿದ ನನ್ನೆಲ್ಲ ವಿಮರ್ಶಕ ಮಿತ್ರರಿಗೆ ಈ ಮೂಲಕ ನನ್ನ ವಂದನೆಗಳನ್ನು ತಿಳಿಸುತ್ತೇನೆ. ಹಾಗೂ ಈ ಬಗೆಗಿನ ಸಾಧ್ಯ ಚರ್ಚೆಯನ್ನು ಆಸಕ್ತಿಯಿಂದ ಗಮನಿಸುವಂತೆ ಕೋರುತ್ತೇನೆ.

ಮೊದಲಿಗೆ, ಇಂತಹ ಆಯ್ಕೆಯ ಬಗ್ಗೆಯೇ ಕೇಳಿ ಬಂದ ಕೆಲವು ಆಕ್ಷೇಪಣೆಗಳನ್ನು ಗಮನಿಸುವುದು ಒಳಿತು. ಲೇಖನ ಮಾಲೆ ವಾಸ್ತವವಾಗಿ ಆರಂಭವಾಗುವ ಮುನ್ನವೇ ವ್ಯಕ್ತವಾದ ಕೆಲವು ಆಕ್ಷೇಪಣೆಗಳಿಗೆ, ಈ ಲೇಖನ ಮಾಲೆ ಆರಂಭವಾದ ಸಂಚಿಕೆಯ ನನ್ನ ಈ ಅಂಕಣದಲ್ಲೇ ಉತ್ತರಿಸುವ ಪ್ರಯತ್ನ ಮಾಡಿದ್ದೇನೆ. ಆದರೂ ಕೆಲ ಗೆಳೆಯರು ಇನ್ನೂ, ಇಂತಹ ಆಯ್ಕೆಯೇ ಅಸಂಬದ್ಧ ಎನ್ನುತ್ತಿದ್ದಾರೆ. ಅವರಿಗೆ ನನ್ನ ಒಂದೇ ಪ್ರಶ್ನೆ: ನಿಮ್ಮ ದೇಹದ ಮೂಲಭೂತ ಅಗತ್ಯಗಳನ್ನು ಪೂರೈಸಿಕೊಳ್ಳುವ ಕೆಲಸಗಳ ಹೊರತಾಗಿ, ನಿಮ್ಮ ಇನ್ನಾವುದಾದರೂ ಕೆಲಸ, ನಿಮ್ಮ ಈ ಮಾನದಂಡದ ಪ್ರಕಾರ ನಿಜವಾಗಿಯೂ ಸಂಬದ್ಧ ಅನ್ನಿಸಿಕೊಳ್ಳುತ್ತದೆಯೆ? ಆದರೂ, ಮನುಷ್ಯನ ಬೌದ್ಧಿಕ ಬೆಳವಣಿಗೆಗೆ ಇಂತಹ ಪ್ರಚೋದನೆಗಳು–ಅವನ್ನು ಕಸರತ್ತುಗಳು ಎಂದು ಬೇಕಾದರೂ ಕರೆಯಿರಿ–ಅಗತ್ಯವೆಂದು ನಾನಾದರೂ ನಂಬಿದ್ದೇನೆ. ಹಾಗೇ ಬಹುಶಃ ಬಹಳ ಜನ ಕೂಡಾ!

ಇನ್ನು ಲೇಖನ ಮಾಲೆ ಆರಂಭವಾದ ಮೇಲೆ ಆಯ್ಕೆ ವಿಧಾನದ ಬಗ್ಗೆ ಕೆಲವರು ವ್ಯಕ್ತಪಡಿಸಿರುವ ಭಿನ್ನಾಭಿಪ್ರಾಯಗಳನ್ನು ಗಮನಿಸೋಣ. ನಿರ್ದಿಷ್ಟವಾಗಿ ಹತ್ತು ಎಂದು ಸೀಮಿತಗೊಳಿಸಿದ್ದರಿಂದ ಅನೇಕ ಉತ್ತಮ ಕೃತಿಗಳು ಕೈಬಿಟ್ಟು ಹೋಗಿವೆ ಎಂಬುದು ಕೆಲವರ ಅಭಿಪ್ರಾಯ. ನಾವು ಹತ್ತು ಅತ್ಯುತ್ತಮಗಳನ್ನಷ್ಟೇ ಆಯ್ಕೆ ಮಾಡುವ ಉದ್ದೇಶ ಹೊಂದಿದ್ದರಿಂದ, ನಮ್ಮ ಮಟ್ಟಿಗೆ ಉತ್ತಮ ಕೃತಿಗಳು ಬಿಟ್ಟು ಹೋಗುವ ಪ್ರಶ್ನೆಯೇ ಏಳುವುದಿಲ್ಲ. ಹತ್ತು ಕಡಿಮೆಯಾಗುವುದಿದ್ದರೆ, ಇನ್ನು ಎಷ್ಟು ಅತ್ಯುತ್ತಮಗಳಿಗೆ ಈ ಪಟ್ಟಿಯನ್ನು ವಿಸ್ತರಿಸಬಹುದಿತ್ತು? ಹದಿನೈದು? ಇಪ್ಪತ್ತು? ಇಪ್ಪತ್ತೈದು? ಐವತ್ತು? ನೂರು? ಇವುಗಳಲ್ಲಿ ಯಾವುದೇ ಸಂಖ್ಯೆಗೂ ನಮ್ಮ ಪಟ್ಟಿ ವಿಸ್ತರಿಸಿದ್ದರೂ, ಕೆಲವರ ಪ್ರಕಾರ ಕೆಲವು ಉತ್ತಮ ಕೃತಿಗಳು ಬಿಟ್ಟು ಹೋಗುವ ಮತ್ತು ನಮ್ಮ ಪ್ರಕಾರ ಈ ಇಡೀ ಆಯ್ಕೆ ಪ್ರಕ್ರಿಯೆಯೇ ಒಂದು ಸಡಿಲ ಹಾಗೂ ಸ್ಥೂಲ ಸಮೀಕ್ಷೆಯಾಗಿ ಕೊನೆಗೊಳ್ಳುವ ಸಂಭವವಿತ್ತು. ಈಗಾಗಲೇ ಇಂತಹ ಹತ್ತಾರು ಸಮೀಕ್ಷೆಗಳು ಅಲ್ಲಲ್ಲಿ ನಡೆದು ಹೋಗಿವೆ. ಆದರೆ ನಾವು ಆಯ್ಕೆಯನ್ನು ಹತ್ತಕ್ಕೆ ಸೀಮಿತಗೊಳಿಸಿಕೊಂಡಿದ್ದರಿಂದ ವಿಮರ್ಶೆಯ ಮಾನದಂಡಗಳು ಹೆಚ್ಚು ಮೊನಚಾಗಿ, ನಿರ್ದಿಷ್ಟವಾಗಿ, ನಿಷ್ಠುರವಾಗಿ; ಆದುದರಿಂದ ಹೆಚ್ಚು ವಿಶ್ವಾಸಾರ್ಹವಾಗಿ ಮತ್ತು ಒಳ್ಳೆಯ ಸಾಹಿತ್ಯ ಎಂದರೇನು ಹಾಗೂ ಯಾವುದು ಎಂಬುದನ್ನು ಸ್ಪಷ್ಟವಾಗಿ, ಸೋದಾಹರಣವಾಗಿ, ಅಸಂದಿಗ್ಧವಾಗಿ ಸೂಚಿಸುವ ಪ್ರಯತ್ನವೊಂದು ಇಲ್ಲಿ ಆಗಿದೆ ಎಂದು ನಾನು ನಂಬಿದ್ದೇನೆ.

ಇನ್ನು, ಒಬ್ಬರಿಗಿಂತ, ಇಬ್ಬರೋ ಮೂವರೋ ಒಟ್ಟಿಗೆ ಕೂತು ಆಯ್ಕೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಎಂಬುದು ಕೆಲವರ ಅಭಿಪ್ರಾಯ. ಆದರೆ, ಈ ಇಬ್ಬರು ಮುವ್ವರು ಎಂಬುದು, ಹೆಚ್ಚೆಚ್ಚು ನ್ಯಾಯಯುತವಾದ ತೀರ್ಪಿನ ಹಂಬಲದಲ್ಲಿ ಐವರು, ಏಳು ಜನ ಅಥವಾ ಸರ್ವೋಚ್ಚ ನ್ಯಾಯಾಲಯದ ಪೂರ್ಣ ಪೀಠದಂತೆ ಹನ್ನೊಂದು ಜನದವರೆಗೂ ಹಬ್ಬಬಹುದಾಗಿದೆ! ಇದು ಯಾಕಾಗಬಾರದು? ಆದರೆ ಇದು ಅವ್ಯಾವಹಾರಿಕವಷ್ಟೇ ಅಲ್ಲ, ತೀರ್ಪಿನಲ್ಲಿ ಹಲವು ರಾಜಿಗಳಿಗೂ ಕಾರಣವಾಗಬಹುದು. ಅದು ನಮ್ಮ ಪ್ರಯತ್ನದ ಮೂಲ

ಭಾವನೆಗೇ ವಿರುದ್ಧವಾದದ್ದು. ನಂಬಿದರೆ ಒಬ್ಬರನ್ನು ನಂಬೋಣ ಎಂಬುದು ನನ್ನ ಅಭಿಮತ. ಹಾಗೆ ನೋಡಿದರೆ, ಒಬ್ಬರ ಮೇಲಿನ ಅಪನಂಬಿಕೆ ಎಷ್ಟು ಜನರ ಮೇಲಿನ ಅಪನಂಬಿಕೆಯಾಗಾದರೂ ವಿಸ್ತರಿಸ ಬಹುದಲ್ಲವೇ? ಆ ಅಪಾಯ ಬೇಡವೆಂದು, ಸಾಹಿತ್ಯ ವಲಯದಲ್ಲಿ ಈಗಾಗಲೇ ವಿಶ್ವಾಸಾರ್ಹತೆ ಗಳಿಸಿಕೊಂಡ ಒಬ್ಬೊಬ್ಬರನ್ನೇ ಆಯ್ದು ಈ ಅಪಾಯಕ್ಕೆ ಈಡು ಮಾಡಲಾಗಿದೆ!

ಈ ಆಯ್ಕೆಯಲ್ಲಿ ಭಾಗವಹಿಸಿದ ಒಂದಿಬ್ಬರು ವಿಮರ್ಶಕರಂತೂ, ನಮ್ಮನ್ನು ನೀವು ಸಮಕಾಲೀನ ಸಾಹಿತ್ಯ ವಲಯದ ಖಳನಾಯಕರನ್ನಾಗಿ ಮಾಡ ಹೊರಟಿದ್ದೀರಿ ಎಂದು ದೂರಿದ್ದೂ ಉಂಟು. ಇಂತಹ ಭಯವಿರುವವರು ನಿಜವಾಗಿ ವಿಮರ್ಶಕರೇ ಅಲ್ಲ ಎಂದು ಹೇಳಿ ಅವರ ಬಾಯಿ ಮುಚ್ಚಿಸುವ ದುಂಡಾವರ್ತಿಯನ್ನೂ ಮಾಡಿದ್ದೇನೆ ಎಂದು ಹೇಳಿಕೊಳ್ಳಲು ನನಗೇನೂ ಸಂಕೋಚವಿಲ್ಲ! ಸಾಹಿತ್ಯ ವಿಮರ್ಶೆ ಮನುಷ್ಯ ಸಂಬಂಧಗಳನ್ನು ಹದಗೆಡಿಸುತ್ತದೆನ್ನುವುದಾದರೆ, ಅದನ್ನು ಬರೆದವರಿಗೇ ಅದರ ಘನತೆಯಲ್ಲಿ ನಂಬಿಕೆಯಿಲ್ಲ ಎಂದಾಗುತ್ತದೆ ಹಾಗೂ ಅಂತಹ ವಿಮರ್ಶೆಯಿಂದ ಯಾರೊಂದಿಗೆ ಸಂಬಂಧ ಹದಗೆಡುವುದೆಂದು ಆತಂಕ ಪಡಲಾಗುತ್ತದೋ, ಅಂತಹವರ ಸಾಹಿತ್ಯಕ ವ್ಯಕ್ತಿತ್ವವೇ ಅನುಮಾನಾಸ್ಪದವೆನಿಸಿಕೊಳ್ಳುತ್ತದೆ ಅಲ್ಲವೇ? ವಿಮರ್ಶೆ ಬೇಡುವುದು ಧೈರ್ಯವನ್ನಲ್ಲ; ಆತ್ಮ ವಿಶ್ವಾಸವನ್ನು. ಆ ಆತ್ಮವಿಶ್ವಾಸಕ್ಕೆ ಸುಭದ್ರ ತಳಹದಿಯಿಲ್ಲ ಎಂದು ಗೊತ್ತಾದೊಡನೆ ಅದನ್ನು ಒಪ್ಪಿಕೊಂಡು ಕಲಿಯಲೂ ಸಿದ್ಧವಿರಬೇಕೆಂಬುದು ಬೇರೆ ವಿಷಯ.

ಆಯ್ಕೆಗಳು ಇತ್ತೀಚಿನ ಸಾಹಿತ್ಯಕ್ಕಷ್ಟೇ ಸೀಮಿತಗೊಳ್ಳಬೇಕಿತ್ತು. ಹಾಗಿದ್ದಲ್ಲಿ ಪದೇ ಪದೇ ಪ್ರಸ್ತಾಪವಾಗುವ ಹೆಸರುಗಳ ಬದಲಾಗಿ ಒಂದಿಷ್ಟು ಹೊಸ ಹೆಸರುಗಳು ಮೇಲೆ ಬರುವ ಅವಕಾಶವಿತ್ತು ಎಂಬುದು ಇನ್ನೊಂದು ಅಭಿಪ್ರಾಯ. ನಾವು ಕರ್ನಾಟಕದ ಬಂಗಾರದ ಹಬ್ಬದ ಸಂದರ್ಭಕ್ಕಾಗಿ ಈ ಲೇಖನ ಮಾಲೆಯನ್ನು ಆಯೋಜಿಸಿದ್ದು. ಹಾಗಾಗಿ ಆಧುನಿಕ ಕರ್ನಾಟಕವನ್ನು ಕಟ್ಟುವ ಕಾರ್ಯದ ಭಾಗವಾಗಿಯೇ ಸೃಷ್ಟಿಯಾದ ಎಲ್ಲ ಕನ್ನಡ ಸಾಹಿತ್ಯವನ್ನೂ ನಮ್ಮ ಆಯ್ಕೆಗಳಲ್ಲಿ ಒಳಗೊಳ್ಳಬೇಕಾಯಿತು. ಅಲ್ಲದೆ, ಯಾರ ಹೆಸರನ್ನಾದರೂ ಮೇಲೆ ತರುವ ಘನ ಉದ್ದೇಶವೂ ನಮ್ಮದಾಗಿರಲಿಲ್ಲ! ಇರಲಿ, ಇತ್ತೀಚಿನ ಸಾಹಿತ್ಯ ಎಂದರೆ ಎಲ್ಲಿಂದ ಆರಂಭಿಸಬೇಕು? ನವೋದಯದ ನಂತರ? ನವ್ಯದ ನಂತರ? ಎಂಭತ್ತರ ದಶಕದ ನಂತರ? ತೊಂಭತ್ತರ ದಶಕದ ನಂತರ? ಹಾಗೆ ಯಾವುದೇ ಸಾಹಿತ್ಯಕ ಗಡಿ ಸ್ಪಷ್ಟವಾಗಿ ಕಾಣುತ್ತಿಲ್ಲ. ಅಲ್ಲದೆ ಸಾಹಿತ್ಯವು ಚಳುವಳಿಯ ಅಥವಾ ದಶಕದ ಲೆಕ್ಕದಲ್ಲಿ ಮೌಲ್ಯಮಾಪನಕ್ಕೆ ಸಿಗುವಂತಹುದಲ್ಲ. ಒಳ್ಳೆಯದೆನ್ನುವುದು ಆಂದೋಲನಾತೀತವಾದದ್ದು, ಸಾರ್ವಕಾಲಿಕವಾದದ್ದು. ಆದರೆ ಒಂದು ಮೌಲಿಕ ಸಮೀಕ್ಷೆಗೆಂದೋ, ಆಯ್ಕೆಗೆಂದೋ ಗಡಿ ಗುರುತಿಸುವಾಗ ಆ ಕಾಲದ ಬಹುಜನರ ಕಣ್ಮುಂದೆ ಇರುವ ಸಾಹಿತ್ಯವನ್ನೆಲ್ಲಾ ಪರಿಗಣಿಸಬೇಕಾಗುತ್ತದೆ ಎಂಬುದೂ ನಿಜ. ಹಾಗಾಗಿ ಒಟ್ಟಾರೆ ಆಧುನಿಕ ಅಥವಾ ಹೊಸಗನ್ನಡವೆಂದು ಕರೆಯಲಾಗುವ ಸಾಹಿತ್ಯವನ್ನು ನಮ್ಮ ಆಯ್ಕೆಗಾಗಿ ಪರಿಗಣಿಸಲಾಗಿತ್ತು.

ಈ ಸಾಹಿತ್ಯದಲ್ಲಿ ಹಳಬ-ಹೊಸಬರೆಂಬ ಭೇದವಿರಲಾರದು. ಅವರೆಲ್ಲ ಒಬ್ಬರನ್ನೊಬ್ಬರು ಪರಸ್ಪರ ನೋಡಿಕೊಳ್ಳುತ್ತಲೇ-ಅವರಲ್ಲಿ ಕೆಲವರು ದಿವಂಗತರಾಗಿರುವರಾದರೂ-ಬರೆದವರು, ಬರೆಯುತ್ತಿರುವವರು. ಹಾಗಾಗಿ, ವೆಂಕಟೇಶಮೂರ್ತಿಯವರನ್ನು ಕುವೆಂಪು ಜೊತೆಗಿಟ್ಟೇ, ಕಂಬಾರರನ್ನು ಬೇಂದ್ರೆಯವರ ಜೊತೆಗಿಟ್ಟೇ, ನುಗಡೋಣಿಯವರನ್ನು ಲಂಕೇಶರ ಜೊತೆಗಿಟ್ಟೇ,

ಎಚ್.ಎಸ್. ರಾಘವೇಂದ್ರ ರಾವ್ ಅವರನ್ನು ಅನಂತಮೂರ್ತಿಯವರ ಜೊತೆಗಿಟ್ಟೇ, ಸಿದ್ಧಲಿಂಗಯ್ಯನವರನ್ನು ಶಿವರುದ್ರಪ್ಪನವರ ಜೊತೆಗಿಟ್ಟೇ, ಕಲ್ಗುಡಿಯವರನ್ನು ಆರ್. ನರಸಿಂಹಾಚಾರ್ಯರ ಜೊತೆಗಿಟ್ಟೇ ನೋಡಬೇಕಾಗುತ್ತದೆ. ಇಲ್ಲದೇ ಹೋದರೆ, ಮೌಲ್ಯಮಾಪನದ ಮಾನದಂಡಗಳೇ ಸ್ಪಷ್ಟವಾಗಿ ಮತ್ತು ಪೂರ್ಣವಾಗಿ ಮೂಡುವುದಿಲ್ಲ. ಇನ್ನೂ ಮುಖ್ಯವಾಗಿ, ಪರಂಪರೆಯ ಪರಿಕಲ್ಪನೆಯೇ ಅಸ್ತವ್ಯಸ್ತವಾಗುತ್ತದೆ.

ಇನ್ನು ನಮ್ಮ ವಿಮರ್ಶಕರ ಆಯ್ಕೆಗಳ ಬಗ್ಗೆಯೇ ಅನೇಕ ಭಿನ್ನಾಭಿಪ್ರಾಯಗಳಿವೆ. ಅದು ಸಹಜ ಕೂಡ. ಅತ್ಯಂತ ಹೆಚ್ಚು ಭಿನ್ನಾಭಿಪ್ರಾಯಗಳಿರುವುದು ಕಾವ್ಯ ಹಾಗೂ ಕಥೆಗಳ ಬಗ್ಗೆ. ಅದು ಕೂಡಾ ಸಹಜವೇ. ರಾಜೇಂದ್ರ ಚೆನ್ನಿ ಹತ್ತರ ಅವಕಾಶವನ್ನೂ ಸಂಕುಚಿತಗೊಳಿಸಿ ಕೊಂಡು ಇಬ್ಬರು ಕವಿಗಳ ತಲಾ ಎರಡು ಕವನಗಳನ್ನು ಆಯ್ಕೆ ಮಾಡಿರುವ ಬಗ್ಗೆ ಕೆಲವರು ಅಸಂತೋಷ ವ್ಯಕ್ತಪಡಿಸಿದ್ದಾರೆ. ಆದರೆ, ನೀವು ಚೆನ್ನಿ ತಮ್ಮ ಆಯ್ಕೆಯೊಂದಿಗೆ ಮಂಡಿಸಿರುವ ಅವರ ಕಾವ್ಯ ಮೀಮಾಂಸೆಯನ್ನು ಒಪ್ಪುವಿರಾದರೆ, ಅವರ ಆಯ್ಕೆಯನ್ನೂ ಒಪ್ಪಬೇಕಾಗುತ್ತದೆ! ಆದರೂ, ಚೆನ್ನಿ ತಮ್ಮ ಕಾವ್ಯ ಮೀಮಾಂಸೆಯ ಚೌಕಟ್ಟಿನಲ್ಲೇ ಆದರೂ, ಅಷ್ಟು ಕಟ್ಟುನಿಟ್ಟಾಗಿರುವ ಅಗತ್ಯವಿರಲಿಲ್ಲ; ಅದರಿಂದಾಗಿ ರಾಮಚಂದ್ರ ಶರ್ಮ ಅಥವಾ ಮೊಕಾಶಿಯವರ ಪದ್ಯವೂ ಕನ್ನಡದ ಹತ್ತು ಅತ್ಯುತ್ತಮ ಪದ್ಯಗಳ ಪಟ್ಟಿಗೆ ಸೇರುವಂತಾಗಿದೆ ಹಾಗೂ ಕುವೆಂಪು, ಪುತಿನ, ಕೆಎಸ್‌ನ ಅಥವಾ ತಿರುಮಲೇಶ್, ರಾಮಾನುಜನ್, ಸಿದ್ಧಲಿಂಗಯ್ಯನವರ ಪದ್ಯಗಳು ಬಿಟ್ಟುಹೋಗುವಂತಾಗಿದೆ ಎಂದು ಯಾರಾದರೂ ಹೇಳಿದರೆ, ಅವರಿಗೆ ನನ್ನ ಸಹಾನುಭೂತಿ ಇದೆ !

ಇನ್ನು ಕಥೆಗಳ ಆಯ್ಕೆ. ಗಿರಡ್ಡಿಯವರ ಆಯ್ಕೆಯನ್ನು ಗೌರವಿಸುತ್ತಲೇ ಅದರ ಸಮರ್ಥನೆಯನ್ನು ಅವರು ಇನ್ನಷ್ಟು ಸುಸಂಗತವಾಗಿ, ಸಮರ್ಥವಾಗಿ ಮಾಡಿಕೊಳ್ಳಬೇಕಿತ್ತು ಎಂಬುದು ಕೆಲವರ ಅಭಿಪ್ರಾಯ. ಇನ್ನು ಕೆಲವರಿಗೆ ಅವರ ಕೆಲವು ಆಯ್ಕೆಗಳ ಬಗೆಗೇ ಭಿನ್ನಮತವಿದೆ. ಆನಂದ, ವಿವೇಕ ಶಾನುಭಾಗರ ಕಥೆಗಳು ಪಟ್ಟಿಯಲ್ಲಿದ್ದಾಗ; ಕೆ.ಸದಾಶಿವ, ಖಾಸನೀಸ, ವೀಣಾ, ಜಯಂತರ ಕಥೆಗಳು ಹೇಗೆ ಬಿಟ್ಟು ಹೋಗಲು ಸಾಧ್ಯ ಎಂದು ಇವರು ಆಶ್ಚರ್ಯ ವ್ಯಕ್ತಪಡಿಸಿದ್ದಾರೆ. ಹಾಗೇ ಒಂದಿಬ್ಬರು ಇದರಲ್ಲಿ ಸೇರಬೇಕಾದ ತೇಜಸ್ವಿ ಕಥೆ 'ವೆಂಕ್ಟನ ಪುಂಗಿ'ಯಲ್ಲ, 'ಅವನತಿ'ಯೋ 'ಕುಬಿ ಮತ್ತು ಇಯಾಲ'ವೋ ಆಗಿರಬೇಕಿತ್ತು ಎನ್ನುತ್ತಾರೆ. ಈ ಕೆಲವು ಅಭಿಪ್ರಾಯಗಳೊಂದಿಗೆ ನನ್ನ ಸಹಮತ ಇದೆಯಾದರೂ, ಗಿರಡ್ಡಿಯವರ ಆಯ್ಕೆಯ ಒರೆಗಲ್ಲನ್ನೂ, ಅದರ ಹಿಂದಿನ ಶ್ರದ್ಧೆಯನ್ನೂ ನಾನು ಪ್ರಶ್ನಿಸಲಾರೆ.

ಕಾದಂಬರಿಗಳ ಆಯ್ಕೆ ಬಗ್ಗೆ ಹೆಚ್ಚಿನ ಭಿನ್ನಾಭಿಪ್ರಾಯವಿಲ್ಲ. ಹತ್ತು ಅತ್ಯುತ್ತಮಗಳ ಪಟ್ಟಿಯಲ್ಲಿ ತ್ರಿವೇಣಿಯವರು ಸೇರಿರುವ ಬಗ್ಗೆ ಕೆಲವರು ಆಶ್ಚರ್ಯವನ್ನೂ, ಕೆಲವರು ಮೆಚ್ಚುಗೆಯನ್ನೂ ವ್ಯಕ್ತಪಡಿಸಿರುವವರಾದರೂ; ಯಾರೂ ಅಂತಹ ವಿರೋಧ ವ್ಯಕ್ತಪಡಿಸಿಲ್ಲ ಎನ್ನುವುದು ಕುತೂಹಲಕರ. ಎಚ್. ನಾಗವೇಣಿಯವರ 'ಗಾಂಧಿ ಬಂದ' ಕೃತಿಯನ್ನು ಕೆ.ಸತ್ಯನಾರಾಯಣ ಆಯ್ಕೆಯ ಸಮಯದಲ್ಲಿ ಗಮನಿಸದೇ ಹೋಗಿರಬಹುದೇ ಎನ್ನುವುದು ನನ್ನ ವೈಯಕ್ತಿಕ ಸಂದೇಹ. ಅಲ್ಲದೆ, ಆಲನಹಳ್ಳಿಯವರ 'ಕಾಡು' ಅವರ 'ಭುಜಂಗಯ್ಯನ ದಶಾವತಾರಗಳು'ಗಿಂತ ಒಳ್ಳೆಯ ಕಾದಂಬರಿಯಲ್ಲವೇ? ತೇಜಸ್ವಿಯವರ 'ಕರ್ವಾಲೋ' ಅವರ 'ಮಾಯಾಲೋಕ'ಕ್ಕಿಂತ ಒಳ್ಳೆಯ ಕಾದಂಬರಿಯಲ್ಲವೇ? ಎಂಬುದು ಕೆಲವರ ಪ್ರಶ್ನೆ. ಹಾಗೇ ಭೈರಪ್ಪನವರ ಹೆಸರಿಲ್ಲದಿರುವುದರ ಬಗ್ಗೆಯೂ ಹಲವರದು ಸಖೇದಾಶ್ಚರ್ಯ. ಇದೆಲ್ಲದಕ್ಕೂ

ಸತ್ಯನಾರಾಯಣ ತಮ್ಮ ಟಿಪ್ಪಣಿಗಳಲ್ಲಿ ವಿವರಣೆ ನೀಡಿರುವುದರಿಂದ, ಸಂಪಾದಕನಾಗಿ ನಾನು ಸೇರಿಸುವಂತಹುದೇನೂ ಇಲ್ಲವೆಂದು ಹೇಳಬಹುದು. ಬಹುಶಃ ಒಂದು ಮಾತಿನ ಹೊರತಾಗಿ: ತಾವೇ 'ಮೇಜರ್' ಕಾದಂಬರಿಕಾರ ಎಂದು ಗುರುತಿಸಿರುವ ಭೈರಪ್ಪನವರನ್ನು ತಮ್ಮ ಪಟ್ಟಿಯಲ್ಲಿ ಸೇರಿಸಲಾಗದಿರುವ ಬಗ್ಗೆ ಇನ್ನಷ್ಟು ವಿಸ್ತೃತ ವಿವರಣೆ ಅಗತ್ಯವಿತ್ತೇನೋ!

ಸಂತೋಷದ ಸಂಗತಿಯೆಂದರೆ, ನಾಟಕಗಳ ಬಗ್ಗೆ ಭಿನ್ನಮತವೆಂಬುದೇ ಇಲ್ಲ! ಅಷ್ಟು ಸಮರ್ಪಕ ಹಾಗೂ ಸಮರ್ಥನೀಯವಾಗಿದೆ ಮರುಳಸಿದ್ಧಪ್ಪನವರ ಆಯ್ಕೆ ಎಂದು ಹೇಳಬಹುದು. ಅವರು ನಾಟಕಗಳ ಆಯ್ಕೆ ಜೊತೆಗೆ ಅವುಗಳ ಶ್ರೇಷ್ಠ ಪ್ರದರ್ಶನಗಳ ಪ್ರಸ್ತಾಪ ಮಾಡಿರುವುರೂ ಈ ಆಯ್ಕೆಗೊಂಡು ಹೊಸ ಆಯಾಮ ಒದಗಿಸಿದೆ. ಆದರೂ ನನ್ನದೊಂದು ಅನುಮಾನ: ಲಂಕೇಶರ 'ಸಂಕ್ರಾಂತಿ' ನಿಜವಾಗಿಯೂ ಕನ್ನಡದ ಹತ್ತು ಅತ್ಯುತ್ತಮ ನಾಟಕಗಳಲ್ಲಿ ಒಂದೇ? ಅವರ 'ಗಿಳಿಯು ಪಂಜರದೊಳಿಲ್ಲ' ಇನ್ನೂ ಒಳ್ಳೆಯ ನಾಟಕವಲ್ಲವೇ? ಚಂಪಾರ 'ಅಪ್ಪ'?

ಇನ್ನು ವಿಮರ್ಶೆ–ಸಂಶೋಧನೆ ಕುರಿತಂತೆ ಹೆಚ್ಚಿನ ಪ್ರತಿಕ್ರಿಯೆಗಳಿಲ್ಲ. ಬಹುಶಃ ಅವು ಅಷ್ಟು ಜನಪ್ರಿಯವಲ್ಲದ, ಸೃಜನೇತರ ಪ್ರಕಾರವಾದವುಗಳಾದುದರಿಂದ. ವಿಮರ್ಶೆ ಆಯ್ಕೆ ಕುರಿತಂತೆ ನನ್ನ ವೈಯುಕ್ತಿಕ ಅಭಿಪ್ರಾಯವೆಂದರೆ, 'ಕರ್ನಾಟಕ ಸಂಸ್ಕೃತಿ ವಿಶ್ಲೇಷಣೆ' ಎಂಬ ತೇಜಸ್ವಿಯವರ ಲೇಖನವಿಲ್ಲದೆ ಕನ್ನಡ ಸಾಹಿತ್ಯ–ಸಂಸ್ಕೃತಿ ವಿಮರ್ಶೆ ಪೂರ್ಣವೆನಿಸಿಕೊಳ್ಳಲಾರದು. ಅವರು ತಾವು ಮರಣ ಹೊಂದುವ ಸ್ವಲ್ಪ ಮುನ್ನ ನಂಗಲಿಯವರಿಗೆ ಬರೆದ ಪತ್ರ ರೂಪದ ವಿಮರ್ಶಾ ಮೀಮಾಂಸೆಯಾದರೂ ಏನು ಕಡಿಮೆ ಬೆಲೆಯದ್ದಾ, ಇಂದಿನ ಕನ್ನಡ ಸಾಹಿತ್ಯ ವಿಮರ್ಶೆಯ ದೃಷ್ಟಿಯಿಂದ? ಆಶಾದೇವಿಯವರ ಆಯ್ಕೆಯನ್ನು ಗೌರವಿಸುತ್ತಲೇ ಈ ಮಾತುಗಳನ್ನು ಹೇಳುತ್ತಿದ್ದೇನೆ. ಜೊತೆಗೆ ಇವರು ತಮ್ಮ ಆಯ್ಕೆಯನ್ನು ಪದೇ ಪದೇ 'ವೈಯಕ್ತಿಕ'ಎಂದು ಒತ್ತಿ ಒತ್ತಿ ಹೇಳುವುದರ ಹಿಂದಿನ ಅಳುಕು ಮತ್ತು ಇಂತಹ ಆಯ್ಕೆ 'ವ್ಯರ್ಥ'ವೇನೋ ಎಂಬ ಅವರ ಅನುಮಾನದ ಬಗ್ಗೆ ನನ್ನ ಆಶ್ಚರ್ಯವನ್ನು ಇಲ್ಲಿ ದಾಖಲಿಸಲಿಚ್ಛಿಸುತ್ತೇನೆ !

ಕಲ್ಗುಡಿಯವರ ಆಯ್ಕೆಯ ಬಗ್ಗೆ ನನ್ನದು ಒಂದೇ ಪ್ರಶ್ನೆ. ಅದೂ, ಸಂಶೋಧನಾ ಕ್ಷೇತ್ರದ ಅಪರಿಚಿತತೆಯ ಆತಂಕದಿಂದಲೇ ಕೇಳುವ ಪ್ರಶ್ನೆ: ನಿಮ್ಮ ಪಟ್ಟಿಯಲ್ಲಿ ಎಂ.ಎಂ.ಕಲಬುರ್ಗಿ ಏಕಿಲ್ಲ? ಹತ್ತರಲ್ಲಿ ಅವರು ಬರಲಾರರು ಎಂಬುದು ಕಲ್ಗುಡಿಯವರ ಉತ್ತರವಾಗಿರಬಹುದು. ಆದರೆ ಕಾವ್ಯದಿಂದ ಕುವೆಂಪು ಬಿಟ್ಟು ಹೋದಾಗ, ಕಥೆಗಳಿಂದ ಖಾಸನೀಸ ಬಿಟ್ಟು ಹೋದಾಗ, ಕಾದಂಬರಿಗಳಿಂದ ಭೈರಪ್ಪ ಬಿಟ್ಟುಹೋದಾಗ ಅದನ್ನು ನಿರ್ದಿಷ್ಟವಾಗಿ ವಿವರಿಸುವುದೂ ಆಯ್ಕೆಯ ಒಂದು ಭಾಗವಾಗಿರುತ್ತದೆ ಎಂದು ನಾನು ತಿಳಿದಿರುತ್ತೇನೆ. ಹಾಗಾಗಿ, ಈ ಬಗ್ಗೆ ಕಲ್ಗುಡಿ ವಿವರಿಸಿದ್ದರೆ ಚೆನ್ನಿತ್ತೇನೋ!

ಇನ್ನು ಚಲನಚಿತ್ರಗಳ ಆಯ್ಕೆಗೆ ಬಂದರೆ, ಬಹು ಕಷ್ಟವಾದ ಆಯ್ಕೆಯ ಕೆಲಸವನ್ನು ಗೆಳೆಯ ಪುಟ್ಟಸ್ವಾಮಿ ಬಹು ದಕ್ಷತೆಯಿಂದಲೇ ಮಾಡಿದ್ದಾರೆ ಎಂದು ಹೇಳಬಹುದು. ಕಾರಣ, ಈ ಕ್ಷೇತ್ರದಲ್ಲಿ ಇಂತಹ ಕೆಲಸಗಳನ್ನು ಮಾಡಬಹುದಾದ ಕೆಲವೇ ಕೆಲವು ಪರಿಣತರಲ್ಲಿ ಅವರೂ ಒಬ್ಬರು. ನಾನೂ ಕನ್ನಡ ಚಿತ್ರಗಳ ವಿಷಯದಲ್ಲಿ ಬಹು ವರ್ಷಗಳಿಂದಲೂ ಆಸಕ್ತಿ ಹೊಂದಿದವನೇ. ಈ ಹಿನ್ನೆಲೆಯ ಬಲದಿಂದ ಹೇಳುವುದಾದರೆ, ಕುರಾಸೀ ನಿರ್ದೇಶನದ ಹೊನ್ನಪ್ಪ ಭಾಗವತರ 'ಮಹಾಕವಿ ಕಾಳಿದಾಸ' ಕನ್ನಡದ ಮೊದಲ ಕಲಾತ್ಮಕ ಚಿತ್ರ

ಎನ್ನಬಹುದಾದಷ್ಟು ಪ್ರಬುದ್ಧ ಚಿತ್ರವೆಂಬುದು ನನ್ನ ಅಭಿಪ್ರಾಯ. ಇದು ಪುಟ್ಟಸ್ವಾಮಿಯವರ ಗಮನಕ್ಕೆ ಬಂದೂ ಪರಿಗಣಿತವಾಗದೇ ಹೋಯಿತೋ ಏನೋ ತಿಳಿಯದು!

ಇನ್ನು 'ಆಧುನಿಕ ಕರ್ನಾಟಕ ಕಟ್ಟಿದ ಐವತ್ತು ಮಂದಿ ಮಹನೀಯರು' ಆಯ್ಕೆ ನನ್ನದೇ ಆದುದರಿಂದ ಮತ್ತು 'ಹತ್ತು ಅತ್ಯುತ್ತಮ ಭಾವಗೀತೆಗಳು' ನನ್ನ ಪತ್ನಿಯ ಆಯ್ಕೆಯಾಗಿರುವುದರಿಂದ, ಈ ಬಗ್ಗೆ ಬಂದಿರುವ ಮೆಚ್ಚುಗೆ ಅಥವಾ ಟೀಕೆಗಳ ಬಗ್ಗೆ ನಾನು ಯಾವುದೇ ಮಾತುಗಳನ್ನಾಡುವುದು ಉಚಿತವಾಗಲಾರದು. ಆದರೆ ಗೆಳೆಯ ರವೀಂದ್ರ ರೇಷ್ಮೆಯವರು ಮಾಡಿರುವ ಹತ್ತು ಅತ್ಯುತ್ತಮ ರಾಜಕಾರಣಿಗಳ ಆಯ್ಕೆ ನಮ್ಮ ರಾಜ್ಯದ ರಾಜಕಾರಣ ಮುಟ್ಟಿರುವ ಅಧೋಗತಿಯನ್ನು ಸೂಚಿಸುವಂತೆಯೇ ಇದೆ ಎಂದು ಹೇಳಲೇಬೇಕು. ಐವತ್ತು ವರ್ಷಗಳ ರಾಜಕಾರಣದ ಹತ್ತು ಅತ್ಯುತ್ತಮರಲ್ಲಿ ಇನ್ನೂ ಮಾಗಬೇಕಾದ ಮತ್ತು ಆ ಮೂಲಕ ಇನ್ನಷ್ಟು ಪ್ರಬುದ್ಧ ರಾಜಕೀಯ ನಾಯಕತ್ವ ಪ್ರದರ್ಶಿಸಬೇಕಾಗಿರುವ ಸಿದ್ಧರಾಮಯ್ಯ ಹಾಗೂ ರಮೇಶ್ ಕುಮಾರ್‌ರಂತಹವರನ್ನೂ ಸೇರಿಸಬೇಕಾದ ಪ್ರಮೇಯ ಉಂಟಾಗಿದೆ ಎಂದರೆ! ರೇಷ್ಮೆಯವರು ಕಡಿದಾಳು ಮಂಜಪ್ಪ, ಎಸ್.ಶಿವಪ್ಪ ಹಾಗೂ ವೀರೇಂದ್ರ ಪಾಟೀಲರನ್ನು ಪರಿಗಣಿಸಿಯೂ ಈ ಇಬ್ಬರು ಇತ್ತೀಚಿನ ರಾಜಕಾರಣಿಗಳನ್ನು ಆಯ್ಕೆ ಮಾಡಿಕೊಂಡರೇ ಎಂಬುದು ನನ್ನ ಬೆರಗಿನ ಪ್ರಶ್ನೆ.

ಕೊನೆಯದಾಗಿ, ಕ್ರೀಡಾ ಕ್ಷೇತ್ರದ ಹತ್ತು ಅತ್ಯುತ್ತಮ ಆಯ್ಕೆ ಮಾಡಿರುವ ಡಾ॥ ಶ್ರೀನಿವಾಸಗೌಡರು ಆ ಕ್ಷೇತ್ರದಲ್ಲಿ ಸಾಧನೆಗಳನ್ನು ಬಹು ವರ್ಷಗಳಿಂದಲೂ ಹತ್ತಿರದಿಂದ ಮತ್ತು ಆಸಕ್ತಿ-ಕುತೂಹಲಗಳಿಂದ ಗಮನಿಸುತ್ತಾ ಬಂದಿರುವವರು. ಅವರ ಈ ಆಸಕ್ತಿಯ ವೈವಿಧ್ಯ ನಮ್ಮ ನಿರೀಕ್ಷೆಯನ್ನೂ ಮೀರಿ ತುಂಬಾ ವ್ಯಾಪಕವಾಗಿರುವುದರಿಂದಲೋ ಏನೋ, ಅವರ ಆಯ್ಕೆ ಮಾತ್ರ ನಮ್ಮ ಸೂಚನೆಯನ್ನೂ ಮೀರಿ ಹತ್ತನ್ನು ದಾಟಿ ಹೋಗಿದೆ! ಆದರೂ, ಈ ಪಟ್ಟಿಯಲ್ಲಿ ಅನಿಲ್ ಕುಂಬ್ಳೆ ಏಕಿಲ್ಲವೆಂಬ ಕುತೂಹಲ ನಮ್ಮ ಓದುಗರಲ್ಲಿ ಉಳಿದರೆ ಆಶ್ಚರ್ಯವಿಲ್ಲ. ಈ ಕುತೂಹಲವನ್ನು ಗೌಡರು ಪರಿಹರಿಸಿದ್ದರೆ ಚೆನ್ನಿತ್ತೇನೋ!

ಒಟ್ಟಾರೆ ನಮ್ಮ ಈ ಪ್ರಯತ್ನ ನಮಗಂತೂ ಸಾರ್ಥಕವೆನಿಸಿದೆ. ನಿಮಗೆ?

ಡಿ.ಎಸ್.ನಾಗಭೂಷಣ ನಮ್ಮ ನಡುವಿರುವ ತೀವ್ರ ಸಮುದಾಯ ಪ್ರಜ್ಞೆಯ ಚಿಂತಕರಲ್ಲೊಬ್ಬರು. ಸಾಮಾಜಿಕ ಅನ್ಯಾಯದ ಪ್ರಶ್ನೆಯನ್ನು ಬರವಣಿಗೆಯ ಮಾತ್ರವಲ್ಲ ಸಂವೇದನೆಯ ಮೂಲ ಪ್ರಶ್ನೆಯಾಗಿಸಿಕೊಳ್ಳಬೇಕೆಂದು ಹಂಬಲಿಸುವ ಲೇಖಕರಿವರು. ಕಾವ್ಯದ ಸೌಂದರ್ಯದಷ್ಟೇ ಅದರ ಸಾಮಾಜಿಕ ಹೊಣೆಗಾರಿಕೆಯೂ ಮಹತ್ವದ್ದೆಂದು ಭಾವಿಸುವ-ಮೂಲತಃ ಸಾಹಿತ್ಯ ವಿಮರ್ಶಕರಾದ-ನಾಗಭೂಷಣರು, ತಮ್ಮ ಕೃತಿ ವಿಮರ್ಶೆಗಳಲ್ಲಿ ಹುಡುಕುವುದೂ ಇವೆರಡರ ಸಂಕೀರ್ಣ ಸಂಬಂಧಗಳನ್ನೇ... ಕನ್ನಡದ ಪ್ರಮುಖ ಸಂಸ್ಕೃತಿ ಚಿಂತಕರಲ್ಲೊಬ್ಬರಾದ ಸಮಾಜವಾದಿ ಆಶಯಗಳ ಈ ಲೇಖಕ, ನಮ್ಮ ಮುಖ್ಯ ರಾಜಕೀಯ ವಿಶ್ಲೇಷಕರೂ ಹೌದು 'ಗಮನ', 'ಅನೇಕ', 'ಬೇರು ಬಿಳಲು', 'ಕುವೆಂಪು : ಒಂದು ಪುನರನ್ವೇಷಣೆ', 'ಮರಳಿ ಬರಲಿದೆ ಸಮಾಜವಾದ!', 'ಲೋಹಿಯಾ ಸಮಾಜವಾದ ದರ್ಶನ' ಇವರ ಪ್ರಮುಖ ಕೃತಿಗಳು.

ಲೇಖಕರ ವಿಳಾಸಗಳು

ಡಾ॥ ರಾಜೇಂದ್ರ ಚೆನ್ನಿ
ಇಂಗ್ಲಿಷ್ ವಿಭಾಗ
ಕುವೆಂಪು ವಿಶ್ವವಿದ್ಯಾಲಯ, ಜ್ಞಾನ ಸಹ್ಯಾದ್ರಿ
ಶಂಕರಘಟ್ಟ-(ಶಿವಮೊಗ್ಗ ಜಿಲ್ಲೆ)

ಕೆ.ಸತ್ಯನಾರಾಯಣ
'ಪ್ರಕೃತಿ',ನಂ: ೯(೧೪/೧೫), ೧೩ನೆ ಮೇನ್,
೬ನೇ ಕ್ರಾಸ್, ಪದ್ಮನಾಭ ನಗರ,
ಬೆಂಗಳೂರು-೫೬೦ ೦೭೦

ಡಾ॥ ಎಂ.ಎಸ್. ಆಶಾದೇವಿ
ಕನ್ನಡ ವಿಭಾಗ, ಸರ್ಕಾರಿ ಪದವಿ ಕಾಲೇಜು,
ಒಂದನೇ ಬ್ಲಾಕು, ರಾಜಾಜಿ ನಗರ
ಬೆಂಗಳೂರು-೫೬೦ ೦೧೦

ಸವಿತಾ ನಾಗಭೂಷಣ
ಎಚ್.ಐ.ಜಿ-೫, 'ನುಡಿ'
ಕಲ್ಲಹಳಿ ಬಡಾವಣೆ, ವಿನೋಬ ನಗರ
ಶಿವಮೊಗ್ಗ-೫೭೭ ೨೦೪

ರವೀಂದ್ರ ರೇಷ್ಮೆ
ಗೌ. ಸಂಪಾದಕರು: 'ವಿಕ್ರಾಂತ ಕರ್ನಾಟಕ'
೩೦/೧, ಡಿವಿಜಿ ರಸ್ತೆ
ಬೆಂಗಳೂರು-೫೬೦ ೦೦೪

ಡಾ॥ ಗಿರಡ್ಡಿ ಗೋವಿಂದರಾಜ
'ಸರೋಜಾ'
ನವೋದಯ ನಗರ
ಧಾರವಾಡ-೫೮೦ ೦೦೩

ಡಾ॥ ಕೆ. ಮರುಳಸಿದ್ಧಪ್ಪ
೧೩೭, ೧೨ನೇ ಕ್ರಾಸ್,
ಜೆಪಿ ನಗರ ೨ನೇ ಹಂತ
ಬೆಂಗಳೂರು-೫೬೦ ೦೭೮

ಡಾ॥ ಬಸವರಾಜ ಕಲ್ಗುಡಿ
೧೮೧೧, ೯ನೇ ಮುಖ್ಯ ರಸ್ತೆ
೧೩ನೇ ಕ್ರಾಸ್, ಪ್ರಕಾಶ ನಗರ
ಬೆಂಗಳೂರು-೫೬೦ ೦೨೧

ಡಾ॥ ಕೆ. ಪುಟ್ಟಸ್ವಾಮಿ
೯೦, ೧೬ನೇ ಕ್ರಾಸ್
೪ನೇ ಹಂತ, ಜೆಪಿ ನಗರ
ಬೆಂಗಳೂರು-೫೬೦ ೦೭೮

ಡಾ॥ ಕೆ.ಎಂ. ಶ್ರೀನಿವಾಸ ಗೌಡ
೨೦, ೨ನೇ ಮುಖ್ಯರಸ್ತೆ
೫ನೇ ಬ್ಲಾಕ್, ಕುಮಾರ ಪಾರ್ಕ್ ಪಶ್ಚಿಮ
ಬೆಂಗಳೂರು-೫೬೦ ೦೨೦

ನಮ್ಮ ಪ್ರಕಟಣೆಗಳು

ಕಥಾ ಸಂಕಲನ

*1.	ಕರ್ಪೂರದ ಕಾಯದಲ್ಲಿ	ಡಾ. ರಾಜಶೇಖರ ನೀರಮಾನ್ವಿ	15/-
*2.	ನೀರಮಾನ್ವಿ ಕಥೆಗಳು	ಡಾ. ರಾಜಶೇಖರ ನೀರಮಾನ್ವಿ	15/-
*3.	ನಾರೀ ಹಳ್ಳದ ದಂಡೆಯಲ್ಲಿ	ಚಂದ್ರಕಾಂತ ವಡ್ಡು	15/-
*4.	ಮಣ್ಣಿನ ಬಳೆ ಮತ್ತು ಇತರ ಕತೆಗಳು	ಶಾಂತಾರಾಮ ಸೋಮಯಾಜಿ	30/-
*5.	ಹಂಗಿನರಮನೆಯ ಹೊರಗೆ	ಡಾ. ರಾಜಶೇಖರ ನೀರಮಾನ್ವಿ	60/-
*6.	ಅನಾಥ ಪಕ್ಷಿಯ ಕಲರವ	ವೀರಭದ್ರ	125/-
*7.	ಕಾಳಬೆಳುದಿಂಗಳ ಸಿರಿ	ರಾಜಶೇಖರ ಹತಗುಂದಿ	45/-
*8.	ಹಣದಿ	ಶಿವಕುಮಾರ ನಾಗವಾರ	60/-
*9.	ಪಟ್ಟಾ	ಚಿತ್ರಶೇಖರ ಕಂಠಿ	45/-
*10.	ಉಡಿಯಲ್ಲಿಯ ಉರಿ	ಕಲಿಗಣನಾಥ ಗುಡದೂರು	45/-
*11.	ಮಣ್ಣಿನ ಕುಡಿಕೆ	ಡಾ. ಮಲ್ಲಿಕಾರ್ಜುನ ವಣೇನೂರು	50/-
*12.	ಹಂಸೆ ಹಾರಿತ್ತು	ಬಿದರಹಳ್ಳಿ ನರಸಿಂಹಮೂರ್ತಿ	75/-
*13.	ಬಾಳೆಗಿಡ ಗೊನೆಹಾಕಿತು	ಬಿ. ಎಂ. ಬಶೀರ್	30/-
*14.	ವಾಸ್ತವದ ಕನವರಿಕೆ	ಡಿ. ಬಿ. ರಜಿಯಾ	30/-
*15.	ತಪ್ಪಂಡ	ಡಾ. ಬಸವರಾಜ ಸಾದರ	45/-
*16.	ಹುಡುಕಾಟ	ಅಬ್ಬಾಸ್ ಮೇಲಿನಮನಿ	60/-
17.	ಪ್ರಕ್ಷುಬ್ಧ ಅಲೆಗಳು	ಡಾ. ಪ್ರಹ್ಲಾದ ಅಗಸನಕಟ್ಟೆ	40/-
18.	ಲದೇಣಿಯಾ	ಕೃಷ್ಣ ನಾಯಕ್	50/-
19.	ಮೀಯುವ ಆಟ	ಡಾ. ಎಚ್. ನಾಗವೇಣಿ	60/-
20.	ಕಾಡಿನ ಬೇರು	ಡಾ. ಶಾಂತರಸ ಹೆಂಬೇರಾಳು	35/-
21.	ವಸುಂಧರೆಯ ಗ್ಯಾನ	ಡಾ. ಎಚ್. ನಾಗವೇಣಿ	35/-
22.	ಸದ್ದಕಿದು ಹುಚ್ಚರ ಸಂತಿ	ಹಸನ್ ನಯೀಂ ಸುರಕೋಡ	50/-
23.	ಮೋಹನ ದಾಸ	ಆರ್. ಪಿ. ಹೆಗಡೆ	50/-
24.	ಬೇರುಗಳು	ವೆಂಕಟೇಶ ಮಾಚಕನೂರ	50/-

ಕಾವ್ಯ

*25.	ಹಟವಾದಿ ಮತ್ತು ಹುಡುಗಿ	ಡಾ. ಬೂದಗುಪ್ಪ ಪ್ರಹ್ಲಾದರೆಡ್ಡಿ	60/-
*26.	ಗಾಂಧಿಯೊಂದಿಗೆ	ಪ್ರಮೋದ್ ತುರ್ವಿಹಾಳ್	30/-
27.	ಆ ಅಜ್ಜ - ಈ ಮೊಮ್ಮಗ	ಮುದೇನೂರ ಸಂಗಣ್ಣ	75/-
*28.	ತಮಾಷಾ	ವಿಕ್ರಮ ವಿಸಾಜಿ	45/-
*29.	ಜಾಲಿ ಹೂಗಳ ನಡುವೆ	ಬಿ. ಪೀರ್ ಬಾಷ	45/-
*30.	ಮರಾಠಿ ದಲಿತ ಕಾವ್ಯ	ಡಾ. ಸರಜೂ ಕಾಟ್ಕರ್	75/-
*31.	ಕೆಡಹಬಲ್ಲರು ಅವರು ಕಟ್ಟಬಲ್ಲೆವು ನಾವು	ಪ್ರೊ. ಅಲ್ಲಮಪ್ರಭು ಬೆಟ್ಟದೂರು	35/-
*32.	ಗಾಂಧೀಗಿಡ	ಸತೀಶ್ ಕುಲಕರ್ಣಿ	35/-
*33.	ಕಣ್ಣಮುಂದಿನ ಬೆಳಕು	ದಸ್ತಗೀರ್‌ಸಾಬ್ ದಿನ್ನಿ	35/-
34.	ಸಿಸಿಫಸ್‌ರ ಸುತ್ತು	ಡಾ. ಬಸರಾಜ ಸಾದರ	50/-
*35.	ಕದವಿಲ್ಲದ ಊರಲ್ಲಿ	ಜಿ. ಕೆ. ರವೀಂದ್ರಕುಮಾರ್	75/-
36.	ಅವ್ವ	ಡಾ. ಸರಜೂ ಕಾಟ್ಕರ್	60/-
37.	ಕಣ್ಮುಚ್ಚಿ ಕಂಡವರು	ಶಂಕರ ಪಾಟೀಲ	35/-
38.	ಸುನೀತ ಸಂಪದ	ಚೆನ್ನವೀರ ಕಣವಿ	100/-
*39.	ಮಳೆಯೇ ಮಂಟಪ	ಎಚ್. ಎಸ್. ಶಿವಪ್ರಕಾಶ್	50/-
40.	ಬಾಂಬ್ ವಿರೋಧಿ ಪಾಕಿಸ್ತಾನಿ ಕವಿತೆಗಳು	ಡಾ. ಸರಜೂ ಕಾಟ್ಕರ್	30/-
41.	ಈ ಮಣ್ಣು ಅಪ್ಪಿಕೊಳ್ಳುವ ಮುನ್ನ...	ಗವಿಸಿದ್ಧ ಎನ್. ಬಳ್ಳಾರಿ	75/-
*42.	ಮಗುಮಲಗಿದೆ ಎದೆಯಮೇಲೆ	ಎಂ. ಡಿ. ಒಕ್ಕುಂದ	35/-
43.	ಚಿತ್ತಾರ	ಡಾ. ಸಬಿಹಾ ಭೂಮಿಗೌಡ	40/-
44.	ಬಾಗಿಲಾಚೆಯ ಮೌನ	ರೂಪ ಹಾಸನ	50/-
45.	ಕಂಪನಿ ಸವಾಲ್	ಸತೀಶ ಕುಲಕರ್ಣಿ	50/-
46.	ನೂರು ಗೋರಿಯ ದೀಪ	ಡಾ. ವಿನಯಾ	35/-
47.	ಉರಿವ ಒಲೆಗಳ ಮುಂದೆ	ಆರ್. ನಿರ್ಮಲ	25/-
48.	ಗಾಂಧೀ ಟು ಗೋದ್ರಾ	ಡಾ. ಸರಜೂ ಕಾಟ್ಕರ್	35/-

ಕಾದಂಬರಿ

*49.	ಮಾಂಡೋವಿ	ರವಿ ಬೆಳಗೆರೆ	60/-
*50.	ಶಾಮಣ್ಣ	ಕುಂ. ವೀರಭದ್ರಪ್ಪ	175/-
*51.	ಗಾಂಧಿಬಂದ	ಎಚ್. ನಾಗವೇಣಿ	130/-
52.	ಬದುಕು	ಗೀತಾ ನಾಗಭೂಷಣ	200/-
*53.	ಹುತ್ತ	ಬಾಳಾಸಾಹೇಬ ಲೋಕಾಪುರ	75/-
54.	ಲೋಟಸ್ ಪಾಂಡ್	ತಾರಾಭಟ್	50/-
55.	ಚಾಕ್ರಿ ನಿಂಬಜ್ಜ	ಬ್ರಹ್ಮದೇವ್ ಹದಳಗಿ	30/-
56.	ರಂಗನೋ ಮಳೆ ಮಂಗನೋ!	ಮುಹಮ್ಮದ್ ಕುಳಾಯಿ	30//-
*57.	ಕೆರೂರುನಾಮಾ	ಚಂದ್ರಕಾಂತ ಕುಸನೂರ	60/-
*58.	ಅತಂತ್ರ	ಗುರುರಾಜ ಮಾರ್ಪಳ್ಳಿ	50/-

ಪ್ರವಾಸ ಕಥನ

59.	ನನ್ನೊಳಗಿನ ಹಾಡು ಕ್ಯೂಬಾ	ಜಿ. ಎನ್. ಮೋಹನ್	50/-
*60.	ಪಂಚಮುಖಿ ಪಂಜಾಬ್	ಜಿ. ಪಿ. ಬಸವರಾಜು	60/-
*61.	ನಾ ಕಂಡ ಬ್ರಿಝಿಲ್	ಡಾ. ಸಿ. ನಾಗಭೂಷಣ	60/-
62.	ಥೇಮ್ಸ್‌ನಿಂದ ಟೈಬರ್‌ವರೆಗೆ	ವೆಂಕಟೇಶ ಮಾಚಕನೂರ	40/-
63.	ಆಗ್ನೇಯದಂಗಳದಲ್ಲಿ	ವೆಂಕಟೇಶ ಮಾಚಕನೂರ	60/-
64.	ಕುಲು ಕಣಿವೆಯಲ್ಲಿ	ಜಿ.ಪಿ. ಬಸವರಾಜು	60/-

ವೈಚಾರಿಕ ಮತ್ತು ಇತರೆ

65.	ಲೋಹಿಯಾ	ಹಸನ್‌ನಯೀಂ ಸುರಕೋಡ	120/-
*66.	ಸರಳಸಿದ್ಧರಾಮ ಚರಿತೆ	ಡಾ. ಎಲ್. ಬಸವರಾಜು	60/-
*67.	ಶ್ರೀ ಮಧುರಚೆನ್ನರ ಸ್ಮೃತಿಗಳು	ಡಾ. ಸಿಂಪಿ ಲಿಂಗಣ್ಣ	60/-
*68.	ಕಾಡು ಮತ್ತು ತೋಪು	ವಿ. ಚಂದ್ರಶೇಖರ ನಂಗಲಿ	90/-
*69.	ಅಮೃತ ಮತ್ತು ವಿಷ	ರಂಜಾನ್ ದರ್ಗಾ	75/-
*70.	ಶತಮಾನ	ಮೊಗಳ್ಳಿ ಗಣೇಶ	50/-
*71.	ಅಣುವೆಂಬ ಸದ್ದಿಲ್ಲದ ಸಾವ ಕುರಿತು	ಎನ್. ಜಗದೀಶ ಕೊಪ್ಪ	25/-
72.	ನಿರ್‌ಬೀಜೀಕರಣದ ವಿರಾಟ್ ಸ್ವರೂಪ	ವಿ. ಚಂದ್ರಶೇಖರ ನಂಗಲಿ	12/-
*73.	ಬುದ್ಧ ಚರಿತೆ	ಡಾ. ಎಲ್. ಬಸವರಾಜು	180/-
74.	ಸೌಂದರನಂದ	ಡಾ. ಎಲ್. ಬಸವರಾಜು	150/-
*75.	ನೀರದೀವಿಗೆ	ಡಾ. ಕೆ. ವೈ. ನಾರಾಯಣಸ್ವಾಮಿ	100/-
*76.	ನಮ್ಮ ಬಡತನ ಸಂವಿಧಾನಕ್ಕೊಂದು ಕಳಂಕ	ಜಸ್ಟೀರ್ ಸಿಂಗ್	25/-
77.	ಅಲ್ಲಮನ ವಚನಚಂದ್ರಿಕೆ	ಡಾ. ಎಲ್. ಬಸವರಾಜು	250/-
*78.	ಸೂಳೆ ಸಂಕವ್ವೆ (ನಾಟಕ)	ಮುದೇನೂರ ಸಂಗಣ್ಣ	50/-
79.	ಚಾತುರ್ವರ್ಣ ಧರ್ಮದರ್ಶನ	ಕುಮಾರ ಕಕ್ಕಯ್ಯಪ್ಪೋಳ	75/-
*80.	ನಾ ನಿಮ್ಮೊಳಗು	ಪ್ರೊ. ವಿ. ಚಂದ್ರಶೇಖರ ನಂಗಲಿ	100/-
*81.	ಬಗೆ	ಡಾ. ಸಬಿಹಾ ಭೂಮಿಗೌಡ	60/-
*82.	ಹಣತೆ: ಜಿ.ಎಸ್.ಎಸ್. ಅಭಿನಂದನ ಗ್ರಂಥ		300/-
83.	ಎಸ್. ನಿಜಲಿಂಗಪ್ಪ : ಒಂದು ಅಧ್ಯಯನ	ಕೋ. ಚೆನ್ನಬಸಪ್ಪ	125/-
84.	ಬಸವಪ್ರಜ್ಞೆ	ರಂಜಾನ್ ದರ್ಗಾ	15/-
85.	ಹುತಾತ್ಮ ಭಗತ್‌ಸಿಂಗ್	ಜಿ. ಪಿ. ಬಸವರಾಜು	60/-
86.	ಗುಣಗೌರವ	ಜಿ. ಎಚ್. ನಾಯಕ	75/-
*87.	ಜೀವನಸಂಧ್ಯಾ	ಡಾ. ಕೃಷ್ಣಮೂರ್ತಿ ಕಿತ್ತೂರ	75/-
*88.	ಬಳ್ಳಾರಿ ಜಿಲ್ಲೆಯ ಸಾಂಸ್ಕೃತಿಕ ಇತಿಹಾಸ	ಡಾ. ಜೆ. ಎಂ. ನಾಗಯ್ಯ	100/-
*89.	ನೊಂದವರ ನೋವು	ಮೂಡ್ನಾಕೂಡು ಚಿನ್ನಸ್ವಾಮಿ	60/-
*90.	ಸಾಕ್ಷಿ	ಡಾ. ಸರಜೂ ಕಾಟ್ಕರ್	50/-
91.	ಸಲ್ಲಲಿತ ಸನ್ಮಾರ್ಗ	ಚೆನ್ನಬಸವಪ್ಪ ಬೆಟ್ಟದೂರು	30/-
*92.	ಪ್ರೇಮಲೋಕದ ಮಾಯಾವಿ	ಹಸನ್ ನಯೀಂ ಸುರಕೋಡ	45/-
*93.	ಶರಣ ಬಂಡಾಯ	ಡಾ. ಸರಜೂ ಕಾಟ್ಕರ್	50/-
94.	ಜಯಪ್ರಕಾಶ್ ನಾರಾಯಣ	ಡಿ. ಎಸ್. ನಾಗಭೂಷಣ	100/-
95.	ಬೆಳಗಿನ ಬೆರಗು	ಜಿ. ಎನ್. ಮಲ್ಲಿಕಾರ್ಜುನ	75/-
96.	ರಸೀದಿ ತಿಕೀಟು	ಹಸನ್‌ನಯೀಂ ಸುರಕೋಡ	100/-
*97.	ನಡುಹಗಲಿನಲ್ಲಿ ಕಂದೀಲುಗಳು	ಡಾ. ರಾಜೇಂದ್ರ ಚೆನ್ನಿ	125/-
98.	ಕುವೆಂಪು-ಒಂದು ಪುನರನ್ವೇಷಣೆ	ಡಿ.ಎಸ್. ನಾಗಭೂಷಣ	150/-
99.	ಬಸವಣ್ಣನವರ ದೇವರು	ರಂಜಾನ್ ದರ್ಗಾ	15/-
*100.	ಹಿಂದೂ ಮಂದಿರಗಳು ಹಾಗೂ ಔರಂಗಜೇಬನ ಆದೇಶಗಳು	ಹಸನ್ ನಯೀಂ ಸುರಕೋಡ	20/-
101.	ನಮ್ಮೊಡನೆ ನಮ್ಮನುಡಿ	ಡಾ. ಕೆ. ವಿ. ನಾರಾಯಣ	50/-
*102.	ಅನೇಕ	ಡಿ. ಎಸ್. ನಾಗಭೂಷಣ	125/-
*103.	ಖರೇ ಖರೇ ಸಂಗ್ಯಾ-ಬಾಳ್ಯಾ	ಡಾ. ಎಂ.ಎಂ. ಕಲಬುರ್ಗಿ	30/-
104.	ಶಿವಾಜಿ ಮೂಲ ಕನ್ನಡ ನೆಲ	ಡಾ. ಸರಜೂ ಕಾಟ್ಕರ್	75/-
105.	ಅಯೋಧ್ಯೆ-ವಿನಾಶಕಾರಿ ವೋಟ್ ಬ್ಯಾಂಕ್ ರಾಜಕೀಯ	ಹಸನ್ ನಯೀಂ ಸುರಕೋಡ	25/-
106.	ಮನೆಯೊಡೆಯನಿದ್ದಾನೋ	ಎಸ್.ಜಿ. ಮೈಸೂರು ಮಠ	150/-
107.	ಲಿಂಗವ ಪೂಜಿಸಿ ಫಲವೇನಯ್ಯಾ?	ರಂಜಾನ್ ದರ್ಗಾ	25/-
108.	ಅರಿವಿನ ನಡೆ	ಡಾ. ಕವಿತಾ ರೈ	50/-
109.	ಬದುಕಿಗಾಗಿ ಶಿಕ್ಷಣ	ಅರವಿಂದ ಚೊಕ್ಕಾಡಿ	40/-
110.	ಕರ್ನಾಟಕ ಏಕೀಕರಣ	ಕೋ. ಚೆನ್ನಬಸಪ್ಪ	60/-
111.	ಮರಳಿ ಬರಲಿದೆ ಸಮಾಜವಾದ	ಡಿ. ಎಸ್. ನಾಗಭೂಷಣ	60/-
112.	ಬಸವ ಧರ್ಮದ ವಿಶ್ವ ಸಂದೇಶ	ರಂಜಾನ್ ದರ್ಗಾ	15/-
113.	ರೈತ ಭಾರತ : ಅವಸಾನದ ಅಂಚಿನಲ್ಲಿ	ಡಿ.ಎಸ್. ನಾಗಭೂಷಣ	20/-
114.	ಆ ಗಣರಾಜ್ಯ – ಈ ಕರ್ನಾಟಕ	ಡಿ.ಎಸ್. ನಾಗಭೂಷಣ	60/-

ನಮ್ಮ ಸಂವಿಧಾನ ಅಧಿಕೃತವಾಗಿ ಏನೇ ಹೇಳಲಿ; ಭಾರತದ ರಾಜಕೀಯ ಹಾಗೂ ಸಾಂಸ್ಕೃತಿಕ ಇತಿಹಾಸ, ಕನ್ನಡವೂ ಒಂದು ರಾಷ್ಟ್ರೀಯತೆ ಎಂಬುದನ್ನು ಸಾರಿ ಹೇಳುತ್ತದೆ. ಕನ್ನಡವೆಂಬುದು ಒಂದು ಭಾಷೆ ಮಾತ್ರವಾಗಿರದೆ, ಒಂದು ರಾಜಕೀಯ-ಸಾಂಸ್ಕೃತಿಕ ಕುಲವಾಗಿ ತನ್ನ ರಾಷ್ಟ್ರೀಯತೆಯನ್ನು ಕಟ್ಟಿಕೊಂಡಿದೆ. ಅದರ ಆಧಾರದ ಮೇಲೇ, ಭಾರತದ ಸ್ವಾತಂತ್ರ್ಯ ಹೋರಾಟದ ಭಾಗವಾಗಿಯೇ ಕರ್ನಾಟಕ ಏಕೀಕರಣದ ಹೋರಾಟವೂ ನಡೆದು, ಕನ್ನಡ ರಾಜ್ಯ ಸ್ಥಾಪನೆಯಾದದ್ದು. ಆದರೆ ಕಳೆದ ಐವತ್ತು ವರ್ಷಗಳಲ್ಲಿ ಈ ಕನ್ನಡ ರಾಜ್ಯ ಸ್ಥಾಪನೆಯಾದುದರ ಉದ್ದೇಶಗಳನ್ನೇ ಮರೆತಂತೆ ಕನ್ನಡದ ಜನ ಹಾಗೂ ಅವರು ಆರಿಸಿದ ಸರ್ಕಾರಗಳು ಕನ್ನಡಕ್ಕೆ ಬಾಯುಪಚಾರ ಮಾತ್ರ ಮಾಡುತ್ತ, ಕನ್ನಡವನ್ನು ನಿರ್ಣಾಯಕವಾದ ಎಲ್ಲ ಜಾಗಗಳಲ್ಲಿ-ಶಿಕ್ಷಣ, ಆಡಳಿತ, ಅಭಿವೃದ್ಧಿ ಇತ್ಯಾದಿ-ಕೈ ಬಿಡುತ್ತಾ ಬಂದಿವೆ. ಹೀಗಾಗಿ ಕನ್ನಡ ಕುಲವೆಂಬುದು ಬೇರಿಲ್ಲದ ಒಂದು ಸಮುದಾಯವಾಗಿ ಮಾರ್ಪಡುತ್ತಿದ್ದು ಎಲ್ಲ ರಂಗಗಳಲ್ಲೂ ಆಳವಾದ ಬಿಕ್ಕಟ್ಟನ್ನು ಎದುರಿಸುತ್ತಿದೆ. ಕ್ರಮಿಸಬೇಕಾದ ತನ್ನ ಮುಂದಿನ ದಾರಿಯ ಬಗ್ಗೆ ಸ್ಪಷ್ಟತೆಯೇ ಇಲ್ಲದಂತೆ, ತನ್ನದೇ ಒಂದು ಸಾಂಸ್ಕೃತಿಕ ಇಚ್ಛಾಶಕ್ತಿ ಇಲ್ಲದಂತೆ ಹೊರಗಿನ ಶಕ್ತಿಗಳ ಎಳೆದಾಟಕ್ಕೆ ಸಿಕ್ಕಿ ಎತ್ತಂದರತ್ತ ಚಲಿಸುತ್ತಿದೆ.

ಈ ಬಿಕ್ಕಟ್ಟಿನ ಹಿನ್ನೆಲೆಯಲ್ಲಿ ಈ ಸಂಗ್ರಹದ ಲೇಖನಗಳನ್ನು, ಮುಂದಿನ ದಾರಿಯ ಮೇಲೆ ಹೊಸ ಬೆಳಕು ಚೆಲ್ಲಬಲ್ಲವು ಎಂಬ ಆಶಯದೊಂದಿಗೆ ಇಲ್ಲಿ ಪ್ರಸ್ತುತಪಡಿಸಲಾಗುತ್ತಿದೆ.

ಲೋಹಿಯಾ ಪ್ರಕಾಶನ, ಬಳ್ಳಾರಿ
ಬೆಲೆ ರೂ. 60

ISBN 81-87731-92-3
9 798187 731923